REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಯ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

-ಪಂಚಾಸ್ಯಾನನಪಂಕಜಾತಜನಿತರ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ ಪರಚರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಪರಾಯಾನುಕರ ಪರಿಲಸತ್ಪಂಚಾಕ್ಷರೀಮೋದಧರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ವದವರಿಗೆ ೨ ರೂ. ೪ ಆಣೆ. ಪರಸ್ವದವರಿಗೆ ೩ ರೂ. ವಿ. ಪಿ. ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩ ನೇ ಜನವರಿ ೧೯೪೪ [ಸಂಚಿಕೆ ೩೪

ಮಾಹೇಶ್ವರ ದೀಕ್ಷಾವಿಧಿ

(೩ ನೆಯ ಆವೃತ್ತಿ)

ಈ ಮಾಹೇಶ್ವರ ದೀಕ್ಷಾವಿಧಿಯು ಈ ಮೊದಲು ೨ ಸಾರಿ ಮುದ್ರಿತವಾಗಿದೆ. ಆ ಪುಸ್ತಕಗಳಲ್ಲಿ ಕೆಲವು ನ್ಯೂನತೆಗಳು ಉಳಿದ್ದವಾಗಿ ಬಿದ್ದಿವೆ. ಈ ಸಾರಿ ಋಗ್ವೇದ ಮತ್ತು ಯಜುರ್ವೇದಗಳನ್ನೆಲ್ಲಾ ಜಾಗ್ರತಿ ಪರಿಶೀಲಿಸಿ ಒಂದು ಅಕ್ಷರವೂ ಸಹ ತಪ್ಪಿಲ್ಲದಂತೆ ಮುದ್ರಿಸಲಾಗಿದೆ. ಆದುದರಿಂದ ಶ್ರೀಸದ್ಗುರುರಾಧಕಾರಿಗಳು ಮತ್ತು ಗುರುವರ್ಗದವರು ಈ ಮೊದಲು ಮುದ್ರಿಸಲ್ಪಟ್ಟಿರುವ ದೀಕ್ಷಾವಿಧಿಯಲ್ಲಿರುವಂತೆ ಮಂತ್ರಗಳನ್ನು ಪರಿಸದೆ, ಅತ್ಯಂತ ಶುದ್ಧವಾಗಿ ಮುದ್ರಿತವಾಗಿರುವ ಈ ದೀಕ್ಷಾವಿಧಿಯನ್ನು ತರಿಸಿಕೊಂಡು, ಇದರಲ್ಲುಕ್ತವಾಗಿರುವಂತೆ ಮಂತ್ರಗಳನ್ನು ಪರಿಸಿ ದೀಕ್ಷಾಕರ್ಮವನ್ನು ಮಾಡಿ ಶಿವಪ್ರೀತಿಗೆ ಪಾತ್ರರಾಗಬೇಕೆಂದು ಅಪೇಕ್ಷಿಸುತ್ತೇನೆ. ಬೆಲೆ ೧ ರೂ.

ಪಂಚಾಚಾರ್ಯರ ಪ್ರಾಚೀನತ್ವ

ಶ್ರೀಮದ್ವೀರಶೈವಮತಾಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ವಿಷಯವು ಕ್ರಿ ಶ ೧೯ ನೆಯ ಶತಮಾನಕ್ಕಿಂತ ಪೂರ್ವದ ಶಾಸನಗಳಲ್ಲಿ ಎಲ್ಲಿಯೂ ಕಂಡುಬರುವುದಿಲ್ಲವೆಂದು ಕೆಲಜನ ಮಹಾಶಯರು ಸರ್ವಜ್ಞ ಮೂರ್ತಿಗಳಂತೆ ಸಾರುತ್ತಿರುವುದು ಎಲ್ಲರಿಗೂ ತಿಳಿದೇ ಇದೆ. ಇವರ ಈ ವಿಧವಾದ ವಾದವು ಕೇವಲ ಭ್ರಮಾತ್ಮಕವಾದುದೆಂದು ಶ್ರುತಿಸಿ, ಪ್ರಾಚೀನಶಾಸನಾದಿ ಪ್ರಮಾಣಗಳ ದ್ವಾರಾ ಶ್ರೀಮತ್ಪಂಚಾಚಾರ್ಯರ ಪ್ರಾಚೀನತ್ವದ ಬಗ್ಗೆ ಒಂದು ಗ್ರಂಥವನ್ನು ಬರೆದು ಪ್ರಕಟಿಸಬೇಕೆಂದು ಅನೇಕಜನ ಗುರುಭಕ್ತರು ಪ್ರಾರ್ಥಿಸಿಕೊಂಡ ಮೇರೆಗೆ, ಪಂಡಿತ ಶ್ರೀಆರಾಧ್ಯಶಾಸ್ತ್ರಿಗಳವರು ಅಮೂಲ್ಯವಾದ ಈ ಗ್ರಂಥರತ್ನವನ್ನು ರಚಿಸಿದ್ದಾರೆ. ಈ ಗ್ರಂಥದ ಯೋಗ್ಯತೆಯು ಎಷ್ಟು ಮಹತ್ತರವಾಗಿರುವುದೆಂಬುದು ಇದನ್ನು ಓದಿನೋಡಿದಮೇಲೆ ವಾಚಕರಿಗೆ ನೇದ್ಯವಾಗುವುದು.

ಈ ಗ್ರಂಥದಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವವೂ, ಆ ಮಹಾಚಾರ್ಯರಿಂದ ಸ್ಥಾಪಿತವಾದ ಲಿಂಗಧಾರಣಾದಿ ಪ್ರಾಚೀನತ್ವವೂ, ಪರಮಪೂಜ್ಯರಾದ ಜಂಗಮರ ಪ್ರಾಚೀನತ್ವವೂ ಅನೇಕ ಪುರಾತನ ಶಾಸನ ಪ್ರಮಾಣಗಳಿಂದ ಪ್ರತಿಪಾದಿಸಲ್ಪಟ್ಟಿರುವುದು. ಈ ಬಗ್ಗೆ ಕೆನ್ನಡ ದೇಶದಲ್ಲಿರುವ ಚಿತ್ರದುರ್ಗ ತಾ॥ ಬೀದಿಪಹಳ್ಳಿ, ಪ್ರಮಾಣಗಳಂತೆ ಪ್ರತಿಪಾದಿಸಲ್ಪಟ್ಟಿರುವುದು. ಈ ಬಗ್ಗೆ ಕೆನ್ನಡ ದೇಶದಲ್ಲಿರುವ ಚಿತ್ರದುರ್ಗ ತಾ॥ ಬೀದಿಪಹಳ್ಳಿ, ಶಿಕಾರಿಪುರ ತಾ॥ ಬೆಳಗಾಂವಿ, ಹರಪನಹಳ್ಳಿ ತಾ॥ ಬಾಗಲ್, ಹೂವಿನಹಡಗಲಿ ತಾ॥ ಸೋಗಿ, ಬಳ್ಳಾರಿ ಡಿ॥ ಆಲೂರು ತಾ॥ ರಾಮದುರ್ಗ, ತೆಲಗು ದೇಶದಲ್ಲಿರುವ ಕಡಪಾ ಡಿ॥ ಪೊಣ್ಣಸಾನಿ, ಅನಂತಪುರ ಡಿ॥ ತಾಡಪತ್ರಿ

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಒಂಭತ್ತು ಆಕೃತಿಚಿತ್ರಗಳಿಂದ ಕೂಡಿದ ಫೋಟೋ ಸೈಜು ೩೦×೧೫ ಬೆಲೆ ೧ಕ್ಕೆ ೦—೬—೦

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧವಣ್ಣ ಕಂಪು ಮುದ್ರಿತ ದುಡ) ಸೈಜು ೧೪×೧೦ ಬೆಲೆ ೦—೬—೦

ಶ್ರೀರುದ್ರಮುನಿಯೋಗಿ ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೪—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ ೨—೪—೦

" " " ಚಿಕ್ಕ ಸೈಜು ಬೆಲೆ ೦—೦—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದ ಫೋಟೋ ೦—೧—೬

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ವಿಧೀಕ್ಷಣ ಪ್ರಾಥಮಿಕೆಯಂತೆ ೪ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬

ಶ್ರೀ ಶಾಕೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧವಣ್ಣದ್ದು) ೦—೪—೦

ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡಿ ಪಟ್ಟಕಟ್ಟುವ ಫೋಟೋ ೦—೧—೬

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೧—೬

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೬

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಶಾಕೀವಾಹಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೧—೬

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದ ಮುದ್ರೆ) ಚಿಕ್ಕಸೈಜು ೦—೩—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾತ್ಮರುದ ಆಕೃತಿ ಸುಂದರವಾದ ಫೋಟೋ ೧ಕ್ಕೆ ೦—೧—೬

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಆಕೃತಿ ಪ್ರಾಚೀನ ಶೈಲಿಯದ ಸುಂದರ ಫೋಟೋ ೧ಕ್ಕೆ ೦—೧—೬

ಶ್ರೀ ಜಗದ್ಗುರು ಶಿವಾಚಾರಮಂಡಾಸನದ ಆಕೃತಿ ಸುಂದರವಾದ ಗೋಪುರದ ಫೋಟೋ ೦—೧—೬

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರುಗಳು ವಿರಾಜಿಸುತ್ತಿರುವ ಫೋಟೋ ೨—೧—೬

ಜೆಂಗಳೂರು ಕಂಟೋನ್ಮೆಂಟಿನಲ್ಲಿ ನೆಲೆವೀಡದ ರಂಭಾಪುರೀ ಜಗದ್ಗುರುಗಳ ಅಷ್ಟಪಟ್ಟಾಭಿಷೇಕ ಮಹೋತ್ಸವದ ಫೋಟೋ ೦—೧—೬

ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ೦—೨—೦

ಸಿದ್ಧಾಂತಶಿಖಾಮಣಿ

ನೀಲಲೋಹಿತನು ಹಲವಾರು ಸಲ ಜಗದ್ಗುರುಗಳಾಗಿ ಅವತರಿಸಿ ಶಿವಾದ್ವೈತ ಸಿದ್ಧಾಂತವನ್ನು ಪ್ರಚಾರಮಾಡಿದನು. ಪ್ರತಿಯೊಬ್ಬ ಜಗದ್ಗುರುಗಳೂ ಶಿವಾದ್ವೈತ ಸಿದ್ಧಾಂತಕ್ಕೆ ಸಂಬಂಧಪಟ್ಟಂತೆ ಒಂದೊಂದು ಗ್ರಂಥವನ್ನು ರಚಿಸಿರುವುದು ಸಹಜ. ಆದರೆ ಶಿವಾದ್ವೈತ ಸಿದ್ಧಾಂತಕ್ಕೆ ಸಂಬಂಧಪಟ್ಟಂತೆ ಸಂಪೂರ್ಣವಾದ ಒಂದು ಗ್ರಂಥವನ್ನು ರಚಿಸಿರುವವರು ಶ್ರೀಜಗದ್ಗುರು ರೇಣುಕಾಚಾರ್ಯರು ಮಾತ್ರ. ಅವರು ಸಂಸ್ಕೃತದಲ್ಲಿ ರಚಿಸಿರುವ ಸಿದ್ಧಾಂತಶಿಖಾಮಣಿಯೆಂಬ ಗ್ರಂಥವು ಶಿವಾದ್ವೈತ ಸಿದ್ಧಾಂತಕ್ಕೆ ಸಂಬಂಧಪಟ್ಟಂತೆ ಪ್ರಮಾಣಭೂತವಾದ ಗ್ರಂಥವೆಂದು ಹೇಳಬಹುದು. ಈ ಗ್ರಂಥವನ್ನು ಅವರು ಸಂಸ್ಕೃತದಲ್ಲಿ ಸಿದ್ಧಾಂತಶಿಖಾಮಣಿಯೆಂಬ ಹೆಸರಿನಿಂದಲೂ ಕನ್ನಡದಲ್ಲಿ ಸಿದ್ಧಾಂತಶಿಖಾಮಣಿಯೆಂಬ ಹೆಸರಿನಿಂದಲೂ ರಚಿಸಿರುವರು. ಈ ಗ್ರಂಥವನ್ನು ಅವರು ಸಂಸ್ಕೃತದಲ್ಲಿ ರಚಿಸಿರುವುದರಿಂದ ಸಂಸ್ಕೃತ ಪಂಡಿತರಿಗೆ ಮಾತ್ರ ಇದರ ಪ್ರಯೋಜನವಾಗುತ್ತಿತ್ತು. ಆದ್ದರಿಂದ ಅವರು ಕನ್ನಡದಲ್ಲಿ ಸಿದ್ಧಾಂತಶಿಖಾಮಣಿಯೆಂಬ ಹೆಸರಿನಿಂದ ಒಂದು ಗ್ರಂಥವನ್ನು ರಚಿಸಿರುವರು. ಈ ಗ್ರಂಥವು ಸಂಸ್ಕೃತದಲ್ಲಿರುವ ಸಿದ್ಧಾಂತಶಿಖಾಮಣಿಯ ಭಾವಾನುವಾದವಾಗಿದೆ. ಈ ಗ್ರಂಥವು ಸಂಸ್ಕೃತ ಪಂಡಿತರಿಗೂ ಕನ್ನಡ ಪಂಡಿತರಿಗೂ ಸಮಾನವಾಗಿ ಉಪಯೋಗವಾಗುವಂತೆ ಶ್ರೀಜಗದ್ಗುರು ರೇಣುಕಾಚಾರ್ಯರು ಈ ಗ್ರಂಥವನ್ನು ರಚಿಸಿರುವರು. ಈ ಗ್ರಂಥವು ಶಿವಾದ್ವೈತ ಸಿದ್ಧಾಂತಕ್ಕೆ ಸಂಬಂಧಪಟ್ಟಂತೆ ಪ್ರಮಾಣಭೂತವಾದ ಗ್ರಂಥವೆಂದು ಹೇಳಬಹುದು. ಈ ಗ್ರಂಥವನ್ನು ಅವರು ಸಂಸ್ಕೃತದಲ್ಲಿ ರಚಿಸಿರುವುದರಿಂದ ಸಂಸ್ಕೃತ ಪಂಡಿತರಿಗೆ ಮಾತ್ರ ಇದರ ಪ್ರಯೋಜನವಾಗುತ್ತಿತ್ತು. ಆದ್ದರಿಂದ ಅವರು ಕನ್ನಡದಲ್ಲಿ ಸಿದ್ಧಾಂತಶಿಖಾಮಣಿಯೆಂಬ ಹೆಸರಿನಿಂದ ಒಂದು ಗ್ರಂಥವನ್ನು ರಚಿಸಿರುವರು. ಈ ಗ್ರಂಥವು

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶಕ್ತಿಶ್ರೀಪಂಚಲಿಂಗೇಶ್ವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೌಧರ್ । ಪಂಚಾಚಾರ್ಯಜಗದ್ಗುರೂಕ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳವನಿಗೆ ೨ ರೂ ೪ ಆಣೆ

ಪರಸ್ಥಳದವರಿಗೆ ೩ ರೂ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೦ ನೇ ಜನವರಿ ೧೯೪೪ [ಸಂಚಿಕೆ ೩೫

॥ ಶ್ರೀಜಗದ್ಗುರು ಪಾರುಶಾಚಾರ್ಯಾಯ ನಮಃ ।

ಅಹಂಕಾರ

ಲೇ —ಮಲ್ಲಿಕಾರ್ಜುನಾರಾಧ್ಯ ರಾಚಬಿನ್ನೂರು ಮಳಲಿ ರ ಮುದೇನೂರು

ಅಹಂಕಾರವೆಂದರೆ, ಕರ್ಕಶತ್ವಾಭಿಮಾನವೆಂದು ಹೇಳ ಬಹುದು ಇದು ಸರ್ವ ದುರ್ಗುಣಗಳಲ್ಲಿ ಹೀನವಾಗಿರು ವದು ಈ ಶರೀರದಲ್ಲಿ ಅಹಂಕಾರವೇ ಪುರುಷನಾಗಿಯೂ ತಸ್ಯ (ಆಕೆ)ಯೇ ಅವನ ಹೆಂಡತಿಯಾಗಿಯೂ, ಕಾಮ, ಕ್ರೌಧ್ಯ, ಲೋಭ, ಮೋಹ, ಮದ, ಮತ್ಸರಗಳೇ ಗಂಡುಮಕ್ಕಳಾಗಿಯೂ ಈರ್ಷ್ಯೆ, ಅಸೂಯೆ ಮೊದಲಾದ ವುಗಳೇ ಹೆಣ್ಣುಮಕ್ಕಳಾಗಿಯೂ ಇರುವರು ಆರ್ತಾ ಅಹಂಕಾರಿಯಲ್ಲಿ ಈ ಎಲ್ಲಾ ಗುಣಗಳುರುತ್ತವೆಂದು ಭಾವವು ಸರ್ವವಿಧದಲ್ಲಿಯೂ ನಿನ್ನ ಸಮಾನ ಯಾರಿ ದ್ದಾರೆ? ಎಂಬ ಉದ್ಗಾರವೇ ಅಹಂಕಾರದ ಮುಖ್ಯ ಲಕ್ಷಣವು! ಸಂಕಲ್ಪ ವಿಕಲ್ಪಗಳು ಅಹಂಕಾರದ ಪರಿಣಾ ಮಗಳು ಪರಮಾತ್ಮನ ವಿಶ್ವತೆಯು ಅಹಂಕಾರದ ಫಲವು ವಿಶ್ವದ ಕರ್ತೃವೂ ಜಾಲಕನೂ ಆದ ಪರಮಿನ ತಂತ್ರದಿಂದಲೇ ಜಗದ್ವ್ಯಾಪಾರವು ಆತನ ಕುಟುಂಬವು ಸಾಗಿರುವುದು ಪ್ರಾಣಿಗಳೆಲ್ಲವೂ ಆತನ ತಂತ್ರಕ್ಕೆಯ ಳಾಗಿರುವ ಕ್ಷುದ್ರಜಂತುಗಳೆಂದು ತಿಳಿದರೆ ಜನರಲ್ಲಿ ಅಹಂಕಾರದ ಸೆರೆಯಡಿಗೆ ನಯ, ವಿನಯ, ಭಯ, ಭಕ್ತಿ, ಕರುಣೆ ಇತ್ಯಾದಿ ಸದ್ಗುಣಗಳು ದೇರೂರುವವು ಹಾಗಲ್ಲದೆ ಈಶ್ವರನ ಕರ್ತೃತ್ವವನ್ನು ಮರೆತು "ನಾನು ಎಂದು ಮಹಾಂಧರಾದರೆ (ಸ್ವೇಚ್ಛಾಪ್ರವರ್ತಕರಾದರೆ) ನಾಶದ ಹಂಥವನ್ನು ಹಿಡಿದಂತಾಗುವುದು ಮತ್ತು ಅಹಂಕಾರವು ಅಜ್ಞಾನದ ಲಕ್ಷಣವೆಂಬುದನ್ನು ಮುಖ್ಯ ವಾಗಿ ಲಕ್ಷ್ಯದಲ್ಲಿಡಕ್ಕಿದ್ದು. ಈ ಅಹಂಕಾರವೆಂಬ ಕರಾಳರಾಕ್ಷಸನಿಗೆ ತುತ್ತಾದವರಲ್ಲಿ ದೈವಿಸಂಪತ್ತು ಕುಂಠಿತವಾಗಿ ಆಸುರ (ರಾಕ್ಷಸ) ಸಂಪತ್ತು ವೃದ್ಧಿಯಾ ಗುವುದು ಮತ್ತು ಇವರಲ್ಲಿ ಲಜ್ಜೆಯೆಂಬುದು ತಿಲಾ ಶವೂ ಇರುವದಿಲ್ಲ ಈ ಅಜ್ಞಾನಿಗಳು ಪ್ರಚಂಡನಾದ ನಾಳಿನ ಸಿಕ್ಕ ಹಡಗಿನಂತೆ ಮನಸ್ಸಿನ ನಾನಾಹೀನ ವಿಷಯ ಗಳ ಎಳೆತಕ್ಕೆ ಸಿಕ್ಕು ಅತ್ಲಿತ್ತ ಅಲೆದಾಡಿ ಪೆಟ್ಟುಂಡು ಸುಚ್ಚು ಹುಣ್ಣಾಗಿ ಕೊನೆಗೆ ನಾಶಕ್ಕೆ ಗುರಿಯಾಗುವರು ಈ ವಿಷಯದಲ್ಲಿ ಶ್ರೀಜಾಮಳ್ಳಕ್ಷಪರಮಹಂಸರು—

ಅಹಂಭಾವವಿರುವವರಿಗೂ ಜ್ಞಾನಮುಕ್ತಿಗಳೆರಡಕ್ಕೂ ಅವಕಾಶವಿಲ್ಲ. ಜಪಸಮಾಧಿಗಳಾಗಲಿ ನಿಲ್ಲವು ಅಹಂಕಾರವೇ ಜೀವನಿಗೆ "ಮಾಯೆ" ಎಂಬ ಹೆಸರಿ (ಮರೆ) ಯಾಗಿ ಭಗವತ್ಸ್ಮೃತಿಯನ್ನು ತಡೆಯುತ್ತದೆ. "ನಾನು" ಎಂಬುದು ಎಂದು ಅಳಿದುಹೋಗುವುದೋ, ಅಂದೇ ದುಃಖಗಳೆಲ್ಲವೂ ಅಳಿಯುವವು ಅಹಂಕಾರವೆಂಬುದು, ನೀರು ಮೇಲೆ ಬಿದ್ದಿಡಿಸಿನೆಯೇ ಅಣಾಗಿಹೋಗುವ ಬೂದಿಯ ರಾಶಿಗೆ ಸಮಾನವಾದುದು ವೃಕ್ಷ ದುರಭಿ ಮಾನದಿಂದ ಹಿಗ್ಗಿರುವ ಶ್ವಪಚನಷ್ಟು ಉಚಾಸನೆಯು ಧ್ಯಾನವು ಕಡಿಮೆಯಿತ್ತು, ಎಂದರೆ, ಅಹಂಕಾರಿಯ ಉಚಾ ಸನೆಯು ಬೂದಿಯಲ್ಲಿ ಹೋಮಮಾಡಿದಂತೆ ವ್ಯರ್ಥವು!

ಎಲೈ ಮಾನವಾ, ನಿನ್ನನ್ನು ನೀನು ಅರಿಯುವೆಯಾದರೆ ಸರ್ವೇಶ್ವರನನ್ನು ಅರಿಯುವೆ "ಅಹಂ" ಎಂಬು ದೇನು? ಕೈಯೇ, ಕಾಲೇ, ರಕ್ತವೇ ಮಾಂಸವೇ, ದೇಹವೇ ನರಗಳೇ, ಎಂದು ಷಡಚಿ ತನೆಯನ್ನು ಮಾಡು ಆಗ "ನಾನು ಎಂಬುದು ಇಲ್ಲವೇ ಇಲ್ಲ ವೆಂಬ ಅರಿವು ಒಡಮೂಡು 'ನಾನು ಎಂಬ ದುತೊಲ ಗಲು ದೇವತ್ವವು ಜಾನಾಗಿಯೇ ಕಂಡಿಸಿಕೊಳ್ಳುವದು ಸರ್ವದಾ ಮನನಮೆಳು ಈ ರೀತಿ ಚಿಂತನೆಮಾಡು ಎಲೈ ಮಹಾಪ್ರಭೋ! ನೀನೇ ಕರ್ತೃ ಸಕಲವನ್ನು ಮಾಡುವವನು ನೀನು ಯಂತ್ರ ಮಾತ್ರದವನು ನಾನು ಇವೆಲ್ಲವು ನಿನ್ನ ಪ್ರಭಾವ ನಿನ್ನ ಆನುಜ್ಞೆಯಿನ್ನು ನರ ನೇರುಸುವ್ರಹ್ಮೈಶ್ವರನೆ' ಇನೀಜಜ್ಞನೆನ್ನಿರುವುದು ಈ ತೆರನಾದ ಭಾವನೆಯು ಎಂದು ದೃಢಪಡುವುದೋ ಅಂದು ಮನುಷ್ಯನಿಗೆ 'ನನ್ನದು ಎಂದು ಕರೆಯ ತಕ್ಕಂತಹ ಅವುದೂ ಇರುವುದಿಲ ಎಂದು ಹೇಳಿರು ವು ಪ್ರತಿಕರರೂ ಸಹ "ನಾನು ನಾನೆಂದು ಗರ್ವ ದಲಿ ಮೆರೆಯದೆ! ನೀನು ನೀನೆಂದು ತಿರಿಜಾಗಿ ನಡೆದೊಂ ಭುವಿಯೊಳಗೆ' ಎಂದು ಹೇಳಿರುವರು ಅದ್ದರಿಂದ ಅಹಂಕಾರವು ಯಾರಿಗೂ ತರವಲ್ಲ ಅಹಂಕಾರಿಯು ಇಂದಿಲ್ಲ, ನಾಳೆಯಾದರೂ ಅಳೋಗತಿಗೀಡಾಗಲೇ ಬೇಕು. ಅವನು ಯಮನಿಗೆ ಅತಿಥಿಯಾಗಲೇ ಬೇಕು

ಶಿವಲಿಂಗಾನುಷ್ಠಾನ ಮತ್ತು ಪುರಾಣ ಮಹೋತ್ಸವ

— —

ರಾಯಚೂರು ಡಿ॥ ಹಿಂದನೂರು ತಾ॥ ಸಿದ್ದಗಿರಿ ಶ್ರೀಕಿವರಕರಣ ಧೀಮಲಿಂಗೇಶ್ವರಮಠದಲ್ಲಿ ಶ್ರಾವಣ ಶು॥ ೧ ದಿಂದ ಅಶ್ವಿಜ ಬ॥ ೧೧ ವರೆಗೆ ರೌಡಕುಂದಿ ಹಿರೇ ನುಕದ ಚರಬಸ್ವಾಮ್ಯಕ್ಷ ತೆಪೋನಿಧಿ ಶ್ರೀಕಿವ ಯೋಗಿ ಶಿವಾಚಾರ್ಯಸ್ವಾಮಿಗಳವರು ೩ ತಿಂಗಳ ವರೆಗೆ ಕ್ಷೀರಾಹಾರಪೂರ್ವಕ ಶಿವಲಿಂಗಾನುಷ್ಠಾನವನ್ನೂ ಸಾಯಂಕಾಲ ಶ್ರೀಕಿವ್ಯರಾಮೇಶ್ವರ ಪುರಾಣ ಪ್ರವಚನ ವನ್ನು ಕ್ರಮವಿಡಿಸಿದರು ಪುರಾಣವನ್ನು ಸಿದ್ದರಾಮ ಪುರದ ಪರಣಯ್ಯನವರು ಮನೋಹರವಾಗಿ ಓದುತ್ತಿ ದ್ದರು ಭೋಗರಥ್ಯಾನಾಗಿದ್ದರೂ ಪುರಾಣಶ್ರವಣಕ್ಕೆ ಪ್ರತಿನಿತ್ಯ ೫ ೬ ನೂರು ಜನರು ಕೂಡುತ್ತಿದ್ದರು ಸ್ಥಳಿಕಾಮಾನ್ಯದಲ್ಲಿ ಈಗ ವರ್ಷಾವಧಿಯಿಂದ ಜರುಗು ತ್ತಿದ್ದ ಮಕ್ಕಪ್ರತಿಕಾಮಿಕತ್ಕೆಯು ಪ್ರತ್ಯವಾಗಿ ಸುಸ್ಥಿತಿ ಕಾಂತಿಪೂರಿತವಾದ ಅಶೇಕವೆಂಟಾಗಿ ಸಮಸ್ತರಿಗೂ ಅನಂದವುಂಟಾಗಲೆಂಬುದೇ ಸ್ವಾಮಿಗಳ ತಪೋನುಷ್ಠಾ ನದ ಮಹೋದ್ದೇಶವಾಗಿತ್ತು ಈ ಮಹಾಸಂಕಲ್ಪವನ್ನು ಶ್ರೀಜಗದ್ಗುರ್ಯರು ತಿರಳ್ಳಾಜಿ ನೆರವೇರಿಸಿದುದು ಪರಮಸಂತೋಷದಾಯಕವಾದ ಸಂಗತಿಯಾಗಿದೆ ಅಶ್ವ ಯುಜ ೧೨ ಮಕ್ಕವಾರ ಅಮಾಸ್ಯಾಪವು ಸಮಾಪ್ತಿಯಾಗು ವದಿಪ್ಪದರಿಂದ ಹಿಂಧನೂರು ವಿನಾಸ್ಥಿತ ಪ್ರಮುಖಾದ ಪ್ರ ಎಸ್ ಜಿ॥ ಶಿವಸಿದ್ಧಯ್ಯಶಾಸ್ತ್ರಿಗಳು, ಪೋ॥ ಜಾ॥ ಮಲಕಪಗೌಡರು, ಬಾಡಿಗೆ ಅಯ್ಯಪ್ಪಗೌಡರು, ಸಿದ್ಧಲಿಂಗಪ್ಪ ವಕೀಲರು, ಮತ್ತು ಸಾಲಗುಂದ, ಸೋಮ ಲಾಪುರ, ಹೂಡೆ, ಗೊಬ ರಕಲ್ಲು, ರವದಕುಂದಿ, ಮೊಡ ಲಾದ ಸ್ಥಳ ಗಳಿಂದ ಸುಮಾರು ೧೫ ಸಾವಿರ ಜನರಿಗೆ ಯನ್ನು ಸಾಂಗವಾಗಿ ನೆರವೇರಿಸಿದರು ತಾ॥ ೩೯ ೧೦-೪೪ ನೇ ದಿವಸ ಪ್ರಾತಃ ಕಾಲ ೫॥ ಘಂಟೆಯಿಂದ ೧೦ ಘಂಟೆಯವರೆಗೆ ಪೂಜಾದಿಗಳು ನೆರವೇರಿ ಮಹಾಗಣಾ ಧಿಪತಿಯ ಜರುಗಿತು ಈ ಮಹಾಗಣಾಧಿಪತಿಗೆ ಆಗಮಿಸಿದ ೭೭೦ ಜನ ಗಣಾಧೀಶ್ವರರಿಗೆ ಶಿಂಧನೂರು ನಿರಕ್ಷುರದ ಗುರುಸಿದ್ಧಯ್ಯನವರು ಭೂರಿದಕ್ಷಿಣೆಯ ನ್ನಿತ್ತು ಸಂತೋಷಪಡಿಸಿದರು ಮಧ್ಯಾಹ್ನ ೪ ಘಂಟೆ ಯಿಂದ ೬ ಘಂಟೆಯವರೆಗೆ ಕುಂಡಿಕರ ಭಾಷಣ, ಶಿವ ಕೀರ್ತನ ಮೊದಲಾದವುಗಳು ನಡೆದವು ಬಳಿಕ ಶಿಂಧ ನೂರಿನ ಶ್ರೀಮಾನ್ ಸಿದ್ಧಲಿಂಗಪ್ಪ ವಕೀಲರು ವೇ॥ ಗುರು ಸಿದ್ಧಯ್ಯನವರ ಯೋಜನೆಯ ಮೇರೆಗೆ ಶ್ರೀಸ್ವಾಮಿಗ ಳವರ ಮತ್ತು ಪುರಾಣದ ಪಲ್ಲಕ್ಕಿ ಮಹೋತ್ಸವವು ಪ್ರಾರಂಭವಾಯಿತು ಪಲ್ಲಕ್ಕಿಯನ್ನು ಎತ್ತುತ್ತಲೇ ಮಹೋತ್ಸವಕ್ಕೆ ಬಂದಿದ್ದ ೫೬ ಸಹಸ್ರ ಜನಗಳು ವಿಕ ಳಂಕವಿದಂದ ಶ್ರೀಜಗದಾಚಾರ್ಯರ ಜಯಘೋಷವನ್ನು ಮಾಡಿದರು ಉತ್ಸವಕ್ಕೆ ಗೆಜ್ಜಲಗಟ್ಟೆ ಸಂಸ್ಥಾನದ ಶ್ರೀಮಂತ ರಾಜಾಸಾಹೇಬ ಒಸವರಾಜ ಧೊರಿಗಳವರು, ಲಕ್ಷ್ಮೀಪುರದ ಜಾಹಗೀರದಾರ ಶ್ರೀಮಂತ ಯಜಮಾನ ರಂಗಪ್ಪಗೌಡರು, ಸಾಲುಗುಂದ ಜಾಹಗೀರದಾರ ಸಾಹೇ ಬರು, ಗೋಮರ್ಸ ಜಾಹಗೀರದಾರ ಸಾಹೇಬರು, ಸೋಮಲಾಪುರ ಸಂಸ್ಥಾನದ ನಾಡಗೌಡ ಅಟ್ಟೆ ಬಸವನ ಗೌಡರು, ಶಿಂಧನೂರು ವಿನಸ್ಥಿತ ಮಾರವಾಡಿ ಪ್ರಮು ಖರು, ಸುರಪುರದ ಪಂ॥ ಗುರುನಾಥಭಟ್ಟಾಚಾರ್ಯರು, ಶ್ರೀಸಚ್ಚಿದಾನಂದಭಟ್ಟಾಚಾರ್ಯರು, ರೌಡಕುಂದ ಹಿರೇ ಮಳಿತ ವೀರೇಶ್ವರಶಾಸ್ತ್ರಿಗಳು ಮೊದಲಾದವರು ಆಗಮಿಸಿ ಶೋಭೆಯನ್ನುಂಟುಮಾಡಿದ್ದರು ಉತ್ಸವವು ಮುಗಿದ ಮೇಲೆ ವೇ॥ ಗವಾಯಿ ಸಂಗಪ್ಪನವರಿಂದ 'ಮಂತ್ರ ಮಹಿಮೆ" ಎಂಬ ವಿಷಯವಾಗಿ ತಿವೇಕೀರ್ತನೆಯು ಮಾಡಲ್ಪಟ್ಟಿತು ಈ ಮಹಾಕಾರ್ಯದಲ್ಲಿ ಶಿಂಧನೂರಿನ ಪ್ರಮುಖರಾದ ವೇ॥ ವೈ. ಎಸ್ ಗುರುಸಿದ್ಧಯ್ಯನವರು, ಪೋ॥ ಜಾ॥ ಮಲಕಪಗೌಡರು, ಬಾದರ್ಲಿ ಅಯ್ಯನ ಗೌಡರು, ಸಿದ್ಧಲಿಂಗಪ್ಪ ವಕೀಲರು, ಸಾಲಿ ವೀರಭದ್ರಯ್ಯ ನವರು, ಸಿದ್ಧಾಂತಿಮಠದ ಮಹಾಂತಿಯ್ಯನವರು, ಹೂಡೇದ ಪಿ. ಎಸ್ ಮಲ್ಲಿಕಾರ್ಜುನಯ್ಯನವರು, ಪೋ॥ ಜಾ॥ ಬಂಡೇಗೌಡರು, ಸಾಹುಕಾರ ಹಮಲಂಕಪ್ಪ ಮುಂತಾದ ವೀರಶೈವ ಬಂಧುಗಳೂ, ರವದಕುಂದಿ, ಸೋಮಲಾಪುರ, ಸಾಲಗುಂದಿ, ಮುಳ್ಳಂದಿ, ಸಿಂಗಾಪುರ ಮಾವಿನಮಡುವಿ, ಮುಂತಾದ ಗ್ರಾಮಾಧಿಕಾರಿಗಳೂ, ಹೊಡೆಮುಳ್ಳಂದಿ ಕರೋಡಗಿ ಜಾತಿಉಪಾಜೀವಿಗಳೂ ಅನ್ಯಾಂತರಾಗಿ ಮತಿಯು ಸೇವೆ ಸಲ್ಲಿಸಿ ಗುರುಕೃಪೆಗೆ ಪಾತ್ರರಾದರು. ಈ ಮಹಾಭಾಗ್ಯಗಳಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರು ಮಂಗಳವನ್ನು ಕ್ಕು ಆಶಾಪಡಿಸಿದರು ಪ್ರಾರ್ಥಿಸುತ್ತೇನೆ.

ಪೋ॥ ಜಾ॥ ತಿಳಿಪಡಿಗೌಡ್ರ
ಗೊಬ್ಬರಕಲ್ಲು



ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನ

ಪುಷ್ಯ ಬಾ॥ ೪ ಮಂಗಳವಾರ (೧೪-೧ ೧೯೪೬)

ಯಾವ ಗುರುವರ್ಯರ ಸಹಸ್ರಬಾಹುಗಳು ಸುತ್ತಲಿನ ಸರ್ವತ ಧರ್ಮಪೀಠಗಳು ಪ್ರಕಾಶಕ್ಕೆ ಬಂದವೋ ಯಾರ ಸುಪ್ರಶಾಸನ ಸಂಸ್ಥಾಪನಸ್ಫೂರ್ತಿಯಿಂದ ಪೀಠಶ್ರೇಣಿಗಳ ವೈಭವವು ಕರ್ನಾಟಕ-ಆಂಧ್ರ ಮುಪ್ಪಾರಾಷ್ಟ್ರವಿಮರ್ಶಕಗಳಲ್ಲಿ ಸ್ಪಷ್ಟಾಕರವಾಯಿತೋ ಯಾವ ಗುರುಸ್ವಭಾವರನ ದಿವ್ಯಸ್ವಭಾವಿಯಿಂದ ಪೀಠತ್ರಿಮೂರ್ತಿಗಳವ್ವು ಎಚ್ಚತ್ತು ತನ್ನ ಕರ್ತವ್ಯ ಸರಪಳಿಗಳಲ್ಲಿ ನಿರತವಾಯಿತೋ, ಯಾವ ಪರಶಿವಾವತಾರಿಯ ಪಾದಾರವಿಂದವನ್ನ ಭಕ್ತಿಸ್ಪಂದವು ಪೂಜಿಸಿ ಭಜಿಸಿ ಧ್ಯಾನಿಸಿ, ಸೇವಿಸಿ, ಸಕಲೇಷ್ಟಾರ್ಥಸಿದ್ಧಿಗಳನ್ನು ಪಡೆಯಿತೋ, ಯಾವ ದರ್ಶನಾಚಾರ್ಯನ ಧರ್ಮಬೋಧಾಮೃತನನ್ನು ಪಾನಮಾಡಿ ಸಮಸ್ತಮಾನವರು ಸದ್ಧರ್ಮಶೀಲರಾದರೋ, ಯಾವ ಯತಿವರ್ಯನಿಗನ ಸ್ಪೈಜನಾದ ವಿರತಿ ಧರ್ಮವನ್ನು ನೋಡಿ ಸಮಸ್ತಮತೀಯ ಯತಿತತಿಯು ಮುಕ್ತಕಂಠದಿಂದ ಸ್ತುತಿತೋ, ಯಾವ ಕರುಣಾಕರನ ಕರುಣಾಕಟಾಕ್ಷವೀಕ್ಷಣದಿಂದ ಕಷ್ಟದಲ್ಲಿ ಶಿಲುಕಿ ಬಳಲುತ್ತಿದ್ದ ಭಕ್ತರ ಕಷ್ಟಗಳು ನಷ್ಟವಾದವೋ, ಯಾವ ದಯಾಸಮುದ್ರನ ದಯೆಯಿಂದ ದೀನರ ದುಃಖಗಳು ದೂರವಾದವೋ, ಯಾವ ಪುಣ್ಯಮೂರ್ತಿಯ ಪಾದದರ್ಶನದಿಂದ ಪಾಪಿಗಳು ಪಾಪದಿಂದ ದೂರರಾಗಿ ಪುಣ್ಯಮಯ ಶರೀರಿಗಳಾದರೋ, ಯಾವ ಮಂತ್ರಮೂರ್ತಿಯ ಮಂತ್ರೋಪದೇಶದಿಂದ ಶಿಷ್ಯಸ್ಪಂದವು ಮಂತ್ರಮಯವಾಗಿ ವಿರಾಜಿಸಿತೋ, ಯಾವ ಮಹಾತ್ಮನ ಮಹಿಮಾತಿಶಯದಿಂದ ಶ್ರೀಜಗದ್ಗುರು ವಂಶಾಚಾರ್ಯರ ಪನಿತ್ರಾಭಿಧಾನವು ಪ್ರತಿಯೊಬ್ಬರ ಮುಖಮುಂಟಪದಲ್ಲಿ ನರ್ತನಮಾಡಲು ಸ್ಫುರಂಭಿಸಿತೋ ಯಾವ ಧರ್ಮಾವತಾರಿಯ ತಪಃಪ್ರಭಾವದಿಂದ ಉಜ್ಜಯಿನೀ ಸದ್ಧರ್ಮಸಿಂಹಾಸನವು ಜಗತ್ತಿನಲ್ಲಿ ಪ್ರಜ್ವಲಿತವಾಯಿತೋ, ಅಂತಹ ಸಾಕ್ಷಾತ್ಪರಶಿವಾವತಾರಿಗಳಾದ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ತಿಥೈಕ್ಯರಾಗಿ ಪುಷ್ಯ ಬಾ॥ ೪ ಮಿತಿಗೆ ೧೩ ವರ್ಷಗಳು ಪೂರ್ತಿಯಾಗುವವು ಆ ದಿನದ ಭರತಖಂಡದಲ್ಲಿರುವ ಸಮಸ್ತಗುರುಭಕ್ತರೂ ಶ್ರೀಸಿದ್ಧಲಿಂಗಜಗದ್ಗುರುಗಳವರ ಪುಣ್ಯದಿನವನ್ನು ವಿಶೇಷಭಕ್ತಿಯಿಂದ ಆಚರಿಸಿ ಧನ್ಯರಾಗಬೇಕೆಂದಾಶಿಸುತ್ತೇನೆ.

ವರ್ತಮಾನಸಂಗ್ರಹ

ಆರ್ಥಿಕ ಪರಿಸ್ಥಿತಿ ಹೀಗೇ ಇದ್ದರೆ ಅನರ್ಥ ಖಂಡಿತ

"ಭಾರತದಲ್ಲಿ ತಲೆದೋರಿರುವ ಹಣದುಬ್ಬರ ತಡೆಯಬೇಕಾದರೆ ಉತ್ಪತ್ತಿಯನ್ನು ಹೆಚ್ಚಿಸಬೇಕು ದೇಶದಲ್ಲಿ ಹಣ ಹೆಚ್ಚಾಗಿದೆ ಆದರೆ ಸರಕುಗಳ ಅಭಾವ ಅಧಿಕವಾಗಿದೆ' ಎಂದು ಮಿ॥ ಮಾಸ್ಟರ್ ಮನ್ ರವರು "ಸರಕಾರದ ಹಣದುಬ್ಬರ ತಡೆಗಟ್ಟುವ ನೀತಿ" ಎಂಬ ವಿಷಯ ಕುರಿತು ಬೊಂಬಾಯಿಯಲ್ಲಿ ಏರ್ಪಡಿಸಲಾಗಿದ್ದ ಭಾಷಣ ಮಾಲೆಯ ಸಂದರ್ಭದಲ್ಲಿ ತಿಳಿಸಿದರು. ಪ್ರೊ॥ ವಕೀಲರವರು ಭಾಷಣಮಾಡುತ್ತ ಈಗಿನ ಆರ್ಥಿಕಪರಿಸ್ಥಿತಿಯನ್ನು ಹೀಗೆಯೇ ಬಿಟ್ಟರೆ ಮುಂದೆ ಅನರ್ಥಗಳುಂಟಾಗುವುದು ಖಂಡಿತ ಕೇಂದ್ರ ಮತ್ತು ಪ್ರಾಂತಸರ್ಕಾರಗಳು ಆರ್ಥಿಕ ವಿಚಾರದಲ್ಲಿ ಖಚಿತ ನೀತಿಯನ್ನು ರೂಪುಗೊಳಿಸಬೇಕೆಂದು ಅವರು ಹಿತೋಕ್ತಿ ಇತ್ತರು

ಭಾರತ ಡೊಮಿನಿಯನ್ನಿನೊಡನೆ ಸಂಸ್ಥಾನಗಳ ಸಮ್ಮೇಳನ

ಭಾರತದ ಉಪಪ್ರಧಾನರಾದ ಸರ್ದಾರ್ ವಲ್ಲಭಭಾಯಿ ಪಟೇಲರು ೫ನೇ ಶಾ॥ ದಿನ ೧೯೪೬ರ ಇಂಡಿಯಾ ಸರ್ಕಾರದ ಶಾಸನದ ಕಿಬ್ಬುಸಡಿ ಮಸೂದೆಯನ್ನು ಭಾರತ ರಾಜ್ಯಾಂಗ ಸಭೆಯಲ್ಲಿ ಮಂಡಿಸಿದರು ಈ ಮಸೂದೆಯ ಉದ್ದೇಶವನ್ನು ವಿವರಿಸುತ್ತಾ ಸರ್ದಾರ್ ಪಟೇಲರು ಸಂಸ್ಥಾನಗಳಲ್ಲಿ ಆಳಿದ ಒಂದು ವರ್ಷದಿಂದ ಆಗಿರುವ ರಾಜಕೀಯ ಬದಲಾವಣೆಗಳಿಗೆ ಭಾರತ ರಾಜ್ಯಾಂಗ ಸಭೆಯ ಅನುಮೋದನೆಯನ್ನು ಪಡೆಯುವುದು ವತ್ತು ಅವುಗಳ ಸಾಧನವನ್ನು ಸ್ವಸ್ಥಗೊಳಿಸುವುದು ಮಸೂದೆಯ ಉದ್ದೇಶವೆಂದರು ಮತ್ತು ಕೆಲವಿಕೆ ವ್ಯವಹಾರಗಳಿಗೆ ಸಂಬಂಧಪಟ್ಟ ವಿಧಿಯಲ್ಲಿ ತರುವ ಹಲವು ಲೋಪದೋಷಗಳನ್ನು ಪರಿಪಡಿಸುವುದು ಮತ್ತು ಚಲನಚಿತ್ರಗಳನ್ನು ಪ್ರದರ್ಶನಕ್ಕೆ ಮಂಜೂರು ಪಡಿಸಲು ಒಂದು 'ಸೆಂಟ್ರಲ್ ಸೆನ್ಸಾರ್‌ಷಿಪ್ ಸಮಿತಿ' ನೇಮಿಸುವುದು ಮುಂತಾದವುಗಳು ಈ ಮಸೂದೆಯ ಉದ್ದೇಶ

ಸಂಸ್ಥಾನಗಳಲ್ಲಿ ಆಗಿರುವ ಬದಲಾವಣೆ

"ಸಂಸ್ಥಾನಾಧೀಶರೊಡನೆ ಮಾಡಿಕೊಂಡ ಒಪ್ಪಂದದ ಫಲವಾಗಿ ಒರಿಸ್ಸಾದಲ್ಲಿ ೫, ಮಧ್ಯಪ್ರಾಂತದಲ್ಲಿ ೧೫, ಮದ್ರಾಸಿನಲ್ಲಿ ೩ ಬೊಂಬಾಯಿಯಲ್ಲಿ ೬೫, ಪೂರ್ವ ಪಂಜಾಬಿನಲ್ಲಿ ೫ ಸಂಸ್ಥಾನಗಳು ಭಾರತ ಡೊಮಿನಿಯನ್ನಿನೊಡನೆ ವಿಕ್ಯನಾದುವು ವಿಕ್ಯನಾದ ಈ ಸಂಸ್ಥಾನಗಳ ಆಡಳಿತವನ್ನು ಆಯಾ ಪ್ರಾಂತ ಸರ್ಕಾರಗಳಿಗೇ ವಹಿಸಲಾಯಿತು ಇನ್ನೂ ಹಲವು ಸಂಸ್ಥಾನಗಳ ಆಡಳಿತವನ್ನು ಕೇಂದ್ರ ಸರ್ಕಾರದವರೇ ನಿರ್ವಹಿಸಿಕೊಂಡಿರುತ್ತಾರೆ. ಈ ಗುಂಪಿಗೆ ಸೇರಿದ ಸಂಸ್ಥಾನಗಳಲ್ಲಿ ಮುಖ್ಯವಾದುದು ಕಚ್ ಭಾರತಡೊಮಿನಿಯನ್ನಿನ ವಿಕ್ಯನಾದ ಮಾತ್ರಕ್ಕೇ ಈ ಸಂಸ್ಥಾನಗಳಲ್ಲಿ ಪ್ರಾಂತ ಅಥವಾ ಕೇಂದ್ರ ಸರ್ಕಾರದ ಶಾಸನಗಳನ್ನು ಜಾರಿಗೆ ತರಲು ಇಚ್ಛವಿಲ್ಲ ಅದುಕಾರಿಂದ ವಿಕ್ಯನಾಗಿರುವ ಸಂಸ್ಥಾನಗಳಿಗೆ ಭಾರತ ಡೊಮಿನಿಯನ್ನಿನ ಶಾಸನಗಳು ಅನ್ವಯಿಸುವಂತೆ ವ್ಯವಸ್ಥೆ ಮಾಡುವುದು ಅಗತ್ಯ! ಎಂದು ಸರ್ದಾರ್ ಪಟೇಲರು ತಿಳಿಸಿದರು

ಕೊಲ್ಲಾಪುರ ಮತ್ತು ಭೋಪಾಲ ಸಂಸ್ಥಾನಗಳ ವಿಚಾರವೆತ್ತಿ—ಈ ಸಂಸ್ಥಾನಗಳು ಭಾರತ ಡೊಮಿನಿಯನ್ನಿನೊಡನೆ ವಿಲೀನವಾಗಬೇಕೆಂದು ಪ್ರಜೆಗಳು ಇಚ್ಛೆಪಟ್ಟರೆ ಅದನ್ನು ಯಾರೂ ತಡೆಯಲಾರರೆಂದು ಸರ್ದಾರ್ ಪಟೇಲರು ತಿಳಿಸಿದರು

ಕಾಶ್ಮೀರದಲ್ಲಿ ಯುದ್ಧವು ನಿಂತಿತು

ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದಲ್ಲಿ ನಡೆಯುತ್ತಿರುವ ಹೋರಾಟವನ್ನು ಜನವರಿ ೧೫ನೆಯ ಶಾ॥ ಮಧ್ಯರಾತ್ರಿಗೆ ಒಂದು ನಿಮಿಷ ಮುಂಚಿತವಾಗಿ ನಿಲ್ಲಿಸಬೇಕೆಂದು ಇಂಡಿಯ ಮತ್ತು ಪಾಕಿಸ್ತಾನ ಸರ್ಕಾರಗಳೆರಡೂ ಅಜ್ಞೆ

ಮಾಡಿದ್ದರಿಂದ ೧೪ ತಿಂಗಳ ಹಿಂದೆ ಕಾಶ್ಮೀರದ ಸುಂದರ ಕಣಿವೆಯಲ್ಲಿ ಆರಂಭವಾದ ಸಂಗ್ರಾಮವು ೧ ನೆಯ ತಾ। ಮುಕ್ತಾಯವಾಯಿತು.

ಭಾರತ ಸರ್ಕಾರವು ಷೇಖ್ ಫೈರ್ ಆಜ್ಞೆಯ ಬಗ್ಗೆ ಹೊರಡಿಸಿದ ಅಧಿಕೃತ ಪ್ರಕಟಣೆಯಲ್ಲಿ ಈ ರೀತಿ ತಿಳಿಸಲಾಗಿದೆ

ಕಾಶ್ಮೀರ ಕಮಿಷನ್ನಿನ ಸದಸ್ಯರಾದ ಡಾ॥ ಲೊಸಾನೊರವರು ಮಿ॥ ಸ್ಯಾಂಕರ್ ಮತ್ತು ಡಾ॥ ಎರಿಕ್ ಕಾರ್ಲ್ ರವರೊಡನೆ ದೆಹಲಿ ಮತ್ತು ಕರಾಚಿ ನಗರಗಳಿಗೆ ಭೇಟಿ ಇತ್ತು ಕಾಶ್ಮೀರದಲ್ಲಿ ಪ್ಲೆಬಿಸೈಟ್ ಏರ್ಪಡಿಸುವ ವಿಷಯ ಕುರಿತು ಇಂದಿಯ ಪ್ರತ್ತು ಪಾಕಿಸ್ತಾನ ಸರ್ಕಾರಗಳ ಪ್ರತಿನಿಧಿಗಳೊಡನೆ ಸಮಾಲೋಚನೆ ನಡೆಸಿದರು ಡಾ॥ ಲೋಸಾನೋರವರು ಮುಂದಿಟ್ಟ ಸಲಹೆಗಳನ್ನು ಎಂದ ಸರ್ಕಾರಗಳೂ ಒಪ್ಪಿದುವು ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳೆರಡೂ ಡಾ॥ ಲೊಸಾನೋರವರ ಸಲಹೆಗಳಿಗೆ ಒಪ್ಪಿಗೆ ಇತ್ತಿರುವುದರಿಂದ ಕಾಶ್ಮೀರದಲ್ಲಿ ನವಾ ಹೋರಾಟ ಮುಂದುವರಿಸುವುದು ಅನವಶ್ಯಕ ವೆಂದು ಭಾವಿಸಿ ಇಂಡಿಯಾ ಸರ್ಕಾರದವರು ಕಾಶ್ಮೀರದಲ್ಲಿ ಯುದ್ಧವನ್ನು ನಿಲ್ಲಿಸಲು ನಿಶ್ಚಯಿಸಿದರು

ಪ್ಲೆಬಿಸೈಟ್ ಏರ್ಪಡಿಸುವ ಬಗ್ಗೆ ಕಾಶ್ಮೀರ ಕಮಿಷನ್ನಿನ ಯೋಜನೆ

ಕಾಶ್ಮೀರದಲ್ಲಿ ಪ್ಲೆಬಿಸೈಟ್ ಏರ್ಪಡಿಸಿರುವ ಬಗ್ಗೆ ಕಾಶ್ಮೀರ ಮಂಡಲಿಯು ಮಾಡಿರುವ ಹೊಸ ಸಲಹೆಗಳು ಲೇಕ್ ಸಕ್ಸೆಸ್, ಕರಾಚಿ ಮತ್ತು ದೆಹಲಿ ಎಲ್ಲಿ ೬ ನೇ ತಾ। ದಿನ ಏಕಕಾಲದಲ್ಲಿ ಪ್ರಕಟವಾದುವು ಈ ಸಲಹೆಗಳಿಗೆ ಇಂದಿಯ ಮತ್ತು ಪಾಕಿಸ್ತಾನ ಸರ್ಕಾರಗಳು ಇನ್ನು ನೋವನೆ ಇತ್ತಿಲ್ಲ ಜನವರಿ ೫ ನೇ ತಾ ನಲ್ಲಿ ಸೇರಿದ ಕಾಶ್ಮೀರ ಮಂಡಲಿಯ ಸಭೆಯಲ್ಲಿ ಪ್ಲೆಬಿಸೈಟ್ ನಡೆಸುವುದಿಲ್ಲವೆಂಬ ನಿರ್ಣಯ ಮಾಡಲಾಯಿತು ಈ ನಿರ್ಣಯದಲ್ಲಿ ಕಳೆದ ಆಗಸ್ಟ್ ೧೫ ರಲ್ಲಿ ಕಾಶ್ಮೀರ ಕಮಿಷನ್ ಮಾಡಿದ ನಿರ್ಣಯದ ಸಲಹೆಗಳು ಅಡಕವಾಗಿವೆ

ಹಿನ್ನೆಲೆಯ ವಿವರಗಳು

೧ ಕಾಶ್ಮೀರದ ಭವಿಷ್ಯವನ್ನು ನಿರ್ಧರಿಸಲು ನಿಸ್ಪಕ್ಷಪಾತವಾದ ರೀತಿಯಲ್ಲಿ ಜನಾಭಿಪ್ರಾಯ (ಪ್ಲೆಬಿಸೈಟ್) ಪಡೆಯಬೇಕು

ಕಾಶ್ಮೀರದಲ್ಲಿ ಸಂಪೂರ್ಣವಾಗಿ ಶಾಂತಿ ನೆಲೆಸಿದ ನಂತರ ಪ್ಲೆಬಿಸೈಟ್ ವಿಷಯ ಚರ್ಚೆಗೆಳೆಯಲ್ಲಿ ಮುಗಿದನಂತರ ಜನವರಿಕಾರಿಗೆ ನಡೆಯಬೇಕು

೩ ವಿಶ್ವಸಂಸ್ಥೆಯ ಸೆಕ್ರೆಟರಿ ಜನರಲ್‌ರವರು, ಜನಾಭಿಪ್ರಾಯ ಸಲಹೆ ಪಡೆಯಲು ಪ್ಲೆಬಿಸೈಟ್ ಆಡಳಿತಕ್ಕೆ ನಿಯಮಗಳನ್ನು ನೇಮಕ ಮಾಡಬೇಕು ಈ ಅಧಿಕಾರಿಗಳು ಅಂತರರಾಷ್ಟ್ರೀಯ ಖ್ಯಾತಿಯುಳ್ಳವರಾಗಿದ್ದು ಎರಡು ಪ್ರಗಲ್ಭ ವಿಶ್ವಾಸಾರ್ಹ ಪಾತ್ರಿಕಾಧಿಪತಿಗಳು ಮತ್ತು ಒಬ್ಬ ಪ್ರಸಿದ್ಧ ಸಂಸ್ಥಾನಿಕರಾಗಿರಬೇಕು ಈ ಅಧಿಕಾರಿಗಳನ್ನು ಕಾಶ್ಮೀರ ಸರ್ಕಾರವು ಅಧಿಕೃತವಾಗಿ ನೇಮಕ ಮಾಡುವುದು ಪ್ಲೆಬಿಸೈಟ್ ಆಡಳಿತಸೈನ್ಯಾಧಿಪರವರು ಕಾಶ್ಮೀರ ಸರ್ಕಾರದಿಂದ ಅವಶ್ಯಕವಾದ ಅಧಿಕಾರ ಪಡೆಯುವರು. ಅಲ್ಲಿನ ತಮಗೆ ಅವಶ್ಯ ಕವಾದ ಸಿಬ್ಬಂದಿಯನ್ನು ನೇಮಕಮಾಡಿಕೊಳ್ಳಲು ಅವರಿಗೆ ಅಧಿಕಾರ ಉಂಟು

೪ ಜಮ್ಮು ಮತ್ತು ಕಾಶ್ಮೀರದಲ್ಲಿ ಸಂಪೂರ್ಣವಾಗಿ ಶಾಂತಿ ನೆಲೆಸಿದ ಮೇಲೆ ಕಾಶ್ಮೀರ ಮಂಡಲಿಯ ನೆರವು, ಪ್ಲೆಬಿಸೈಟ್ ಮುಖ್ಯ ಅಧಿಕಾರಿಗಳೂ ಒಟ್ಟಿಗೆ ಸೇರಿ ಭಾರತ ಸರ್ಕಾರದ ಸೇನೆಗಳು ಎಷ್ಟಿರಬೇಕು ಮತ್ತು ಯಾವ ಸ್ಥಾನದಲ್ಲಿರಬೇಕು ಎಂಬುದರ ಬಗ್ಗೆ ಇಂಡಿಯಾ ಸರ್ಕಾರದೊಡನೆ ಸಮಾಲೋಚನೆ ನಡೆಸುವರು ಆಗಸ್ಟ್ ೧೫ ರ ನಿರ್ಣಯದ ಎರಡನೇ ಪರಿಚ್ಛೇದದ ಎರಡನೇ ಪರಿಚ್ಛೇದಕ್ಕೆ ಪ ಪರಿಚ್ಛೇದದ ಸೇನೆಯ ಸಂಖ್ಯೆ ಮತ್ತು ಸ್ಥಾನದ ಬಗ್ಗೆ ಸೇನೀಯ ಅಧಿಕಾರಿಗಳೊಡನೆ ಪ್ಲೆಬಿಸೈಟ್ ಮುಖಾಧಿಕಾರಿಗಳು, ಕಾಶ್ಮೀರ ಮಂಡಲಿಯ ಮತ ಸಮಾಲೋಚನೆ ನಡೆಸಿ ತೀರ್ಮಾನಕ್ಕೆ ಬರುವರು

ಕಾಶ್ಮೀರ ಮತ್ತು ಜಮ್ಮುನಿಂದ ಹೊರಗೆ ಹೊರಟು ಹೋಗಿರುವವರಲ್ಲಿರುವ ವಾಪಸು ಬರಲು ಅವಕಾಶವಿದೆ. ಅವರಿಗೆ ಕಾಶ್ಮೀರದ ಹೊರಹೊಣ್ಮಗಳನ್ನು ಚಲಾಯಿಸಲು ಪೂರ್ಣ ಅಧಿಕಾರವಿದೆ. ೧೯೪೭ ನೆಯ ಆಗಸ್ಟ್ ೧೫ ರ ಮತ್ತು ಅದರ ನಂತರ ಕಾಶ್ಮೀರಕ್ಕೆ ಬಂದಿರುವ ಹೊರ ದೇಶದವರೆಲ್ಲರೂ ಕಾಶ್ಮೀರ ಬಿಟ್ಟು ಹೊರಡಬೇಕು

೬ ಪ್ಲೆಬಿಸೈಟ್ ನಿರ್ವಾಟು ನಿಷ್ಪಕ್ಷಪಾತವಾಗಿ ನಡೆಯುವಂತೆ ಕಾಶ್ಮೀರದ ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳು ಸಹಕರಿಸಬೇಕು ಸಂಸ್ಥಾನದಲ್ಲಿ ಪತ್ರಿಕಾ ಸ್ವಾತಂತ್ರ್ಯ ಮತ್ತು ಸಭೆ ಸೇರಿಸಲು ಸ್ವಾತಂತ್ರ್ಯವಿರಬೇಕು ರಾಜಕೀಯ ಬಂದಿಗಳನ್ನೆಲ್ಲ ಬಿಡುಗಡೆ ಮಾಡಲಾಗುವುದು ಅಲ್ಪಸಂಖ್ಯಾತರ ಹಿತರಕ್ಷಿಸಲಾಗುವುದು ಯಾರನ್ನೂ ಹಿಂಸೆಗೆ ಗುರಿಪಡಿಸಲಾಗದು

ಪ್ಲೆಬಿಸೈಟ್ ಮುಗಿದನಂತರ ಮುಖ್ಯಾಧಿಕಾರಿಗಳು ಫಲಿತಾಂಶವನ್ನು ಕಾಶ್ಮೀರ ಮಂಡಲಿಗೂ ಮತ್ತು ಕಾಶ್ಮೀರ ಸರ್ಕಾರಕ್ಕೂ ಅಧಿಕೃತವಾಗಿ ತಿಳಿಸಿ ಜನಮತಗಣನೆಯ ನ್ಯಾಯವಾಗಿ ನಡೆದಿರುವ ವಿಷಯವನ್ನು ತಿಳಿಸಿ ಜನಮತಗಣನೆ ನ್ಯಾಯವಾಗಿ ನಡೆದಿರುವ ವಿಷಯವನ್ನು ತಿಳಿಸಿ ಜನಮತಗಣನೆಗ

ಯಕ್ಕೆ ಉತ್ತಮವಾದ ಗೊಬ್ಬರವನ್ನಾಗಿ ಮಾಡಿಕೊಳ್ಳ ಬಹುದು ಹೊಲದಲ್ಲಿ, ಗದ್ದೆಯಲ್ಲಿ, ಕೊಟ್ಟಿಗೆಯಲ್ಲಿ ಹೆ ಂದಿದ ಬೆಳೆಗಳಿಂದಲೂ ನಗರದ ಕಸಕಡ್ಡಿಗಳಿಂದಲೂ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸಬಹುದು "ಕಾಂಪೋಸ್ಟ್' ತಯಾರಿಸುವುದು ಸುಲಭ, ಹೆಚ್ಚು ಕೆಲಸಗಾರರು ಅನಾವಶ್ಯಕ, ಅದ್ದರಿಂದ ತಯಾರಿಸುವ ಬೆಲೆ ಕಡಿಮೆ ಟನ್ನಿಗೆ ಎಂಟಾಣೆ ಬೀಳಬಹುದು ಹೆಚ್ಚೆಂದರೆ ಒಂದು ರೂಪಾಯಿ ತಗಲಬಹುದು

ಕಾಂಪೋಸ್ಟ್ ಗೊಬ್ಬರವು ತರಿ, ಕುಷ್ಕಿ, ತೋಟ ಯಾವುದಕ್ಕಾದರೂ ಲಾಭದಾಯಕವು ಈ ಗೊಬ್ಬರ ದಲ್ಲಿರುವ ಹ್ಯೂಮಸ್ ಅಂಶವು ಜೇಡಿ ಮಣ್ಣಿನ ಅಂಟನ್ನು ತೆಗೆಯುತ್ತದೆ, ಮರಳು ಮಣ್ಣಿನಲ್ಲಿ ಅಂಟನ್ನು ತರುತ್ತದೆ ಇದು ಎಲ್ಲರೀತಿಯ ಮಣ್ಣಿನ್ನೂ ಬೆಳೆಗೆ ಪದಮಾಡುತ್ತದೆ ಮರಳು ಮಣ್ಣಿನ ತೇವವನ್ನು ಈ ಹ್ಯೂಮಸ್ ಹೆಚ್ಚಿಸು ತ್ತದೆ ಹಳೆಯ ಬೇರಿಗೂ ಅಣುಗಳ ಶಕ್ತಿ ಚಲನೆಗೂ ಅವಶ್ಯಾ ತೊಡುತ್ತದೆ ಜೇಡಿಮಣ್ಣಿನಲ್ಲಿ ನೀರು ಹರಿಯು ವಂತೆ ಅಳ್ಳಕ ಮಾಡುತ್ತದೆ ಸಾವಯವ ವಸ್ತುಗಳು ಮಣ್ಣಿನ ಜೀವಾಣುಗಳಿಗೆ ಪುಷ್ಟಿಯನ್ನೂ ಗೊಬ್ಬರ ದಲ್ಲಿರುವ ಸಸ್ಯವರ್ಧಕ ಅಂಶಗಳ ಮಣ್ಣಿನ ಸತ್ವವನ್ನೂ ಬೆಳೆಸುತ್ತವೆ

ಮೈಸೂರು ದೇಶದ ಹೆಚ್ಚು ಕಡಿಮೆ ಎಲ್ಲಾ ಜಿಲ್ಲೆಯ ತಾಲ್ಲೂಕುಗಳ ವೌರಭೆಗಳು ಕಾಂಪೋಸ್ಟ್ ಗೊಬ್ಬರ ವನ್ನು ತಯಾರಿಸಲು ಆರಂಭಿಸಿವೆ ಅವು ಸಲಭ ಬೆಲೆಗೆ ರೈತರಿಗೆ ಸಿಗುವಂತೆ ಅನುಕೂಲ ಕಲ್ಪಿಸುತ್ತವೆ ವ್ಯವ ಸಾಯ ಇಲಾಖೆಯ ಯುಪ್ಯಾನಂತರ ಯೋಜನೆಯೊಂದು ಈ ಕಾಂಪೋಸ್ಟ್ ಗೊಬ್ಬರವೆ ತಯಾರಿಕೆಗೆ ಮೀಸಲಾಗಿದೆ ಕೆಲಸ ಈಗಾಲೇ ಆರಂಭವಾಗಿದ ್ಯಾನುದ ಕಸ ಕಡ್ಡಿ ಗಳಿಂದ ಗೊಬ್ಬರವನ್ನು ತಯಾರಿಸಿ ಅದನ್ನು ಮಾಡುವ ವಿಧಾನವನ್ನು ಅಲ್ಲಲ್ಲಿ ತೋರಿಸುತ್ತಿದ್ದಾರೆ ರೈತರು ಈ ಯೋಜನೆಯಿಂದ ಲಾಭ ಪಡೆಯಲೆಂದು ಹಾರೈಸುತ್ತೇನೆ

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯ ರವರ ಬಂಭಕ್ತ ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೫ ಬೆಲೆ ೧೫ಕ್ಕೆ ೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾಗಿದು)ಸೈಜು ೧೪ ×೧೦ ಬೆಲೆ ೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ರಂಭಾಪುರಿವೀರಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ ×೧೦ ಬೆಲೆ ೧೫ಕ್ಕೆ ೦—೩—೦
" " " ಚಿಕ್ಕ ಸೈಜು ಬೆಲೆ ೦—೦—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಸೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೬ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೦—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯರುಜಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) ೦—೪—೦
ಶ್ರೀಕಾ ಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕೀರ್ತಿಧಾರಣಮಾಡುವ ಫೋಟೋ ೦—೦—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಸಂಪದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಸುಳಿಮಣಿಂದಿರುವ ಫೋಟೋ ೦—೧—೬
ಸಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧೪ಕ್ಕೆ ೦—೨—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧೪ಕ್ಕೆ ೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾಪ್ರಾರಥ ಅತ್ಯಂತ ಸುಂದರವಾದ ಫೋಟೋ ೧೪ಕ್ಕೆ ೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಪಡದ ಸುಂದರ ಫೋಟೋ ೧೪ಕ್ಕೆ ೦—೧—೬
ಶ್ರೀ ಜಗದ್ಗುರು ಕೇದಾರಶಿಂಗಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀರುದ್ರಮುನಿವಾರಾಜರವರು ವಿರಾಜಿಸುತ್ತಿರುವ ಫೋಟೋ ೦—೧—೬
ಬೆಂಗಳೂರು ಕಂಟಿ ಸೈಂಟಿಸ್ಟ್ರಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಪ್ಪಟಪಟ್ಟಿಕೆ ಮಜೋತ್ಸವದ ಫೋಟೋ ೦—೦—೬
ಶ್ರೀಜಗದ್ಗುರುರಂಭಾಪುರೀ ವೀರರಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಕಾಶನಗಳು ೦—೩—೦

ಸಶ್ರೇಷ್ಠೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ) ೧ ಆಣೆ
ಸಚ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ) ೧ ಆಣೆ
ಪಂಚವಿಂಶತಿ ಪ್ರಶ್ನೋತ್ತರಕಾಶ (೫ನೆಯ ಆವೃತ್ತಿ) ೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ) ೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ) ೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) ೨ ಆಣೆ
ಬುಷವಾದಿನಿಜತತ್ವದರ್ಪಣ (೪ನೆಯ ಆವೃತ್ತಿ) ೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) ೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ) ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ೨ ಆಣೆ
ಶಿವಶಕ್ತಿವಿಲಾಸ ೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ ೨ ಆಣೆ
ಬಲ್ಮಮಾಹಾತ್ಮ್ಯ (೨ನೆಯ ಆವೃತ್ತಿ) ೩ ಆಣೆ
ಪಂಚಾಚಾರ್ಯಪ್ರಕಾಶ ೩ ಆಣೆ
ಪಂಚಾಚಾರ ಪ್ರಕಾಶಿಕಾ ೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) ೪ ಆಣೆ
ಲಿಂಗಧಾರಣವಿಧಿ ೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) ೪ ಆಣೆ
ಶ್ರೀಚಕ್ರಸಂಡಿತಾರಾಧ್ಯರ ಕಾಲನಿರ್ಣಯ ೪ ಆಣೆ
ಕೈವೋಪನಿಷತ್ಸಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ) ೬ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ೪ ಆಣೆ
ವೈದಿಕಮಾಹ್ಮಯರುಶಸ್ಯ ೪ ಆಣೆ
ಸಚ್ಯಾಸಾಶ್ರಮವಿಮರ್ಶಶಕ್ತ್ಯಸ್ಥಿರೀಕರಣ (೩ನೆಯ ಆವೃತ್ತಿ) ೬ ಆಣೆ
ವೀರಶೈವಾಂಶೈಕ್ಷಿ-ಪ್ರಾದ್ಧವಿಧಿ ೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಎಳ್ಳಸೊಪ್ಪು) ೮ ಆಣೆ

ಶಿವಾದ್ವೈತಪರಭಾಷಾ (ಸಂಸ್ಕೃತ) ೮ ಆಣೆ
ವೀರಶೈವನುಷಾತ್ಕರು ೮ ಆಣೆ
ಬನವಧ್ವಾಂತವಿವಾಕರ (೨ನೆಯ ಆವೃತ್ತಿ) ೮ ಆಣೆ
ಆಗಮಪರಿಜ್ಞಾನ ೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) ೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) ೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ ೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ ೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) ೧ ರೂ
ವೈದಿಕಶಿವಪೂಜಾವಿಧಿ (ವೈದಿಕ್ತರಯುಕ್ತವಾಮಮ. ೨ನೆಯ ಆವೃತ್ತಿ) ೧೫ ರೂ
ಶ್ರೀಕರಭಾಷ್ಯಂ (ಚಚುರ್ಮುಖಶ್ರೀ) ೨ ರೂ
ವೀರಶೈವರತ್ನ (೩ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು) ೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ವೀಕಾಸಹಿತ) ೨ ರೂ
ಶಿವಾಗಮಸಂಗ್ರಹ (ಪಂಚಪ್ರಶ್ನಾ ಸಾಗಮ-ಕಾರಣಾಗಮ-ಮುಕುಟಾಗಮ-ಸೂಕ್ಷ್ಮಾಗಮ-ಗಳಿಂದ ಕೂಡಿರುವುದು) ೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪ ಪುಟ) ೮ ರೂ
A brief life-sketch of Pandit Sri Kashinatha Shastriji (English) 6 As
The Philosophical Aspect of Virasaivism (English) 8 As
Speeches by Pandit Shri Kashinatha Shastriji (English) 12 As
ತ್ರಿಶಾಚಾರ್ಯಾಷ್ಟಕ (ಕನ್ನಡ) ೩ ಪೈ.
ಶ್ರೀಶಿವಾಚಾರ್ಯ (ತಮಿಳು) ೨ ಪೈ.
ಪಂಚಾಚಾರ್ಯಾಷ್ಟಕ (ತೆಲುಗು) ೨ ಪೈ.
ಪಂಚಾಚಾರ್ಯಾಷ್ಟಕ (ಕನ್ನಡ) ೨ ಪೈ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದತಂ ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನಸಂಕಜಾತಜನಿಕರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಕರಶ್ರೀಪಂಚಲಿಂಗೋದ್ಭವನರ್ ।
ಪಂಚಾಚಾರಸಿಯಾಮಕರ್ ಪರಲಸತ್ಪಂಚಾಕ್ಷರೀಜೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ವಳವರಿಗೆ ೨ ರೂ ೪ ಆಣೆ ಸರಸ್ವಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೭ ನೇ ಜನವರಿ ೧೯೪೪ [ಸಂಚಿಕೆ ೩೬

ಶ್ರೀಜಗದ್ಗುರು ಶಿವಾನಂದವಿಜಯ

ಶ್ರೀಮದ್ರಂಭಾಪುರೀ ವೀರಸಿಂಹಾಸನಾದಿಪತಿಶ್ರೀಲಾಗಿ ರಾಜಾಧಿರಾಜಪ್ರಾಜಕರಾಗಿ, ವೀರಪೀಠದ ವಿಜಯಧ್ವಜವನ್ನು ಸರ್ವತ್ರ ಮೆರೆಯಿಸಿ, ಸಕಲ ಮತೀಯರಿಂದ ಸೇವಿಸೊ ಡಿ ದಿಗಂತವಿಶ್ರಾಂತಕೀರ್ತಿಶಾಲಿಗಳಾಗಿ ಜೋಗಿರುವ **ಶ್ರೀಜಗದ್ಗುರುತಿಶಿವಾನಂದರಾಜೇಂದ್ರ** ಶಿವಾಚಾರ್ಯನಾಮಾಸ್ಥಾನಿಗಳವರ ಪವಿತ್ರ ಜೀವನಚರಿತ್ರವು ಈಗ ಮುದ್ರಿತವಾಗಿದೆ ಇದನ್ನು ಮೊರಬದ ಜಡೆಯಮಠದ ಶ್ರೀಗಂಗಾಧರತಿವಾಚಾರ್ಯ ಸ್ವಾಮಿಗಳವರು ಒಪಿದ್ದಾರೆ ಇದರಲ್ಲಿ ಶ್ರೀಜಗದ್ಗುರುಗಳವರ ಸಮಸ್ತಚರಿತ್ರವ ಬಹು ಹೃದಯಂಗವಾಗಿ ವರ್ಣಿಸಲ್ಪಟ್ಟಿದೆ ಲೇಖನಶೈಲಿಯು ಚಿತ್ತಾಕರ್ಷಕವಾಗಿರುವದು ಅನೇಕ ಐಮರ್ಮಲ್ಯ ವಿಶಯಗಳು ಸಂಗ್ರಹಿಸಲ್ಪಟ್ಟಿವೆ ಆಯಾ ಸಂದರ್ಭಕ್ಕನುಸಾರವಾಗಿ ಅತ್ಯಂತಮಹತ್ತ್ವವುಳ್ಳ ೧೨ ಸ್ತೋತ್ರಗಳನ್ನು ಹಾಕಿರುವುದರಿಂದ ಸುವರ್ಣಾಕ್ಷರ ರತ್ನವನ್ನು ಕೆತ್ತಿದಂತಾಗಿರುವುದು **ಅನೇಕಾನೇಕ** ಮಹತ್ತ್ವವಿಷಯಗಳಿಂದ ಕೂಡಿ ತ್ಯಂತ ಸುಂದರವಾಗಿ ಮುದ್ರಿತವಾಗಿರುವ ಮೇಲ್ಕಂಡ ಗ್ರಂಥವನ್ನು ಸರ್ವರೂ ತರಿಸಿಕೊಂಡು ಆ ಮಹಾತ್ಮರ ದಿವ್ಯಚರಿತ್ರವನ್ನು ತಿಳಿದು ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೮ ಆಣೆ.** ಒಂದು ಪುಸ್ತಕವನ್ನು ವಿ ಪಿ ಮೂಲಕ ಕಳುಹಿಸಲಿಕ್ಕಾಗುವದಿಲ್ಲ ಎರಡು ಅಥವಾ ಅದಕ್ಕೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳಬೇಕು

ಮ್ಯಾನೇಜರ್,
ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಉಜ್ಜಯಿನೀ ಜಗದ್ಗುರುಗಳ ಶುಭಾಗಮನ ಜಾಲೀಸಗಾಂವ

ಶ್ರೀಜಗದ್ಗುರು ಕಾಶೀಪೀಠದ ಪಟ್ಟಾಧಿಕಾರ ಮಹೋತ್ಸವವನ್ನು ನೆರವೇರಿಸುವುದಕ್ಕಾಗಿ ಕಾಶೀ ಕ್ಷೇತ್ರಕ್ಕೆ ದಯಮಾಡಿಸಿದ್ದ ಶ್ರೀಮದುಜ್ಜಯಿನೀ ಜಗದ್ಗುರು ಸಿದ್ಧೇಶ್ವರಶಿವಾಚಾರ್ಯಮಹಾಸ್ವಾಮಿಗಳವರು ಕಾಶಿಯಲ್ಲಿ ಪಟ್ಟಾಭಿಷೇಕಕಾರ್ಯವನ್ನು ನೆರವೇರಿಸಿ ಅಲ್ಲಿಂದ ಕೇದಾರಕ್ಷೇತ್ರಕ್ಕೆ ದಯಮಾಡಿಸಿ ಸ್ವದೇಶಕ್ಕೆ ಹೊರಡುವ ಸಮಯದಲ್ಲಿ ಮಹಾರಾಷ್ಟ್ರ ದೇಶದಲ್ಲಿ ರಾರಾಜಿಸುತ್ತಿರುವ ಜಾಲೀಸಗಾಂವ ನಗರಕ್ಕೆ ಬಿಜಯಮಾಡಿಸಿದರು ಇಲ್ಲಿಯ ವೀರಶೈವ ಮಂಡಲಿಯವರು ಶ್ರೀ ಜಗದ್ಗುರುಗಳವರಿಗೆ ಅಭೂತಪೂರ್ವವಾದ ಸ್ವಾಗತವನ್ನೆತ್ತು ಸತ್ಕರಿಸಿದರು. ತಾ ೫-೧-೪೪ ನೇ ದಿವಸ ಶ್ರೀಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು ಸಂಸ್ಥಾವದ ವಿಜಯದಶಮಿ ವೇ॥ ಎಚ್ ಎಮ್. ಸಿದ್ಧಮರಿಸ್ವಾಮಿ ಇವರು ಹಿಂದೀ ಭಾಷೆಯಿಂದ ಮೆನೋಹರವಾಗಿ ಭಾಷಣವನ್ನು ಮಾಡಿದರು ಇವರು ತಮ್ಮ ಭಾಷಣದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಪ್ರತಿಷ್ಠಿಸಿದ ಅಸ್ರಗ್ರಹಿಸಿದ ಚಂದ್ರಮೌಳೀಶ್ವರ ಲಿಂಗ ಮತ್ತು ರತ್ನಗರ್ಭ ಗಣಪತಿ ವಿಷಯಗಳನ್ನು ತ್ರಿಕೋಟಿಲಿಂಗಸ್ಥಾಪನ, ಆಗಸ್ತ್ಯಮಹರ್ಷಿಗಳಿಗೆ ಉಪದೇಶ ಇತ್ಯಾದಿ ವಿಷಯಗಳನ್ನೂ ಸವ್ರಮಾಣವಾ ಹೇಳಿ ಸರ್ವರನ್ನೂ ಸಂತೋಷಪಡಿಸಿದರು ಬಳಿಕ ಶ್ರೀಜಗದ್ಗುರುಗಳವರ ಅಜ್ಞೆಯ ಮೇರೆಗೆ ಈ ಗ್ರಾಮದಲ್ಲಿ ವೀರಶೈವ ಸಂಘವು ಸ್ಥಾಪಿಸಲ್ಪಟ್ಟಿತು. ಶ್ರೀಜಗದ್ಗುರುಗಳವರು ವಿಭೂತಿಯ ಮಹತ್ವವನ್ನು ಹಿಂದೀ ಭಾಷೆಯಲ್ಲಿ ಮನೋಹರವಾಗಿ ಬೋಧಿಸಿ ಸರ್ವರನ್ನು ಭಕ್ತಿಯುತರನ್ನಾಗಿ ಮಾಡಿದರು ಬಳಿಕ ಶ್ರೀಜಗದ್ಗುರು ಪಂಡಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಸಲ್ಪಟ್ಟಿತು

ಉಮಾಕಾಂತಪ್ಪ ಗಣಪತಿ,
ವೀರಶೈವ ಸಂಘಾಧ್ಯಕ್ಷ ಜಾಲೀಸಗಾಂವ

ಪುರಾಣ ಸಮಾಪ್ತಿ ಮಹೋತ್ಸವ ಬೇಗುಂಟಿ

ನಿಜಾಂ ಇಲಾಖಾ ಬೇಗುಂಟಿ ಗ್ರಾಮದಲ್ಲಿ ವೇ॥ ನೀಲಕಂಠಯ್ಯ ವೀರಯ್ಯನವರ ಪ್ರಯತ್ನ ವಿಶೇಷದಿಂದ ಮಾಘ ಶುದ್ಧ ಸಂಚಮಿ ದಿವಸ ಶ್ರೀ ಭೋಮಸಿದ ನಾಗ ಭೂಷಣ ಶಿವಯೋಗಿಗಳಪುರಾಣವು ಸ್ವಾರಂಭವಾಯಿತು ನೇ॥ ಗುರುಸಣಾ ಹೊಸಿಮಠದ ಶರಣಯ್ಯನವರು ಪುರಾಣವನ್ನು ಒಹು ಮನೋಹರವಾ ಹೇಳುತ್ತಿದ್ದರು ವೇ॥ ವಿಶ್ವಾರಾಧ್ಯ ಗುರುಸಣಾ ಇವರು ಸುಸ್ವರದಿಂದ ಓದುತ್ತಿದ್ದರು ಈ ರೀತಿ ಪುರಾಣವು ಒಳ್ಳೆ ವೈಭವ ದಿಂದ ಸಾಗಿ ಪುಷ್ಯ ಶುದ್ಧ ೪ ದಿವಸ ಸಮಾಪ್ತಿಗೊಂಡಿತು ಈ ಸಮಾರಂಭಕ್ಕೆ ವೇ॥ ಏ ಎಂ ಗಾಪರಕ್ಕ ಹಿರೇಮಠ, ಕಡಪುರ ಮತ್ತು ವಿದ್ವಾನ್ ಬಸವರಾಜ, ತಲಲಾಜ ಇವರು ಬಂದು ಸುಸ್ವನವಾದ ಸಂಗೀತಶಕ್ತೀಲಿಯನ್ನು ನೆರವೆರಿಸಿದರು. ವೇ॥ ಭೀಮಭಟ್ಟಶಕ್ಕೆ ಸಂಭುಲಿಂಗಶಾಸ್ತ್ರಿಗಳು ಸತ್ಯವಾನ್ ಸಾವಿತ್ರಿ ಕೀರ್ತನವನ್ನೂ ಮತ್ತು ವೇ॥ ಶಿವಕಥಾಭೂಷಣ ಬಿ ಎಂ ಮಾಸ್ಟರ್ ಬಿಜಾಪುರ ಇವರು ಅಶ್ವಮಹಾದೇವಿ ಕೀರ್ತನವನ್ನೂ ಮನೋಹರವಾಗಿ ಮಾಡಿ ಸರ್ವರನ್ನೂ ಸಂತೋಷ ಪಡಿಸಿದರು ಈ ಕಾಯ್ಯ ದಲ್ಲಿ ಭಾಗಿಗಳಾದ ಸರ್ವರಿಗೂ ಜಗದಾಚಾರ್ಯರು ಮಂಗಲವನ್ನಿಯಲಿ

ಪ್ರತ್ಯಕ್ಷದರ್ಶಿ

ಹೈದರಾಬಾದ್ ಕಾಂಗ್ರೆಸ್ ಸನುಚಾರ

ಹೈದ್ರಾಬಾದ್ ಸಂಸ್ಥಾನದ ಎರಡು ಕಾಂಗ್ರೆಸ್ ಪಕ್ಷಗಳಿಗೂ ಇರುವ ಭಿನ್ನಾಭಿಪ್ರಾಯಗಳು ಶೀಘ್ರವೆ ಬಗೆಹರಿಯಬಹುದೆಂದು ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸಿದ್ಧಲಿಂಗಯ್ಯನವರು ಹೇಳಿಕೆ ಇತ್ತಿದ್ದಾರೆ

ಶ್ರೀ ಸಿದ್ಧಲಿಂಗಯ್ಯನವರು ೩-೪ ದಿನಗಳಿಂದಲೂ ಹೈದ್ರಾಬಾದ್ ಕಾಂಗ್ರೆಸ್ಸಿನಲ್ಲಿ ಉಂಟಾಗಿರುವ ಒಡಕನ್ನು ಬಗೆಹರಿಸಲು ಪ್ರಯತ್ನಿಸುತ್ತಿದ್ದಾರೆ ದಿಲ್ಲಿಯಲ್ಲಿ ಉಭಯ ಪಕ್ಷಗಳಿಗೂ ಒಡಂಬಡಿಕೆಯನ್ನುಂಟುಮಾಡಲು ಭಾರತದ ಮಹಾನಾಯಕರು ಪ್ರಯತ್ನಿಸುತ್ತಿದ್ದಾರೆ ಎಂದು ಅವರು ತಿಳಿಸಿದರು

ಮೈಸೂರಿನ ವಿಜಾರವೆತ್ತಿ ಕರ್ನಾಟಕ ಪ್ರಾಂತ ರಚನೆಯಾದರೆ ಬೆಂಗಳೂರು ಅದರ ರಾಜಧಾನಿಯಾಗುವುದೆಂದೂ, ಮೈಸೂರಿನ ಶ್ರೀಮನ್ಮಹಾರಾಜರವರನ್ನು ಕರ್ನಾಟಕ ಪ್ರಾಂತದ ಶಾಸನ ಬದ್ಧ ಗವರ್ನರ್ರನ್ನಾಗಿ ಮಾಡಬೇಕೆಂಬ ಆಲೋಚನೆ ಇದೆಯೆಂಡೂ ಅವರು ತಿಳಿಸಿದರು

ಸ್ವೀಕಾರ

ನಿಜಾಂ ಇಲಾಖಾ ಜೇಗುಂಟಿಗ್ರಾಮದಲ್ಲಿ ಸ್ಥಾರಂಭಿಸಿದ ಶ್ರೀಭೋಮಪೀಠದ ನಾಗಭೂಷಣ ಶಿವಯೋಗಿಗಳ ಪುರಾಣ ಸಮಾಪ್ತಿ ಸಮಯದಲ್ಲಿ ಸದರಿ ಗ್ರಾಮದವರು ಪ್ರಭಾವೋಷಣಕ್ಕೋಸ್ಕರ ಸಮರ್ಪಿಸಿದ 2ರೂ ಗಳು ವೇ॥ ಶಿವಕಥಾಭೂಷಣ ಬಿ ಎಮ್ ಮಾಸ್ಟರ್ ಬಿಜಾಪುರ ಇವರ ದ್ವಾರಾ ತಲಪಿರುತ್ತದೆ

ಧಾರವಾಡ ಡಿ॥ ಕೊಣ್ಣೂರು ಹಿರೇಮಠದ ಶ್ರೀ ಪಟ್ಟದ ಸ್ವಾಮಿಗಳವರು ಕಾಶೀಕ್ಷೇತ್ರಕ್ಕೆ ಹೋಗಿ ಸುಖರೂಪದಿಂದ ತಮ್ಮ ಗ್ರಾಮಕ್ಕೆ ಮುಟ್ಟಿದ ಸಂತೋಷಾರ್ಥವಾಗಿ ಪ್ರಭಾವೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಮಃ॥ ಬಸವ್ಪಾ, ಸವ್ಪಲ ಇವರ ದ್ವಾರಾ ತಲಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ವೇದಗಳ ಸ್ವರೂಪ

(ಲೇಖಕರು—ಶ್ರೀಮಾನ್ ಎಂ ಎಲ್ ನಾಗಣ್ಣನವರು ಆಳ್ವಿಕೆಯ ಆತ್ಮಬಾಹುಮಂಬರ, ಸೈಸೂರು)

ನಾವು ಹುಟ್ಟಿದ್ದನ್ನು ನಮ್ಮ ಜಾಯಿಕಂದಗಳು ಬಲ್ಲರೇ ಹೊರತು ನಾವು ಹುಟ್ಟುವುದಕ್ಕೆಂತ ಮುಂಚೆ ಅಂದರೆ ತಾಯಿಯ ಗರ್ಭಕ್ಕೆ ಬರುವುದಕ್ಕೆ ಮುಂಚೆ ನಾವು ಎಲ್ಲಿದ್ದೆವು ? ನಾವು ಏನಾಗಿದ್ದೆವು ? ಎಂಬುದನ್ನು ಅವರು ತಿಳಿಯರು ನಾವು ಮರಣಹೊಂದುವದನ್ನು ಎಲ್ಲರೂ ತಿಳಿಯುವರೇ ಹೊರತು ನಾವು ಮರಣವನ್ನು ಹೊಂದಿದನಂತರ ಅಂದರೆ ನಮ್ಮ ದೇಹ ನಿರ್ಜೀವಾ ನಂತರ ನಾವು ಎಲ್ಲಿಗೆ ಹೋಗುತ್ತೇವೆ ? ಏನಾಗುತ್ತೇವೆ ? ಎಂಬುದನ್ನು ಯಾರೂ ತಿಳಿಯರು ಇಂದರಿಂತೆಯೇ ನಾವು ಅನುಭವಿಸುತ್ತಿರುವಾಗ ಪ್ರಪಂಚವು ಹೇಗಿದ ಎಂಬುದನ್ನು ತಿಳಿಯುತ್ತೇವೆಯೇ ಹೊರತು ಪ್ರಪಂಚವು ಹಿಂದೆ ಹೇಗಿತ್ತು ? ಮುಂದೆ ಹೇಗಿರುವುದು ? ಎಂಬುದನ್ನು ನಾವು ತಿಳಿಯುವಾರವು ನಮ್ಮನ್ನು ವಿಸಯವನ್ನಾಗಲಿ ಅಥವಾ ನಮ್ಮ ಎದುರಿಗೆ ತೋರುತ್ತಿರುವ ಪ್ರಪಂಚದ ವಿಷಯವನ್ನಾಗಲಿ ನಾವು ತಿಳಿಯುವ ಹೊರತು ಪ್ರಪಂಚದ ಹಿಂದೆ ಹೇಗಿತ್ತು ? ಮುಂದೆ ಹೇಗಿರುವುದು ? ಎಂಬ ವಿಷಯವನ್ನಂತೂ ನಾವು ತಿಳಿಯುವ ಸಂಬವವೇ ಇಲ್ಲ ಆದುದರಿಂದ ನಮ್ಮ ಇಂದರೆ ಜೀವರ ಸ್ವರೂಪ ವನ್ನೂ, ಪ್ರಪಂಚದ ಸ್ವರೂಪವನ್ನೂ, ತನ್ನ ಸ್ವರೂಪ ವನ್ನೂ ಈಶ್ವರನೊಬ್ಬನೇ ತಿಳಿಯಲು ಸರ್ವಥಾಸಲ್ಲದ ಇನ್ನಾರೂ ಸಮರ್ಥರಲ್ಲ

ಒಂದು ದೇಶದಲ್ಲಿ ಹೊಸದಾಗಿ ಸರ್ಕಾರವು ಸ್ಥಾಪಿಸಲ್ಪಡಬೇಕಾದರೆ ಅದು ಹೇಗೆ ಸ್ಥಾಪಿಸಲ್ಪಡಬೇಕು, ಸರ್ಕಾರವು ಯಾವ ರೀತಿಯಾಗಿ ಸೃಜಿಗಿ ನ ಸರಕ್ಷಿಸಬೇಕು, ಪ್ರಜೆಗಳು ಸರ್ಕಾರದ ವಿರುದ್ಧವಲ್ಲ ಯಾವ ರೀತಿಯಾಗಿ ನಡದುಕೊಳ್ಳಬೇಕು ಪ್ರಜೆಗಳಲ್ಲಿ ಯಾರಾರಿಗೆ ಯಾವಾವ ಯೆ ಗ್ರತೆ ಇರ್ತರ ಅವರಿಗೆ ಯಾವ ಯಾವ ಅಧಿಕಾರವನ್ನು ನೀಡಬೇಕು, ಪ್ರಜೆಗಳು ಯಾವ ರೀತಿ ನಡೆದರೆ ತಪ್ಪು ಯಾವ ಯಾವ ತಪ್ಪಿಗೆ ಯಾವ ಯಾವ ವಿಶ್ಚಿಸ್ತನ್ನು ಕೊಡಬೇಕು ಎಲೆ ಮಂತಾದ ವಿಷಯಗಳನ್ನು ಸಿಗಿಂಡಿರತಕ್ಕ ಒಂದು ಶಾಸನವನು ವಿರ್ಮಿಸಲ್ಪಡುತ್ತದೆ ಈ ಸಂದರ್ಭ ದಲ್ಲಿ ಈಶ್ವರನೇ ಸರ್ಕಾರವು, ಪ್ರಪಂಚವೇ ಈಶ್ವರನು ಆಳುವ ದೇಶವು, ಜೀವರೇ ಪ್ರಜೆಗಳು ಈಶ್ವರನು ಈ ಪ್ರಪಂಚ ವನ್ನು ಸೃಷ್ಟಿಸುವ ಕಾಲದಲ್ಲಿಯೇ ತನ್ನ ಸ್ವರೂಪವೇನು ? ಪ್ರಪಂಚದ ಸ್ವರೂಪವೇನು ? ಜೀವರ ಸ್ವರೂಪವೇನು ? ಅವರು ಎಲ್ಲಿಂದ ಬಂದರು ? ಅವರಿಗೂ ತನಗೂ ಏನು ಸಂಬಂಧ ? ತಾನು ಯಾವ ರೀತಿ ಜೀವರನ್ನು ಕಾಪಾಡುವುದು ? ಜೀವರು ಏನನ್ನು ಮಾಡಬೇಕು ಮತ್ತು ಅವರು ಏನನ್ನು ಮಾಡಕೂಡದು ? ಜೀವರು ವಿತರಿಂದ ದುಃಖವನ್ನು ಹೊಂದಿದ್ದಾರೆ ? ಯಾವ ರೀತಿಯಿಂದ ಜೀವರು ದುಃಖದಿಂದ ಬಿಡುಗಡೆ ಹೊಂದಿ ಸುಖವನ್ನು ಹೊಂದುತ್ತಾರೆ ? ಇವೇ ಮೊದಲಾದ ಆಧ್ಯಾತ್ಮಿಕ ವಿಷಯಗಳನ್ನೊಳಗೊಂಡಿರತಕ್ಕ ಒಂದು ಶಾಸನವನ್ನು ಮಾಡಿರಲೇಬೇಕು ಈ ಶಾಸನಿಗೇನೇ "ವೇದ" ಎಂದು ಹೆಸರು

"ಶ್ರುತಿಸ್ಮೃತೀ ಮಮೈವಾಜ್ಞೇ" ಎಂಬ ಶ್ರುತಿಯಂತೆ ಶ್ರುತಿಸ್ಮೃತಿಗಳೆರಡೂ ತನ್ನ ಆಜ್ಞಾವಾಕ್ಯಗಳೆಂದು ಈಶ್ವರನು ಸಾರಿದ್ದಾನೆ ಪರಮೇಶ್ವರನ ಮುಖದಿಂದ ಹೊರಟು ಕ್ರೋಶ್ಟಗಳ ಶ್ರವಣೇಂದ್ರಿಯದ ಮೂಲಕ ಜನಕಿಗೆ ಬಂದದ್ದರಿಂದ ವೇದವು ಶ್ರುತಿಯೆಂಬ ಹೆಸರಿನಿಂದ ಪ್ರಖ್ಯಾತವಾಯಿತು ಪರಮೇಶ್ವರನ ಮುಖದಿಂದ ಬಂದ ವೇದವನ್ನು ಮಹರ್ಷಿಗಳು ಅಭ್ಯಾಸಮಾಡಿ ತನ್ಮೂಲಕ ಅವರ ಮನಸ್ಸಿನಲ್ಲಿ ಗೋಚರವಾದ ಧರ್ಮಾಧರ್ಮಗಳ ವಿವರಣೆಯು ಸ್ಮೃತಿಗಳು ಎಂಬುದಾಗಿ ಪ್ರಖ್ಯಾತವಾಗಿರುವವು.

"ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದ್ಋಗ್ವೇದೋ ಯಜುರ್ವೇದಸ್ಸಾಮವೇದೋಽಥರ್ವಾಂಗಿರಸಃ" ಮತ್ತು "ನಿಶ್ವಾಸಭೂತಾ ನೇ ವಿಷ್ಣೋ ರ್ಜಾತಾ ವೇದಾಸ್ತುವಿಸ್ತರಾ" ಎಂಬ ಬೃಹದಾರಣ್ಯಕಾದಿ ಶ್ರುತಿಗಳು ಈಶ್ವರನ ನಿಶ್ವಾಸದಿಂದ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ ಎಂಬ ನಾಲ್ಕು ವೇದಗಳು ಲೋಕೋದ್ಧಾರಕ್ಕೋಸ್ಕರ ಅವಿರ್ಭವಿಸಿದವು ಎಂದು ಹೇಳಿವೆ ಅಂದರೆ ನಿಃಶ್ವಾಸವು (ಉಸಿರು ಬಿಡುವಿಕೆಯು) ಪುರುಷನ ಪ್ರಯತ್ನಾಪೇಕ್ಷೆಯಲ್ಲದೆಯೇ ಅನಾಯಾಸವಿದ್ದಂತಾಗಿ ಹೇಗೆ ನಡೆಯುತ್ತದೆಯೋ ಹಾಗೆ ಋಗ್ವೇದಾದಿ ನಿಖಿಲ ಶಬ್ದರಾಶಿಗಳು ಈಶ್ವರನ ಪ್ರಯತ್ನಾಪೇಕ್ಷೆಯಿಲ್ಲದೆಯೇ ಅವನ ಮುಖದಿಂದ ಹೊರಡುವುವು

"ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ" ಮತ್ತು "ಧಾತಾ ಯಥಾ ಪೂರ್ವಮಕಲ್ಪಯತ್" ಎಂಬ ಶ್ರುತಿಪ್ರಮಾಣ ಗಳಿಂದ ಅನಾದ್ಯನಂತವಾಗಿರುವ ಅಖಂಡಕಾಲಪ್ರವಾಹ ದೊಳಗೆ ಸೃಷ್ಟ್ಯಾದ್ಯಂಥರೂಪವಾದ ಪ್ರತಿಯೊಂದು ಖಂಡದಲ್ಲಿಯೂ ಸರ್ವಜ್ಞನಾದ ಈಶ್ವರನು ಪೂರ್ವ ಪೂರ್ವ ಕಲ್ಪಗಳಲ್ಲಿದ್ದ ಋಗ್ವೇದಾದಿ ಶಬ್ದರಾಶಿಗಳಿಗೆ ಅತ್ಯಂತ ಸಮಾನಾಕಾರವಾಗಿ ಸ್ವರ, ವರ್ಣ, ಮಾತ್ರೆ, ಲಕ್ಷಣ, ಗುರು, ಪದ, ವಾಕ್ಯ, ಕಾಂಡ, ಪ್ರಶ್ನ, ಪ್ರಕಾರಕ, ಅಧ್ಯಾಯ, ಸಂಹಿತೆ, ಬ್ರಾಹ್ಮಣ, ವಲ್ಲಿ, ಮಂಡಲ, ಅನುವಾಕ, ವರ್ಗ, ಸೂಕ್ತ, ಖಂಡ ಮತ್ತು ಇವುಗಳ ಆನುಪೂರ್ವಿ (ಕ್ರಮ) ಇತ್ಯಾದಿಗಳಿಂದಿಗೆ ಒಂದು ಭಾಗದಲ್ಲಿಯೂ ಲೇಶಮಾತ್ರವೂ ವೈಷಮ್ಯವು ಬರದಂತೆ ತತ್ಯಂತ ಸಾದೃಶ್ಯವನ್ನು ಪಡೆದಿರುವ ಶಬ್ದರಾಶಿ ಗಳೆಲ್ಲವನ್ನೂ ಅಂದರೆ ಸೃಷ್ಟ್ಯಾದಿಪ್ರಕರಣಗಳಾದ ಆ ಸಮಸ್ತವೇದಗಳನ್ನೂ ತನ್ನ ಮುಖದಿಂದ ಚತುರ್ಮುಖ ಬ್ರಹ್ಮನಿಗೆ ಉಪದೇಶಮಾಡಿ ಅವನು ಜಗತ್ಸೃಷ್ಟಿಯನ್ನು ಮಾಡುವಂತೆ ನಿಯಮಿಸುತ್ತಾನೆ

ಸರ್ವಸ್ಯ ಜ್ಞಾತಾ ಜ್ಞಾತಾ ಸನ್ನಿವಿಶ್ವೋ ।
ಮತ್ತ ಸ್ಸೃಷ್ಟಿಜ್ಞಾನಮಪ್ರೇಷಣಂ ಚ ।
ವೇದಶ್ಚ ಸರ್ವೈರಹಮೇವ ವೇದ್ಯೋ ।
ವೇದಾಂತಕೃದ್ವೇದವಿದಪರಾಹಂ ॥

ಎಂಬ ಸ್ಮೃತಿವಚನದಂತೆ ಈಶ್ವರನು ವೇದಕರ್ತನು ಮತ್ತು ವೇದದಿಂದ ತಿಳಿಯಲ್ಪಡತಕ್ಕ ನೆನು ಎಂಬುದು ಸಿದ್ಧವಾಗುತ್ತದೆ ಈಶ್ವರನಿಂದ ಉಪದೇಶಲ್ಪಟ್ಟ ವೇದಗಳು ಸಕಲವಿಧ ಲೌಕಿಕ ಪಾರಮಾರ್ಥಿಕ ಸಮಾಚಾರಗಳಿಗೆ ಆಕಾರಕ್ಕೂಭವನಿಗೆ ಈ ವೇದಗಳಲ್ಲಿ ಸಕಲ ವಿದ್ಯೆಗಳು, ಸಕಲ ಕಲೆಗಳು, ಸಕಲವಿಧ ಜ್ಞಾನವಿಜ್ಞಾನಗಳು ಅಡಕವಾಗಿರುತ್ತವೆ ಈ ಕಾರಣದಿಂದಲೇ ಶ್ರೀಮದುಭಗವಂತನು, "ಭೂತಂ ಭವ್ಯಂ ಭವಿಷ್ಯಚ್ಚ ಸರ್ವಂ ವೇದಾಪ್ಪಿಂ ದ್ವೈತ" ಎಂಬಾಗಿ ವೇದದ ವೈಭವನ್ನು ವರ್ಣಿಸಿರುತ್ತಾನೆ ಆದುದರಿಂದ ವೇದಗಳು ಯಾರಿಂದಲೋ ಒಂದು ಕಾಲದಲ್ಲಿ ಒಬೆಯಲ್ಪಟ್ಟ ಪುಸ್ತಕಗಳಾಗಿದೆ ಅವಿರುವೆಯವಾಗಿಯೂ, ಈಶ್ವರನು, ಜೀವರು, ಪ್ರಪಂಚ ಸೃಷ್ಟಿಪ್ರಳಯಗಳು ಹೇಗೆ ಆಗಾಗಿದೆಯೋ ಹಾಗೆ ಆಗಾದಿಯಾಗಿಯೂ ಇರುತ್ತವೆ 'ತೇ ಧ್ಯಾನಯೋಗಾನುಗತಾ ಅಪಶ್ಯನ್' ಎಂಬ ಶ್ವೇತಾಶ್ವತರೋಪನಿಷತ್ತಿನ ಪ್ರಕಾರ ಋಷಿಗಳು ತನ್ನ ಧ್ಯಾನಯೋಗಬಲದಿಂದ ವೇದವಾಕ್ಯ (ಮಂತ್ರ)ಗಳನ್ನು ಸಾಕ್ಷಾತ್ಕರಿಸಿಕೊಂಡು ಅಂದರೆ ಕಂಡುಹಿಡಿದು ಜೀವರ ಉದ್ಧಾರಕ್ಕೋಸ್ಕರ ಲೋಕದಲ್ಲಿ ಪ್ರಚಾರಮಾಡಿದರು

ನೇದವು ವಿಂಗಡಿಸಲ್ಪಡದ ಅಖಂಡವಾಗಿದ್ದುದರಿಂದ ಶ್ರೀ ಬಾದರಾಯಣ (ಕೃಷ್ಣದ್ವೈಪಾಯನ)ಮಹರ್ಷಿಗಳು ಅದನ್ನು ಮಗಾದಿಚತುರ್ವೇದಗಳನ್ನಾಗಿ ವಿಂಗಡಿಸಿದರು. ಆದುದರಿಂದಲೇ ಇವರಿಗೆ ವೇದವ್ಯಾಸರು (ವೇದವನ್ನು ವಿಭಾಗಿಸಿದವರು) ಎಂಬ ಹೆಸರು ಬಂದಿತು ಒಬ್ಬ ಕಾಯಿಗೆ ಮೂರು ಜನ ಮಕ್ಕಳಿದ್ದು ಇವರಲ್ಲಿ ಒಬ್ಬನು ದೃಢಕಾಯನಾಗಿಯೂ, ಇನ್ನೊಬ್ಬನು ರೋಗಿಯಾಗಿಯೂ, ಮತ್ತೊಬ್ಬನು ಎಳೆ ಮಗುವಾಗಿಯೂ ಇದ್ದರೆ ಈ ಮೂರು ಜನ ಮಕ್ಕಳಲ್ಲಿ ತಾಯಿಗೆ ಸಮಾನವಾದ ಪ್ರೀತಿ ಯಿದ್ದರೂ ಅವರವರ ದೇಹಪ್ರಕೃತಿಗನುಸಾರವಾಗಿ ನೊದ ಅನೆಯವನಿಗೆ ರೊಟ್ಟಿ, ತುಪ್ಪ, ಸಕ್ಕರೆ ಇವುಗಳನ್ನೂ, ಎರಡನೆಯವನಿಗೆ ಗಂಜಿ ಮತ್ತು ಮೆಣಸಿನ ಸಾರು ಅನ್ನ ವನ್ನೂ, ಮೂರನೆಯವನಿಗೆ ಜಾಲಿಹಣ್ಣು ಕೊಡುತ್ತಾಳೆ ಆದರಂತೆ ಚೀವರು ತಮ್ಮ ತಮ್ಮ ಅಧಿಕಾರಕ್ಕನುಸಾರ ವಾಗಿ ಫಲಗಳನ್ನು ಹೊಂದುವದಕ್ಕಾಗಿ ಈಶ್ವರನು ವೇದ ಗಳನ್ನು ಕರ್ಮಕಾಂಡ, ಉಪಾಸನಕಾಂಡ, ಜ್ಞಾನ ಕಾಂಡ ಎಂಬುದಾಗಿ ಮೂರು ಭಾಗಗಳನ್ನಾಗಿ ಮಾಡಿರು ತ್ತಾನೆ. ಯಾರು ಸ್ವರ್ಗಲೋಕದ ಸುಖವನ್ನು ಅಪೇಕ್ಷಿ ಸುತ್ತಾರೋ ಅವರು ಕರ್ಮಕಾಂಡದಲ್ಲಿ ಹೇಳಿರುವಂತೆ ಕರ್ಮಗಳನ್ನು ಮಾಡತಕ್ಕದ್ದು. ಯಾರು ಬ್ರಹ್ಮಲೋಕ ವನ್ನು ಹೊಂದಿ ಸಾಲೋಕ್ಯ, ಸಾಮಾಪ್ಯ, ಸಾರೂಪ್ಯ ಎಂಬ ಪನವಿಗಳನ್ನು ಪಡೆಯಲಿಚ್ಛಿಸುತ್ತಾರೋ ಅವರು ಉಪಾಸನಾಕಾಂಡದಲ್ಲಿ ಹೇಳಿರುವಂತೆ ಈಶ್ವರನ ಉಪಾಸನೆಯನ್ನು ಮಾಡತಕ್ಕದ್ದು. ಯಾರು ಸ್ವರ್ಗಲೋಕದ ಸುಖವನ್ನಾಗಲಿ ಅಥವಾ ಬ್ರಹ್ಮಲೋಕದ ಪದವಿಯನ್ನಾಗಲಿ ಅಪೇಕ್ಷಿಸದೆ ಸಾಯುಜ್ಯ (ಮೋಕ್ಷ) ಪದವಿಯನ್ನು ಅಂದರೆ ಈಶ್ವರನಲ್ಲಿ ಏಕ್ಯವನ್ನು ಹೊಂದಿ ನಿರಿತಿಕಯ ವಾದ ಆನಂದವನ್ನು ಪಡೆಯಲು ಇಚ್ಛಿಸುತ್ತಾರೋ ಅವರು ಜ್ಞಾನಕಾಂಡದಲ್ಲಿ ಹೇಳಿರುವಂತೆ ಬ್ರಹ್ಮಜ್ಞಾನ ವನ್ನು ಸಂಪಾದಿಸತಕ್ಕದ್ದು. ವೇದಪುರುಷನಿಗೆ ಕರ್ಮ ಕಾಂಡವು ಪಾದಗಳಂತೆಯು, ಉಪಾಸನಾಕಾಂಡವು ಹೃದ ಯದಂತೆಯು, ಜ್ಞಾನಕಾಂಡವು ಶಿರಸ್ಸಿನಂತೆಯು ಇರು ವದರಿಂದ ಮನುಷ್ಯನಿಗೆ ಶಿರಸ್ಸು ಹೇಗೆ ಪ್ರಧಾನವೋ ಹಾಗೆ ಮೂರು ಕಾಂಡಗಳಲ್ಲಿ ಜ್ಞಾನಕಾಂಡವು ಪ್ರಧಾನ ವಾಗಿದೆ ಆದುದರಿಂದಲೇ ಇದಕ್ಕೆ ವೇದತಿರವೆಂದು ಹೆಸರು. ಜ್ಞಾನಕಾಂಡವು ವೇದದ ಕೊನೆಯಭಾಗವಾಗಿ "ತಿರೇಸು ತ್ರಿಲವನ್ಮೇದೇ ವೇದಾಂತಸ್ಸು ಪ್ರತಿಷ್ಠಿತಃ" ಎಂಬ ಮುಕ್ತಿಕೋಪನಿಷತ್ತಿನ ಪ್ರಕಾರ ಎಳ್ಳುಗಳಲ್ಲಿ ಎಣ್ಣೆಯು ಇರುವಂತೆ ವೇದಗಳ ಸಾರವಾದ ಬ್ರಹ್ಮ ಜ್ಞಾನವನ್ನು ದೃಢವಾಗಿ ಬೋಧಿಸುವದರಿಂದ ವೇದಾಂತ ವೆಂದೂ, "ಉಪನೀಯ ಮಹಾತ್ಮಾನಂ ಬ್ರಹ್ಮೋಪಾಸ್ತಿ ದ್ಯಯಂ ತತಃ । ನಿಷೊಕ್ಷ್ಯವಿದ್ಯಾಂ ತತ್ಪಾಂ ಚ ತಸ್ಯಾ ದುಪನಿಸನ್ನೆತಂ ॥" ಎಂಬಂತೆ ಬ್ರಹ್ಮವಿದ್ಯಾದ್ವೆಂದು ತಿಳಿಯಪಡಿಸಿ ಅಜ್ಞಾನವನ್ನು ಆಚೆಗೆ ಓಡಿಸಿ ಬ್ರಹ್ಮೈಕ್ಯವನ್ನು ಬೋಧಿಸುವದರಿಂದ ಉಪನಿಷತ್ತೆಂದೂ ಕರೆಯಲ್ಪಡುವುದು

ಪ್ರತಿಯೊಂದು ವೇದದ ಹೆಚ್ಚುಭಾಗವೆಲ್ಲವೂ ಕರ್ಮ ವನ್ನೇ ಪ್ರತಿಪಾದಿಸುತ್ತದೆ ಯಜುರ್ವೇದವು ಯಜ್ಞ ಗಳನ್ನು ಮಾಡುವ ವಿಧಾನಗಳನ್ನೂ, ಋಗ್ವೇದವು ಯಜ್ಞಕಾಲದಲ್ಲಿ ದೇವತೆಗಳನ್ನು ಆಹ್ವಾನಿಸಾಡತಕ್ಕ ಮಂತ್ರಗಳನ್ನೂ, ಸಾಮವೇದವು ರಾಗದಿಂದ ದೇವತಾ ಸ್ತೋತ್ರವನ್ನು ಮಾಡುವದನ್ನೂ ಹೇಳುತ್ತವೆ. ಅಥರ್ವಣ ವೇದವು ಅಭಿಚಾರಿಕ ಕರ್ಮಗಳನ್ನೂ, ಅಯುರ್ವೇದ, ಧನುರ್ವೇದ ಮುಂತಾದ ವಿದ್ಯೆಗಳನ್ನೂ, ಅನೇಕ ಕಲೆ ಗಳನ್ನೂ ಇನ್ನೂ ಅನೇಕ ವಿಷಯಗಳನ್ನೂ ಹೇಳುತ್ತವೆ

ಪ್ರತಿಯೊಂದು ವೇದದಲ್ಲಿಯೂ ಸಂಹಿತೆ, ಬ್ರಾಹ್ಮಣ, ಆರಣ್ಯಕ ಎಂಬ ಮೂರು ಭಾಗಗಳಿವೆ ಇವುಗಳಲ್ಲಿ ಸಂಹಿತೆ ಎಂಬುದು ಯಜ್ಞದೇವತೆಗಳ ಸ್ತೋತ್ರರೂಪ ವಾದ ಮಂತ್ರಗಳನ್ನು ಹೇಳುತ್ತದೆ ಬ್ರಾಹ್ಮಣ ಎಂಬುದು ಈ ಮಂತ್ರಗಳ ವಿನಿಯೋಗ ಅಂದರೆ ಉಪಯೋಗವನ್ನು ಹೇಳುತ್ತದೆ ಆರಣ್ಯಕವು ಋಷಿಗಳು ನಿಯಮಪೂರ್ವಕ ಆರಣ್ಯದಲ್ಲಿ ರಹಸ್ಯವಾಗಿ ಕಲಿಯುತ್ತಿದ್ದ ವೇದದ ಭಾಗ ವನ್ನು ಹೇಳುತ್ತದೆ ವೇದಗಳ ಕೊನೆಯ ಭಾಗವಾದ ಉಪನಿಷತ್ತುಗಳಲ್ಲಿ ಕೆಲವು ಸಂಹಿತಾಭಾಗದಲ್ಲಿಯೂ, ಕೆಲವು ಬ್ರಾಹ್ಮಣಭಾಗದಲ್ಲಿಯೂ, ಕೆಲವು ಆರಣ್ಯಕ ಭಾಗದಲ್ಲಿಯೂ ಇರುತ್ತವೆ

ಋಗ್ವೇದವು ೨೧ ಶಾಖೆಗಳಾಗಿಯೂ, ಯಜುರ್ವೇದವು ೧೦೯ ಶಾಖೆಗಳಾಗಿಯೂ, ಸಾಮವೇದವು ೧೦೦೦ ಶಾಖೆಗಳಾಗಿಯೂ, ಅಥರ್ವಣವೇದವು ೫೦ ಶಾಖೆಗಳಾ ಗಿಯೂ ವಿಭಾಗಿಸಲ್ಪಟ್ಟಿರುವುದು ಪ್ರತಿಯೊಂದು ಶಾಖೆ ಯಲ್ಲಿಯೂ ಒಂದೊಂದು ಉಪನಿಷತ್ತು ಇರುತ್ತದೆ. ಆವುಗಳಲ್ಲಿ ಮುಖ್ಯವಾಗಿ ೧೦೮ ಉಪನಿಷತ್ತುಗಳು ಶ್ರೀಸ್ವವಾಗಿವೆ ಅವು ಯಾವುವೆಂದರೆ-(೧) ಮತೇಯ, ಕೌಷೀತಕೀ, ನಾದಬಿಂದು, ಆತ್ಮಪ್ರಬೋಧ, ನಿರ್ವಾಣ, ಮುದ್ಗಲ, ಅಕ್ಷಮಾಲಿಕಾ, ತ್ರಿಪುರಸಾರ, ಸೌಭಾಗ್ಯ, ಬಹ್ವೃಚಾ ಎಂದು ಋಗ್ವೇದದಲ್ಲಿ ೧೦ ಉಪನಿಷತ್ತು ಗಳು, (೨) ಅಕಾಮಾಸ್ಯ, ಬೃಹದಾರಣ್ಯ, ಜಾಬಾಲ, ಹಂಸ, ಪರಮಹಂಸ, ಸುಬಾಲ, ಮಂತ್ರಿಕ, ನಿರಾಲಂಬ, ತ್ರಿಶಿಖಿಬ್ರಾಹ್ಮಣ, ಮಂಡಲಬ್ರಾಹ್ಮಣ, ಅದ್ವಯತಾರಕ, ಪೈಂಗಲ, ಭಿಕ್ಷುಕ, ತುರೀಯಾತೀತ, ಅಧ್ಯಾತ್ಮ, ತಾರ ಸಾರ, ಯಾಜ್ಞವಲ್ಕ್ಯ, ಶಾಟ್ಯಾಯನೀಯ, ಮುಕ್ತಿಕ ಎಂದು ಶುಕ್ಲಯಜುರ್ವೇದದಲ್ಲಿ ೧೯ ಉಪನಿಷತ್ತುಗಳು, (೩) ತೈತ್ತಿರೀಯ, ಬ್ರಹ್ಮಕೈವಲ್ಯ, ಕೈಣಾಶ್ಯತರ್ಗರ್ಭ, ನಾರಾಯಣ, ಅಮೃತಬಿಂದು, ಅಮೃತನಾದ,

ಖಂಲಾಗ್ರಿರುದ್ರ, ಕ್ಷುರಿಕಾ, ಸರ್ವಸಾರ, ಶುಕರಹಸ್ಯ, ತೇಜೋಬಿಂದು, ಧ್ಯಾನಬಿಂದು, ಬ್ರಹ್ಮವಿದ್ಯಾ, ಯೋಗ ತತ್ತ್ವ, ದಕ್ಷಿಣಾಮೂರ್ತಿ, ಸ್ಕಂದ, ಶಾರೀರಕ, ಯೋಗ ಶಿಖಾ, ಏಕಾಕ್ಷರ, ಅಕ್ಷ, ಅವಧೂತ, ಕಠ, ರುದ್ರ ಹೃದಯ, ಯೋಗಕುಂಡಲಿನೀ, ಪಂಚಬ್ರಹ್ಮ, ಪ್ರಾಣಾಗ್ನಿ ಹೋತ್ರ, ವರಾಹ, ಕಲಿಸಂತರಣ, ಸರಸ್ವತೀರಹಸ್ಯ ಎಂದು ಕೃಷ್ಣಯಜುರ್ವೇದದಲ್ಲಿ ೩೨ ಉಪನಿಷತ್ತುಗಳು (೨) ಕೇನ, ಛಾಂದೋಗ್ಯ, ಆರುಣೇಕ, ಮೈತ್ರಾಯಣೀಯ, ಮೈತ್ರೇಯಿಯ, ವಜ್ರಸೂಚೀ, ಯೋಗಶೂಡಾಮಣಿ, ವಾಸುದೇವ, ಮಹಾ, ಸನ್ಯಾಸ, ಅವ್ಯಕ್ತ, ಕುಂಡಿಕಾ, ಸಾವಿತ್ರೀ, ರುದ್ರಾಕ್ಷಜಾಬಾಲ, ದರ್ಭ, ಜಾಬಾಲೀ ಎಂದು ಸಾಮವೇದದಲ್ಲಿ ೧೬ ಉಪನಿಷತ್ತುಗಳು, (೬) ಪ್ರಶ್ನ, ಮುಂಡಕ, ಮಾಂಡೂಕ್ಯ, ಅಥರ್ವಶಿರ, ಅಥರ್ವಶಿಖಾ, ಬೃಹಜ್ಜಾಬಾಲ, ನೃಸಿಂಹತಾಪಿನೀ, ನಾರದಪರಿವ್ರಾಜಕ, ಸೀತಾ, ಶರಭ, ಮಹಾನಾರಾಯಣ, ರಾಮರಹಸ್ಯ ರಾಮತಾಪಿನೀ, ಕೃಷ್ಣಾಲಿಪ್ಯ, ಪರಮಹಂಸಪರಿವ್ರಾಜಕ, ಅನ್ನಪೂರ್ಣಾ, ಸೂರ್ಯ, ಅಕ್ಷ, ಪಾಶುಪತ, ಪರಬ್ರಹ್ಮ, ತ್ರಿಪುರತಾಪಿನೀ, ದೇವೀ, ಭಾವನಾ, ಭಸ್ಮಜಾಬಾಲ ಗಣಪತಿ, ಮಹಾವಾಕ್ಯ, ಗೋಪಾಲತಾಪಿನೀ, ಕೃಷ್ಣ, ಯಾಜ್ಞವಲ್ಕ್ಯ, ದತ್ತಾತ್ರೇಯ, ಗರುಡ ಎಂದು ಅಥರ್ವಣ ವೇದದಲ್ಲಿ ೩೧ ಉಪನಿಷತ್ತುಗಳು ಇವುಗಳಲ್ಲಿ ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ಐತರೇಯ, ತೈತ್ತಿರೀಯ, ಬೃಹದಾರಣ್ಯ, ಛಾಂದೋಗ್ಯ ಎಂಬ ಹತ್ತು ಉಪನಿಷತ್ತುಗಳು ಪ್ರಧಾನವಾಗಿವೆ

ವರ್ತಮಾನಸಂಗ್ರಹ

ಕಾತೀವಿಶ್ವವಿದ್ಯಾನಿಲಯದಲ್ಲಿ ಅಮೆರಿಕಾ ರಾಯಭಾರಿ ಹೇಳಿಕೆ

ಇಂಡಿಯಾ ಮತ್ತು ಅಮೆರಿಕಗಳ ಬಾಂಧವ್ಯವು ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆಯಬೇಕು ಎಂದು ಬುಧವಾರದಲ್ಲಿ ಅಮೆರಿಕದ ರಾಯಭಾರಿಯಾಗಿರುವ ಮಿಃ ಲಾಯ್ ಹೆಂಡರ್‌ಸನ್‌ರವರು ಕಾಶೀ ಹಿಂದೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರನ್ನುದ್ದೇಶಿಸಿ ಭಾಷಣ ಮಾಡುತ್ತ ತಿಳಿಸಿದರು ಅಮೆರಿಕ ಮತ್ತು ಇಂಡಿಯಾಗಳಿಗೆ ಮೈತ್ರಿಯು ವೃದ್ಧಿಯಾಗಲು ಈ ಎರಡು ರಾಷ್ಟ್ರಗಳ ವಿಶ್ವವಿದ್ಯಾನಿಲಯಗಳು ಮಹತ್ತರವಾಗಿ ಶ್ರಮಿಸಬೇಕಾಗಿದೆ ಎಂದು ಅವರು ತಿಳಿಸಿದರು

ಪೆನ್ನಾರ್ ಕುಮುದ್ವತಿ ನದಿಗಳ ನೀರಾವರಿಯೋಜನೆ

ಮದ್ರಾಸು ಮತ್ತು ಮೈಸೂರು ಸರ್ಕಾರಗಳಿಗೆ ಇತ್ತೀಚೆಗೆ ಆಗಿರುವ ಒಪ್ಪಂದದ ಪ್ರಕಾರವಾಗಿ ಈ ವರ್ಷ ಪೆನ್ನಾರ್ ಕುಮುದ್ವತಿ ನೀರಾವರಿ ಯೋಜನೆಯನ್ನು ಮದ್ರಾಸ್ ಸರ್ಕಾರದವರು ಆರಂಭಿಸಲಿದ್ದಾರೆ. ಈ ಯೋಜನೆಗೆ ೧೯ ಲಕ್ಷ ರೂ. ಗಳನ್ನು ಮದ್ರಾಸ್ ಸರ್ಕಾರವು ಮಂಜೂರು ಮಾಡಿದೆ

ಈ ಯೋಜನೆಯ ಪ್ರಕಾರ ಪೆನ್ನಾರ್ ಮತ್ತು ಕುಮುದ್ವತಿ ನದಿಗಳ ಸಂಗಮ ಸ್ಥಳದಲ್ಲಿ ಅಣೆಕಟ್ಟೆಯನ್ನು ನಿರ್ಮಾಣಮಾಡಲಾಗುವುದು. ಈ ಯೋಜನೆಯ ಫಲವಾಗಿ ಸುಮಾರು ೩೦೦ ಎಕರೆಗಳಷ್ಟು ಜಮೀನು ಸಾಗುವಳಿಗೆ ಬರಲಿದೆ

ನೀಗ್ರೋ ದರೋಡೆ ಖೋರನಿಗೆ ಮರಣ ಶಿಕ್ಷೆ!

ಮೋಟಾರ್ ಡ್ರೈವರ್ ಮತ್ತು ಅವನ ಸ್ನೇಹಿತ ನೊಬ್ಬನ್ನು ಗುಂಡಿನಿಂದ ಹೊಡೆದು ಕೊಂದ ಆಪಾದನೆಯ ಮೇಲೆ ವಿಲಿಯಂ ವಿಲ್ಸ್ ಎಂಬ ಅಮೆರಿಕದ ನೀಗ್ರೋ ಒಬ್ಬನಿಗೆ ಕಲಕತ್ತಾ ಅಲಿಪುರದ ಸೆಷನ್ಸ್ ಜಡ್ಜಾದ ಶ್ರೀಯುತ ಎ. ಕೆ. ಘೋಷ್‌ರವರು ಈ ತಿಂಗಳು ೧೧ ನೆಯ ತಾ|| ದಿನದ ಮರಣದಂಡನೆ ವಿಧಿಸಿದರು. ಅಪರಾಧಿಯು ಜೊತೆಯಲ್ಲಿ ದರೋಡೆ ಮಾಡಲು ಹೋಗಿದ್ದ ನಾಲ್ಕು ಮಂದಿ ಆಪಾದಿತರಿಗೆ ೧೦ ವರ್ಷಗಳ ಕಠಣ ಶಿಕ್ಷೆ ವಿಧಿಸಿದರು.

೧೯೪೬ ನೆಯ ಸೆಪ್ಟೆಂಬರ್ ೧೨ ನೆಯ ತಾ|| ರಾತ್ರಿ ಕಲ್ಕತ್ತಾ ನಗರಕ್ಕೆ ಇಪ್ಪತ್ತೈದು ಮೈಲಿ ದೂರವಿರುವ ಒಂದು ಹಳ್ಳಿಯಲ್ಲಿ ಳಳ್ಳಿತನ ಮಾಡಲು ವಿಲಿಯಂ ವಿಲ್ಸ್ ಮತ್ತು ಅವನ ಏಡು ಮಂದಿ ಹಿಂಬಾಲಕರು ಬಾಡಿಗೆ ಮೋಟಾರಿನಲ್ಲಿ ಹೋದರು ತನ್ನ ಜೊತೆಯಲ್ಲಿ ಬಂದಿದ್ದವರಲ್ಲಿ ಮೂವರನ್ನು ಮೋಟಾರಿನಲ್ಲೇ ಬಿಟ್ಟು ವಿಲ್ಸನ್ ಎಂಬಾತನು ಉಳಿದ ಇಬ್ಬರನ್ನು ಜೊತೆಯಲ್ಲೇ ಕರೆದುಕೊಂಡು ಮನೆಯೊಂದರ ಒಳಗೆ ದರೋಡೆ ಮಾಡಲು ಹೋದನು ಆದರೆ ಅವನ ಪ್ರಯತ್ನವು ಫಲಿಸಲಿಲ್ಲ ಈ ನೊವನೂ ಹಿಂತಿರುಗುತ್ತಿದ್ದಾಗ ಗ್ರಾಮದ ಜೌಕಿದಾರನು ಅವರನ್ನು ಹಿಡಿಯಲು ಪ್ರಯತ್ನಿಸಿದನು ಕಳ್ಳರು ಅವನನ್ನು ಗುಂಡಿನಿಂದ ಹೊಡೆದು ಕೊಂದು ತತ್‌ಕ್ಷಣ ಮೋಟಾರಿಗೆ ಹಿಂತಿರುಗಿದರು ಮೋಟಾರ್ ಡ್ರೈವರನಿಗೆ ೧೦೦ ರೂ ಬಾಡಿಗೆ ಕೊಡುವುದು ಬೇಗೆ ಎಂಬ ಆಲೋಚನೆ ವಿಲ್ಸನಿಗಿತ್ತು ಮೆಹರ್ ಘಾಟಿನಲ್ಲಿ ರೇರ್ಷ ಅಂಗಡಿಯೊಂದನ್ನು ಲೂಟಿ ಮಾಡಿ ಸಿಕ್ಕ ಹಣದಲ್ಲಿ ಬಾಡಿಗೆ ಕೊಡಬಹುದೆಂದು ಆ ಅಕ್ಕರ ಗುಂಪಿನಲ್ಲಿ ಒಬ್ಬನು ಸಲಹೆ ಮಾಡಿದನು ಆದರೆ ಮೆಹರ್ ಘಾಟಿಗೆ ಹೋಗಲು ಡ್ರೈವರು ಒಪ್ಪಲಿಲ್ಲ ಕೇರವಾಗಿ ಕಲ್ಕತ್ತಕ್ಕೆ ಹೋಗಬೇಕೆಂದು ಅವನು ಹಟ ಹಿಡಿದನು ವಿಲ್ಸನು ತತ್‌ಕ್ಷಣ ಡ್ರೈವರನನ್ನು ರಿವಾಲ್ವರಿನಿಂದ ಹೊಡೆದು ಕೊಂದುನಾಕಿದನು ಡ್ರೈವರನ ಜೊತೆಯಲ್ಲಿ ಒಂದಿದ್ದ ಅವನ ಸ್ನೇಹಿತನು ಸಲಾಯನ ಮಾಡಲು ಯತ್ನಿಸಲು ವಿಲ್ಸನು ಅವನನ್ನೂ ಒಟ್ಟಸಿದಿಂದು ಹೋಗಿ ಕೊಂದುಹಾಕಿದನು ಈ ದರೋಡೆಮೋರರೆಲ್ಲರೂ ಅನಂತರ ಅಲಿಪುರಕ್ಕೆ ಬಂದರು

ವಿಲ್ಸನು ಕೆಲಕಾಲ ತಲೆ ಮರೆಸಿಕೊಂಡು ಓಡಿ ಹೋಗಿದ್ದನು ಅವನು ಬೊಂಬಾಯಿ ಕಲ್ಯಾಣದಲ್ಲಿ ಪೋಲೀಸರ ಕೈಗೆ ಕೊನೆಗೆ ಸಿಕ್ಕಿಬಿದ್ದನು

ಪೋಲೀಸರಿಗೂ ಸಿಪಾಯಿಗಳಿಗೂ ಘರ್ಷಣೆ

ದಿಲ್ಲಿಯ ಟ್ರಾಮ್ಸ್ ರಸ್ತೆಯಲ್ಲಿ ಪೋಲೀಸಿನವರಿಗೂ ಮತ್ತು ಕೆಲವು ಸಿಪಾಯಿಗಳಿಗೂ ೧೧ ನೇ ತಾ|| ರಾತ್ರಿ ಘರ್ಷಣೆಯುಂಟಾಗಿ ಪರಸ್ಪರ ಗುಂಡುಹಾರಿಸಿದರು ಇದರ ಪರಿಣಾಮವಾಗಿ ಒಬ್ಬನು ಮೃತನಾದನು ಒಬ್ಬ ಪೋಲೀಸಿನವನ ಸ್ಥಿತಿಯು ಕಳವಳವನ್ನುಟುಮಾಡುವಂತಿದೆ ಮತ್ತು ನಾಲ್ಕು ಮಂದಿಗೆ ತೀವ್ರಗಾಯಗಳಾಗಿವೆ

"ಬ್ಲೋ ಆಫ್ ಬೌಂಡ್ಸ್" ಪ್ರದೇಶಕ್ಕೆ ಬಂದ ಒಬ್ಬ ಸಿಪಾಯಿಯನ್ನು ಪೋಲೀಸಿನವರು ಪೋಲೀಸ್‌ಸ್ಟೇಷನ್ನಿಗೆ ಕರೆದುಕೊಂಡು ಹೋದರು ಸ್ವಲ್ಪಕಾಲವಾದ ಮೇಲೆ ಅದೇ ಸ್ಥಳಕ್ಕೆ ಶಸ್ತ್ರಧಾರಿಗಳಾದ ಕೆಲವು ಸಿಪಾಯಿಗಳು ಬಂದರು ಇದನ್ನು ತಿಳಿದ ಪೋಲೀಸಿನವರು ಅಲ್ಲಿಗೆ ಬಂದೊಡನೆಯೇ ಸಿಪಾಯಿಗಳು ಅವರ ಮೇಲೆ ಅಕಾರಣವಾಗಿ ಗುಂಡುಹಾರಿಸಲು ಪ್ರಾರಂಭ ಮಾಡಿಲು ಪೋಲೀಸೂ ಸಹ ಗುಂಡುಹಾರಿಸಿದರು ಪೋಲೀಸಿನವರ ತನುಗಿಂತ ಜಾಸ್ತಿಯಾಗಿದ್ದುದರಿಂದ ಸಿಪಾಯಿಗಳು ಪಲಾಯನ ಮಾಡಿದರು

ಮಿಲಿಟರಿ ಅಧಿಕಾರಿಗಳ ಸಹಾಯ ಪಡೆದು ಪೋಲೀಸರು ದೆಹಲಿ ಜಂಕ್ಷನ್ ಸ್ಟೇಷನ್ನಿನ ಬಳಿ ಇರುವ ಮಿಲಿಟರಿ ವಿಶ್ರಾಂತಿ ನಿಲಯದಲ್ಲಿ ೪೫ ಜನ ಸಿಪಾಯಿಗಳನ್ನು ಗಸ್ತುಗಿರಿ ನಡಾಡಿಸುವರು

ರಾಷ್ಟ್ರಧ್ವಜ ಪ್ರದರ್ಶನದ ಬಗ್ಗೆ ಭಾರತಸರ್ಕಾರದ ಪ್ರಕಟಣೆ

ರಾಷ್ಟ್ರಧ್ವಜವನ್ನು ಯಾವ ಯಾವ ಸಂದರ್ಭಗಳಲ್ಲಿ ಎಲ್ಲೆಲ್ಲಿ ಪ್ರದರ್ಶಿಸಬೇಕು ಎಂಬ ವಿಷಯದಲ್ಲಿ ಭಾರತ ಸರ್ಕಾರದಿಂದ ಮೈಸೂರು ಸರ್ಕಾರಕ್ಕೆ ಬಂದಿದಿರುವ ಸೂಚನೆಯನ್ನು ಈಗ ಪ್ರಕಟಿಸಲಾಗಿದೆ. ಭಾರತ ಸರ್ಕಾರದವರು ವಿಧಿಸಿರುವ ನಿಯಮಗಳು ಈರೀತಿ ಇವೆ—

ಕಟ್ಟಡಗಳ ಮೇಲೆ

ಸಾಮಾನ್ಯವಾಗಿ ಜೈಕೋರ್ಟು ಸೆಕ್ರೆಟೇರಿಯೆಟ್, ಕಮೀಷನರ ಕಚೇರಿ, ಆರೆಕ್ಕೋರೇಟ್, ಬಂದೀಖಾನೆಗಳು, ಜಿಲ್ಲಾ ಮೋರ್ಟುಗಳು ಮತ್ತು ಮುನಿಸಿಪಾಲಿಟಿಗಳು ಮೊದಲಾದ ಮುಖ್ಯ ಕಟ್ಟಡಗಳ ಮೇಲೆ ಮಾತ್ರ ರಾಷ್ಟ್ರ ಧ್ವಜವನ್ನು ಪ್ರದರ್ಶಿಸಬೇಕು ಮಂತ್ರಿಗಳ ಬಂಗಲೆಗಳ ಮೇಲೂ ಹಾರಿಸಕಕ್ಕದ್ದು. ಗವರ್ನರ್-ಜನರಲ್ ಮತ್ತು ಗವರ್ನರುಗಳಿಗೆ ಅವರಿಗೇ ಸಂಬಂಧಪಟ್ಟಂತೆ ವಿಶೇಷ ವಾದ ಧ್ವಜಗಳಿರುವುವು.

ಹೊರದೇಶಗಳಲ್ಲಿ ಮತ್ತು ಸಂಸ್ಥಾನಗಳಲ್ಲಿರುವ ಭಾರತದ ಪ್ರತಿನಿಧಿಗಳ ಬಂಗಲೆಗಳ ಮೇಲೆ ಧ್ವಜಹಾರಿಸೆ ಬೇಕು

ರಾಷ್ಟ್ರಧ್ವಜ ಗಡಿಗಳಲ್ಲಿ, ಧ್ವಜವನ್ನು ವಿಶೇಷ ಸ್ಥಾನ ಗಳಲ್ಲಿ ಹಾರಿಸಬಹುದು ರಾಜರುಗಳು ಮತ್ತು ರಾಜ ಪ್ರಮುಖರುಗಳ ಅವರ ಅರಮನೆಗಳ ಮೇಲೆ, ರಾಷ್ಟ್ರ ಧ್ವಜವನ್ನು ಅವರವರ ಸಂಸ್ಥಾನದ ಧ್ವಜಪೂಡಣಿ (ಅವರಿಗಿಷ್ಟ ಬಂದರೆ) ಹಾರಿಸಬಹುದು

ಸೈನ್ಯ, ನೌಕೆ, ಮತ್ತು ವೈಮಾನಿಕ ದಳಗಳು ರಾಷ್ಟ್ರ ಧ್ವಜವನ್ನು ಉಪಯೋಗಿಸುವ ವಿಚಾರದಲ್ಲಿ ವಿಶೇಷ ನಿಯಮಗಳನ್ನು ರಚಿಸಲಾಗಿದೆ

ಸ್ವಾತಂತ್ರ್ಯ ದಿನ, ರಾಷ್ಟ್ರೀಯ ಮಾರ, ಜನವರಿ ೨೬ ಮಹಾತ್ಮ ಗಾಂಧಿ ಜಯಂತಿ ಮೊದಲಾದ ವಿಶೇಷ ಸಮಾರಂಭಗಳಲ್ಲಿ, ರಾಷ್ಟ್ರಧ್ವಜವನ್ನು ಹಾರಿಸುವಿದರ ಬಗ್ಗೆ, ಎಲ್ಲೂ ಯಾವ ಕಟ್ಟು ನಿರುವುದಿಲ್ಲ

ಮೋಟಾರುಗಳ ಮೇಲೆ

ಮಂತ್ರಿಗಳು, ಸ್ಪೀಕರ್, ಚೀಫ್ ಕಮಿಷನರುಗಳು ಮತ್ತು ಹೊರದೇಶಗಳಲ್ಲೂ ಸಂಸ್ಥಾನಗಳಲ್ಲೂ ಇರುವ ಭಾರತದ ಪ್ರತಿನಿಧಿಗಳು ಅವರವರ ಮೋಟಾರು ಗಳ ಮೇಲೆ ಧ್ವಜವನ್ನು ಹಾಕಬಹುದು

ರಾಜರುಗಳು ಮತ್ತು ರಾಜಪ್ರಮುಖರುಗಳು ತಮ್ಮ ಮೋಟಾರುಗಳ ಮೇಲೆ ತಮ್ಮ ಸಂಸ್ಥಾನದ ಧ್ವಜಗಳ ಸಮೇತ (ಅವರಿಗೆ ಇಷ್ಟವಾದರೆ) ರಾಷ್ಟ್ರಧ್ವಜವನ್ನು ಉಪಯೋಗಿಸಬಹುದು

ಗವರ್ನರ್—ಜನರಲ್ ಮತ್ತು ಗವರ್ನರುಗಳು ತಮ್ಮ ತಮ್ಮ ಸ್ವಂತ ವಿಶೇಷ ಧ್ವಜಗಳನ್ನು ಉಪಯೋಗಿಸಬಹುದು.

ನೇರವಾಗಿ ಮಂತ್ರಿಗಳಿಗೆ ಅರ್ಜಿ ಕಳಿಸಬಾರದು

ಸಾರ್ವಜನಿಕರಿಗೆ ಸೂಚನೆ

ಅರ್ಜಿಗಳನ್ನು ನೇರವಾಗಿ ಸಚಿವರುಗಳಿಗೆ ಹಾಕಿ ಕೂಡದೆಂದೂ ಅನೇಕಸಾರೆ ಅರ್ಜಿಗಳನ್ನು ಹಾಕಿ ಆ ಪ್ರಯತ್ನದಿಂದ ನೀರೀಕ್ಷಿಸಿದ ಫಲವು ದೊರೆಯದೇ ಇದ್ದ ಸಂದರ್ಭಗಳಲ್ಲಿ ಮಾತ್ರ ಹಾಗೆ ಮಾಡಬಹುದೆಂದೂ ಸರ್ಕಾರದವರು ಸಾರ್ವಜನಿಕರನ್ನು ಪ್ರಕಟನೆಯೊಂದರ ಮೂಲಕ ಪ್ರಾರ್ಥಿಸಿದ್ದಾರೆ ಆದರಲ್ಲಿ ಕಳೆದ ಆಗಸ್ಟ್ ತಿಂಗಳಲ್ಲಿ ಇದೇ ಸಂಬಂಧದಲ್ಲಿ ಕೊಟ್ಟ ಸೂಚನೆಯನ್ನು ಸಾರ್ವಜನಿಕರ ಗಮನಕ್ಕೆ ಪುನಃ ತರಲಾಗಿದೆ ಹಾಗೆ ಸೂಚನೆ ಕೊಟ್ಟನ್ನರೂ ಸಹ ನೇರವಾಗಿ ಮಂತ್ರಿಗಳಿಗೇ ಅನೇಕ ಅರ್ಜಿಗಳು ಬರುತ್ತಿರೆಯೆಂದೂ, ಹೀಗೆ ಮಾಡು ವುದರಿಂದ ಉದ್ದೇಶ ಫಲವಾಗುವುದಕ್ಕೆ ತಡವಾಗುವು ದಲ್ಲದೆ, ಅರ್ಜಿದಾರರು ಏನನ್ನು ಬಯಸುವರೋ ಅದಕ್ಕೆ ವ್ಯತಿರಿಕ್ತವಾಗಿ ಫಲವು ದೊರೆಯುವ ಸಂಭವ ವಿದೆಯೆಂದೂ, ಏತಕ್ಕೆಂದರೆ, ಬಂದ ಅರ್ಜಿಗಳನ್ನು ಸಂಬಂಧಪಟ್ಟ ಸರ್ಕಾರದ ಕಾರ್ಯದರ್ಶಿಗಳಿಗೆ ಳಕುಬಿಸಿ ಅವರು ಅವಶ್ಯಕತೆಗನ್ನು ಇಲಾಖಾ ಮುಖ್ಯಾಧಿಕಾರಿಗಳಿಗೆ ತಿಳುಸಿ, ಇಲಾಖಾ ಮುಖ್ಯಾಧಿಕಾರಿಗಳು ಅವರ ಕೈಕೆಳಗಿರುವ ನೌಕರರ ಸಲಹೆಗಳನ್ನು ಪಡೆಯುವ ಪ್ರಮೇಯ ಬಂದು, ಅನಾದ ಮೇಲೆ ಅರ್ಜಿಗಳು ಕೈಯ ಕಾರ್ಯದರ್ಶಿಗಳಿಗೆ ಬಾರಿಸು ತಿಲು, ಸರ್ಕಾರವು ಅಳ್ಳಿಸ ಮಾಡುವ ಹೊತ್ತಿಗೆ ವಿಶೇಷ ಕಾಲ ಹಿಡಿಯುವುದೆಂದೂ ತಿಳಿಸಲಾಗಿದೆ.

ರಷ್ಯನರ ದುರ್ವರ್ತನೆ
ಚಿಂಗೇಸ್‌ಖಾನನನ್ನು ನೆನಪಿಸಿದೆ

"ಸಮಗ್ರ ಜಗತ್ತಿನ ಮೇಲೆ ಪ್ರಭುತ್ವ ನಡೆಸಲು ಹೊರಟಿರುವ ರಷ್ಯಾದ ಮುಂದೆ ಹಿಟ್ಲರನು ಹಸುಗೂಸೇ ಸರಿ! ಲಂಡನ್ನಿನ ಮೇಲೆ ಹಿಟ್ಲರನು ಬಾಂಬುಗಳ ಮಳೆಗೆರೆಯುತ್ತಿದ್ದಾಗ ಲಂಡನ್ ನಾಗರಿಕರಿಗೆ ಆದಷ್ಟು ನಿಜವಾಗಿದ್ದಿತೋ, ನಾನು ಪ್ರವಾಸಮಾಡಿ ಬಂದಿರುವ ರಾಷ್ಟ್ರಗಳಲ್ಲಿ ರಷ್ಯನ್ ರಾವಳಿಯು ಆಪ್ಪೇ ನಿಜವಾಗಿದೆ ಎಂದು ಅಮೆರಿಕವ ಆರ್ಥಿಕ ಆಡಳಿತಗಾರರಾದ ಮಿ॥ ಪಾಲ್ ಹಾಫ್‌ಮನ್‌ರವರು ಡಿಟ್ರಾಯಿಟ್ ನಗರದಲ್ಲಿ ಸೇರಿದ್ದ ಒಂದು ಸಭೆಯಲ್ಲಿ ಹೇಳಿದರು

ರಷ್ಯನ್ನರ ದುರ್ವರ್ತನೆ ಚಿಂಗೇಸ್‌ಖಾನನನ್ನು ನೀರೀಸಿರ ಸ್ಥಾಲಿನ್ ಮತ್ತು ಅವರ ಅನುಯಾಯಿಗಳು ತಾವು ಸಾಧಿಸಿರ ವ ಬಗ್ಗೆ ತಾವೇ ತೃಪ್ತಿಪಟ್ಟು ಕೊಳ್ಳಬಹುದು ರಷ್ಯನ್ ಕರಡಿಯು ಜಗತ್ತಿನ ಬಹು ಭಾಗದಲ್ಲಿ ಈಗಲೇ ತಳ ಊರಿದೆ ಎಂದು ಮಿ॥ ಪಾಲ್ ಹಾಫ್‌ಮನ್ನರು ಹೇಳಿದರು

ಚೀನಾದಲ್ಲಿ ಬರೀ ಮುದ್ದು ಗುಂಡುಗಳಿಂದ ಕಮ್ಯೂನಿಸ್ಟರನ್ನು ಗೆಲ್ಲಬಹುದೆಂಬು ಅನೇಕರು ಭಾವಿಸಿರುತಿದೆ ರಷ್ಯಾ ಚೀನಾದೇಶವನ್ನು ಕಬಳಿಸಲು ಮಾಡಿರುವ ಹಂಚಿಕೆಯನ್ನು ನೂರುಮಿದ ಕಾರ್ಯಾಚರಣೆಯಿಂದ ಪಡೆಗಟ್ಟಿ ಬಹುದು ಆರ್ಥಿಕ, ರಾಜಕೀಯ ಮತ್ತು ಸೈನಿಕ ಇವೇ ಆ ಪ ಯೂರು ಕಾರ್ಯಗಳು ಎಂದು ಮಿ॥ ಹಾಫ್‌ಮನ್ನರು ತಿಳಿಸಿದರು

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಬಂಗಾರ್ತು ಅಷ್ಟೈಶ್ವರ್ಯಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕ ಜ್ಯೋ ರ್ಲಿಂಗಾಕಾರದ ಫೋಟೋ (ನಾನಾವಿಧವಣ್ಣಗಳಿಂದ ಮ ಕ್ರಿತವಾದುದು) ೧ಕ್ಕೆ ೧೪ × ೧೦ ಬೆಲೆ	೦—೬—೦
ಶ್ರೀಜಗದ್ಗುರು ರಂಭಾ ಚಾರ್ಯರು ಪಂಚಮಪೀಠಾಚಾರ್ಯರಿಗೆ ಶಿವಪಟ್ಟಾಧಿಕಾರವನ್ನು ಅಪ್ಪಣೆಕೊಡುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾಕಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೩—೦
" " ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ಪಟ್ಟಮಹೇಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೬
ಶ್ರೀ ರಂಭಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಧಿಕಾರವ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೪ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾ ಸ್ವಾಮಿಗಳವ ಫೋಟೋ (ನಾನಾವಿಧವಣ್ಣದ್ದು)	೦—೪—೦
ಶ್ರೀಶಂಕರಾಚಾರ್ಯರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮಾಮುಷ್ಯಣ ೧೯ ಸಿಂಹಾಸನಾರೂಢೇಶ್ವರ ಶ್ರೀ ಜಗದ್ಗುರು ಸಿದ್ದಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀ ಸಿಂಹಪ್ರಭೃ ಪೀಠಾಧೀಶ್ವರ ಜಗದ್ಗುರು ಶಿವಾನಂದೆವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀ ಷಡಕ್ಷರಯ್ಯನವರ ಹಿಗ್ಗುಲಿಗಳವರ ಸನ್ನಿಧಿಯಲ್ಲಿ ಶ್ರೀ ಶಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ರಂಭಾಪುರಿ ಶ್ರೀಚೆನ್ನವೀರಾಗಮಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೧ಕ್ಕೆ	೦—೨—೦
ಗಂಡಸಿ ಶ್ರೀಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾಪ್ರಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಳ್ಳಿಪದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯ ಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಹೊಂಗಳೂರು ಕಂಟಿನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಷ್ಟ ಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರುರಂಭಾಪುರೀ ವೀರರಲ್ಲಿ ಸ್ಥಾಪಿಸಲ್ಪಟ್ಟಿರುವ ಶಿವಾಶಾಸನಗಳು	೦—೫—೦

ಸಚ್ಚೈತ್ರಮುದ್ರಿತವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ	ಶಿವಾದ್ವೈತಕರಭಾಷಾ (ಸಂಸ್ಕೃತ) ...	೮ ಆಣೆ
ಸಚ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ	ವೀರಶೈವಮಹಾತ್ಮರು ...	೮ ಆಣೆ
ಪಂಚವಿಂಶತಿ ಪ್ರಶ್ನ ಪ್ರಕಾಶ (೫ನೆಯ ಆವೃತ್ತಿ)	೧ ಆಣೆ	ಬಸವಧ್ಯಾಂತದಿವಾಕರ (೩ನೆಯ ಆವೃತ್ತಿ) ...	೮ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ	ಆಗಮಪರಿಜ್ಞಾನ	೮ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ	ಪಂಡಿತ ಶ್ರೀಕಾಶೀನಾಥಶಾಸ್ತ್ರುಲವರಿ ಭಾಷಣಮು (ತೆಲುಗು)	೮ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ	ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) ...	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೨ ಆಣೆ	ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಬಸವಾದಿಶಿವಶತಪ್ರದರ್ಪಣ (೪ನೆಯ ಆವೃತ್ತಿ)	೨ ಆಣೆ	ಶಿವಾಗಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ	ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ ...	೧ ರೂ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ	ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) ...	೧ ರೂ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ	ವೈದಿಕಶಿವಪೂಜಾವಿಧಿ (ವೈದಿಸ್ತ್ರೀಯರುಚ್ಚರಿಸುವುದು. ೨ನೆಯ ಆವೃತ್ತಿ)	೧। ರೂ
ಶಿವಶಕ್ತಿವಿಲಾಸ	೨ ಆಣೆ	ಶ್ರೀಕರಧಾಮ್ಯಂ (ಶಂಖಸ್ತ್ರೋತ್ರ)	೨ ರೂ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ	ವೀರಶೈವರತ್ನ (೩ನೆಯ ಆವೃತ್ತಿ, ೪೦ ಮಹತ್ವದ ಫೋಟೋಗಳಿರುವುದು)	೨ ರೂ.
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	೨ ಆಣೆ	ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೩ ರೂ
ಪಂಚಾಚಾರ್ಯಪ್ರಕಾಶ	೩ ಆಣೆ	ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ...	೩ ರೂ
ಪಂಚಾಚಾರ ಪ್ರಕಾಶಿಕಾ ...	೩ ಆಣೆ	ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ	ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
ಲಿಂಗಧಾರಣವಿಧಿ	೪ ಆಣೆ	A brief life-sketch of Pandit Sri Kashinatha Shastriji (*English*)	4 As
ವಿವಾಹವಿಧಿ (೪ನೆಯ ಆವೃತ್ತಿ) ..	೪ ಆಣೆ	The Philosophical Aspect of Viraasaivism (*English*)	8 As
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ	Speeches by Pandit Shri Kashinatha Shastriji (*English*)	12 As
ಶೈವೋಪನಿಷತ್ಸಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ)	೬ ಆಣೆ	ಶಿವಾಚಾರಣಚಂದ್ರಿಕಾ (ಸಂಸ್ಕೃತ)	೩ ಆ
ವೀರಶೈವ ಸ್ಯಾಯತ್ರಿತ್ವವಿಧಿ	೪ ಆಣೆ	ವೀರಶೈವರತ್ನ (ಮರಾಠಿ)	೧ ರೂ
ವೈದಿಕವಾಙ್ಮಯರಹಸ್ಯ	೪ ಆಣೆ	ಮಹಾಲಕ್ಷ್ಮಿನಾರಾಯಣೋಪನಿಷತ್ (ವೀರಶೈವಾಚಾರ-ಸಂಸ್ಕೃತ)	೧ ರೂ.
ಸನ್ಯಾಸಾಶ್ರಮವಿಮರ್ಶಶತ್ಪ್ರತ್ಯಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ	ಶಿವಾಗಮಚಂದ್ರಿಕಾ (ಸಂಸ್ಕೃತ)	೨ ಆಣೆ
ವೀರಶೈವಾಂಹ್ನಿಕ-ಪ್ರಾದ್ಧವಿಧಿ	೬ ಆಣೆ	ಸಿದ್ಧಾಂತ ಶಿಖಾಮಣಿ (ಸುಲಭಪಾಠ ಚಿಕ್ಕಸೈಜು)	೮ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದತಂ ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಚಜಾತಜಪರ್ ಪಂಚಾಸ್ಯಪೀಠಾಧಿಪರ್ । ಪಂಚಶ್ಲೋಪಂಚಕರ್ ಪರಶರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಪಿಯಾಮಕರ್ ಪರಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪಿರೀರೇಳಮಂ ॥

ಸ್ವಗ್ರಹಪರಿಗೆ ೨ ರೂ. ೪ ಆಣೆ. ಪರಗ್ರಹಪರಿಗೆ ೩ ರೂ ವಿ. ಪಿ ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೪ ನೇ ಜನವರಿ ೧೯೪೪ [ಸಂಚಿಕೆ ೩೭

ಶ್ರೀಜಗದ್ಗುರು ಶಿವಾನಂದವಿಜಯ

ಶ್ರೀಮದ್ರಂಭಾಪುರೀಪ್ರ ವೀರಸಿಂಹಾಸನಾಧಿಪತಿಗಳಾಗಿ, ರಾಜಾಧಿರಾಜಪೂಜಿತರಾಗಿ, ವೀರಪೀಠದ ವಿಜಯಧ್ವಜವನ್ನು ಸರ್ವತ್ರ ಮೆರೆಯಿಸಿ, ಸಕಲ ಮತೀಯರಿಂದ ಸೇವೆಗೊಂಡು, ದಿಗಂತವಿಶ್ರಾಂತಕೀರ್ತಿಶಾಲಿಗಳಾಗಿ ಹೋಗಿರುವ **ಶ್ರೀಜಗದ್ಗುರುತಿಪಾತಾನಂದರಾಜೇಂದ್ರ** ನಿಷಾಚಾರ್ಯ ಮಹಾಸ್ವಾಮಿಗಳವರ ಪವಿತ್ರ ಜೀವನಚರಿತ್ರವು ಈಗ ಮುದ್ರಿತವಾಗಿದೆ ಇದನ್ನು ಹೊರಬರುವ ಜಡಿಯಮಠದ ಶ್ರೀಗುರಾಧಭರಿವಾಚಾರ್ಯ ಸ್ವಾಮಿಗಳವರು ಬರೆದಿದ್ದಾರೆ ಇದರಲ್ಲಿ ಶ್ರೀಜಗದ್ಗುರುಗಳವರೆ ಸಮಸ್ತಚರಿತ್ರವು ಬಹು ಪ್ರಮೆಯಂಗಮವಾಗಿ ವರ್ಣಿಸಲ್ಪಟ್ಟಿದೆ ಲೇಖಪದ್ಧತಿಯು ಚಿತ್ತಾಕರ್ಷಕವಾಗಿರುವದು ಅನೇಕ ಅಮೂಲ್ಯ ವಿಷಯಗಳು ಸಂಗ್ರಹಿಸಲ್ಪಟ್ಟಿವೆ ಆಯಾ ಸಂದರ್ಭಕ್ಕನುಸಾರವಾಗಿ ಅಕ್ಕಂತಮಹತ್ವದ ೧೨ ಸ್ತೋತ್ರಗಳನ್ನು ಹಾಕಿರುವುದರಿಂದ ಸುವರ್ಣಕ್ಕೆ ರತ್ನ ವೆನ್ನಿ ಕೆತ್ತಿದಂತಾಗಿರುವುದು ಅನೇಕಾನೇಕ ಮಹತ್ವವಿಷಯಗಳಿಂದ ಕೂಡಿ ಅತ್ಯಂತ ಸುಂದರವಾಗಿ ಮುದ್ರಿತವಾಗಿರುವ ಮೇಲ್ಕಂಡ ಗ್ರಂಥವನ್ನು ಸರ್ವರೂ ತರಿಸಿಕೊಂಡು ಆ ಮಹಾತ್ಮರ ದಿವ್ಯಚರಿತ್ರವನ್ನು ತಿಳಿದು ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೮ ಆಣೆ.** ಒಂದು ಪುಸ್ತಕವನ್ನು ವಿ ಪಿ ಮೂಲಕ ಕಳುಹಿಸಲಿಕ್ಕಾಗುವದಿಲ್ಲ ಎರಡು ಅಥವಾ ಅದಕ್ಕೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳ ಬೇಕು

ಮ್ಯಾನೇಜರ್,
ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಪಂಚ ಅಮರನಾಥಶಾಸ್ತ್ರಿಗಳವರಿಗೆ ಕವಿಭೂಷಣ ಪದವೀಪ್ರಾಪ್ತಿ

ನಿಜಾಂ ಇಲಾಖಾ ಬಸ್ತೀಕೊಪ್ಪ (ಕಮಾಪುರ) ಹಿ ಂ ಯ ಮ ಕ ವೇ॥ ಅಮರನಾಥಶಾಸ್ತ್ರಿಗಳವರಿಗೆ ಇತ್ತೀಚಿಗೆ ಪಟ್ಟಾಭಿಷೇಕ ಸಮಾರಂಭದಲ್ಲಿ ನೆರೆದಿದ್ದ ಶ್ರೀಜಗದ್ಗುರು

॥ ಶ್ರೀಜಗದ್ಗುರು ದಾಕ್ಷಾಯಾರ್ಯಾಯ ನಮಃ ॥

ಜೀವನ ಸಂಸಾರಸ್ಥಿತಿ

ಲೇ —ಮಲ್ಲಿಕಾರ್ಜುನಶಾಸ್ತ್ರಿ ರಾಜೇಪನ್ನೂರು ಮಳೇಮರ, ಮುಡೇನೂರು

ನಾವು ಯಾವುದನ್ನು ಉದ್ಭವಿಸ್ಥ, ತಿಠ್ಠಗ್ಗಾಪಿ, ಮಾನವನ ಎಂದು ಹೇಳುವೆವೋ ಆ ಕ್ಷುದ್ರರೂಪಗಳೆಲ್ಲವೂ ಅನಂತ ಕಾಲದಿಂದಲೂ ಉತ್ಪತ್ತಿನಾಶರೂಪದಿಂದ ಸುತ್ತುತ್ತಲಿವೆ ಬೀಜವು ವೃಕ್ಷವನ್ನು ಪ್ರಸವಿಸುವದು ಆ ವೃಕ್ಷವು ಪುನಃ ಬೀಜವನ್ನು ಪ್ರಸವಿಸುವದು, ಇದೇ ರೀತಿಯಲ್ಲಿ ನಡೆದುಬರುತ್ತಲಿರುವದು, ಇದಕ್ಕೆ ಅಂತ್ಯವಿಲ್ಲವು ಜಲಬಿಂದುವು ಸರ್ವರಿಗಳ ಮೂಲಕ ಪ್ರವಹಿಸಿ ಸಮುದ್ರಕ್ಕೆ ಹೋಗಿ ಸೇರುವದು ಪುನಃ ಅಲ್ಲಿ ಬಾಷ್ಪವಾಗಿ ಪರಿಣಮಿಸಿ, ಪರ್ವತವನ್ನು ಸೇರಿ ಪುನಃ ನದಿಗಳಿಗೆ ಬಂದು ಸೇರುವದು ಇದೇ ಪ್ರಕಾರ ಸದಾ ಯುಗಚಕ್ರವು ಸುತ್ತುತ್ತಲಿದೆ ಈ ಬಗ್ಗೆ ಶ್ರೀ ರೇಣುಕಭಗವತ್ಪಾದರು " ಚಕ್ರನೇಮಿಕ್ರಮೇಣೈವ ಬ್ರಮಂತಿ ಹಿ ಶರೀರಿಣಃ ಎಂದು ಬೋಧಿಸಿರುವರು

ಈ ಸಂಸಾರವೆಂಬ ಘೋರಾರಣ್ಯದಲ್ಲಿ ಹೆಜ್ಜೆ ಹೆಜ್ಜೆಗೆ ಉಪದ್ರವವನ್ನು ಕೊಡುವ ಅವೇಕಿಗಳೆಂಬ ವಂಚ್ಯಗಳೂ, ತಾಪತ್ರಯವೆಂಬ ಹಳ್ಳದಲ್ಲಿ ತಳ್ಳುವ ದುಷ್ಟಗಳಾದ ಇಂದ್ರಿಯಗಳೆಂಬ ಶತ್ರುಗಳೂ, ತನ್ನನ್ನು ಮರೆಯಿಸಿ ತನ್ನ ವಿಠವನ್ನೇ ದೂರಮಾಡುವ ಮೋಹ ವೆಂಬ ಪಿಶಾಚಿಯೂ, ಅಹಂಕಾರವೆಂಬ ವಿಷವೃಕ್ಷವೂ, ತಪಗೇ ತಗಲಿ ತನ್ನನ್ನು ನಾಶಮಾಡುವ ಆಸೂಯೆಯೆಂಬ ವಿಷದ ಬಳ್ಳಿಯೂ ಇರುವವು ವಿಷಯವಾಸನೆಯೆಂಬ ತನ್ನನ್ನು ಅಗ್ನಿಯಂತೆ ಸುಡುವದು, ಮುಳ್ಳಿನಂತೆ ಚುಚ್ಚುವದು, ಕಗ್ಗತ್ತಲೆಯಂತೆ ಅಂಧನನ್ನಾಗಿ ಮಾಡುವದು, ಗರಗಸದಂತೆ ಕೊರೆಯುವದು, ಬಲಿಯಂತೆ ಸುತ್ತಿಬಿಡುವದು ಪ್ರಪಂಚವು ಆಜ್ಞಾನವೆಂಬ ಕೆಸರಿನಲ್ಲಿ ಮುಳುಗಿರುವದು ಇದರಲ್ಲಿ ಯಾವ ತಿರುಳೂ ಇಲ್ಲ ಇದು ದುಃಖದ ತವರೂರು

ಸಮಸ್ತವೂ ಕಾಲಾಧೀನವಾಗಿರುವದು ಬ್ರಹ್ಮ, ವಿಷ್ಣು, ಮಹೇಶ್ವರರು ಪ್ರತಿಯೊಂದು ಕಲ್ಪದಲ್ಲಿಯೂ ಈ ಜಗತ್ತಿನಲ್ಲಿ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡಲು ಪ್ರವೃತ್ತರಾಗುವದೂ ಸಹ ಕಾಲನ ಆಜ್ಞೆಯಿಂದಲೇ! ಕಾಲನ ಭಯದಿಂದಲೇ ಸೃಷ್ಟಿಯು ಸಮಸ್ತ ವ್ಯವಹಾರಗಳು ನಡೆದಿರುವವು ಪ್ರಚಂಡ ಶಕ್ತಿಯುಳ್ಳ ಕಾಲನ ಯೋಗದಿಂದಲೇ ಜೀವನಿಗೆ ಬೇರೆ ಬೇರೆ ಅವಸ್ಥೆಗಳು ಪ್ರಾಪ್ತವಾಗುವವು ಕಾಲವಾದೂ ನಮಿಲ ಪ್ರವಾಹದಂತೆ ಮುಂದುಮುಂದಕ್ಕೆ ಸಾಗುತ್ತಲೇ ಇರುವದು

ತರೆದಿಹರು ಘಟದಂತೆ ದೇಹಗ।
ಳೊಳಗೆ ಜಲದಂದದಲಿ ಅಂತಃಕರಣವಿಹುದಲ್ಲೇ?
ಎಂತು ಜಲದಲಿ ರವಿಯು ಬಿಂಬಿಪೆ।
ನಂತು ಲೋಕದಿ ಪೂರ್ಣನಾಗಿಹ।
ಅಂತರಾತ್ಮನೆ ಸರ್ವರಂತಃಕರಣದಲಿ ನಲಿವೆ ॥
ಎಂತಹುದೊ ಪ್ರತಿಬಿಂಬ ದಿನಪನಿ।
ಗಂತು ಜೀವರು ನಿನಗೆನನ್ಯರು।
ಸಂತಸದಿ ಸರ್ವೇಶ ರಕ್ಷಿಪುದೆಮ್ಮನನವರತ ॥೦೪॥

ತಾ॥ ಸೂರ್ಯನ ಎದುರಿಗೆ ಒಂದುಸಾವಿರ ನೀರು ತುಂಬಿದ ಕೊಡಗಳನ್ನು ಇಟ್ಟರೆ ಸೂರ್ಯನೇ ೪ ನೀರಿನ ಕೊಡಗಳಲ್ಲಿ ಹೇಗೆ ಪ್ರತಿಬಿಂಬಿಸುತ್ತಾನೋ ಹಾಗೆ ಪ್ರಪಂಚದಲ್ಲಿರುವ ಸಕಲ ಜೀವರು ಕೊಡದಂತೆ ದೇಹವನ್ನೂ, ಕೊಡದಲ್ಲಿರುವ ನೀರಿನಂತೆ ದೇಹದೊಳಗೆ ಅಂತಃಕರಣವನ್ನೂ ಹೊಂದಿರುವದರಿಂದ ಪರಿಪೂರ್ಣನಾದ ದೇವರು ಎಲ್ಲರ ಅಂತಃಕರಣದಲ್ಲಿಯೂ ಪ್ರತಿಬಿಂಬಿಸಿರುತ್ತಾನೆ ಸೂರ್ಯನ ಪ್ರತಿಬಿಂಬವು ಸೂರ್ಯನಿಗೆ ಹೇಗೆ ಅನ್ಯವಲ್ಲವೋ ಹಾಗೆ ದೇವರ ಪ್ರತಿಬಿಂಬರೂಪರಾದ ಜೀವರು ದೇವರಿಗೆ ಅನ್ಯರಲ್ಲ

೧೦. ದೇಹಾಧ್ಯಾಸನೇ ದುಃಖಕ್ಕೆ ಕಾರಣ

ಈ ಕರೀರವು ನೋಡೆ ಚರ್ಮದ।
ನೇಸ ಕ್ರಿಮಿಗಳ ವಾಸ ಮೂತ್ರವು।
ರೀಷ ತುಂಬಿದ ಕೋಶ ರೋಗನಿವಾಸೆ ಮಲ ದೋಷ ॥
ನಾತವಿಲ್ಲದ ಸಚ್ಚಿದಾನಂ।
ದ ಸ್ವರೂಪಾತ್ಮನನು ತೀರ್ಯಬೆ।
ನೋಸಪೋಗುವರಮನು ಮನುಜರು ತನುವೆ ತಾನೆಂದು ॥೧೯॥

ತನುವಿನಧಿಮನಸಲಿ ಮನುಜರು।
ತನುನೆ ತಾವೆಂದರಿತು ಧರೆಯಲಿ।
ತನುವಿನಿಂ ಮಾಳ್ಪಖಿಲಕರ್ಮಂಗಳಿಗೆ ಹೊಣೆಯಾಗಿ ॥
ಅನುಭವಿಪರಳಿವಿಲಿ ನರಳಿದೆ।
ಜನಸಮರಣದ ದುಃಖಗಳ ನೀ।
ಘನಮಹಿಮ ಸರ್ವೇಶ ರಕ್ಷಿಪುದೆಮ್ಮನನವರತ ॥೨೦॥

ತಾ॥ ಮನುಷ್ಯರು ತಾವು ಸಚ್ಚಿದಾನಂದಸ್ವರೂಪವಾದ ಆತ್ಮ ಎಂದು ತಿಳಿಯದೆ ಅತ್ಯಂತ ಅವಿವೇಕಿಗಳಾಗಿರುವ ಶರೀರವನ್ನು ಭ್ರಾಂತಿಯಿಂದ ತಾನೇ ಎಂದು ಅಭಿಮಾನಿಸಿ ಶರೀರವು ಮಾಡತಕ್ಕ ಕರ್ಮಗಳಿಗೆ ತಾವು ಹೊಣೆಯಾಗಿ ಅದರ ಫಲವನ್ನು ಭೋಗಿಸುವುದಕ್ಕೋಸ್ಕರ ಹುಟ್ಟು ಸಾಯುವೇಕಾದುದರಿಂದ ಗರ್ಭದುಃಖ, ಜನನದುಃಖ, ಮರಣದುಃಖ, ನರಕದುಃಖ ಇವೇ ಮುಂತಾದ ಅನೇಕ ದುಃಖಗಳನ್ನು ಅನುಭವಿಸುತ್ತಾರೆ.

೧೧. ಜಗತ್ತು ಮಿಥ್ಯೆ (ಕಲ್ಪಿತ)

ಮಿಥ್ಯೆಯಾಗಿಹುದಲ್ತೆ ಜಗನಿದು।
ಸತ್ಯವಲ್ಲವು ನಿಸ್ಸಂಶಯ ತಾ।
ಸತ್ಯವಾಗಿಹುದೆಂತು ಸೃಷ್ಟಿಪ್ರಳಯದಲಿ ನಿಲುಕಿ ॥
ಮುತ್ತಿ ಬಂಜೆಯ ಮಗನ ತೆರದಲಿ।
ನಿತ್ಯ ತೋರದೆ ಇರದು ಜಗನಿದ।
ಸತ್ಯವಲ್ಲವಿದೇಂ ವಿಚಿತ್ರವೊ ನಿನ್ನ ಸೃಷ್ಟಿಯಲಿ॥೨೧॥

ಮಾಯೆಯಿಂ ಬಹುರೂಪತೋರುವ।
ಮಾಯೆಗಾರವಹೊರ್ವನಂದದಿ।
ಜೀಯವಾದಿ ವಿಶ್ವರೂಪದಿ ತೋರ್ದೆ ಮಾಯೆಯಲಿ॥
ಜೀಯ ಹಗ್ಗದೊಳಿರದ ಹಾಂಪಿನ।
ನ್ಯಾಯದಲಿ ನಿನ್ನಲ್ಲಿ ವಿಶ್ವವು।
ನಿಮ್ಮೆಯ್ಯೆ ಸರ್ವೇಶ ರಕ್ಷಿಪುದೆಮ್ಮನನವರತ॥೨೨॥

ತಾ॥ ಈ ಪ್ರಪಂಚವು ಸೃಷ್ಟಿಸ್ಥಿತಿಲಯಗಳಿಗೊಳಗಾಗಿ ದೇವರಿ ಹಾಗೆ ಯಾವಾಗಲೂ ಇರುವದಿಲ್ಲ ವಾದ್ದರಿಂದ ಸತ್ಯವಲ್ಲ ಬಂಜೆಯ ಮಗನಂತೆ ಯಾವಾಗಲೂ ತೋರದೇ ಇರುವುದಿಲ್ಲವಾದ್ದರಿಂದ ಅಸತ್ಯವಲ್ಲ ಆದುದರಿಂದ ಪ್ರಪಂಚವು ಸತ್ಯಾಸತ್ಯತ್ಯೆಕ್ಕೆ ವಿಲಕ್ಷಣವಾಗಿ ನಿರ್ವಾಚ್ಯವಾಗಿದೆ ಅಂದರೆ ಮಾಯಾವಿಯಾಗಿರ ತಕ್ಕನವು ತನ್ನ ಮಂತ್ರಶಕ್ತಿಯಿಂದ ತಾನ ಇದ್ದಹಾ ಇದ್ದುಕೊಂಡು ನೋಡಿದವರಿಗೆ ಅನೇಕ ರೂಪಗಳಿಂದ ತೋರಿದಂತೆ ದೇವರು ತನ್ನ ಮಾಯೊಶಕ್ತಿಯ ನಾನು ದ್ಯರಿಂದ ತಾನು ಇದ್ದಹಾಗೆ ಇದ್ದುಕೊಂಡು ಪ್ರಪಂಚ ರೂಪದಿಂದ ತೋರುತ್ತಾನೆ ಹಗ್ಗದಲ್ಲಿ ಯಾವಾಗಲೂ ಇಲ್ಲದೇ ಇರತಕ್ಕ ಹಾವು ಇರುವಂತೆ ತೋರುವಂತೆ ವನಲ್ಲಿ ಇಲ್ಲದೇ ಇರತಕ್ಕ ಪ್ರಪಂಚವು ಅವಲ್ಲ ಇರುವ ಹಾಗೆ ತೋರುವದರಿಂದ ಮಧ್ಯೆಯಾಗಿದೆ

೧೨. ಜಗತ್ತು ದೇವರ ಆಧಾರದಿಂದ ಸತ್ಯವೂ ನಿತ್ಯವೂ ಆಗಿರುವಂತೆ ತೋರುತ್ತದೆ

ಸತ್ಯವಲ್ಲವು ಸತಿಸುವುದರಿಂ।
ನಿತ್ಯವಲ್ಲವು ಹೊಂದುವುದರಿಂ।
ವೃತ್ಯಯವ ವಿಶ್ವವಿದು ತನಗಾಧಾರನಾಗಿರನ॥
ಸತ್ಯನಹ ಮೇಣ್ ನಿತ್ಯನಹ ದೇ।
ವೋತ್ತಮನ ಧಾವದಲಿ ನರರಿಗೆ।
ನಿತ್ಯವಾಗಿಯು ಸತ್ಯವಾಗಿಯು ತೋರ್ಪುದಚ್ಚರಿಯೇಂ॥೨೩॥

ಸ್ಥಿರತೆಯಿಲ್ಲದ ಸೈಜವಲ್ಲದ।
ಬರಿದೆ ಜರೆಯುವ ಪೆಳಲಚಿತ್ರವು।
ಸ್ಥಿರವೆನಿಪ ನಿಜನಾದ ತೆರೆಯಾಧಾರದಲಿ ನಮಗೆ॥
ಸ್ಥಿರವು ನಿಜನುನೆ ತೋರುವಂದದಿ।
ಧರೆಯು ಸತ್ಯವು ನಿತ್ಯನೆಂಬುವ।
ಪರಿಯಹುದು ಸರ್ವೇಶ ರಕ್ಷಿಪುದೆಮ್ಮನನವರತ॥೨೪॥

ತಾ॥ ಪ್ರಪಂಚವು ಪ್ರಳಯದಲ್ಲಿ ನಾಶಹೊಂದುವದರಿಂದ ಸತ್ಯವಲ್ಲ ದೇವಾದಿಸೃಪಂಚವು ಪ್ರತಿಕ್ಷಣದಲ್ಲಿಯೂ ಬದಲಾವಣೆಯನ್ನು ಹೊಂದುತ್ತದೆಂದು ಭೌತಿಕ ತಾತ್ಪರ್ಯಜ್ಞರು ಪರೀಕ್ಷೆಯಮ್ಮು ಮಾಡಿ ನಿಶ್ಚಾಂತಮಾಡಿರುವದರಿಂದ ಪ್ರಪಂಚವು ನಿತ್ಯವಲ್ಲ ಸಿನಿಮಾದಲ್ಲಿ ಚಲಿಸುವ ಚಿತ್ರಗಳು ಪರದೆಯಲ್ಲಿ ಇರುವಹಾಗೆ ತೋರುತ್ತವೆ ಪರದೆಯನ್ನು ಮುಟ್ಟಿದರೆ ಆ ಚಿತ್ರಗಳು ಕೈಗೆ ತೋಚುವದಿಲ್ಲ ಅಂದರೆ ಅವು ನಿಜವಾಗಿಯೂ ಪರದೆಯಲ್ಲಿ ಇಲ್ಲ. ಚಿತ್ರಗಳು ಪ್ರತಿಕ್ಷಣದಲ್ಲಿಯೂ ಚಲಿಸುತ್ತಿದ್ದರೂ ಅವು ಸ್ಥಿರವಾಗಿದ್ದಂತೆ ತೋರುತ್ತವೆ. ಏತಕ್ಕೆಂದರೆ, ಈ ಚಿತ್ರಗಳ ತೋರುವಿಕೆಗೆ ಆಧಾರವಾಗಿರುವ ಪರದೆಯು ನಿಜವಾಗಿಯೂ, ಸ್ಥಿರವಾಗಿಯೂ ಇರುವದರಿಂದ ಚಿತ್ರಗಳು ನಿಜವಾಗಿಯೂ, ಸ್ಥಿರವಾಗಿಯೂ ಇಲ್ಲದಿದ್ದರೂ ನಿಜವಾಗಿಯೂ, ಸ್ಥಿರವಾಗಿಯೂ ಇರುವಂತೆ ತೋರುತ್ತವೆ ಇದರಂತೆ ಪ್ರಪಂಚವು ಸತ್ಯವಾಗಿಯೂ ಮತ್ತು ನಿತ್ಯವಾಗಿಯೂ ಇಲ್ಲದಿದ್ದರೂ ಇದಕ್ಕೆ ಆಧಾರವಾಗಿರುವ ದೇವರು ಸತ್ಯನು ಮತ್ತು ನಿತ್ಯನು ಆಗಿರುವದರಿಂದ ಪ್ರಪಂಚವು ಸತ್ಯವು ಮತ್ತು ನಿತ್ಯವೆ ಆಗಿರುವಂತೆ ತೋರುತ್ತದೆ.

೧೩. ತತ್ತ್ವವನ್ನು ತಿಳಿದರೆ ಅಧರ್ಮವು, ಮತದ್ವೇಷವು ಇರುವುದಿಲ್ಲ

ಎಲ್ಲಮತದವರೀ ರಹಸ್ಯವ।
ಬಲ್ಲರು ತಾವಾಗಿ ಭೂತಲ।
ದಲ್ಲಿ ತೋರುವುದೆಲ್ಲ ನೀನೆಂದರಿತು ಬಾಳಿದೊಡೆ ॥
ಎಲ್ಲರಂತಃಕರಣದಲ್ಲಿಯು।
ಸಲ್ಲಲಿತಸನುಭಾವುದಯಸಿ।
ಕೊಲ್ಲದೇ ? ಮತಭೇದವಳಿದೆ ? ಸುಖವು ಸಾಧಿಸದೇ ? ॥೨೫॥

ಅರಿಯುವಂದದಿ ತತ್ತ್ವನನು ನಿಗೆ।
ತೊರೆಯುವಂದದಿ ಸ್ವಾರ್ಥನನು ಪರಿ।
ಹರಿಸುವಂದದಿ ಪರರ ಕಷ್ಟವ ಭೇದಗಳನುಳಿದು ॥
ಸ್ಮರಿಸುವಂದದಿ ಭಕ್ತಿಯಿಂದಲಿ।
ಧರೆಯ ಸೃಜಿಸಿದ ದೇವ ನಿನ್ನನು।
ಕರುಣಿಸೈ ಸರ್ವೇಶ ರಕ್ಷಿಪುದೆಮ್ಮನನವರತ॥ ೨೬॥

ತಾ॥ 'ಸರ್ವಂ ಖಲ್ವಿದಂ ಬ್ರಹ್ಮ', ವಾಸುದೇವಸ್ಸರ್ವಮಿತಿ ಎಂಬ ಶ್ರುತಿಸ್ಮೃತಿಗಳಂತೆ ದೇವರೇ ಸರ್ವ ಸ್ವರೂಪನೂನಿದ್ದಾನೆಂಬ ತತ್ತ್ವದ ರಹಸ್ಯವನ್ನು ಎಲ್ಲರೂ ತಿಳಿದರೆ ಎಲ್ಲರಲ್ಲಿಯೂ ಭೇದಬುದ್ಧಿಯು ಹೋಗಿ ನಮ ಭಾವವು ಉಂಟಾಗುವದರಿಂದ ದೂರಲ್ಲಿಯೂ ಅಧರ್ಮ ನಾಗಲಿ ಪರಮತದ್ವೇಷವಾಗಲಿ ಇರುವದಿಲ್ಲ

೧೪. ಅಧರ್ಮ ಮತ್ತು ಪರಸ್ಪರ ಮತದ್ವೇಷದಿಂದ ಜನಗಳು ದುಃಖಪಡುವರು

ನರರು ಸ್ವಾರ್ಥಿಗಳಹರು ಹಲವರು।
ಪರರ ಹಿಂಸಿಸಿರಕಟಿ ಕೆಲವರು।
ಮರೆತಿಹರು ಪೊರೆದವನ ಪೊರೆವನ ಮತ್ತೆ ಪೊರೆವವನನ ॥
ಪರಹರಾ ಗುರುವಾನವಾದರು।
ಪರಮಹೀಯರ ಹಿಂಸಿಸಿರಿ ನೀವ್।
ಪರಮತದ್ವೇಷನನು ಸಾಧಿಸಿರೆಂದು ಸಾರಿದಹೇ ?
ಎತ್ತ ನೋಡಲಧರ್ಮವೃದ್ಧಿಯು।
ಎತ್ತ ನೋಡಲು ರಾಜಕೀಯವು।
ಮುತ್ತಿಕೊಂಡಿನೆ ಪರಮತದ್ವೇಷಾಗ್ನಿ ದಹಿಸುತಿದೆ।
ಎತ್ತಲುಂ ಮತವೈರಿಗಳ ಭಯ।
ನೆತ್ತಲುಂ ಸಮರಭಯ ಕ್ಷಾಮವು।
ಮುತ್ತಿಹುದು ಸರ್ವೇಶ ರಕ್ಷಿಪುದೆಮ್ಮನನವರತ
॥೨೮॥

ತಾ॥ ಲೋಕದಲ್ಲಿ ಬಹು ಜನಗಳು ಸ್ವಾರ್ಥತೆಯು ವೃನರಾಗಿದ್ದಾರೆ ಅಂದರೆ ನಾವು ಮತ್ತು ನನ್ನವರು ಎಂಬ ಅವಿವೇಕವನ್ನು ಕೊಂಡು ತಮ್ಮ ಮತ್ತು ತಮ್ಮ ಹೆಂಡತಿ ಮಕ್ಕಳ ಸುಖಭಭಗಳೋಗ್ಯರ ಇತರರಿಗೆ ಕಷ್ಟನಷ್ಟಗಳನ್ನುಂಟುಮಾಡುತ್ತಾರೆ ಇವಕ್ಕೆ ಅಧರ್ಮ ವೆಂದು ಹೆಸರು ಪ್ರತಿಯೊಬ್ಬ ಮತಸ್ಥಾಪಕರೂ ಕೈಲಾದ ಮಟ್ಟಿಗೆ ಇತರರಿಗೆ ಒಳ್ಳೆಯದನ್ನು ಮಾಡಬೇಕೆಂದು ಹೇಳಿರುತ್ತಾರೆಯೇ ಹೊರತು ಇತರರಿಗೆ ಹಿಂಸೆಯನ್ನು ಮಾಡಬೇಕೆಂದು ಹೇಳಿರುವದಿಲ್ಲ ಏತಕ್ಕೆಂದರೆ ಬೌದ್ಧಾರಿಗೆ ಗುರುವಾದ ಗೌತಮಬುದ್ಧನು "ಕೆಟ್ಟದ್ದನ್ನು ಮಾಡಬೇಡ ಒಳ್ಳೆಯದನ್ನೇ ಮಾಡು" ಎಂದು ಹೇಳಿದ್ದಾನೆ ಕ್ರಿಶ್ಚಿಯಾನ್ಸರಿಗೆ ಗುರುವಾದ ಯೇಸುಕ್ರಿಸ್ತನು "ನಿನ್ನನ್ನೆಯೇ ನಿನ್ನ ನೆರೆಯವರನ್ನು ಪ್ರೀತಿಸು" ಎಂದು ಹೇಳಿದ್ದಾನೆ ಮಹಮ್ಮದೀಯರಿ ಗುರುವಾದ ಮಹಮದ್ ಪೈಗಂಬರ್ "ಮನುಷ್ಯನರ್ಗಳ್ಳ ಯಾವಿಂದ ಒಳ್ಳೆಯ ದಾಗುತ್ತದೋ ಅವನೇ ಉತ್ತಮ ಮನುಷ್ಯ" ಎಂದು ಹಾಗಿ ಹೇಳಿದ್ದಾನೆ ಇವೇ ರೀತಿಯಾಗಿ ಇತರ ಮತೀಯರ ಗುರುಗಳು ಹೇಳಿದ್ದಾರೆ ಹೀಗಿದ್ದರೂ ಕೆಲವು ಮತೀಯರು ಅನ್ಯಮತೀಯರನ್ನು ದ್ವೇಷಿಸಿ ಹಿಂಸಿಸುತ್ತಾರೆ ಇದಲ್ಲವೆ ಹಿಂದೆ ಕಾಣಾದಿದ, ಈಗ ಕಾಣುತ್ತಿರುವ ಮತ್ತು ಮುಂದೆ ಕಾಣಾಯುವ ದೇವರನ್ನು ಮರೆತಿರುತ್ತಾರೆ ಜನರಲ್ಲಿರತಕ್ಕ ಮೇಲೆ ಹೇಳಿದ ಅಧರ್ಮ ಮತ್ತು ಪರಸ್ಪರ ಮತದ್ವೇಷಗಳೇ ರೋಗದಲ್ಲಿ ಘೋರವಾದ ಯುದ್ಧಗಳು, ಕೋಮುವಾರು ಕಲಹಗಳು, ಭಯಂಕರ್ತೆ, ಸಾಂಕ್ರಾಮಿಕ ರೋಗಗಳು ಇವೇ ಮುಂತಾದ ದುಃಖಗಳಿಗೆ ಕಾರಣವಾಗಿರುವವೆ.

೧೫. ಧರ್ಮ ಮತ್ತು ದೈವಭಕ್ತಿಯಿಂದ ಸುಖವುಂಟಾಗುತ್ತದೆ

ಒಮ್ಮತದಿ ಸ್ತ್ರೀಪುರುಷರೆಲ್ಲರು।
ತಮ್ಮ ಧರ್ಮವ ಬಿಡದೆ ಚರಿಪುದು।
ತಮ್ಮ ದೇವನ ತಮ್ಮ ಸುಸಬಂದಂತೆ ಪೂಜಿಪುದುಂ
ತಮ್ಮವರು ಪರರೆಂದು ಗಣಿಸದೆ।
ತಮ್ಮವೊಲು ಹರಿಗಣಿಸಿ ಸಲಲರ।
ಒಮ್ಮತದಿ ದೀನರನು ಪೊರೆವುದು ಸರ್ವಸುಖ
ಕರವು ॥೨೯॥

ಧರ್ಮಮಾರ್ಗನಿಂಗಳಿದಿಯಿಡಲು ಮ।
ಹೈರ್ಮಭಾರವು ಬಾಧಿಸುವುದೆ ? ಸ।
ದ್ಧರ್ಮತೇಜದ ಬೆಳಕನಲಿ ಕಲಿಧರ್ಮವೃತ್ತಿಯು
ಪೆದೆ ? ॥
ಧರ್ಮದಿಂ ಯುದ್ಧ ಭಯ ತಪ್ಪದೆ ?।
ಧರ್ಮದಿಂ ಕ್ಷಾನುಭವ ಪೋಗದೆ ?।
ಧರ್ಮದಿಂ ಸರ್ವೇಶ ರಕ್ಷಿಪುದೆಮ್ಮನನವರತ॥೩೦॥

ಶಾ॥ ಸ್ತ್ರೀ ಆಥವಾ ಪುರುಷ ನಿಂಬ ವ್ಯತ್ಯಾಸವಿಲ್ಲದೆ ಸರ್ವರೂ ತಮ್ಮ ತಮ್ಮ ಧರ್ಮವನ್ನಲ್ಲೇ ಇದ್ದುಕೊಂಡು ತಮತಮಗೆ ಇಷ್ಟವಾದ ಆಕಾರದಿಂದ ದೇವರನ್ನು ಉಪಾಸಿಸಿ ತಮ್ಮನರು, ಅನ್ಯರು ಎಂಬ ಭೇದಬುದ್ಧಿಯಿಲ್ಲದೆ ತಮ್ಮಂತೆ ಎಂದು ಕಿರಿದು ಕಷ್ಟಪಡತಕ್ಕವರನ್ನು ಕಾಪಾಡಿದರೆ ಎಲ್ಲರಿಗೂ ಸುಖವಾಗುವದು "ಧರ್ಮೋ ರಕ್ಷತಿ ರಕ್ಷಿತ " ಎಂಬ ವಚನವು 'ನಾವು ಧರ್ಮವನ್ನು ಕಾಪಾಡಿದರೆ ಅದು ನಮ್ಮನ್ನು ಕಾಪಾಡುತ್ತದೆ ಎಂದು ಹೇಳುವದರಿಂದ ಧರ್ಮಮಾರ್ಗದಲ್ಲಿ ನಡೆದರೆ ದುಃಖದ ಭಯವಿರುವದಿಲ್ಲ, ಕಲಿಯು ಪ್ರಾಬಲ್ಯಕ್ಕೆ ಅವಕಾಶವಿರುವದಿಲ್ಲ ಯುದ್ಧ, ಕ್ಷಾಮ ಇವೇ ಮುಂತಾದ ದುಃಖಗಳಿರುವದಿಲ್ಲ

೧೬. ಎಂತಹ ಶಾಪಿಷ್ಠನಾದರೂ ದೇವರ ಕೃಪೆ ಹೊಂದಿ ಸದ್ಗತಿಯನ್ನು ಪಡೆಯಬಹುದು

ದುಷ್ಪುತ್ರನ ದುಷ್ಕೃತದಿಂ।
ದೆಪ್ಪೆಳಕ್ಕಗಳೆದಗಿರಲು ಗತಿ।
ಗೆಟ್ಟು ದೇಹುನ ಸುತನ ಪಿತನಾದರಿಪ ರೀತಿಯಲಿ।
ಕೆಟ್ಟ ನುಷ್ಕಾಂತಿಗಳ ಪಾಪರಾಶಿಯ।
ಸುಟ್ಟು ರಕ್ಷಿಪೆ ದೇವ ನೀವಲಾ।
ಕಷ್ಟನಾಶಕ ನಿನ್ನ ಪತ್ಕಾತ್ಕಾಪದಿಂ ಬೇಡ್ವೆ॥೩೧॥

ಕಲಿನಿಧಾರನು ದೇವ ನೀ ನಿ।
ನ್ನೊಲುಮೆಯಾಗಲು ಕಲಿಯುಗಮೊಳಿತ।
ಸುಲಭಮಾರ್ಗವ ನಿನ್ನ ನಾಮಸ್ಮರಣೆಯಾ
ಗಿಹುದು ॥
ಎಲೆ ಮಹೇಶ್ವರ ' ನಿನ್ನ ಕೃಪೆಯಿಂ।
ಕೆಲಸ ಸುಖಕಾಂತಿಗಳು ಜಗತೀ।
ವಲಯದಲಿ ಸರ್ವೇಶ ರಕ್ಷಿಪುದೆಮ್ಮನವರತ ॥

ತಾ॥ ದುಷ್ಪುತ್ರನಾದವನು ತಂದೆಗೆ ಎಷ್ಟು ಕಷ್ಟ ನಷ್ಟಗಳನ್ನುಂಟುಮಾಡಿದ್ದರೂ ಬಹಳ ಕಷ್ಟಕ್ಕೆ ಸಿಕ್ಕಿ ತಾನು ಮಾಡಿದ ಅಪರಾಧಗಳಕ್ಕೆ ನಿಜವಾಗಿ ಪಶ್ಚಾತ್ತಾಪ ಪಟ್ಟು ತನ್ನ ಅಪರಾಧಗಳನ್ನು ಕ್ಷಮಾಪಣೆಯೇಂಬ ಶೀಲ ಕೊಂಡರೆ ತಂದೆಯಾದವನು ಹೇಗೆ ಕ್ಷಮಿಸುವನೋ ಹಾಗೆ ಒಬ್ಬನು ಅತ್ಯಂತ ಪಾಪಿಯಾದ್ದಾಗ್ಯೂ ತಾನು ಮಾಡಿದ ಪಾಪಕರ್ಮಗಳಿಗೆ ನಿಜವಾಗಿ ಪಶ್ಚಾತ್ತಾಪಪಟ್ಟು ದೇವರಲ್ಲಿ ಮೊರೆಯಿಟ್ಟರೆ ದೇವರು ಅವನ ಪಾಪಗಳೆಲ್ಲ ವನ್ನೂ ಸುಟ್ಟು ಅವನನ್ನು ಕಾಪಾಡುತ್ತಾನೆ. ಈ ಕಲಿಯುಗದಲ್ಲಿ ದೇವರ ಅಮಗ್ರೆಹವನ್ನು ಸಂಪಾದಿಸುವದಕ್ಕೆ ಅವನ ನಾಮಸ್ಮರಣೆಯು ಅತ್ಯಂತ ಸುಲಭೋಪಾಯ ನಾಗಿದೆ.

॥ ಓಂ ತತ್ಸತ್ ॥

ಹಸಮುಂಗಳಕಮಾರ್ ನಿನ್ನಯ।
ಚರಣಯುಗಳವೊಲೊಪಿಸಿಹೆ ಶಾ।
ಸರಸವಿಶಾಖಾದಿಪತಿ ಶಾಸ್ತ್ರಸಾಹಸನು ॥
ಧರೆಯೊಳಿಹ ಪಶುಪತಿಯ ಲೀಲ್ಯಕೆ।
ಮುರಹರಾತಿಯು ಪಾತ್ರವಿಲ್ಲಿಗೆ।
ಹಿರಿಯರಿತ್ತಿಹ ಸರ್ವೇಶ ಮಂಗಳ ನಂಜನಹುತ್ತಿನು

ಸಿದ್ಧಾಂತಶಿಖಾಮಣಿ

ವೀರಶೈವಸಮಾಜದಲ್ಲಿ ಜನ್ಮದಾರಣಮಾಡಿದ ಪ್ರತಿಯೊಬ್ಬ ತಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ತುಮಾಗ್ರಂಥವನ್ನು ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ಧಿತಾರ್ಥವಾದ ಆಗ್ನಮಸಾರಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಆತಿ ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **ತಿನಾಸಿರ** ವರ್ಷಗಳ ಹಿಂದೆಯೆ ಪ್ರಚಾರದಲ್ಲಿದ್ದ **ಶ್ರೀಶಿವಯೋಗಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನವಲ್ಲದಿದ್ದುದರಿಂದಲೂ ಗೂಢಾರ್ಥಗರ್ಭಿತವಾದ ತ್ತೋಕಗಳಿಗೆ ಸಂಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾ'ನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡದಮಾತ್ರಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಪಾಠಕರಿಗೆ ಚೆನ್ನಾಗಿ ಮನವೇದ್ಯವಾಗುವುದು ಪಾಠಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಸೂಚ್ಯಮಣಿಕೆಯೂ, ತ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೩೨ ಪುಟಿಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾಕ್ಷಕಾಮಣಿಯಿಂದಲೂ ಕೆಲವು ಕಥೆಗಳು ಜೋಡಿಸಲ್ಪಟ್ಟಿವೆ. ಇದರಿಂದ ಗ್ರಂಥದ ಸೌಂದರ್ಯವು ಪರ್ಯಾಪ್ತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ನೀರಲ್ಕೆಪಟ್ಟಲ್ಲೂ ಅವಶ್ಯವಾಗಿ ಓದಬೇಕು. ಬೆಲೆ ೨ ರೂಪಾಯಿ.

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಒಂಭತ್ತು ಅಮೃತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೫ ಬೆಲೆ ೧೫ ೦—೬—೦

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣ ಗಳಿಂದ ಮುದ್ರಿತವಾದುದು)ಸೈಜು ೧೪×೧೦ ಬೆಲೆ ೦—೬—೦

ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಾದ್ವೈತವನ್ನು ಉಪದೇಶಿಸುವ ಫೋಟೋ ೦—೪—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೫ ... ೦—೪—೦

" " " ಚಿಕ್ಕ ಸೈಜು ಬೆಲೆ ... ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೋಗಳಿಂದ ಅವತರಿಸಿರುವ ಫೋಟೋ .. ೦—೧—೬

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ... ೦—೧—೬

ಶ್ರೀರೇಣುಕಾಚಾರ್ಯರು ಶ್ರೀಕರಂಕಾಚಾರ್ಯರಿಗೆ ಶಂಭ್ರಮಹೇಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ವಿಧೀಷಣನ ಪ್ರಾರ್ಥನೆಯಂತೆ ೪ ಕೊಟ್ಟು ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬

ಶ್ರೀ ಶಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) . ೦—೪—೦

ಶ್ರೀತಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ತೀರ್ಥಪ್ರಸಾದವನ್ನು ಅನುಗ್ರಹಿಸುವ ಫೋಟೋ .... ೦—೦—೬

ಶ್ರೀಮನ್ಮಹಾಯೋಗೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ . ೦—೧—೬

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೧—೬

ಶ್ರೀಮನ್ಮಹಾಯೋಗೀ ಜಗದ್ಗುರುಗಳವರ ಸ್ಮಾರ್ಥಿಯಲ್ಲಿ ಶ್ರೀ ತಾಶೀನಾಥಶಾಸ್ತ್ರಿಗಳವರು ಶುಂಠಿಯೊಂದಿರುವ ಫೋಟೋ ೦—೧—೬

ಪಂಡಿತ ಶ್ರೀತಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣ ಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧೪ ೦—೨—೦

ಪಂಡಿತ ಶ್ರೀತಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣ ಗಳಿಂದ ಮುದ್ರಿತವಾದುದು) ದೊಡ್ಡಸೈಜ ೧೪ ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾಪ್ರಾಣದ ಅತ್ಯಂತ ಸುಂದರವಾದ ಫೋಟೋ ೧೪ ... ೦—೧—೬

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಚಿತ್ರವಿರುವ ಸುಂದರ ಫೋಟೋ ೧೪ . ೦—೧—೬

ಶ್ರೀ ಜಗದ್ಗುರು ಕೇದಾರೀಂಜಾಪೀಠದ ಅತ್ಯಂತ ಸುಂದರವಾದ ಗೋಪುರದ ಫೋಟೋ .. ೦—೧—೬

ಶ್ರೀರಂಭಾಪುರೀ ಜಗದ್ಗುರುಗಳವರ ಸ್ಮಾರ್ಥಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ .. ೦—೧—೬

ಬೆಂಗಳೂರು ಕಂಟೊನ್ಮೆಂಟಿನಲ್ಲಿ ನೆಲಸೀರುವ ರಂಭಾಪುರೀ ಜಗದ್ಗುರುಗಳ ಅತ್ಯಪ್ಪಲ್ಲಿಕ್ಕಿ ಮಹೋತ್ಸವದ ಫೋಟೋ ೦—೧—೬

ಶ್ರೀಜಗದ್ಗುರುರಂಭಾಪುರೀ ಪೀರದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು .. ೦—೪—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ) ೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) ೧ ಆಣೆ
ಪಂಚವಿಂಶತಿ ಪ್ರಶ್ನ ಪ್ರಕಾಶ (೫ನೆಯ ಆವೃತ್ತಿ) ೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನೆ ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ) ೨ ಆಣೆ
ಶ್ರೀಹೆಂಜಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ) ೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) ೨ ಆಣೆ
ಬಸವಾದಿಪ್ರಥಿತತ್ವದರ್ಪಣ (೪ನೆಯ ಆವೃತ್ತಿ) ೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) ೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ) ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ೨ ಆಣೆ
ಶಿವಶಕ್ತಿವಿಲಾಸ ೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ ೨ ಆಣೆ
ಬಲ್ವಮೋಹಾಶ್ಮ (೨ನೆಯ ಆವೃತ್ತಿ) ೨ ಆಣೆ
ಪಂಚಾಚಾರಪ್ರಕಾಶ ... ೩ ಆಣೆ
ಪಂಚಾಚಾರ ಪ್ರಕಾಶಿಕಾ ... ೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) .. ೪ ಆಣೆ
ಲಿಂಗಧಾರಣವಿಧಿ ... ೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) ..... ೪ ಆಣೆ
ಶ್ರೀಶಪಂಡಿತಾರಾಧ್ಯರ ಕಾಲನಿರ್ಣಯ ..... ೪ ಆಣೆ
ಶೈವೋಪಸನಸ್ತೋಗ್ರಹ (ಸಂಸ್ಕೃತ) ... ೬ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ .. ೪ ಆಣೆ
ವೈದಿಕವಾಙ್ಮಯರಹಸ್ಯ ... ೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ..... ೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ ... ೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ- ಚಿಕ್ಕಸೈಜು) ..... ೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) ..... ೮ ಆಣೆ

ವೀರಶೈವನಮಹಾತ್ಮರು .. .. ೮ ಆಣೆ
ಬಸವಧ್ವಾಂತರಿಮಾಕರ (೨ನೆಯ ಆವೃತ್ತಿ) .. .. ೮ ಆಣೆ
ಆಗಮಪರಿಜ್ಞಾನ ... ... ೮ ಆಣೆ
ಪಂಡಿತ ಶ್ರೀತಾಶೀನಾಥಶಾಸ್ತ್ರುಲುವಾರಿ ಭಾಷಣಮು (ತೆಲುಗು) ೮ ಆಣೆ
ಶ್ರೀವಾಗೆದ್ಗುರು ಶಿವಾನಂದವಿಜಯ .. ೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಮೋಡನಶಿವಾಚಾರ್ಯಕೃತ) ೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .. ೧೩ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ .. ೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತೆ ... ೧ ರೂ.
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .. .. ೧ ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .. .. ೧ ರೂ
ವೈದಿಕಶಿವಪೂಜಾವಿಧಿ (ನೈದಿಕಸ್ತರಯುಕ್ತವಾಗುವುದು ೩ನೆಯ ಆವೃತ್ತಿ) ೧೫ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ) ೩ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು) ೩ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾವಿಸಲ್ಪಟ್ಟದ್ದು) .. ೩ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ೫ ರೂ.
ಶಿವಾಗಮಸಂಗ್ರಹ: (ಚಿಂಪ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು) ೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟಿ) ೮ ರೂ
A brief life-sketch of Pandit Sri Kashinatha Shastriji (*English*) 4 As.
The Philosophical Aspect of Virasaivism (*English*) ... 8 As
Speeches by Pandit Shri Kashinatha Shastriji (*English*) 12 As
ಶಿವಾಚಾರಚಂದ್ರಿಕಾ (ಸಂಸ್ಕೃತ) ೩ ಆ.
ವೀರಶೈವರತ್ನ (ಮರಾಠಿ) .. ೧ ರೂ.
ಮಹಾಚಾರಾಧಾನನಿಧಿಃ (ವೀರಶೈವಭಾಷ-ಸಂಸ್ಕೃತ) ೧ ರೂ
ಸಂಧಿಕಿಂಚಾಕಾರಿಕಾ (ಸಂಸ್ಕೃತ) .. .. ೩ ಆಣೆ

ಮೈಸೂರು—**ಶ್ರೀಹೆಂಜಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

Edited, Printed and Published by Pandit Kashinatha Snastri at Shri Panchacharya Electric Press, Sayaji Rao Road, Mysore.

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಗ್ರಾ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿಕರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಸರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಸಿಯಾಮಕರ್ ಪರಿಲಕ್ಷ್ಯಪಂಚಾಕ್ಷರೀಮೋದಕರ್ । ಪಂಚಾಚಾರ್ಯಾಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೪ನೇ ಫೆಬ್ರುವರಿ ೧೯೪೪ [ಸಂಚಿಕೆ ೪೦

॥ ಶ್ರೀಜಗದ್ಗುರು ಪಂಚಾಚಾರ್ಯಾಗ್ರಾ ಪ್ರಸೀದಂತು ॥
ವೀರಶೈವರು ಅಧರ್ಮದಿಂದ ದೂರಾಗಬೇಕು

ವೀರಶೈವ ಸಮಾಜದಲ್ಲಿ ಅಧರ್ಮವು ದಿನೇ ದಿನೇ ಬೆಳೆಯುತ್ತಿದೆ ಧರ್ಮಮಂದಿರವು ಕಂಪಿಸವಾಗಿ ಹತ್ತಿದೆ ವೀರಶೈವರಲ್ಲಿ ಬಹುಜನರು ಕಲಿಕಾಲಕ್ಕನು ಸಾರಥಾಗಿ ಸ್ವೇಚ್ಛಾಚಾರಿಗಳಾಗಹತ್ತಿದ್ದಾರೆ ಹೊಟ್ಟೆಪ್ಪಾಗಳಲ್ಲಿ ಕುದಿಕೊಂಡ ಜಾತಿಯವರೊಡನೆ ಹಿಂಬಾ ತೀಗಹತ್ತಿದ್ದಾರೆ ಮಾನವನ ಉನ್ನತಿಗೆ ಕಾರಣಗಳಾದ ಆಚಾರ ವಿಚಾರಗಳು ಅರಣ್ಯಪಾಲಾಗಹತ್ತಿವೆ ಶಿವ ಪೂಜೆ, ಶಿವಭಜನೆ, ಶಿವಕಥೆ, ಶಿವಶಾಸ್ತ್ರಶ್ರವಣ ವೇಂದ್ರ ಲಾಮುವುಗಳ ಸುಳಿವೇ ಇಲ್ಲದಾಗಿದೆ ಕೆಲವರಲ್ಲಿ ಅಜೀಯು ಸಾನ, ಅಳಿಕ್ಕೈಭಕ್ತನಾದಿಗಳು ಸಹ ಕಾಲಿಡಪತ್ತಿನೆ ಧರ್ಮಬೋಧಕರಾದ ಗುರುಗಳೆಂಬವರು ಸಹ ಅಧರ್ಮ ಪರಾಯಣರಾಗಹತ್ತಿದುರುವರು ಸರ್ವಾಜದಲ್ಲಿ ಈ ರೀತಿ ಅಧರ್ಮವು ಪ್ರಬಲವಾಗಹತ್ತಿದರೆ ಈ ಸಮಾಜವು ಸ್ವಲ್ಪ ದಿನಗಳಲ್ಲಿಯೇ ನಾನಾವಿಕೇಷವಾಗುವುದರಲ್ಲಿ ಸಂದೇಹವಿಲ್ಲ

ಸ್ವಜಾತಂ ಯಃ ಪರಿತ್ಯಜ್ಯ ಪರಜಾತಂ ಸಮಾಶ್ರಯೇತ್
ಸ್ವಯಮೇನ ಲಯಂ ಯಾತಿ ಯಥಾ ಶಾಖ್ಯಮಪಭ್ರಂಶಃ ॥

ಯಾವನು ತನ್ನ ಧರ್ಮವನ್ನು ಬಿಟ್ಟು ಅನ್ಯಧರ್ಮವನ್ನು ಆಶ್ರಯಿಸುವನೋ ಅವನು, ಅಧರ್ಮದಿಂದ ರಾಜ್ಯವು ನಾಶವಾಗುವಂತೆ ವೀಕ್ಷ್ಯನಾಶವಾಗುವನು ಎಂದು ಮಹಾತ್ಮರು ಸಾರಿರುವರು ಅದುದರಿಂದ ಯಾರೂ ತಮ್ಮ ಧರ್ಮದಿಂದ ಚ್ಯುತರಾಗಬಾರದು

ಧರ್ಮಾರ್ಥಕಾಮಮೋಕ್ಷಾಣಾಂ ಯಸ್ಯೈಕೋಽಪಿ ನವಿದ್ಯತೆ
ಅಜಾಗಲಸ್ತನಸ್ಯೇವ ತಸ್ಯ ಜನ್ಮ ನಿರರ್ಥಕಂ ॥

ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಯಾವುದಾದರೂ ಒಂದು ಸಹ ಇಲ್ಲದಿದ್ದರೆ ಆ ಮನುಷ್ಯನ ಜನ್ಮವು ಆಡಿನ ಕುತ್ತಿಗೆಯಲ್ಲಿ ರುವ ಮೊಲೆಯಂತೆ ನಿಸ್ಪ್ರಯೋಜನವಾದುದು ಎಂದು ಮಹಾತ್ಮರು ಬೋಧಿಸಿರುವುದರಿಂದ ಪ್ರತಿಯೊಬ್ಬನೂ ಚತುರ್ವಿಧ ಪುರುಷಾರ್ಥಸಾಧನೆಯಲ್ಲಿ ನಿರತನಾಗಿ ತನ್ನ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕು

"ಏಕೇನ ಜನ್ಮನಾ ಮುಕ್ತಿರ್ವೀರಾಣಾಂ ತು ಮಹೇಶ್ವರಿ ।" ಎಂಬ ಪಾರಮೇಶ್ವರಾಗಮವಾಕ್ಯದಂತೆ ವೀರವೈಷ್ಣವಧರ್ಮವು ಒಂದೇ ಜನ್ಮದಲ್ಲಿ ಮೋಕ್ಷವನ್ನು ಕೊಡುತ್ತಿರುವುದಾಗಿದೆ. ಆದುದರಿಂದಲೇ ಮಹರ್ಷಿಪ್ರಣೀತರಾದ ಆಗಸ್ತ್ಯರು ವೀರಶೈವಮತಸಮ್ಮತಿಕರಾದ ಶ್ರೀಜಗದ್ಗುರು ರೇಣುಕಾಚಾರ್ಯರಿಂದ ಆನುಗ್ರಹಿತರಾದರು ಲೋಕಮಿಮ್ಮಾತರಾದ ಶ್ರೀಶಂಕರಾಚಾರ್ಯರು ಸೇಲ್ಕಂಡ ಮಹಾತ್ಮರಿಂದ ಶ್ರೀಚಂದ್ರಮೌಳೀಶ್ವರ ಲಿಂಗವನ್ನು ಪಡೆದು ಧನ್ಯರಾದರು ಇದನ್ನೆಲ್ಲಾ ತಿಳಿದು ವೀರಶೈವಮತಬಾಂಧವರೆಲ್ಲರೂ ತಮ್ಮ ಧರ್ಮದಂತೆ ನಡೆದು ಶ್ರೀಜಗದೀಶ್ವರನ ಮತ್ತು ಜಗದಾಚಾರ್ಯರ ಆನುಗ್ರಹಕ್ಕೆ ಪಾತ್ರರಾಗಿ ಧನ್ಯರಾಗಬೇಕೆಂದು ಆಶಿಸುವ,

ಸೀಲಕಂಠ ಮರಿದೇವರು, ಹಾವಿನಹಾಳ

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನ

ಒಳ್ಳಾರಿ ದಿ॥ ಹೊಸಪೇಟೆ ತಾ॥ ಇಟ್ಟಗಿ ಗ್ರಾಮದಲ್ಲಿ ರುವ ಶ್ರೀಮಾನ್ ಅನ್ನದಾನಪೂರ ಬಸವಲಿಂಗನಗೌಡರು ಮತ್ತು ಇವರ ಸಹೋದರರಾದ ಧರ್ಮವೀರ ವೀರನಗೌಡರು ತಮ್ಮ ಗ್ರಾಮಕ್ಕೆ ಎಮ್ಮಿಗನೂರು, ಹೊಂಬಾಸವೀರಾಪುರ ಮಹಾಂಕಿನಮಠದ ವೀರಭಸ್ಮಿ ಶ್ರೀ॥ ಪಂ॥ ಪ್ರ ಗುರುಸಿದ್ಧಶಿವಾಚಾರ್ಯಸ್ವಾಮಿಗಳವರನ್ನು ಒಂದೂಡಿಕೊಂಡು ಪುಣ್ಯ ಬಾ॥ ಲ ದಿನದ ಮೇಲ್ಕಂಡ ಜಗದ್ಗುರುಗಳವರ ಪುಣ್ಯದಿನೋತ್ಸವವನ್ನು ಮಹಾ ವೈಭವೋಪೇತವಾಗಿ ನೆಗಳೇರಿಸಿದರು ಶ್ರೀಜಗದ್ಗುರುಗಳವರ ಭಾವಚಿತ್ರಕ್ಕೆ ಮೋಡಪೋಪಚಾರ ಪೂಜಾದಿಗಳು ನೆರವೇರಿದ ಮೇಲೆ ಅನ್ನಸಂತರ್ಪಣೆಯು ನಡೆಯಿತು ಸಾಯಂಕಾಲ ೫ ಘಂಟೆಗೆ ಶ್ರೀವೀರತಪಸ್ವಿಗಳು ಶ್ರೀಮದ್ವಲಿಂಗ ಜಗದ್ಗುರುಗಳವರ ಅನ್ನತ ಮಹಿಮೆಗಳನ್ನು ಸಭಿಕರಿಗೆ ಬೋಧಿಸಿ ಸರ್ವರನ್ನೂ ಸಂತೋಷಭರಿತ ರನ್ನಾಗಿ ಮಾಡಿದರು ಸುಮಂಗಲೆಯರು ಮಂಗಳಗೀತೆ ಗಳನ್ನು ಪಾಡಿದ ಮೇಲೆ ಕಾರ್ಯವು ಸಮಾಪ್ತಿಗೊಂಡಿತು

ಗುರುಭಕ್ತ
ಅಮರೇಶ್ವರಗೌಡ, ಇಟಗಿ

ಶ್ರೀಸಿದ್ಧಾಶ್ರಾಧ್ಯರಥೋತ್ಸವ, ಕಾಶೀಕ್ಷೇತ್ರ

ಕಾಶೀ ಶ್ರೀಜಗದ್ಗುರು ಸ್ವಾಮಿಸಿಂಹಾಸನ ಮಹಾ ಮಠದಲ್ಲಿ ಮಹಾಶಿವರಾತ್ರಿಯ ಶುಭಸಮಯದಲ್ಲಿ ಪದ್ಮತಿಯಂತೆ ಶ್ರೀಜಗದ್ಗುರು ನಿಶ್ಚಾರಾಧ್ಯಭೃಗವಶ್ಚಾದರ ಜಯಂತೀಮಹೋತ್ಸವವು ಮಹಾವೈಭವದಿಂದ ಜರು ಗುವುದು ಕರ್ಣಾಟಕ, ಮಹಾರಾಷ್ಟ್ರ, ಆಂಧ್ರಾದಿ ಪ್ರದೇಶಗಳಿಂದ ಊಗಾಗಲೇ ಭಕ್ತಸಮೂಹವು ಒರತೊಡಿ ಗಿರುವುದು ಈ ಶುಭಸಂದರ್ಭದಲ್ಲಿ ಶ್ರೀಜಗದ್ಗುರು ಮಹಾಸನ್ನಿಧಿಯರ ಶಿವಪೂಜಾಮಹಾನ್ನ, ಶ್ರೀಜಗದ್ಗುರು ನಿಶ್ಚಾರಾಧ್ಯಮೂರ್ತಿಯ ಅಭಿಷೇಕ, ಮಹಾ ಪ್ರಸಾದ, ರಜತರಥೋತ್ಸವ, ಯಾತ್ರಿಕರ ಶಿವಲಿಂಗಾಚಾರ್ಯ ರ ಪ್ರಸಾದಸ್ವೀಕಾರಗಳೂ, ಮಹಾಸನ್ನಿಧಿಯವರ ದಿವ್ಯ ವಾದ ಉಪದೇಶ, ಪಂಡಿತರ ಸುಶ್ರಾವ್ಯಭಾಷಣ ಕೀರ್ತನ ಭಜನಾದಿಗಳೂ ನಿರವೆಸಲಿರುವವು ವೀರಶೈವಮಹಾಜನ ಗಳು ಇಂತಹ ಪವಿತ್ರಪ್ರಸಂಗದಲ್ಲಿ ಭಾಗವಹಿಸಿ ಶಿವ ಯಾತ್ರೆ, ಗುರುಯಾತ್ರೆಗಳ ಫಲವನ್ನು ಪಡೆದು ಶ್ರೀಜಗದ್ಗುರು ವಿಶ್ವಾರಾಧ್ಯರ ಕೃಪೆಗೆ ಪಾತ್ರರಾಗಬೇಕೆಂದು ಕೋರಿಕೆ

ಮ್ಯಾನೇಜರ್,
ರಾಮಚಂದ್ರಪ್ರಸಾದ,
ಜಂಗಮವಾಡಿ ಮಠ, ಕಾಶೀ

ಶ್ರೀಕೊಟ್ಟೂರೇಶ್ವರಸ್ವಾಮಿಯ ರಥೋತ್ಸವ ಕೊಟ್ಟೂರು

ಮಹಾಮಹಿಮತೀಲನಾದ ಶ್ರೀಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವವು ಇವೇ ಮಾಳೆ ಬಾ॥ ೧೦ ಮಂಗಳವಾರ ಮೂಲಾನಕ್ಷತ್ರ (ತಾ॥ 22-2 49) ರಲ್ಲಿ ಪದ್ಮತಿಪ್ರಕಾರ ಒಯ ವಿಜೃಂಭಣೆಯಿಂದ ನಡೆಯುತ್ತದೆ. ಪದ್ಮಕ್ಷರು ಆಗಮಿಸಿ ಕೃತಾರ್ಥರಾಗುವಂತೆ ಆಶಿಸುವ,

ಪ್ರಭುವಡೆಯರ ಮರದ ಮರುಳಾರಾಧ್ಯ,
ಕೊಟ್ಟೂರು

ನೌಕಾ ಶಿಕ್ಷಣ ಶಾಲೆ

ಭಾರತದ ನೌಕಾ ದಳಕ್ಕೆ ನೇಂದಂತೆ ನೌಕಾ ಶಿಕ್ಷಣ ಶಾಲೆಯೊಂದನ್ನು ಸ್ಥಾಪಿಸಲು ಮೈಸೂರು ಕೃಷ್ಣರಾಜ ಸಾಗರ ಆಣೆಕಟ್ಟಿನ ಒಳ ೩೦೦ ಎಕರೆ ಪ್ರದೇಶವನ್ನು ಭಾರತ ಸರಕಾರಕ್ಕೆ ಬಿಟ್ಟುಕೊಡಲು ಮೈಸೂರು ಸರಕಾರ ದವರು ಸಮ್ಮತಿಸಿದ್ದಾರೆ ಭಾರತ ನೌಕಾ ದಳದ ದಂಡ ನಾಯಕರಾದ ವೈಸ್ ಅಡ್ಮಿರಲ್ ಸ್ಯಾರಿಯವರು ಮೈಸೂ ರಿನ ಗೃಹಸಚಿವರಾದ ಶ್ರೀ ಟಿ ಮರಿಯಪ್ಪನವರೊಡನೆ ಕೃಷ್ಣರಾಜಸಾಗರಕ್ಕೆ ತೆರಳಿ, ಎರಡು ಗಂಟೆಗಳ ಕಾಲ ಸ್ಥಳ ಪರೀಕ್ಷಣೆ ನಡೆಸಿದರು ಉಂಡವಾಡಿ ಎಂಬ ಹಳ್ಳಿಯ ಬಳಿ ಈ ಶಾಲೆಯನ್ನು ಸ್ಥಾಪಿಸುವುದಾಗಿ ತಿಳಿದುಬಂದಿದೆ

ಸ್ವೀಕಾರ

ಧಾರವಾಡ ದಿ॥ ಗದಗ ಸಿಟಿಯಲ್ಲಿರುವ ಶ್ರೀಮಂತ ಫಕೀರಪ್ಪನವರು ಅಬ್ಬಿಗೇರಿ ಇವರ ಪುತ್ರ ಚಿ॥ ಕರಬಸ ಪ್ಪನವರಿಗೆ ಗದಗ ಬೆಟಗೇರಿಯಲ್ಲಿರುವ ಗುರುಭಕ್ತ ಶಿಖಾಮಣಿ ಶ್ರೀಮಂತ ಸಂಗನ ಬಸಪ್ಪನವರು ಬೇಲೇರಿ ಇವರ ಪುತ್ರಿ ಚಿ॥ ಸೌ॥ ಶಾಂತಾದೇವಿಯನ್ನು ಕೊಟ್ಟು ತಾ॥ ೨-೨ 49 ನೇ ದಿವಸ ನಿಶ್ಚಯ. ಕಾರ್ಯವನ್ನು ನೆರವೇರಿಸಿದ ಸಮಯದಲ್ಲಿ ಶ್ರೀಮಂತ ಅಬ್ಬಿಗೇರಿ ಬಸಪ್ಪ ನವರು ಪ್ರಭಾವೋಪಣಕ್ಕೋಸ್ಕರ ಸಮರ್ಪಿಸಿದ **2** ರೂ. ಗಳು ವೇ॥ ಬಸಯ್ಯ ಹಿರೇಮಠ ಗದಗ ಬೆಟಗೇರಿ ಇವರ ದ್ವಾರಾ ತಲಪಿರುತ್ತವೆ.

ಧಾರವಾಡ ದಿ॥ ಹಾನೇರಿ ತಾ॥ ಕಬ್ಬೂರು ಗ್ರಾಮ ದಲ್ಲಿರುವ ವೇ॥ ನೀರಯ್ಯಸ್ವಾಮಿ ಪಾಟೀಲ್ ಇವರು ಶಿವಾಧೀನರಾಗಿ ನಿಮಿತ್ತ ಇವರ ಪುತ್ರರಾದ ಶ್ರೀಮಾನ್ ಪಾಟೀಲ ಶಿರುಕನಗೌಡರು ತಾ॥ 1-2-49 ನೇ ದಿವಸ ಗಣಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ **1-4-0** ರೂ. ಯು ವೇ॥ ವೀರಭದ್ರಯ್ಯನವರು ಹೊಸಮಠ ಇವರ ದ್ವಾರಾ ತಲುಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೀವೆ

ಕಾಮಿನೀಕಾಂಚನಮೋಹ ತ್ಯಾಗಿ ಮೇ ನಿಜವಾದ ಯೆ ೞಿಗಿಯು !

——

ಲೇ —ಮಲ್ಲಿಕಾರ್ಜುನಾರಾಧ್ಯ ರಾಜೇಸನ್ನೂರು ಮಳೇಮರ, ಮುಡೇಸೂರು

ನೇಛಾ ದ್ವೇಛಾ ಭ್ರಮಂ ಚಿಕ್ಕೇ ಕಾಂತಾಸು ಅನಿಕೇಸು ಚ !
ತಾಸು ತೇಸ್ವನ್ಯನಾಸ್ಕಂ: ಸಾ ತ್ಯಾಜ್ಯಗೋ ನಂಸ್ಕೃತಿ: ॥

ಸೃಷ್ಟಿಕರ್ತನಾದ ಬ್ರಹ್ಮನು ಕಾಮಿನಿ ಮತ್ತು ಕಾಂಚನ ಎಂಬ ಎರಡು ವಸ್ತುಗಳಲ್ಲಿ ಮೋಹನಶ್ಟಿಯಿರುವನು ಈ ಎರಡು ವಸ್ತುಗಳಲ್ಲಿ ಯಾರು ಮೋಹವನ್ನು ಹುಡುದಿಲ್ಲವೆ? ಆವರೇ ಪ್ರತ್ಯಕ್ಷಶಿವನೆಂದು ಮೇಲಿನ ಶ್ಲೋಕದ ಅಭಿಪ್ರಾಯವಾಗಿರುವುದು ಈ ಜಗತ್ತಿನಲ್ಲಿ ಕಾಮಿನಿಯರಿಗೂ ಕಾಂಚನಕ್ಕೂ ಬಲಿಬೀಳದ ಜನರು ಬಹು ವಿರಳ! ಈ ಎರಡು ವಸ್ತುಗಳಿಗೆ ಬಲಿಬೀಳದವರು ಸೃಷ್ಟಿಕರ್ತನಾದ ಬ್ರಹ್ಮನ ನಿಯಮವನ್ನು ಉಲ್ಲಂಗಿಸಿದವರಾದುದರಿಂದ ಶಾಸ್ತ್ರಕಾರರು ಅಂತಹ ಮಹಾತ್ಮರನ್ನು ಪ್ರತ್ಯಕ್ಷಶಿವನೆಂದು ಕರೆದಿರುತ್ತಾರೆ ಪೂರ್ವಕಾಲದಲ್ಲಿ ಇಂತಹ ಜನರು ಲಕ್ಷಕ್ಕೊಬ್ಬರೂ ದೊರೆಯುತ್ತಿದ್ದರು ಈ ಕಾಲದಲ್ಲಿ ಕೋಟಿಗೊಬ್ಬರಾದರೂ ದೊರೆಯುವುದೋ ಇಲ್ಲವೋ ಎಂಬುದು ಸಂದೇಹಾಸ್ಪದವಾಗಿದೆ ಈ ಕಾಲದಲ್ಲಿ ಕಾಮಾಯ ವೇಷಧರಿಸಿದವರೆಲ್ಲ ಕಪಟಿಗಳೇ ಹೆಚ್ಚಾಗಿ ದೊರೆಯುತ್ತಾರೆ ಈ ಕಪಟಿಗಳ ವೇಷಬಾಹ್ಯಗಳನ್ನು ನೋಡಿ ಜನರು ಮರುಳಾಗಿಬಿಡುತ್ತಾರೆ ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಇವರ ಕೃತಿಗಳು ಬಹು ಹೇಯವಾಗಿರುತ್ತವೆ ಸಮಸ್ತ ಪರಿತ್ಯಾಗವಾದ ಕಾಮಾಯ ವಸ್ತ್ರವನ್ನು ಧರಿಸಿದ ಮೇಲೆ ತಾವು ಯಾವ ರೀತಿ ಇರಬೇಕೆ ಒಂದಿಷ್ಟೂ ಇವರಿಗಾರಿವು ಇರುವುದಿಲ್ಲ ಮುಗ್ಧಜನರನ್ನು ವಂಚಿಸುವುದಕ್ಕೋಸ್ಕರ ಮೇಲಿಂದ ಮೇಲೆ ಕಳ್ಳವ್ಯಾಪಾರವನ್ನು ಮಾಡುತ್ತಾರೆ ಮತ್ತು ಜನರಿಂದ ಪುಕ್ಕಳಾಸಕ್ತಿಯನ್ನು ಪಡೆಯುತ್ತಾರೆ ಸಮಾ ಧ್ರುವ್ಯದ ವ್ಯಾಮೋಹವಿಲ್ಲಿಯೇ ಮುಳುಗಿ ಯಾರಿಂದ ಯಾವ ರೀತಿ ಧನಸಂಗ್ರಹ ಮಾಡಬೇಕೆಂಬ ಯೋಚನೆಯಲ್ಲಿಯೇ ಮುಗ್ನರಾಗಿರುತ್ತಾರೆ ಈ ರೀತಿ ಸಂಗ್ರಹವಾದ ಧನವನ್ನು ಬಗೆಬಗೆಯಾದ ವಸ್ತ್ರಾಭರಣಗಳಿಗೆ ಉಪಯೋಗಿಸಿ ಜೈಸಿನಿಮೊಡುತ್ತ ದುರ್ವಿನಿಯೋಗ ಸೂಪಾಡುತ್ತಿರುವರು ಕಪಟತನದಿಂದ ಪರಸ್ತ್ರೀಯರನ್ನು "ತಾಯಿ" ಎಂದು ಕರೆಯುತ್ತ ವಿಷಯಲೋಲರಾಗುತ್ತಿರುವರು ಜಕರು ಇವರ ನೈಜಸ್ವರೂಪವನ್ನು ತಿಳಿಯದೆ ನೋಸಹೋಗುತ್ತಿರುವುದು ಬಹು ವಿಷಾದಕರ ಪಾಗಿದೆ ತಮ್ಮ ಆಶ್ರಮಧರ್ಮದಿಂದ ಭ್ರಷ್ಟರಾಗಿ ಪರಸ್ತ್ರೀಯರಲ್ಲಿ ಗುಪ್ತವಾಗಿ ಲೋಲಾಸಕ್ತಿರಿವ ಈ ಕಪಟಿಗಳಿಂಗಿಂತಲೂ ವಿಕಸಿತಶ್ವೇತ್ರವಸ್ತ್ರಾದಿ ಗೃಹಸ್ಥರೇ ಸಾವಿರಪಟ್ಟು ಮೇಲೆಂಯ ಸಾರಿಸಾರಿ ಹೇಳಬಹುದಾಗಿದೆ ಶಂಕರನ ವೇಸವಾದ ಕಾಷಾಯಾಂಬರವನ್ನು ಧರಿಸಿದ ಮೇಲೆ ಸಾಕ್ಷಾತ್ ಶಂಕರನಂತೆಯೇ ಇರಬೇಕು ತಮ್ಮಲ್ಲಿ ಇಂದ್ರಿಯ-ನಿಗ್ರಹವನ್ನು ಮಾಡುವ ಶಕ್ತಿಯಿಲ್ಲದಿದ್ದರೆ ತನ್ನ ಆಶ್ರಮಕ್ಕೆ ಜಲಾಂಜಲಿಯನ್ನು ಕೊಟ್ಟು ಗೃಹಸ್ಥಾಶ್ರಮಿಗಳಾಗುವುದು ಸರ್ವೋತ್ತಮವು! "ಬಾಲೆಯರ ಸಿಂಗಾರವ ಕಂಡು ಮನಸೋಲದಾತನೆ ಏರತೆನು" ಎಂಬ ನಿಜಗುಣರ ವಾಕ್ಯದಂತೆ ಸುರಸುಂದರಿಯರು ಬಂದು ಮೇಲೆ ಬಿದ್ದರೂ ಯಾವನೆ ಮನಸ್ಸು ಚಲಿಸುವದಿಲ್ಲವೋ ಅವನೇ ನಿಜವಾದ ಯೋಗಿ! ಅವನೇ ನಿಜವಾದ ಜ್ಞಾನಿ! ಅವನೇ ನಿಜವಾದ ಗುರು! ಅವನೇ ನಿಜವಾದ ಮಹಾಪುರುಶ! ಇಂತಹ ಮಹಾಪುರುಷರನ್ನು ಸೇವಿಸಿದರೆ ಗೃಹಸ್ಥಾಶ್ರಮಿಗಳು ಉದ್ಧಾರವಾಗುವರು ಇಂಥವರನ್ನು ಬಿಟ್ಟು ಕಪಟಿಗಳ ನೋಸಕ್ಕೆ ಒಳಗಾದರೆ ಹಣವೂ ನಷ್ಟವಾಗುವುದಲ್ಲದೆ ಪಾಪವೂ ಸಂಘಟಿಸುವುದು ಪೂರ್ವಕಾಲದಲ್ಲಿ ಕಾಸಾಯಾಂಬರ ಧಾರಿಗಳು ಎಂತಹ ಜಿತೇಂದ್ರಿಯರಾಗಿದ್ದರೆಂಬ ಬಗ್ಗೆ ಒಂದು ಪ್ರಸಿದ್ಧವಾದ ಇತಿಹಾಸವಿರುವುದು ಆ ಇತಿಹಾಸವನ್ನು ಈ ಕಾಲದ ಸ್ವಾಮಿಗಳೂಬವರು ಓದಿ ನೋಡಿ ಅದರಂತೆ ನಡೆದರೆ ಇವರ ಜನ್ಮವು ಸಾರ್ಥಕವಾಗುವದು ಆ ಕಥೆಯನ್ನು ಈ ಕೆಳಗೆ ವಿವರಿಸಲಾಗಿದೆ

ಪೂರ್ವಕಾಲದಲ್ಲಿ ಮಥುರಾನಗರದಲ್ಲಿ ವಾಸವದತ್ತೆ ಯೆಂಬ ಲೋಕೋತ್ತರ ಸುಂದರಿಯಾದ ಗಾರಾಂಗನೆಯು ವಾಸವಾಗಿದ್ದಳು ಆಕೆಯ ಅದ್ವಿತೀಯ ರೂಪವನ್ನು ನೋಡುವುದಕ್ಕಾಗಿ ದೂರದೂರ ದೇಶಗಳಿಂದ ತರುಣರು ಬರುತ್ತಿದ್ದರು ವಿಲಾಸಿಯರಾದ ರಾಜರೂ ಸರದಾರರೂ ವಾಸವದತ್ತೆಯ ದಾಸರಾಗುತ್ತಿದ್ದರು ಶ್ರೀಮಂತರು ನೀರಿನಂತೆ ಧನವನ್ನು ವೆಚ್ಚಮಾಡಿದರೂ ಸಹ ಆವರಿಗೆ ಅವಳ ದರ್ಶನವೇ ದುರ್ಲಬವಾಗಿತ್ತು ಅವಳು ಬೀದಿಯಲ್ಲಿ ಹೊರಟೆಂದರೆ ತರುಣರೂ, ವೃದ್ಧರೂ ಪರವಶರಾಗಿ ಎವೆಯಿಕ್ಕದೆ ಮರುಳರಂತೆ ನೋಡುತ್ತ ನಿಂತುಕೊಳ್ಳುತ್ತಿದ್ದರು ವಿಲಾಸವೇ ಜೀವ ಪಾಪಮಯವಾದ ಜೀವನದ ಮಾಸಾನ್ವೇಷಣಾರಿದ್ದು ವಿಷಯಸುಖದಲ್ಲಿಯೇ ಅವಳ ಜೀವಿತಕಾಲವೆಲ್ಲವೂ ಕಳೆದು ಹೋಗುತ್ತಲಿತ್ತು

ವಾಸವದತ್ತೆಯು ಒಂದು ದಿನ ಶಿವದೇವನೆಂಬ ವೈದ ತೆಸಿಸ್ಯನು ರಾಜಮಾರ್ಗ ದಲ್ಲಿ ಹೋಗುತ್ತಿದ್ದುದನ್ನು ನೋಡಿದಳು ವಿವದೇವನ ಸನಯ್ಯನವನಿಂದ ಕೂಡಿ ತಿಪ್ಪೂವ ವ ಪ ಗ ಪ ಪ ಪ ಪ್ರಕಾಶಿಸುತ್ತಿದ್ದನು ಈ ಸ ವ ಗ ಗ ಗ ಗ ಸಂಗಡಿ ವಾಸವದತ್ತೆಯು ಹಡುವ ವಿವಿಧ ಪ್ರಕಾರಗಳನ್ನು ಪ್ರಜ್ಞಾಲಸಲಾರಳಾಗಿ ಅವಳ ಮನಸ್ಸಿನ ಲವು ಪ್ರಬಲ ತೆಯಿಂದ ಅವನನ್ನು ಆಹ್ವಾನಿಸಿದಳು ಆದರೆ ಶಿವದೇವನು ಎಲ್ಲವನ್ನೂ ತಿರಸ್ಕರಿಸಿದನು ಆದರೆ ಶಿವದೇವನ ಸಮಸ್ತ ಪರಿವಾರವು ಇದ್ದ ಕಡೆಗೆ ಬಂದು ಅವನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಅವನ ಆಜ್ಞೆಯನ್ನು ಪಡೆದು ಹಿಂತಿರುಗಿ ಹೋದರು ಆದರೆ ವಾಸವದತ್ತೆಯು ಪಟ್ಟಣ ಸೇರಿದ ಬಳಿಕ ಶಿವದೇವನಿಲ್ಲದೆ ಅವಳಿಗೆ ಯಾವುದೂ ಸಂತೋಷವನ್ನು ಕೊಡಲಿಲ್ಲ ಅವಳ ಮನಸ್ಸು ಶಿವದೇವನಲ್ಲಿಗೆ ಬಂದು ತನ್ನ ಒಡತಿಯ ಮನೋಭಾವನೆಯನ್ನು ಮುಂದಾಸದಿಂದ ಅರಿಕೆಮಾಡಿಕೊಂಡಳು

ಮಹಾತಪಸ್ವಿಯಾದ ಆತ್ಮಸಂಯಮಿಯೂ ಶುದ್ಧ ಬ್ರಹ್ಮಚಾರಿಯೂ ಆದ ಶಿವದೇವನು ವಾಸವದತ್ತೆಯ ಪ್ರಾರ್ಥನೆಯನ್ನು ಗಂಭೀರಭಾವದಿಂದ ಕೇಳಿ, ಎಲೆ ಪ್ರಿಯ ಸೋದರಿ! 'ವಾಸವದತ್ತೆಯ ಆಮಂತ್ರಣವನ್ನು ಸ್ವೀಕರಿಸುವುದಕ್ಕೆ ನಮಗೆ ನನಗೆ ಶಕ್ತಿಯಿಲ್ಲ ಸಮಯವು ಪ್ರಾಪ್ತವಾದೊಡನೆಯೇ ನಮಗೆ ಒಳಿಗೆ ಬರುವೆನ " ಎಂದು ಹೇಳಿಕಳುಹಿಸಿದನು ಇದನ್ನು ಕೇಳಿ ಅವಳ ದಾರುಣಹೃದಯವು ಮತ್ತೆನ್ನು ಂದಿಶ್ಚಿತ್ತ ವಾಯಿತು ಅವಳ ಮನಸ್ಸು ಸಮಯವನ್ನು ನೀರೀಕ್ಷಿಸ ಲಾರಂಭಿಸಿತು ಆದರೂ ತಡೆಯದೆ ಅವಳು ದಾಸಿಯನ್ನು ಆ ಪ್ರೇಮಮೂರ್ತಿಯ ಬಳಿಗೆ ಪದೇಪದೇ ಪ್ರಣಯಭಿಕ್ಷೆಗಾಗಿ ಕಳುಹಲಾರಂಭಿಸಿದಳು ಆದರೆ ಶಿವದೇವನು ಅವಳ ಆಮಂತ್ರಣವನ್ನು ಒಂದು ಸಾರಿಯೂ ಅಂಗೀಕಾರ ಮಾಡಲಿಲ್ಲವು

ಒಂದು ದಿನ ಇವಳು ಸ್ನರಶರಪೀಡಿತಳಾಗಿ, ದಿವ್ಯ ಪಟ್ಟುಪೀತಾಂಬರಗಳನ್ನುಟ್ಟು ಗಂಧಪುಷ್ಪಾಲಂಕಾರಭರಣಗಳಿಂ ದಲಂಕೃತಳಾಗಿ ಆನಿದ್ದ ಸ್ಥಳಕ್ಕೆ ಹೋಗಿ ನಮಸ್ಕಾರಮಾಡಿ "ಸ್ವಾಮಿ! ನೀವು ಇಂದು ಬಂದಾರು, ನಾಳೆ ಬಂದಾರೆಂಬ ಭರವಸೆಯಿಂದ ಇಂದಿನ ವರೆಗೆ ಕಶ್ಟದಿಂದ ಕಾಲವನ್ನು ಕಳೆದೆನು. ಈ ದಿನ ತಡೆಯಲಾರದೆ ನಾನೇ ಬರಬೇಕಾಯಿತು ಕಾಮುಕೀಡಿತಳಾಗಿರುವ ನನ್ನನ್ನು ತಿರಸ್ಕಾರಮಾಡದೆ ಅಂಗೀಕಾರಮಾಡಬೇಕು ಇನ್ನು ನಾನು ತಡೆಯಲಾರೆನು ವಿರಹತಾಪಾಗ್ನಿ ಜ್ವಾಲೆಯು ನನ್ನ ದೇಹವನ್ನು ದಹಿಸಪತ್ತಿದೆ ಆದ ಪ್ರಯುಕ್ತತಡಮಾಡದೆ ತಮ್ಮ ಅಂಗಸಂಗದಿಂದ ನನ್ನನ್ನು ತಣ್ಣಗೊಳಿಸಬೇಕೆಂದು" ಅಂಗಲಾಚಿ ಬೇಡಿಕೊಂಡಳು ಆದರೆ ವೈರಾಗ್ಯಶಿರೋಮಣಿಯಾದ ಆತನ ಹೃದಯವು ಕಲುಷಿತವಾಗಲಿಲ್ಲ ಅವಳ ಅತ್ಯಾಲಾಪನೆಗಳೆಲ್ಲವೂ ವೃಥಾವಾದವು ಆವಳು ಅಲ್ಲಿಗೂ ಸುಮ್ಮನಾಗದೆ ಧನಾಶೆಯನ್ನು ತೋರಿಸಿದರೆ ಕದಾಚಿತ್ ಸಮ್ಮತಿಸ ಬಹುದೆಂಬ ಭ್ರಾಂತಿಯಿಂದ "ಸ್ವಾಮಿ, ಇಂದು ನನ್ನ ಮನೋರಥವನ್ನು ಪೂರ್ತಿಮಾಡುವದಾದರೆ ಹತ್ತುಸಹಸ್ರರೂಪಾಯಿಗಳನ್ನು ಕೊಡುವೆನು" ಎಂದು ನುಡಿದಳು ಕಾಮುಕೀ ಕಾಂಚೆಗಳನ್ನು ಕಾಣ್ಮಲೋಕ್ಕೆ ಗೆಯಂತೆ ಭಾವಿಸಿದ್ದ ಆ ಮಹಾಯೋಗಿಯು ಅದಕ್ಕೆ ಮನಗೊಡಲಿಲ್ಲ ಆಗಲಾ ಚಂಚಲಾಕ್ಷಿಯು ತಾನಾಗಿ ಒಲಿದುಬಂದ ನನ್ನಂಥ ಸುಂದರಾಂಗನೆಯ ಅಂಗಸಂಗ ಸುಖವನ್ನು ಅನುಭವಿಸದ ನಿನ್ನ ಪುರುಷ ಜನ್ಮವು ವೃಥಾವೆಂದು ಹೀಯಾಳಿಸಿ ಮಾತನಾಡಿದಳು ಆಗಲೂ ಪ್ರಯೋಜನವಾಗಲಿಲ್ಲ ಅವಳ ಚತುರೋಪಾಯಗಳೆಲ್ಲವೂ ವೃಥಾವಾದವು ಶಿವದೇವನು ಎಲ್ಲವನ್ನೂ ಶಾಂತಿಯಿಂದ ನೋಡಿ, ಕೇಳಿ "ಒಳ್ಳೆಯದು, ಆಗಲಿ! ಸಮಯವು ಬರಲಿ ಅವಶ್ಯವಾಗಿ ಬರುವೆನು" ಎಂದು ಉತ್ತರವಿತ್ತನು ಆಗಲೂ ಆವಳು ನಿರಾಶಳಾಗದೆ ಇಂದಿಲ್ಲಿ ದಿದ್ದರೂ ಎಂದಾದರೊಂದುದಿನ ನನ್ನ ಮೋಹಜಾಲದಲ್ಲಿ ಬಂಧಿಸಿ ಆ ಮಹೋಪಾಸಕಮೂರ್ತಿಯ ಅಂಗಸಂಗಸುಖ ವನ್ನು ಹೊಂದೇನೆಂಬ ಆಶಾಪಾಶದಿಂದ ಮನೆಗೆ ಹೋದಳು ಸದಾ ಆ ಪ್ರೇಮಮೂರ್ತಿಯನ್ನು ಸ್ಮರಿಸುತ್ತ ಹಾಗೂ ಹೀಗೂ ಕಾಲಹರಣಮಾಡಹತ್ತಿದಳು.

ಈ ಪ್ರಕಾರ ಕೆಲವು ಮಾಸಗಳು ಕಳೆದವು ಒಂದು ದಿನ ವಾಸವದತ್ತೆಯು ಧನಲೋಭದಿಂದ ತನ್ನ ವಿಟ ಗಾರರಲ್ಲಿ ಧನಾಢ್ಯನಾದವನೊಬ್ಬನನ್ನು ಗುರ್ತುಗಿ ಸಂಜೆ ರಿಸಿ ಅವನ ತಂಟಲೆಶ್ವರ್ಯವನ್ನು ಅಪಹರಿಸಿದಳು ಆದರೆ ಆವಳ ಪಾಪಕಾರ್ಯವು ಬಹುಕಾಲ ಮುಚ್ಚಲಿಲ್ಲ ಕೆಲವು ದಿನಗಳಲ್ಲೇ ರಹಸ್ಯವು ಬಹಿರಂಗವಾಯಿತು ತಕ್ಷ ಣದಲೇ ರಾಜಕೀಯ ವಿಚಾರಣೆಯು ನಡೆಯು ಆವಳಿಗೆ ವ ರಣದಂಡನೆಯು ತಿಕ್ಷೆಯು ವಿಧಿಸಲ್ಪಟ್ಟಿತು ಆ ನಾ ವರ ಶಾಲಿನಿಯು ಅಂಗಸ್ಪರ್ಶಗಳನ್ನೆಲ್ಲ ಕತ್ತರಿಸಿ ಬಿಸಿ ಎಂತೆ ನ್ಯಾಯಾಧಿಪತಿಯು ಆಜ್ಞೆ ಮಾಡಿದನು ಆದರಂತೆ ರಾಜದೂತರು ಆವಳನ್ನೆಳೆದುಕೊಂಡು ಹೋಗಿ ಆವಳ ಹಸ್ತ ಪಾದಗಳನ್ನು ಛೇದಿಸುವ ಸನುಯದಲ್ಲಿ ಆ ಸ್ಥಾನಾಲಾಧಿಮಯನಾದ ಶಿವದೇವನು ಆ ವಧ್ಯ ಸ್ಥಾನವ ಕಡೆಗೆ ಬರುತ್ತಿದ್ದನು ಇಂತಹ ಪರಿಸ್ಥಿತಿ ಯಲ್ಲಿಯೂ ಸಹ ಅವಳು ಆ ಮುನಿಶ್ರೇಸರಮೂರ್ತಿ ಯನ್ನು ಮರೆಯಲಿಲ್ಲ ಅವಳ ಹೃದಯವೇದಿಕೆಯಲ್ಲಿ ಶಿವದೇವನ ಪ್ರಣಯಪ್ರತಿಮೆಯು ಪ್ರತಿಷ್ಠಿತವಾಗಿದ್ದಿತು ಶಿವದೇವನು ಬರುತ್ತಿರುವುದನ್ನು ನೋಡಿ, ಅವಳ ಸಂತೋಸವು ಉಕ್ಕೇರಿತು ಪೌರ್ವಸ್ಮೃತಿಯು ಮೆಲ್ಲ ಮೆಲ್ಲನೆ ಪ್ರಸ್ಫುರಿತವಾಯಿತು ಆಗಲವಳು ಪಾಸುದರನ್ನು ಕುರಿತು, ಓಹೋ! ನಪ್ಪ ಆರಾಧ್ಯದೇವನು ಇತ್ತಕಡೆಗೆ ಬರುತ್ತಿರುವನು ಆದಕಾರಣ ನೀವು ಅತಿ ತ್ವರೆಯಿಂದ ನನ್ನ ಛಿನ್ನಭಿನ್ನವಾದ ಹಸ್ತಪಾದಗಳನ್ನು ವಸ್ತ್ರದಿಂದ ಆಚ್ಛಾದಿಸಿ ಬಿಡಿರಿ" ಎಂದು ನುಡಿದಳು ದಾಸಿಯರು ಆದರಂತೆ ಮಾಡಿದರು ಆಸ್ಪರಲ್ಲೇ ಶಿವ ದೇವನು ವಾಸವದತ್ತೆಯ ಸಮ್ಮುಖದಲ್ಲಿ ಬಂದು ನಿಂತನು

ಆಗಲಾ ವಾಸವದತ್ತೆಯು ಶಿವದೇವನ ಕಡೆಗೆ ಅನು ರಾಗಪೂರಿತವಾದ ದೃಷ್ಟಿಯಿಟ್ಟು ಬೇರಿಂದು ಅವಳ ಸಂಕೀರ್ಣವಾದ ಹೃದಯವು ಪ್ರೇಮಾನಂದದಿಂದಲೂ ಆಸಕ್ತಿಯಿಂದಲೂ ಪರಿಪೂರ್ಣವಾಗಿದ್ದಿತು ಅವಳು ಮಹಾಪ್ರೇಮದೊಡನೆ ಕುಗ್ಗಿದ ಸ್ವರದಿಂದ ಶಿವದೇವ ನನ್ನ ಸಂಜೋಧಿಸಿ, "ಎಲೈ ಪ್ರಿಯನೇ, ಯಾವಾಗ ನನ್ನೀ ಶರೀರವು ಹದ್ಮಪುಷ್ಪದ ಹಾಗೆ ಪರಿಮಳಯುಕ್ತ ವಾಗಿದ್ದಿತೋ, ಮುಕ್ತ ರತ್ನೆ ವಜ್ರವೈಡೂರ್ಯ ಗಳಿಂದ ಮಂಡಿತವಾಗಿದ್ದಿತೋ, ಆಗ ನಾನು ನಿನಗೆ ನನ್ನ ಅಶ್ಲಕ್ಕಿಸಮವಾದ ಪ್ರೇಮವನ್ನು ಅಪಾರಾಶರವಾಗಿ ಅರ್ಪಿಸಿದ್ದೆನು. ಈಗ ನನ್ನ ದೇಹದಲ್ಲಿ ಹಸ್ತವಿಲ್ಲ, ಪಾದವಿಲ್ಲ, ಸುಂದರವಾದ ದೇಹವು ರಕ್ತದಿಂದ ಕಲುಷಿತವಾಗಿದೆ ಈಗ ನಿನಗೆ ಇದರಿಂದಾವ ಪ್ರಯೋಜನ ?" ಎಂದು ನೊಂದನುನಯಿಂದ ನುಡಿದಳು.

ಅದಕ್ಕೆ ಪ್ರತ್ಯುತ್ತರವಾಗಿ ಶಿವದೇವನು ಪ್ರಶಾಂತ ವಾದ ವದನದಿಂದ " ಎಲೌ ವಾಸವದತ್ತೆಯೇ! ನಶ್ವರ ವಾದ ಸುಖಾಪೇಕ್ಷೆಯಿಂದಾಗಲಿ, ವಿಷ್ಯಾಮೋಹದ ಲೋಭದಿಂದಾಗಲಿ, ನಾನು ನಿನ್ನ ಸಮಿಾಪಕ್ಕೆ ಬಂದವ ನಲ್ಲ, ಶಾರೀರಕ ಸೌಂದರ್ಯವು ಕೇವಲ ತುಚ್ಛವಾದುದು.

ವಿಷಯವಾಸನೆಯೇ ನಿನ್ನೀ ವಿಪತ್ತಿಗೂ, ಅಸಹ್ಯವಾದ ಕಷ್ಟಕ್ಕೂ ಮುಖ್ಯ ಕಾರಣವು ನೀನು. ಮೋಹಪರವಶಳಾಗದೆ, ಸ್ತ್ರೀಜನ್ಮಕ್ಕೆ ಮುಖ್ಯವಾದ ಸದ್ಗುಣಗಳಿಂದ ವರ್ತಿಸಿದ್ದರೆ ನಿನಗೆ ಇಂತಹ ದುರ್ದೆಸೆಯುಬಾಗುತ್ತಿರಲಿಲ್ಲ! ನೀನು ಈ ಅಸಾರವಾದ ಸಂಸಾರದಲ್ಲಿ ಸಾರವಾದ ಸುಖವನ್ನ ನುಭವಿಸಬಹುದಾಗಿತ್ತು. ವಿಚಾರಿಸಿನೋಡು, ವಿಷಯತೃಷ್ಣೆಯೇ ನಿನ್ನ ಸಕಲಾನರ್ಥಗಳಿಗೂ ಮೂಲವಾಯಿತು ಈಗಲಾದರೂ ಸ್ವಯಂಕೃತಾಪರಾಧಕ್ಕಾಗಿ ಪಶ್ಚಾತ್ತಾಪಪಡು ಮತ್ತು ಭವತಾರಕವಾದ ಶಿವಸ್ಮರಣೆಯನ್ನು ಮಾಡು" ಎಂದು ಹೊಧಿಸಿದನು ವಾಸವದತ್ತೆಯು ಶಿವದೇವನ ಸಾರಗರ್ಭಿತವಾದ ಉಪದೇಶವನ್ನು ಕೇಳಿ ಧನ್ಯಳಾದಳು ಆವಳ ಹೃದಯದಲ್ಲಿ ವಿವೇಕೋದಯವಾಯಿತು! ಆವಳ ಪಾಪಮಯ ಹೃದಯವು ಪಾವನನಾಯಿತು ಸಂಸಾರ ಸುಖದ ಆಸಾರತೆಯು ಸ್ಪಷ್ಟವಾಯಿತು ಆಗಲವಳು ಶಿವದೇವನನ್ನು ಕಂಡು— ಆಪದ್ಬಂಧುವಾದ ಮಹಾ ಗುರುವೇ! ತಮ್ಮ ಮಂಗಳಹೃದಯವನ್ನರಿಯದ ಮುಢಳಾದ ನಾನು ತಮ್ಮ ವಿಷಯದಲ್ಲಿ ಆಚರಿಸಿದ ಮಹಾಪರಾಧಕ್ಕಾಗಿ ಕ್ಷಮೆಯನ್ನು ಬೇಡುವೆನೆಂದು ಪ್ರಾರ್ಥಿಸಿ, ಶಿವನಾಮಸ್ಮರಣಾನಿರತಳಾಗಿ ಪರಲೋಕಕ್ಕೆ ಪ್ರಯಾಣಮಾಡಿದಳು.

ಆಹಾ! ಇದಲ್ಲನೇ ನಿಜವಾದ ಯೋಗಿಯ ಲಕ್ಷಣ? ಇಂತಹ ಮಹಿಶಿಯರೇ ಜಗದ್ವಂದ್ಯರು! ಜಗತ್ಪೂಜ್ಯರು ಇಂತಹ ಮಹಾನುಭಾವರಿದ್ದರೇ ಜಗತ್ತಿಗೆ ಕಲ್ಯಾಣವುಂಟಾಗುವುದು ಕಾಮಿನೀ ಕಾಂಚನಗಳಿಗೆ ನೋಡಿತರಾಗಿ ಜನತೆಯನ್ನು ನೇತಭ್ರಾಷ್ಟವಿಗೆ ಒಯ್ಯಲೂ ಕಲ್ಪಸ್ಸೆರಾಗ್ಯದ ಮಾತುಗಳಿಂದಲೂ ಮಂಚಿಸುತ್ತಿರುವ ಈ ಕಾಲದ ಕಾಷಾಯಾಂಬರಧಾರಿಗಳು ಮೇಲಲುಬಾಗಿರಿಸುವ ಶಿವದೇವ ತಪಸ್ವಿಯ ನಿಜವಾದ ವೈರಾಗ್ಯವನ್ನು ತನುಸರಿಸಿ ನಡೆದರೆ ತಮಗೂ ಕಲ್ಯಾಣವಾಗುವುದಲ್ಲದೆ ಜಗತ್ತಿಗೂ ಕಲ್ಯಾಣವನ್ನುಂಟುಮಾಡಿದಂತಾಗುವುದು ಪರಮೇಶ್ವರನು ಇವರಿಗೆ ಇಂತಹ ಸದ್ಬುದ್ಧಿಯನ್ನು ಅನುಗ್ರಹಿಸಲಿ!

ವರ್ತಮಾನಸಂಗ್ರಹ

ಸ್ಥಾಂತಗಳ ಗವರ್ನರುಗಳ ಸಂಬಳ

ಸ್ಥಾಂತೀಯ ಗವರ್ನರುಗಳಿಗೆ ೧೯೪೬ನೇ ಆಗಸ್ಟು ನಿಂದ ವರ್ಷಕ್ಕೆ ೬೬ ಸಾವಿರ ರೂ ಗಳ ಸಂಬಳವನ್ನು ಕೊಡಲಾಗುತ್ತಿದೆಯೆಂದು ಸರ್ಕಾರ ವಲ್ಲಭಬಾಯಿ ಪಟೇಲರು ಪಾರ್ಲಿಮೆಂಟಿನಲ್ಲಿ ಒಂದು ಪ್ರಶ್ನೆಗೆ ಉತ್ತರ ವಾಗಿ ತಿಳಿಸಿದರು

ದಿಲ್ಲಿಯಲ್ಲಿರುವ ರಾಜರ ಭವನಗಳನ್ನು ಕೇಂದ್ರ ಸರಕಾರವು ಕೊಳ್ಳಲಿದೆ

ಸಂಸ್ಥಾನಾದೀಶರ ದಿಲ್ಲಿಯ ಲ್ಲಿರುವ ಭವನಗಳನ್ನು, ಕೇಂದ್ರ ಸರಕಾರವು ಕೊಳ್ಳುವುದೆಂದೂ, ಸರ್ಕಾರಕ್ಕೆ ಹೊರತಾಗಿ ಯಾರಿಗೂ ಕೊಡುವಾದೆಂಬ ಬಗ್ಗೆ ಆನೇಕ ಮಸವಿ ಳುಬಿಸಿರುವುದಾಗಿಯೂ ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ಸರದಾರ್ ಪಟೇಲರು ತಿಳಿಸಿದರು

ನೂತನ ಕರೆನ್ಸಿ ನೋಟುಗಳು

ಭಾರತ ಸರ್ಕಾರದವರು ಹೊರಡಿಸಲಿರುವ ಹೊಸ ಕರೆನ್ಸಿ ನೋಟುಗಳಲ್ಲಿ ಇದುವರೆಗೂ ಇದ್ದ ಜಾರ್ಜ್ ದೊರೆಗಳ ಮುಖಚಿತ್ರದ ಬದಲು ಭಾರತ ರಾಷ್ಟ್ರದ ರಾಜಮುದ್ರೆಯಾದ ಆಶೋಕಸ್ತಂಭವನ್ನು ಮುದ್ರಿಸಲಾಗುವುದೆಂದು ತಿಳಿದು ಬಂದಿದೆ ಈ ವಿಷಯದಲ್ಲಿ ರಿಜರ್ವ್ ಬ್ಯಾಂಕ್ ಸಂಸ್ಥೆಯು ಒಪ್ಪಿಸಿರುವ ೨ ರೂ ೫ರೂ ೧೦೦ರೂ. ಕರೆನ್ಸಿ ನೋಟುಗಳ ಮಾದರಿಯನ್ನು ಭಾರತ ಸರ್ಕಾರವು ಆಂಗೀಕರಿಸಿದೆ

೨ರೂ ನ ನೋಟಿನಲ್ಲಿ ಹಿಂಭಾಗದಲ್ಲಿ ಹುಲಿಯ ತಲೆಯನ್ನು ಮುದ್ರಿಸಲಾಗುವುದೆಂದೂ, ೫ ರೂ.ನ ನೋಟು ಗಳಲ್ಲಿ ಮುಂಭಾಗದಲ್ಲಿ ಆಶೋಕಸ್ತಂಭವನ್ನೂ ಹಿಂಭಾಗದಲ್ಲಿ ಮೂರು ಜಿಂಕೆಗಳ ಚಿತ್ರವನ್ನೂ ಮುದ್ರಿಸಲಾಗುವುದೆಂದು ತಿಳಿದುಬಂದಿದೆ ೧೦೦ರೂ.ನ ನೋಟು ನೀಲಿ ಬಣ್ಣದ್ದಾಗಿದ್ದು ಅದರ ಹಿಂಭಾಗದಲ್ಲಿ ಎರಡು ಆಶೆಗಳ ತಲೆಗಳು ಮುದ್ರಿತವಾಗಿರುವುವು

ಆರ್. ಎಸ್. ಎಸ್. ಚಳವಳಿಯ ಬಗ್ಗೆ ಸರ್ದಾರ್ ಪಟೇಲರ ಹೇಳಿಕೆ

ಆರ್ ಎಸ್ ಎಸ್ ಚಳವಳಿಯ ಸಂಬಂಧದಲ್ಲಿ ಕೇಂದ್ರ ಸರ್ಕಾರದ ಆಡಳಿತಕ್ಕೆ ಒಳಗಾದ ವ್ಯಕ್ತಿಗಳಲ್ಲಿ ಒಟ್ಟು ೩೪೨೬ ಜನರು ದಸ್ತಗಿರಿ ಮಾಡಲ್ಪಟ್ಟರುವರು ಎಂದು ಸರ್ದಾರ್ ವಲ್ಲಭಭಾಯಿ ಪಟೇಲರು ಪಾರ್ಲಿಮೆಂಟಿನಲ್ಲಿ ತಿಳಿಸಿದರು ಆರ್ ಎಸ್ ಎಸ್ ಒಂದಿಗಳ ವಿರುದ್ಧ ಯಾವುದೇ ಆರೋಪವಾಗಲಿ ಆಥವಾ ಚಿತ್ರದ ಪ್ರಹಾರ ಮಾಡಲಿಲ್ಲವೆಂದು ಅವರು ಹೇಳಿದರು

ಮುಂದುವರೆದು ಆರ್ ಎಸ್ ಎಸ್ ಚಳವಳಿಯಲ್ಲಿ ಭಾಗವಹಿಸಿದ್ದ ಸರ್ಕಾರಿ ನೌಕರರನ್ನು ಆವರ ಕೆಲಸಗಳಿಂದ ವಜಾ ಮಾಡಲಾಗುವುದೆಂದೂ ಈ ಚಳವಳಿಯಲ್ಲಿ ಒಟ್ಟು ೯೭೦ ಜನ ಸರ್ಕಾರಿ ನೌಕರರು ಭಾಗವಹಿಸಿರುವರೆಂದೂ ಹೇಳಿದರು

ಹತ್ತಿಯ ಬಗ್ಗೆ ಹೇಳಿಕೆ

ದೇಶದಲ್ಲಿ ಹತ್ತಿಯ ಆಬಾವವು ಒಹಳವಾಗಿದೆ ಸರ್ವ ಜೇತಾನುಸ್ಸು ಹತ್ತಿಯನ್ನು ಇಲ್ಲಿಯೇ ಬೆಳೆಯಲು ಸಾಧ್ಯವಾಗಲಿ ಎಂಬ ಕಲ್ಪಿಸಿಕೊಡುವುದೇ ಭಾರತ ಸರ್ಕಾರದ ಪ ಮ ಗುರಿಯಾಗಿದೆ —ಎಂದು ಶ್ರೀ 'ಇಂಡಿಯಾ ಕಾಟ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್' ಸಂಸ್ಥೆಯ ಸಾಧಾಕ್ಷರಾದ ಸರ್ ವಾತಾರ್‌ಸಿಂಗ್‌ರವರು ಕೇಂದ್ರ ಹತ್ತಿಯ ಸಲಹಯಲ್ಲಿ ಅವ್ಯಕ್ತಭಾಷಣ ಮಾಡುತ್ತ ತಿಳಿಸಿದರು.

ಹತ್ತಿಯ ಬೆಳೆಯನ್ನು ಇನ್ನೂ ಚಛಿವೃದ್ಧಿಪಡಿಸಲು ಹತ್ತಿ ಬೆಳೆಯುವ ಪ್ರದೇಶಗಳ ಸರ್ವೆ ನಡೆಸಲಾಗಿದೆ ಯೆಂದೂ ಹತ್ತಿಯನ್ನು ಹೆಚ್ಚಾಗಿ ಬೆಳೆದು ನಾವು ಸ್ವಾವಲಂಬಿಗಳಾಗಿದ್ದರೆ ಪರಿಸ್ಥಿತಿ ಏಷಮಿಸುವುದು ಖಂಡಿತ ಎಂದೂ ಅವರು ತಿಳಿಸಿದರು

ಶ್ರೀ ಎಂ. ಶೇಷಾದ್ರಿಯವರಿಗೆ ಹೈದರಾಬಾದಿನ ಮಂತ್ರಿ ಪದವಿ

ಹೈದ್ರಾಬಾದಿನಲ್ಲಿ ಜನಾವಣೆ ಕಮಿಷನರನಾದ ಶ್ರೀ ಎಂ ಶೇಷಾದ್ರಿಯವರು ಹೈದ್ರಾಬಾದ್ ಮಂತ್ರಿಮಂಡಲದಲ್ಲಿ ವಿನಿಯೋಗ ಮಂತ್ರಿಗಳಾಗಿ ನೇಮಕ ಮಾಡಲ್ಪಟ್ಟಿದ್ದಾರೆಂದು ಹೈದ್ರಾಬಾದ್ ಸಂಸ್ಥಾನದಲ್ಲಿ ಭೂಸುಧಾರಣೆಯನ್ನು ಜಾರಿಗೆ ತರಲು ಪೂರ್ವ ಭಾವಿಯಾಗಿ ಈ ನೇಮಕಕಾಗಿದೆಯೆಂದು ತಿಳಿದುಬಂದಿದೆ

ನಿಜಾನುರ ಸರ್ಫ್-ಇ-ಖಾಸ್ ಸರ್ಕಾರದ ನಶೆ

ನೋ॥ ಜಾ॥ ಶ್ರೌಧುರಿಯವರ ಹೇಳಿಕೆ

ನಿಜಾನುರು 'ಸರ್ಫ್-ಇ-ಖಾಸ್' ಎಂಬ ತನ್ನ ಸ್ವಂತ ಆಸ್ತಿಯನ್ನು ಹೈದ್ರಾಬಾದ್ ಸರ್ಕಾರದ ವಶಕ್ಕೆ ಬಿಟ್ಟುಕೊಡಲು ಸಮ್ಮತಿ ಇತ್ತಿದ್ದಾರೆ—ಎಂದು ಹೈದ್ರಾಬಾದಿನ ಮಿಲಿಟರಿ ಗವರ್ನರರಾದ ಮೇ॥ ಜ॥ ಶ್ರೌಧುರಿಯವರು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ತಿಳಿಸಿರುವ ಈ ಬಗ್ಗೆ ನಿಜಾಮರು ಹೊರಡಿಸಿರುವ ಘೋಷಣೆಯೂ ಸಹ ಓದಿರುವ

"ನಿಜಾಮರೇ ಇಷ್ಟು ಉದಾರ ರೀತಿಯಲ್ಲಿ ಮಾರ್ಗ ತೋರಿಸಿರುವಾಗ ಉಳಿದ ಜಹಗೀರದಾರರು ಸಹ ತನ್ನು ಜಹಗೀರುಗಳನ್ನು ಸರ್ಕಾರಕ್ಕೆ ಒಪ್ಪಿಸುವುದು ಸೂಕ್ತವಾಗಿದೆ" ಎಂದು ಮಿಲಿಟರಿ ಗೌರ್ನರು ತಿಳಿಸಿದರು

ನಿಜಾಮರ ಸ್ವಂತ ಆಸ್ತಿಗೆ ೨ ಸಾವಿರ ಗ್ರಾಮಗಳು ಸೇರಿರುವು ಇವುಗಳ ಉತ್ಪನ್ನವು ೩ ಕೋಟಿ ರೂಪಾಯಿ ಇರುವುದು ನಿಜಾಮರ ಖರ್ಚಿಗಾಗಿ ಇನ್ನು ಮುಂದೆ ೧ ಕೋಟಿ ದೊರೆಯುವುದು ನಿಜಾಮರ ಆಸ್ತಿಯ ಸರಕಾರಕ್ಕೆ ತೀರಿದ ಮೇಲೆ, ಮಿಕ್ಕ ಜಹಗೀರದಾರರ ಆಸ್ತಿಯ ಬಗ್ಗೆ ಬೇರೆ ಹೇಳಬೇಕಾಗಿಯೇ ಇಲ್ಲ

ಹೈದ್ರಾಬಾದಿನ ಮಾಜಿ ಮಂತ್ರಿ ಮಿರ್ ಲಾಯಕ್ ಅಲಿಯವರು ಸುಖವಾಗಿದ್ದಾರಂತೆ!

ಈಳೆದ ಏದು ತಿಂಗಳಿಂದ ಬಂಧನದಲ್ಲಿರುವ ಹೈದರಾಬಾದಿನ ಮಾಜಿ ಮುಖ್ಯಮಂತ್ರಿಗಳಾದ ಮಿರ್ ಲಾಯಕ್ ಅಲಿಯವರು ಯುನೈಟೆಡ್ ಪ್ರೆಸ್ ಆಫ್ ಅಮೆರಿಕ ಪ್ರತಿನಿಧಿಗಿತ್ತ ಭೇಟಿಯಲ್ಲಿ ತಮ್ಮನ್ನು ಸರ್ಕಾರದವರು ಸರಯಾಗಿ ಕಾಣುತ್ತಿರುವರೆಂದೂ ಆರೋಗ್ಯವು ಸಮರ್ಪಕವಾಗಿಯೆಯೆಂದೂ, ತಾವು ರಾಜಕೀಯ ಜೀವನದ ಬಗ್ಗೆ ಯಾವ ಪ್ರಶ್ನೆಗಳನ್ನೂ ಬರೆಯುತ್ತಿಲ್ಲವೆಂದೂ, "ನಾನು ಒರಹಗಾರನಲ್ಲ, ಒಳ್ಳೆ ಇಂಜನಿಯರ್ " ಎಂದೂ, ಹೇಳಿದ ದರಂತೆ!

ಪ್ರತಿನಿಧಿಯು ಮಾತುಕತೆ ನಡೆಸಿದಾಗ ಅವರೊಡನೆ ಹೈದರಾಬಾದಿನ ಏ ಜಿ ಪಿ ಗಳಾದ ಮಿ॥ ಬಿ ಎಸ್. ಆಚ್ಲ್ಯುಯರು ಸಾಜಿದ್ದರು ಅಲಯಕ್ ಅಲಿಯವರನ್ನು ನಗರದ ಒಡಾಣಿಯಲ್ಲಿರುವ ಅವರ ಸ್ವಂತ ಸುಂದರವಾದ ಜವನವಲ್ಲಿಡಲಾಗಿದೆ ಆವರೊಡನೆ ಆವರ ಸಂಸಾರದವರು ಮತ್ತು ಸೇವಕರು ಇರುವರು

ಇವರ ಮೇಲಿರುವ ತೆಲಪು ಆರೋಪಣೆಗಳಲ್ಲಿ "ಸಂಸ್ಥಾನದ ಹಣವನ್ನು ದುರುಪಯೋಗಪಡಿಸಿರುವುದೂ ಇದೆ ವಿಚಾರಣೆಯು ಸ್ವಲ್ಪ ದಿವಸಗಳಲ್ಲಿಯೇ ಪ್ರಾರಂಭವಾಗುವುದೆಂದು ತಿಳಿದು ಬರುತ್ತದೆ

ಗಾಂಧೀಜಿ ಕೊಲೆ ಮೊಕದ್ದಮೆಯ ತೀರ್ಪು

ತಾ॥ ೧೦—೬—೪೯ನೆಯ ದಿವಸ ಮಹಾತ್ಮಾ ಗಾಂಧೀ ಕೊಲೆ ಮೊಕದ್ದಮೆಯ ತೀರ್ಪು ಕೊಡುತ್ತಾ ಸ್ಪೆಷಲ್ ನ್ಯಾಯಾಧೀಶರಾದ ಶ್ರೀ ಆತ್ಮಾಚರಣರವರು ಗಾಂಧೀಜಿಯವರನ್ನು ಗುಂಡಿನಿಂದ ಹೊಡೆದ ನಾಥೂರಾಂ ವಿನಾಯಕ ಗೋಡ್ಸೆಗೂ, ನಾರಾಯಣ ದತ್ತಾತ್ರೇಯ ಆಪ್ಟೆಗೂ ಮರಣದಂಡನೆಯ ಶಿಕ್ಷೆಯನ್ನು ವಿಧಿಸಿದರು. ಶ್ರೀನಿವಾಸರ್‌ರವರು ನಿರಪರಾಧಿಗಳೆಂದು ಬಿಡುಗಡೆ ಮಾಡಲ್ಪಟ್ಟರು

ಉಳಿದ ಏದು ಮಂದಿ ಆಪಾದಿತರಾದ ಕರ್ಕರೆ, ಮದನಲಾಲ್, ಶಂಕರ ಕಿಸ್ತಯ್ಯ, ಗೋಪಾಲ ವಿನಾಯಕ ಗೋಡ್ಸೆ, ಡಾ॥ ಪರಂಜಪೆ ಇವರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿದರು ಅಪ್ಪೂವರ್ ಬಾಡ್ಗೆಯನ್ನು ಬಿಡುಗಡೆಮಾಡಿದರು

ಶ್ರೀ ಆತ್ಮಾಚರಣರವರು ತೀರ್ಪನ್ನು ಓದುತ್ತಿದ್ದಾಗ ಆಪಾದಿತರೆಲ್ಲರೂ ಒಬ್ಬೊಬ್ಬರಾಗಿ ಎದ್ದು ನಿಂತು ನ್ಯಾಯಾಧೀಶರಿಗೆ ನಮಸ್ಕಾರಮಾಡಿದರು ಆಪರಾಧಿಗಳನ್ನು 'ಡಾಕ್'ನಿಂದ ಹೊರಗೆ ಕರೆದುಕೊಂಡು ಹೋಗುವ ವೇಳೆಯಲ್ಲಿ ಆಪಾದಿತರೆಲ್ಲರೂ "ಹಿಂದೂ ಧರ್ಮಕ್ಕಿ ಜೈ" "ಹಿಂದೂಸ್ಥಾನಕಿ ಜೈ" ಎಂದು ಜಯಘೋಷ ಮಾಡುತ್ತಾ ಹೋದರು!

ಕೆಂಪುಕೋಟೆ ನ್ಯಾಯಾಲಯದಲ್ಲಿ ಅಂದು ಗಂಭೀರ ವಾತಾವರಣ ಕಾಣುತ್ತಿತ್ತು ಅಪೀಲು ಹಾಕಿಕೊಳ್ಳುವ ಇಚ್ಛೆ ಇದ್ದರೆ ಇನ್ನು ೧೫ ದಿನಗಳೊಳಗಾಗಿ ಆವಾಹಿಸು ಅರ್ಜಿ ಹಾಕಿಕೊಳ್ಳಬಹುದೆಂದು ನ್ಯಾಯಾಧೀಶರು ತಿಳಿಸಿದರು

ಕೆಂಪುಕೋಟೆಯಿಂದ ಬರಹೋಗುವುದಕ್ಕೆ ವಿಶೇಷ ಬಂದೋಬಸ್ತು ಮಾಡಲಾಗಿತ್ತು ಪೋಲೀಸಿನವರ ಮತ್ತು ಮಿಲಿಟರಿಯವರ ಪಹರೆಯನ್ನು ಬಲಪಡಿಸಲಾಗಿತ್ತು ಪಾಸ್‌ಗಳದ್ದವರಿಗೆ ಮಾತ್ರ ಒಳಗೆ ಹೋಗಲು ಆವಕಾಶವಿತ್ತು

ನ್ಯಾಯಾಧೀಶರು ನೊದಲು ನಾಥೂರಾಮ ಗೋಡ್ಸೆಯ ಹೆಸರನ್ನು ಕೂಗಿದರು ಗೋಡ್ಸೆಯು ಎದ್ದುನಿಂತು ಕೊಂಡನು ನ್ಯಾಯಾಧೀಶರು ಆವನಿಗೆ ಏದು ಆಪರಾಧಗಳ ಬಗ್ಗೆ ಆನೇಕ ಅವಧಿಯ ಕಾಠಿನ್ಯಹಿತ ಶಿಕ್ಷೆ ವಿಧಿಸಿದರು ಒನೇ ಆಪರಾಧ (ಕೊಲೆ) ಕ್ಕಾಗಿ ಅವನಿಗೆ ಪಾಣೀ ಶಿಕ್ಷೆಯನ್ನು ವಿಧಿಸಿದರು.

ನ್ಯಾಯಾಧೀಶರು ಸಾವರ್ಕರರು "ನಿರಪರಾಧಿ" ಎಂದು ತೀರ್ಪಿತ್ತರು. ಮತ್ತು ಬೇರಾವಕಾರಣಗಳಾ

ಇಲ್ಲದಿದ್ದರೆ ಆವರನ್ನು ಈ ಕೂಡಲೆ ಬಿಡುಗಡೆ ಮಾಡಬೇಕೆಂದು ಆಜ್ಞೆ ಮಾಡಿದರು

ಬಾಡ್ಗೆ ಯ ದಯಾಭಿಕ್ಷೆ ಹೊಂದಲು ಒಪ್ಪಿಕೊಂಡಿದ್ದ ಕರಾರುಗಳ್ನು ನೂರು ಪಿಸಿರಿಂದ ಅನನ್ನೆ ಬಿಡ ಗಜೆ ಮಾಡಲಾಯಿತು

ನಾಥೂರಾಮ ಗೋಡ್ಸೆಯ ಮಹತ್ಕಾಂಕ್ಷೆಯವರನ್ನು ಮೆನ ಘೂರ್ಣಕವಾಗಿ ಕೊಲೆ ಮಾಡಿದ್ದಾನೆ ಇದಲ್ಲದೆ ಅವನಿಗೆ ಬೇರಾವ ಉದ್ದೇಶವನಿತ್ತೆಂಬುದನ್ನು ತೋರಿಬಿಲ್ಲ ನುತ್ತು ತೋರಿಸಲು ಸಾಧ್ಯವೂ ಇಲ್ಲ— ಎಂದು ತೀರ್ಪಿನಲ್ಲಿ ಹೇಳಲಾಗಿದೆ

ಈ ಕೃತ್ಯದಲ್ಲಿ ನಾರಾಯಣ ಆಪ್ಟೆ ಭಾಗವಹಿಸಿರುವುದು ಅತ್ಯಂತ ಖಚಿತವಾಗಿದೆ ಅವನು ಮೊದಲಿನಿಂದಲೂ ಈ ಪಿತ್ಕರಣದಲ್ಲಿ ನಾಯಕತ್ವ ವಹಿಸಿದ್ದಾನೆ ಮತ್ತು ಅತ್ಯಂತ ಕ್ಲಿಷ್ಟ ಸಮಯ ಒದಗಿದಾಗ ನುಣುಚಿಕೊಂಡಿದ್ದಾನೆ ಅಥವಾ ಗೈರುಹಾಜರಿಯಾಗಿದ್ದಾನೆ ಅವನ ಮೇಧಾಶಕ್ತಿಯು ಈ ಕೃತ್ಯದಲ್ಲಿ ಉಪಯೋಗಿಸಲ್ಪಡದಿದ್ದರೆ ಗಾಂಧಿಯವರ ಕೊಲೆ ಆಗುತ್ತಿತ್ತೆಂದು ಹೇಳಲು ಬರುವುದಿಲ್ಲ

ಪೋಲೀಸಿನವರ ಆಚಾತುರ್ಯ

ಮದನಲಾಲ್ ಮತ್ತು ಡಾ|| ಜೆ ಸೈಕ್ಷಿಯರವರ ಹೇಳಿಕೆಗಳು ಪೋಲೀಸಿನವರ ವಶದಲ್ಲಿದ್ದರೂ ಆವರು ಆದರ ಸದುಪಯೋಗ ಮಾಡಿಕೊಳ್ಳಲಿಲ್ಲ ಪೂಲೀಸಿನವರು ಪ್ರದ್ದವಹಿಸಿ ಚುರುಕಾಗಿ ಕೆಲಸ ಮಾಡಿದ್ದರೆ ಮರಾತ್ಮರ ಕೊಲೆ ಜರುಗುತ್ತಿತ್ತೆಂದು ಹೇಳಲು ಒರುವುದಿಲ್ಲ

ಈ ಸೆರಕ್ಷಿತಮೆಯ ಸಂಬಂಧದಲ್ಲಿ ಹುರೆಕಿರುವ ಆಯ ದ ಆಸ್ಪೋಟನವನ್ನು ಮತ್ತ ಪಿಸ್ತೂಲು, ಮರಾತ್ಮರ ಚಿಹೆದಲ್ಲಿ ಹೂಕ್ಕ ಗುಂಡುಗಳನ್ನು ಬದ್ರವಾಗಿಟ್ಟಿರಬೇಕೆಂದು ಆದನ್ನು ಎಲ್ಲಿಗೆ ಕಳಸಬೇಕಾದರೂ ಕೇಂದ್ರ ಸರ್ಕಾರದ ಆನುಪತಿಯನ್ನು ಪದೆಯಬೇಕೆಂದೂ ಜಡ್ಡರು ತೀರ್ಪು ಕೊಡುವಾಗ ಹೇಳಿದರು

ಮೈಸೂರಿನ ವ್ಯಾಘ್ರಾಸನವನ್ನು ಬ್ರಿಟನ್ನಿನಿಂದ ತಿರುಗಿ ಪಡೆಯಲು ಪ್ರಯತ್ನ

ಟಿಪ್ಪುಸುಲ್ತಾನನ ಕಾಲದ ರಕ್ಷಾಖಚಿತವಾದ ವ್ಯಾಘ್ರಾಸನ ವತ್ತು ತತ್ಸಂಬಂಧವಾದ ಐತಿಹಾಸಿಕ ಅಮೂಲ್ಯವಸ್ತುಗಳನ್ನು ಬ್ರಿಟಿಷ್ ಸರ್ಕಾರದಿಂದ ತಿರುಗಿ ಪಡೆಯಲು ಮೈಸೂರು ಸರ್ಕಾದವರು ಈಗಾಗಲೇ ಭಾರತ ಸರ್ಕಾರದೊಡನೆ ಪತ್ರವ್ಯವಹಾರ ನಡೆಸುತ್ತಿದ್ದಾರೆಂದು ಗೊತ್ತಾಗುತ್ತದೆ

ಕೈಚಕಲೆಯಲ್ಲಿ ಸುರಿಸುವ ವಿಧಾನದ ಪ್ರದರ್ಶನ

ಮೋದಗಳ ಮೇಲೆ ಮಂಜುಗಡ್ಡೆಯ ಹೂರುಗಳನ್ನು ಹಾಕಿ ಮಳೆ ಎಂತೆ ಮಾಡಿಒದೆಂದು ಕೆನಡಾ ಮತ್ತು ಅಮೆರಿಕನ್ ಪ್ರತಿನಿಧಿಗಳು ಪೆಸಿಫಿಕ್ ವಿಜ್ಞಾನ ಸಮ್ಮೇಳನದಲ್ಲಿ ರುಜುವಾತುಗಳನ್ನು ಕೊಟ್ಟರು

ಕೃತಕಗತಿಯಲ್ಲಿ ಮಳೆ ತರಿಸುವ ವಿಚಾರದಲ್ಲಿ ಆಸ್ಟ್ರಲಿಯಾದವರಿಗಿಂತಲೂ ಹಚ್ಚು ಸಂಶೋಧನ ನಡೆಸಿ ಮುಂದೆ ಬರದಿದಿಯೆಂದು ಗೊತ್ತಾಗಿದ

ಜ್ವಾಲಾಮುಖಿ ಆಸ್ಫೋಟನೆ!

ನ್ಯೂಜಿಲಂಡಿನ ಉತ್ತರಕ್ಕಿರುವ ಒಂದು ದ್ವೀಪದಲ್ಲಿ ೭೫೦೦ ಅಡಿ ಎತ್ತರದ ಒಂದು ಜ್ವಾಲಾಮುಖಿಯು ೯ ನೇ ತಾ|| ದಿನಗಳಲ್ಲಿ ಸ್ಫೋಟಾತ್ಮಕವಾಗಿ ಆಸ್ಫೋಟನಗೊಂಡಿತು ಇದರ ಪರಿಣಾಮವಾಗಿ ಒಂದೆರಳು ೧೫ ಸಾವಿರ ಅಡಿ ವರೆಲ್ಲ ಬೂದಿಯ

ಹೊಗೆಯು ಸಾವಿರಾರು ಅಡಿ ಎತ್ತರಕ್ಕೆ ಹಬ್ಬಿತು ಬೆಟ್ಟದಿಂದ ಉನ್ನತ ಕಲ್ಲು ಒಂಡೆಗಳು ಕೆಳಕ್ಕುರುಳಿದವು

ಸಿದ್ಧಾಂತ ಶಿಖಾಮಣಿ

ವೀರಶೈವಮತವನ್ನಲ್ಲಿ ನಿತ್ಯಪ್ರಕಾಶಮಾಡಿದ ಪ್ರತಿಯೊಬ್ಬ ಗುರು "ವ್ಯಾಖ್ಯಾನಾಚಾರ್ಯ"ನೆನಿಸುವುದು ಪ್ರಾಚೀನಕಾಲದಿಂದಲೂ ಈ ಮಹಾಗ್ರಂಥವೆಲ್ಲಿ ಶ್ರೀಜಗದ್ಗುರುವೇ ಇಂಥಾಕಾರ್ಯವರು ಜಗತ್ಪ್ರಸಿದ್ಧ ಅಗತ್ಯವಾಗಿದೆ ವೀರಶೈವಸಿದ್ಧಾಂತವನ್ನು ಉಪದೇಶಸಾರವಾದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯ ಜೀವಿಯತ್ಕ ಗ್ರಂಥಗಳಲ್ಲಿ ಇದೇ ಬಾರಿ ಪೂರ ತನ್ನಗ್ರಂಥವೆನಿಸಿಕೊಂಡು ನೆಲೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೨೫ವಾರಿ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಪಿವಯೋಗಿಶಿವಾಚಾರ್ಯ**ರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ನಿರಕ್ಷ್ಯವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿದ್ದಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭವಾದ ಕ್ಲೋಕಗಳಿಗೆ ಸಂಯಾಪ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ಪರಿಹರಿಸುವುದಕ್ಕಾಗಿ **ಪಂಡಿತ ಶ್ರೀಇಷ್ಟಲಿಂಗಶಾಸ್ತ್ರಿಗಳವರು** ಬಹ ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ವಿಜಿಸೇವಿಂದಸಲೆ ಪಂಡಿತರ ವ್ಯಾಖ್ಯಾನವೆ ಮಪತ್ತ್ಯವು ಪಾಠಕರ ಅನುಕೂಲ್ಯಾರ್ಥಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಕ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೩೩ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂಪೂರ್ಣವಾಗಿ ಶ್ರೀಜಗದ್ಗುರುವೇಣಾಕಾಚಾರ್ಯರ **ಲೀಲಾತ್ಮಕವಾದ** ಮಸೀಚಿತ್ರಪಟಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಪೂರ್ವಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕ

ಬೆಲೆ ೨ ರೂಪಾಯಿ.

ಶ್ರೀವೀರಶೈವಮತ ಪ್ರಸಿದ್ಧ ಮತ್ತಗ್ರಂಥಗಳು

ಗೋತ್ರಸೂತ್ರಪಟ (೬ನಯ ಆವೃತ್ತಿ)	೧ ಆಣೆ	**ವೀರಶೈವಮಹಾತ್ಮರು**	೪ ಆಣೆ
ಸಚ್ಯಾಸಾಶ್ರಮವಿಮರ್ಶ (೩ನಯ ಆವೃತ್ತಿ ಸಂಸ್ಕೃತ)	೧ ಆಣೆ	**ಬಸವಧರ್ಮ** ಂತದಿಪಾಕರ (೨ನೆಯ ಆವೃತ್ತಿ)	೪ ಆಣೆ
ಪಂಚಪಿಂಠತಿ ಪ್ರಥ ಪ್ರಕಾಶ (೫ನೆಯ ಆವೃತ್ತಿ)	೧ ಆಣೆ	**ಜಗಮಪರಿಜ್ಞಾನ**	೪ ಆಣೆ
ಶ್ರೀಜಗದ್ಗುರು ರೇಣುಕಾಷ್ಟಕ ರ್ಯ ಕೀರ್ತನ	೧ ಆಣೆ	**ಖಂಡಿತ ಶ್ರೀಕಾಶೀನಾಥಕಾಸ್ತ್ರುಲವಾರಿ ಭಾಷಣನು** (ತೆಲುಗು)	೪ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೨ ಆಣೆ	**ಶ್ರೀಜಗದ್ಗುರು ವಿವಾಸಂದವಿಜಯ**	೮ ಆಣೆ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಲಿ (೧೧ನೆಯ ಆವೃತ್ತಿ)	೨ ಆಣೆ	**ಸಿದ್ಧಾಂತಶಿಖಾಮಣಿ** (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನಯ ಆವೃತ್ತಿ)	೨ ಆಣೆ	**ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ**	೧೨ ಆಣೆ
ಬಸವಾದಿಶಿವತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ	**ವಿಭಾಸೂತ್ರಸಿದ್ಧಾಂತದರ್ಪಣ**	೧೨ ಆಣೆ
ಶ್ರೀರೇಣುಕಾಚಾರ್ಯ ಶತಕ (೩ನೆಯ ಆವೃತ್ತಿ)	೨ ಆಣೆ	**ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ**	೧ ರೂ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ	**ಮಾಹೇಶ್ವರ ದೀಕ್ಷಾವಿಧಿ** (೩ನೆಯ ಆವೃತ್ತಿ)	೧ ರೂ
ಶ್ರೀರುದ್ರಮುಸಿವಾಚಾರ್ಯಶತಕ	೨ ಆಣೆ	**ಸಿದ್ಧಾಂತಶಿಖಾಮಣಿಸೂತ್ರ** (ಕನ್ನಡ ಟೀಕಾಸಹಿತ)	೧ ರೂ
ಶಿವಶಕ್ತಿ ವಿಲಾಸ	೨ ಆಣೆ	**ವೈದಿಕವಿವಾಹಪದ್ಧತಿವಿಧಿ** (ವೈದಿಕಸ್ತರಯುಕ್ತವಾದುದು ೩ನೆಯ ಆವೃತ್ತಿ)	೧೫ ರೂ
ವಿಜಯ ನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ	**ಶ್ರೀಕರಭಾಷ್ಯಂ** (ಪತಿಯೂ ಶ್ರೀ)	೨ ರೂ.
ಬಿಲ್ವವನಾಜಾತ್ಮ್ಯಂ (೩ನೆಯ ಆವೃತ್ತಿ)	೨ ಆಣೆ	**ವೀರಶೈವವರತ್ನ** (೩ನೆಯ ಆವೃತ್ತಿ, ೨೦ ಮಹತ್ಪದ ಪೋಟೋಗಳಿರುವುದು)	೨ ರೂ
ಪಂಚಾಚಾರ್ಯಪ್ರಕಾಶ	೩ ಆಣೆ	**ರೇಣುಕವಿಜಯ ಮಹಾಪುರಾಣ** (ಕನ್ನಡ ಭಾಷಾಪದ್ಯ)	೨ ರೂ
ಪಂಚಾಚಾರ ಸ್ತುತಿಶತಕ	೩ ಆಣೆ	**ಸಿದ್ಧಾಂತಶಿಖಾಮಣಿ** (ಕನ್ನಡ ಟೀಕಾಸಹಿತ)	೨ ರೂ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ	**ಶಿವಾಗಮಸಂಗ್ರಹ** (ಪಂಠಸ್ಥಚ್ಛಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಲಿಂಗಧಾರಣವಿಧಿ	೪ ಆಣೆ	**ಶಿವಪ್ಪೆತಮಂಜರಿ** (ಕನ್ನಡವ್ಯಾಖ್ಯಾನ ೧೩೪೪ ಪುಟ)	೪ ರೂ.
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ	**A brief life-sketch of Pandit Sri Kashinatha Shastriji** (*English*)	4 As.
ಶ್ರೀಪಶಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ	**The Philosophical Aspect of Veerasaivism** (*English*)	8 As
ಶೈವೋಪನಿಷತ್ಸಂಗ್ರಹ (ಸಂಸ್ಕೃತ)	೬ ಆಣೆ	**Speeches by Pandit Shri Kashinatha Shastriji** (*English*)	12 As
ವೀರಶೈವ ವ್ಯಾಯಪ್ಚಿತ್ತವಿಧಿ	೪ ಆಣೆ	**ಲಿಂಗಧಾರಣಚಂದ್ರಿಕಾ** (ಸಂಸ್ಕೃತ)	೩ ಕ
ವೈದಿಕವಾಙ್ಮಯರತ್ನ	೪ ಆಣೆ	**ವೀರಶೈವರತ್ನ** (ಮರಾಠಿ)	೧ ರೂ
ಸಚ್ಯಾಸಾಶ್ರಮವಿಮರ್ಶತತ್ತ್ವಶ್ಲಿಕರಣ (೩ನೆಯ ಆವೃತ್ತಿ)	೬ ಆಣೆ	**ಮಹಾನಾರಾಯಣೋಪನಿಷತ್** (ವೀರಶೈವಭಾಷ್ಯ-ಸಂಸ್ಕೃತ)	೧ ರೂ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ	**ಚಂದ್ರಿಕಾಕಾರಿಕಾ** (ಸಂಸ್ಕೃತ)	೨ ಆ.
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿತ್ರಸ್ಥಿಗಳು)	೮ ಆಣೆ		
ಶಿವಾಧ್ಯೆತಕರಿಭಾಷ್ಯ (ಸಂಸ್ಕೃತ)	೮ ಆಣೆ		

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

Edited, Printed and Published by Pandit Kashinatha Shastri at Sri Panchacharya Electric Press, Sayaji Rao Road, Mysore.

REGISTERED No. M. 2256 ॥ ಶ್ರೀಜಗದ್ಗುರು ಪಂಚಾಚಾರ್ಯೋ ಪ್ರಸೀದಂತು ॥ REGISTERED No M 2256

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನಸಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಿಧರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಶ್ಲೋಕದವರಿಗೆ ೨ ರೂ ೪ ಆಣೆ ಪರಶ್ಲೋಕದವರಿಗೆ ೩ ರೂ ೫ ಏ ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೧ ನೇ ಫೆಬ್ರುವರಿ ೧೯೪೪ [ಸಂಚಿಕೆ ೪೧

॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ ॥

ಶ್ವಾಸಸಂಚಾಲನಕ್ಕೆ ಸುಲಭೋಪಾಯ ಮತ್ತು ತತ್ಫಲವಿಚಾರ

ಬಲದ ಮೂಗಿನೊಳು ಶ್ವಾಸವ ।
ಸಲೆಯಾಡಲು ಸೂರ್ಯನಾಡಿಯೆಡಮೂಗಿನೊಳು ।
ಸುಲಭತದಿ ನಡೆಯ ಶ್ವಾಸವ ।
ನೆಲೆಯಂತವಂಶಾನಾಡಿಯೊಡೆರೆಯುಸವೈ ॥೧೫

ಎಂದರೆ ಮೂಗಿನ ಬಲದ ಹೊಳ್ಳೆಯಲ್ಲಾಡುವ ಶ್ವಾಸವು ಸೂರ್ಯನಾಡಿ ಅಥವಾ ಸೂರ್ಯಸ್ವರವೆಂತಲೂ ಮತ್ತು ಎಡದ ಹೊಳ್ಳೆಯಲ್ಲಾಡುವ ಶ್ವಾಸವು ಚಂದ್ರನಾಡಿ ಅಥವಾ ಚಂದ್ರಸ್ವರವೆಂತಲೂ ತಿಳಿಯಬೇಕ

ನಾಸಿಕದೊಳಿದೆಯು ಪಿಂಗಳೆ ।
ಯಾಸನದಿಂ ಪ್ರಶ್ನಕೆಂಧ್ರಶ್ವಾಸವ ಶ್ವಾಸ ।
ಲೇಸಿಂ ಸುಷುಮ್ನೆಯೆಸಿಸುತ ।
ವಾಸಿಪುದೀ ತ್ರಿವಿಧನಂಗಸುವು ಋಷಿವರ್ಯಂ ॥೨೫

ಎಂದರೆ ಮೂಗಿನ ಬಲದ ಹೊಳ್ಳೆಯಲ್ಲಾಡುವ ಶ್ವಾಸಕ್ಕೆ "ಇಡಾ" ಎಂತೆಲೂ, ಎಡದ ಹೊಳ್ಳೆಯಲ್ಲಾಡುವ ಶ್ವಾಸಕ್ಕೆ "ಪಿಂಗಳಾ ಎಂತಲೂ ಮತ್ತು ಮೂಲಾಧಾರ ಚಕ್ರದಿಂದ (ಗುದಸ್ಥಾನದಿಂದ) ಸಹಸ್ರಾರಚಕ್ರದ ವರೆಗೆ (ಬ್ರಹ್ಮರಂಧ್ರದ ವರೆಗೆ) ನಡೆಯುತ್ತಿರುವ ಶ್ವಾಸಕ್ಕೆ 'ಸುಷುಮ್ನಾ" ಎಂತಲೂ ಹೆಸರು ಇವು ಮೂರೂ ನಾಡಿಗಳು ಕೂಡುವ ಸ್ಥಾನಕ್ಕೆ "ಭ್ರೂಮಧ್ಯ" ಎಂದು ಹೆಸರು ಇದು ಸ್ವಯಂಜ್ಯೋತಿಸ್ವರೂಪವಾದ ಪರಮಾತ್ಮನ ಆಜ್ಞಾಸ್ಥಾನವಾಗಿರುವದು ಇದೇ ಅಭಿಪ್ರಾಯವನ್ನು ಶ್ರೀರೇಣುಕಭಗವತ್ಪಾದರು— "ಭ್ರೂಮಧ್ಯೇ ಸ್ವಪ್ರಕಾಶಜ್ಞಾಯಾಂ ಲಿಂಗಂ ಯೋಗೀ ವಿಭಾವಯೇತ್ ' ಎಂದು ಅಪ್ಪಣೆಕೊಡಿಸಿರುವರು

ಇದಕಳುಜಪಧಿವಿನಸೂಯಾಂ ।
ಆಸುನ್ಯಮದಿಂ ಸೋಮಶುಕ್ಲಬುಧದಿನೇಂದ್ರಂ ॥
ಘನಗುರುವಾರಂ ಬಹುಳದಿ ।
ಇನನಾಡಿಯು ಕುಜ್ಞದಲ್ಲಿ ನಡೆವುದು ಶಶಿಯಂ ॥೩॥

ಇಂತೀಪರಿಯೊಳು ಶ್ವಾಸವ ।
ದಿನವೆಳಗಿನ ವೇಳೆಯಲ್ಲಿ ನಡೆವುದು ಶಯಮಂ ।
ಶನಿವಾರಮಾತ್ರ ಹಗಲಿರು ।
ಳಿನ ನಾಡಿಯು ತಪ್ಪದಿರೆ ನಡೆವುದು ಶಯಮುಂ ॥೪॥

ಆದಿತ್ಯವಾರ-ಮಂಗಳವಾರ ಶನಿವಾರಗಳಲ್ಲಿ ಸೂರ್ಯಸ್ವರವೂ, ಸೋಮವಾರ ಬುಧವಾರ-ಶುಕ್ರವಾರಗಳಲ್ಲಿ ಚಂದ್ರಸ್ವರವೂ, ಕೃಷ್ಣಪಕ್ಷದ ಗುರುವಾರದಲ್ಲಿ ಸೂರ್ಯಸ್ವರವೂ, ಶುಕ್ಲಪಕ್ಷದ ಗುರುವಾರದಲ್ಲಿ ಚಂದ್ರಸ್ವರವೂ, ಬೆಳಿಗ್ಗೆ ಉಗಾವದಲ್ಲಿ ನಡೆಯುತ್ತಿರಬೇಕು ಶನಿವಾರ ಮಾತ್ರ ಹಗಲಿರುಳುಗಳಲ್ಲಿಯೂ ಸೂರ್ಯಸ್ವರನೇ ಅಡು ತ್ತಿರಬೇಕು.

ದಿನಪಮಪಯ. ನಾಲ್ಕುಘಂಟೆಯಂ ।
ಅನುನಯದಿಪ್ಪತ್ತಯದಾಘಂಟೆಯು ಬರಿಗುಂ ॥
ದಿನಕ್ರಮದಿ ನಡೆಸೆ ಶ್ವಾಸವ ।
ಮನಸಿನ ಕಲ್ಮಷವು ತೊಲಗಿ ನಿರ್ಮಲಮಪ್ಪುದೈ ॥೫॥

ಎಂದರೆ ನಿತ್ಯವೂ ಬೆಳಿಗಿನ ಜಾವ ನಾಲ್ಕು ಘಂಟೆಯಲ್ಲಿ ಎದ್ದು ಆರು ಘಂಟೆಯ ವರೆಗೂ ದಿನಕ್ರಮದಂತೆ ಶ್ವಾಸವನ್ನು ನಡೆಸುವುದರಿಂದ ಮನಶ್ಶುದ್ಧಿಯುಂಟಾಗುವದು ಎನ್ನೋಣವೇ ಇಲ್ಲವೆನೆ ಉದಯಕಾಲದಲ್ಲಿ ಎದ್ದು ಹೊಳ್ಳೆಗಳ ಆಗ್ರಭಾಗವನ್ನು ಅಂಗುಷ್ಠ ಮತ್ತು ಅನಾಮಿಕಾ ಬೆರಳು ಗಳಿಂದ ಸೂಕ್ಷ್ಮವಾಗಿ ಹಿಡಿದು ಶ್ವಾಸವನ್ನಾ ಡಿಸಿ ನೋಡ ಬೇಕು ಆಯಾದಿನಗಳಿಗೆ ತಕ್ಕಂತೆ ಸೂರ್ಯಚಂದ್ರ ಸ್ವರಗಳು ನಡೆಯುತ್ತಿದ್ದರೆ ಸರಿ ಎಂದು ತಿಳಿದು ಆ ಸ್ವರವು ಆ ಬೆಳಿಗಿನ ೪ ಘಂಟೆಯಿಂದ ೬ ಘಂಟೆಯ ವರೆಗೂ ಕಡಲಲಿ ಅಡೆದೆ ಹೊಳ್ಳೆಯಲ್ಲಿಯೇ ಇರುವಂತೆ ಮಾಡಿಕೊಳ್ಳಬೇಕು ಶ್ವಾಸವನ್ನು ಒಂದೇ ಕಡೆಗೆ ಕುಳತೇ ನಡೆಯಿಸಿಕೊಳ್ಳಬೇಕೆಂದೇನೂ ಇಲ್ಲ, ಎಲ್ಲಿ ಯಾದರೂ ಹೋಗುವುದಿದ್ದರೆ ಹೋಗಬಹುದು ಕೆಲಸ ಗಳಿದ್ದರೆ ಮಾಡಬಹುದು ಮಾತನಾಡುತ್ತಲೂ ಇರ ಬಹುದು ಮಲಗಿ ನಿದ್ರೆಮಾಡಬಹುದು ಆದರೂ ಆಯಾ ದಿನದ ಕ್ರಮದಂತೆ ಶ್ವಾಸ ನಡೆಯಿಸುವುದನ್ನು ಮಾತ್ರ ತಪ್ಪಿಸಬಾರದು ಉದಯ ೬ ಘಂಟೆಯಾದ ಮೇಲೆ ಶ್ವಾಸವು ಯಾವ ಹೊಳ್ಳೆಯಲ್ಲಿಯೇ ನಡೆಯಲಿ ಗವುನಿಸಬೇಕಾದುದಿಲ್ಲ ಹೀಗೆ ಕೆಲವು ದಿವಸ ನಡೆಯುತ್ತ ಬಂದರೆ ಅಂಧವರು ಸಕಲ ವ್ಯಸನಗಳಿಂದ ಬಿಡಲ್ಪಟ್ಟವ ರಾಗಿ ಸದಾ ಸಂತೋಷಚಿತ್ತರಾಗಿ ಧನಾರ್ಜನೆ ಧರ್ಮಾ ರ್ಜನೆಗಳನ್ನು ಮಾಡಿಕೊಂಡು ಸುಖವಾಗಿರುವರು ಯಾವುದಾದರೊಂದು ಕಾರ್ಯಕ್ಕೆ ಹೊರಟರೆ ಯಾವ ಕಾರವೇ ಆಗಿರಲಿ ಹೊರಡುವಾಗ ಶ್ವಾಸವು ಬಲದ ಹೊಳ್ಳೆಯಲ್ಲಾಡುತ್ತಿರಬೇಕು. ಅಂದರೆ ಅವರ ಕಾರ್ಯ ಗಳೆಲ್ಲಾ ಖಂಡಿತವಾಗಿಯೂ ಸಿದ್ಧಿಸುವುವು ಆ ರೀತಿ ಬಲಗಡೆ ಶ್ವಾಸವಿಲ್ಲದಿದ್ದರೆ ಇರುವಂತೆ ಮಾಡಿಕೊಂಡು ಹೊರಡಬೇಕು ನಾವು ಹೊರಟ ಸಮಯದಿಂದ ಕೆಲಸ ಗಳನ್ನು ನಾ ವಗಿಸಿಕೊಂಡು ಬರೆ.ವವರೆಗೂ ಬಲಗಡೆಯ ಶ್ವಾಸವು ಬದಲಾಯಿಸದಂತೆ ಜಾಗರೂಕತೆಯಿಂದ ನೋಡಿಕೊಳ್ಳುತ್ತಿರಬೇಕು ಅಂದರೆ ಆ ಕೆಲಸಗಳೆಲ್ಲಾ ತಪ್ಪದೆ ಜಯಪ್ರದವಾಗುವುದರಲ್ಲಿ ಸಂಶಯವಿಲ್ಲ ಶ್ವಾಸವಿಚಾರ ವನ್ನು ಈ ಕೆಳಗೆ ವಿವರಿಸಿದೆ.

ಎಡದ ಶ್ವಾಸವನ್ನು ಬಲಕ್ಕೆ ತಿರುಗಿಸಬೇಕಾದರೆ ನಿಂತುಕೊಂಡಾಗಲಿ, ಕುಳಿತುಕೊಂಡಾಗಲಿ, ಎಡಗೈ ಕಂಕಳಿಗೂ (ಬಗಲು) ಮೊಳಕೈಗೂ ಮಧ್ಯದಲ್ಲಿರುವ ದೊಡ್ಡ ನರಕ್ಕೆ ಹತ್ತುವಂತೆ ಬಗಲಿನಲ್ಲಿ ಯೋಗದಂಡ ಅಥವಾ ಮನೆಯನ್ನು ಇಟ್ಟು ಅದುಮಿದರೆ ಎಡಗಡೆಯ ಶ್ವಾಸವು ಬಲಗಡೆಗೆ ಬರುತ್ತದೆ ಇದೇ ರೀತಿ ಬಲಗಡೆಗೆ ಇಟ್ಟು ಅದುಮಿದರೆ ಬಲಗಡೆಯ ಶ್ವಾಸವು ಎಡಗಡೆಗೆ ಬರುತ್ತದೆ. ಇದಕ್ಕಾಗಿಯೇ ಯೋಗಾಭ್ಯಾಸಿಗಳು ತಮ್ಮ ಬಳಿಯಲ್ಲಿ ಯೋಗದಂಡವನ್ನಿಟ್ಟುಕೊಂಡಿರುತ್ತಾರೆ.

ಕುಳಿತಿರುವಾಗ ಎಡಕ್ಕೆ ಹೊರಳಿ ಎಡಗೈಯನ್ನು ಭೂಮಿಯ ಮೇಲೆ ಅಂಗೈ ನೆಲಕ್ಕೆ ಹತ್ತುವಂತೆಬೆರಳು ಗಳನ್ನು ಜಾಚಿ ಸಾಧಾಗಿ ಊರಿಕೊಂಬು ಬೆನ್ನಿನ ಎಡ ಭಾಗವನ್ನು ದಿಂಬಿಗೋ ಗೋಡೆಗೋ ಹತ್ತುವಂತೆ ಅಭಿಸಿ ಕುಳಿತುಕೊಂಡಿದ್ದೇ ಆದರೆ ಕೆಲ ನಿಮಿಷಗಳಲ್ಲಿಯೇ ಎಡದ ಶ್ವಾಸವು ಒಲಳ್ಳೆ ತಿರುಗುತ್ತದೆ ಈ ರೀತಿ ಬಲಳ್ಳೆ ಹೊರಳಿ ಕುಳಿತುಕೊಂಡಿದ್ದೇ ಆದರೆ ಒಲಗಡೆಯ ಶ್ವಾಸವು ಎಡಕ್ಕೆ ತಿರುಗುತ್ತದೆ

ಮಲಗುವಾಗ ಎಡದ ಪಕ್ಕಕ್ಕೆ ತಿರುಗಿ ಒಲಗೈಯ್ಯನ್ನು ತಲೆಯ ಕೆಳಗೆ ಕಪಾಲಕ್ಕೆ ಹೊಂದಿಕೆಯಾಗುವಂತೆ ಇಟ್ಟು ಕೊಂಡು ಮಲಗಿದ್ದೇ ಆದರೆ ಎಡದ ಶ್ವಾಸವು ಬಲಕ್ಕೆ ತಿರುಗುತ್ತದೆ ಈ ರೀತಿ ಬಲಪಕ್ಕಕ್ಕೆ ತಿರುಗಿ ಮಲಗಿಸಿ ಕೊಂಡದ್ದೇ ಆದರೆ ಎಡಶ್ವಾಸವು ಒಲಳ್ಳೆ ತಿರುಗುತ್ತದೆ.

ನಡೆಯುವಾಗ ಎಡದ ಕಂಕುಳನಲ್ಲಿ (ಬಗಲು) ಮಡಿ ಚಿದ ಕೊಡೆಯನ್ನಾಗಲಿ, ಇಲ್ಲವೆ ಒಟ್ಟಿಯ ಸುತ್ತನ್ನಾಗಲಿ ಅಥವಾ ಪುಸ್ತಕಾದಿಗಳನ್ನಾಗಲಿ ಇಟ್ಟು ತತ್ಪಕ್ಷವು ಒತ್ತಿ ಹಿಡಿದುಕೊಂಡು ನಡೆದ್ದೇ ಆದರೆ ಎಡಗಡೆಯ ಶ್ವಾಸವು ಬಲಗಡೆಗೆ ತಿರುಗುತ್ತದೆ ಈ ರೀತಿ ಬಲದ ಕಂಕುಳದಲ್ಲಿ ಟ್ಟುಕೊಂಡು ನಡೆದ್ದೇ ಆದರೆ ಬಲಗಡೆಯು ಎಡಗಡೆಗೆ ತಿರುಗುತ್ತದೆ ಈ ವಿಧವಾದ ಶ್ವಾಸವ್ಯತ್ಯಾಸವು ಭ್ರೂಮಧ್ಯಸ್ಥಾನದಿಂದಾಗುವದೆಂದು ತಿಳಿಯಬೇಕು

ಯಾವ ಕೆಲಸಕ್ಕೆ ಹೋಗಬೇಕಾದರೂ ಬಲಗಡೆ ಶ್ವಾಸವಿದ್ದರೆ ಸರಿ, ಇಲ್ಲವಾದರೆ ಮೇಲ್ಕಂಡ ಕ್ರಮದಂತೆ ಬದಲಾಯಿಸಿಕೊಂಡು ಹೊರಟು ಅದು ಕದಲದಿರುವ ಕ್ರಮದಂತೆ ಬಗಲಲ್ಲಿ ಯಾವುದಾದರೂ ಮಚ್ಚುವನ್ನು ಇಟ್ಟುಕೊಂಡು ನಡೆಯುತ್ತ ಒಂದರೆ ಹಿಂದೆ ಹೇಳಿರು ವಂತೆ ಆವರೆ ಕೆಲಸಗಳು ತಪ್ಪದೇ ನೆರವೇರುತ್ತವೆ ಎಂಬುದು ಅನುಭವಸಿದ್ಧವಾಗಿದೆ

ಇವೆಲ್ಲಾ ಅನುಭವದ ಮಾತಾಗಿರುವುದರಿಂದಲೂ, ಅಂಥವರೇ-ಇಂಥವರೇ ಮಾಡಬೇಕೆಂಬ ನಿರ್ಬಂಧಗ ಳೇನೂ ಇಲ್ಲದೆ, ಯೋಗಿಗಳಿಗೂ, ಭೋಗಿಗಳಿಗೂ, ಬಾಲರಿಗೂ, ವೃದ್ಧರಿಗೂ, ಸ್ತ್ರೀಪುರುಷರಿಗೂ ಸಹ ಯಾವ ಕಷ್ಟುಗಳೂ ಇಲ್ಲದೆ ನಿರಾಯಾಸವಾಗಿ ನಡೆಸಿಕೊಂಡು ಬರುವಂತಿರುವುದರಿಂದಲೂ, ಸರ್ವರೂ ಆಚರಿಸಿ ಸುಖವ ನ್ನನುಭವಿಸಬೇಕೆಂದು ನಮ್ಮಸೂಚನೆಯು

ಸಿದ್ಧಾಂತಿ ಆವರಿಗೆರೆ ಮಠದ ಪಂ॥ ಚೆನ್ನಬಸವಯ್ಯ,
ದಾವಣಗೆರೆ ಸಿಟಿ

ಪೂರ್ವ ಜರ್ಮನಿಗೆ ರಷ್ಯನ್ ಸೇನೆಗಳು

ಪೂರ್ವ ಜರ್ಮನಿಯಲ್ಲಿರುವ ರಷ್ಯನ್ ಸೇನೆಗಳಿಗೆ ಅಹಾರಪದಾರ್ಥ ಮತ್ತು ಸುಡುಗುಂಡುಗಳನ್ನು ದಿನವೂ ರಷ್ಯನ್ ರೈಲುಗಳು ತರುತ್ತಿವೆ. ಮತ್ತು ಅಗಾಧ ಸಂಖ್ಯೆ ಯಲ್ಲಿ ರಷ್ಯನ್ ಸೇನೆಗಳು ಪೂರ್ವ ಜರ್ಮನಿಗೆ ಬರುತ್ತಿವೆ ಎಂದು ಮ್ಯೂನಿಚ್‌ನಿಂದ ಎಂಬ ಜರ್ಮನ್ ಪತ್ರಿಕೆ ಬರೆದಿದೆ.

ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವ

ಮಹಾ ಶಿವರಾತ್ರಿ



ಭರತಖಂಡದಲ್ಲಿರುವ ಸಮಸ್ತವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀಜಗದ್ಗುರು ವಿಶ್ವಾರಾಧ್ಯರ ಜಯಂತೀಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕು. ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವದೇ ಆಸ್ತಿಕಮತಾನುಯಾಯಿಗಳ ಮುಖ್ಯ ಧರ್ಮವಾಗಿದೆ. ಮತಸ್ಥಾಪನಾಚಾರ್ಯರ ಜಯಂತಿಯನ್ನು ದೊಡ್ಡ ಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಬೇಕು. ಆ ದಿವಸವೇ ಈ ಪೂಜ್ಯಪಾದರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯ ವೈಭವದೊಡನೆ ಮಹೋತ್ಸವವನ್ನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲಧರ್ಮವು! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು.

ಸೂಚನೆ

ಪ್ರತಿ ವರ್ಷ ಪದ್ಧತಿಯಂತೆ ಮಹಾಶಿವರಾತ್ರಿಯ ನಿಮಿತ್ತ ಮುಂದಿನ ವಾರದ (ತಾ|| ೨೪—೩—೪೯) ಪತ್ರಿಕೆಯು ಹೊರಡುವುದಿಲ್ಲ.

—ಮ್ಯಾ.

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಈ ವರ್ಷ ಫಾಲ್ಗುನ ಶು|| ೧೪ (ತಾ|| ೧೩-೩-೧೯೪೯) ಭಾನುವಾರ ದಿವಸ ಪ್ರಾಪ್ತವಾಗುವುದರಿಂದ ಭರತಖಂಡದಲ್ಲಿರುವ ಸಮಸ್ತ ಗುರು ಭಕ್ತರು ಆ ದಿವಸ ಜಗದಾಚಾರ್ಯರ ಜಯಂತೀಮಹೋತ್ಸವವನ್ನು ಮಹಾ ಸಂಭ್ರಮದೊಡನೆ ನೆರವೇರಿಸಿ ಧನ್ಯರಾಗಬೇಕು.

ವರ್ತಮಾನಸಂಗ್ರಹ

ರೈಲ್ವೆ ಮುಷ್ಕರ ಇಲ್ಲ

ಮಾರ್ಚ್ ೯ನೆಯ ತಾರೀಖಿಗೆ ಹೂಡಬೇಕೆಂದಿದ್ದ ರೈಲ್ವೆ ಮುಷ್ಕರವನ್ನು ಹೂಡಕೂಡದೆಂದು ಅಖಿಲಭಾರತ ರೈಲ್ವೆ ಕೆಲಸಗಾರರ ಫೆಡರೇಷನ್ ೧೩೩-೧೦ ಓಟುಗಳಿಂದ ತೀರ್ಮಾನಿಸಿತು

ಹೈದ್ರಾಬಾದ್ ಕಾಂಗ್ರೆಸ್ಸಿನಲ್ಲಿ ಮತ್ತೆ ಬಿಕ್ಕಟ್ಟು

ಹೈದರಾಬಾದಿನ ಕಾಂಗ್ರೆಸ್ ಪಕ್ಷದ ಒಪ್ಪಂದದ ಬಗ್ಗೆ ಶ್ರೀ ಸ್ವಾಮಿ ರಮಾನಂದತೀರ್ಥರಿಗೂ ಮತ್ತು ಶ್ರೀಜನಾರ್ದನರಾವ್ ದೇಸಾಯಿಯವರಿಗೂ ನಡೆಯುತ್ತಿದ್ದ ಮಾತುಕತೆಯು ವಿಫಲವಾಯಿತೆಂದು ತಿಳಿದು ಬಂದಿದೆ

ಎರಡು ಪಕ್ಷದವರೂ ದಸರಿಯಲ್ಲಿ ಸರದಾರ್ ಪಟೇಲರು ತಂದ ಒಪ್ಪಂದದ ಪಟ್ಟಿಗೆ ತಮ್ಮ ಒಪ್ಪಗೆಯನ್ನು ಸೂಚಿಸಿದ್ದರೂ ಸಹ ಅದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ವಿವಾದ ಬಂದಿದೆಯೆಂದು ತಿಳಿಬಂದಿದೆ.

ರಜಕಾರರಿಗೆ ಸಹಾಯಮಾಡಿದವರ ದಸ್ತಗಿರಿ

ಬ್ಯಾರಿಸ್ಟರ್ ಹೈದರ್ ರಾಜಾ ಹೈದಿ ಅಹಮದ್ ಖಾನ್ ಮತ್ತು ಹಬೀಬ್ ಎಂಬುವರನ್ನು ರಜಾಕರರ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರೆಂಬ ಆಪಾದನೆಯ ಮೇಲೆ ಸಾರ್ವಜನಿಕ ರಕ್ಷಣಾ ಕಾನೂನಿನಂತೆ ಬಂಧಿಸಿದ್ದಾರೆ.

ರಂಗೂನಿನಲ್ಲಿ ಒಂದು ಗ್ಯಾಲನ್ ನೀರಿಗೆ ೫ ರೂ!

ಬರ್ಮದ ಯಾದವೀ ಕಲಹದ ಫಲವಾಗಿ ರಂಗೂನಿನಲ್ಲಿ ನೊಳಗೂ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲೂ ಪರಿಸ್ಥಿತಿ ತೀರ ಕೆಟ್ಟಿದೆ. ರಂಗೂನಿನಲ್ಲಿರುವ ಭಾರತ ರಾಯಭಾರ ಕಚೇರಿಯ ಸಿಬ್ಬಂದಿಯವರು ಕುಡಿಯುವ ನೀರನ್ನು ಗ್ಯಾಲನ್ನಿಗೆ ೫ ರೂ. ಕೊಂಡುಕೊಳ್ಳುತ್ತಿದ್ದಾರೆಂದು ಭಾರತ ಸರಕಾರಕ್ಕೆ ವರ್ತಮಾನ ಬಂದಿದೆ.

ಮದ್ರಾಸ್ ನಗರದಲ್ಲಿ ನೀರಿನ ಅಭಾವ

ಮದರಾಸಿನಲ್ಲಿ ಈಗ ಒಬ್ಬರಿಗೆ ೧೦ ಗ್ಯಾಲನ್‌ನಂತೆ ೧೪ ಲಕ್ಷ ಮಂದಿ ಪ್ರಜೆಗಳಿಗೆ ಆಕ್ಟೋಬರ್ ತಿಂಗಳ ವರೆಗೂ ನೀರಿನ ಸರಬರಾಜು ಮಾಡಬಹುದೆಂದೂ, ಮುಂಗಾರು ಮಳೆ ಬರದೆ ಹೋದಲ್ಲಿ ನೀರಿನ ಸರಬರಾಯಿಗೆ ತುಂಬಾ ತೊಂದರೆಯಾಗಬಹುದೆಂದೂ ಕಾರ್ಪೋರೇಷನ್ ಅಧಿಕಾರಿಗಳು ತಿಳಿಸಿದ್ದಾರೆ. ನೀರಿನ ಸರಬರಾಜನ್ನು ವ್ಯವಸ್ಥೆಗೊಳಿಸಲು ಪಂಪು, ನೀರಿನ ಲಾರಿ ಮುಂತಾದುವುಗಳನ್ನು ಕೊಳ್ಳುವದಕ್ಕಾಗಿ ೩ ಲಕ್ಷ ರೂಪಾಯಿಗಳನ್ನು ಕಾರ್ಪೋರೇಷನ್ ಕೌನ್ಸಿಲ್‌ನವರು ಕೊಟ್ಟಿರುತ್ತಾರೆ

ಭಾರತದಮೇಲೆ ರಷ್ಯಾದ ಆರೋಪಣೆ

ಭಾರತ ಸರ್ಕಾರವು, ಬ್ರಿಟನ್ನಿನ ಸಹಾಯದೊಡನೆ ತನ್ನ ಮಿಲಿಟೆರಿ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಪ್ರಚಾರ ಕಾರ್ಯ ನಡೆಸುತ್ತಿದೆಯೆಂದು ಮಾಸ್ಕೋ ರೇಡಿಯೋ ಭಾರತದ ಮೇಲೆ ಆರೋಪಣೆ ಹೊರಿಸಿದೆಯೆಂದು ವರದಿಯಾಗಿದೆ ತನ್ನ ಆರೋಪಣೆಯನ್ನು ಪುಷ್ಟೀಕರಿಸಲು ನೂಸೆಸ್ಟೋ ರೇಡಿಯೋ, ಭಾರತದ ಮಹಾದಂಡನಾಯಕರು, ನೌಕಾದಳಾಧಿಪತಿ ಮತ್ತು ರಕ್ಷಣ ಮಂತ್ರಿಗಳು ಭಾರತವನ್ನು ಪರರಾಷ್ಟ್ರಗಳ ಆಕ್ರಮಣದಿಂದ ರಕ್ಷಿಸುವ ಸಲುವಾಗಿ ತನ್ನ ಸೈನ್ಯವನ್ನು ಬಲಪಡಿಸಿಕೊಳ್ಳಬೇಕೆಂದು ಬಹಿರಂಗವಾಗಿ ಮಾಡಿರುವ ಭಾಷಣಗಳನ್ನು ಉದಾಹರಣೆಯಾಗಿ ಕೊಟ್ಟಿವೆ

ರೈಲ್ವೆ ಪೆಡರೇಷನ್ನಿನಲ್ಲಿ ಕಮ್ಯೂನಿಸ್ಟರಿಗೆ ಸ್ಥಳವಿಲ್ಲ

ರೈಲ್ವೆ ನೌಕರರಿಗೆ ಶ್ರೀ ಜಯಪ್ರಕಾಶ ನಾರಾಯಣರವರ ಹಿತೋಕ್ತಿ

ರಷ್ಯದೊಡನೆ ಭಾರತವು ಸ್ನೇಹದಿಂದಿದೆ ಆದರೆ ಇಲ್ಲಿಯ ಪಂಚಮದಳ ಮತ್ತು 'ಕ್ರಿಪ್ಸಿಂಗ್' ಮೂಲಕ ಭಾರತದ ಮೇಲೆ ಅಧಿಕಾರ್ಯ ನಡೆಸಲು ರಷ್ಯಕ್ಕಾಗಲಿ, ಅಮೆರಿಕೆಗಾಗಲಿ ಅಥವಾ ಇನ್ನಾವ ರಾಷ್ಟ್ರಕ್ಕೇ ಆಗಲಿ ಭಾರತವು ಎಂದಿಗೂ ಅವಕಾಶ ಕೊಡುವದಿಲ್ಲ

ರೈಲ್ವೇ ನೌಕರರು ಈಗ ಮುಷ್ಕರದ ನಿರ್ಧಾರವನ್ನು ತ್ಯಜಿಸಿ ರೈಲ್ವೆ ಮಂತ್ರಿಗಳ ಸಂಧಾನಕ್ಕೆ ಒಪ್ಪಿ ತಮ್ಮ ಸಾಂಘಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ತೊಡಗಬೇಕು

ಎಂದು ಅಖಿಲ ಭಾರತ ರೈಲ್ವೆ ಪೆಡರೇಷ್ ಅಧ್ಯಕ್ಷರಾದ ಶ್ರೀ ಜಯಪ್ರಕಾಶ ನಾರಾಯಣ ಅವರು ಪಾಗಲ್ ಎಂಬಲ್ಲಿ ಜರುಗಿದ ಪೆಡರೇಷನ್ನಿನ ಜನರಲ್ ಕೌನ್ಸಿಲ್ ಸಭೆಯ ಅಧ್ಯಕ್ಷತೆಯಲ್ಲಿ ನಿರ್ದಿಷ್ಟವಾದ ಸಲಹೆಯನ್ನು ತ್ರರು ತಮ್ಮ ಸಲಹೆಯನ್ನು ಕೌನ್ಸಿಲ್ಲು ಆಂಗೀಕರಿಸುವ ನಂಬಿಕೆಯನ್ನು ವ್ಯಕ್ತಪಡಿಸಿದರು

ಶ್ರೀ ಜಯಪ್ರಕಾಶ ನಾರಾಯಣರು ಪೆಡರೇಷನ್ನಿನಲ್ಲಿ ಕಮ್ಯೂನಿಸ್ಟರು ಸೇರಿಕೊಂಡಿರುವ ವಿಚಾರವನ್ನು ಎತ್ತಿ, ಕಮ್ಯೂನಿಸ್ಟರು ಪೆಡರೇಷನ್ನಿನಲ್ಲಿ ಸೇರಿಕೊಂಡು ಅದರ ಒಗ್ಗಟ್ಟನ್ನು ಮುರಿಯಲು ಸರ್ವ ಸನ್ನಾಹ ಮಾಡುತ್ತಿರುವ್ದಾರೆ.

ಆದ್ದರಿಂದ ಕಮ್ಯೂನಿಸ್ಟರಿಗೆ ಪೆಡರೇಷನ್ನಿನಲ್ಲಿ ಜಾಗವೇ ಇಲ್ಲ ಪೆಡರೇಷ್ ಉಳಿಯಬೇಕಾದರೆ ಕಮ್ಯೂನಿಸ್ಟರು ಅದನ್ನು ಬಿಟ್ಟು ಹೋಗಲೇ ಬೇಕು. ಎಂಬುವನ್ನು ರೈಲ್ವೆ ಕೆಲಸಗಾರರು ಅರಿಯಬೇಕು ಎಂದು ತಮ್ಮ ನಿರ್ಧಾರವನ್ನು ತಿಳಿಸಿದರು.

ನಾನು ಅಕ್ಷಮಾವಾದ ಸಂಧಾನ ಪರೆಯೆ ರೈಲ್ವೆ ಕೆಲಸಗಾರರಿಗೆ ದ್ರೋಹವೆಸಗುತ್ತಿದ್ದೇನೆಂದು ಕಮ್ಯೂನಿಸ್ಟರು ಆಪಾದಿಸುತ್ತಿದ್ದಾರೆ ನಿಜವಾಗಿಯೂ ನಾನು ಹಾಗೆ ದ್ರೋಹವೆಸಗಿದ್ದರೆ ನನ್ನನ್ನು ಅಧ್ಯಕ್ಷಗಾರಿಯಿಂದ ತೆಗೆದು ಹಾಕಿ ಪೆಡರೇಷನ್ನಿನ ಈ ಕೌನ್ಸಿಲ್ಲು ಈ ವಿಚಾರದಲ್ಲಿ ನ್ಯಾಯವಾದ ತೀರ್ಮಾನ ಕೊಡಬೇಕು ಎಂದು ನುಡಿದರು.

ಪೆಡರೇಷ್ ಅಭಿಪ್ರಾಯವನ್ನು ತಿಳಿಸಲು ರೈಲ್ವೆ ಮಂತ್ರಿಗಳೊಡನೆ ಪೆಡರೇಷ್ ಅಧ್ಯಕ್ಷರು ಪತ್ರವ್ಯವಹಾರ ನಡೆಸುವುದು ಅವಶ್ಯವಿರುವ ಸ್ಥಳುಸಿದ್ಧವಾದ ಹಳ್ಳಿ. ನಾನು ನೈಯಕ್ತಿಕವಾಗಿ ರೈಲ್ವೆ ಮಂತ್ರಿಗಳೊಡನೆ ಪತ್ರ ವ್ಯವಹಾರ ನಡೆಸಲಿಲ್ಲ ಪೆಡರೇಷ್ ಗೌರವಯುತವಾದ ಒಪ್ಪಂದಕ್ಕೆ ಯಾವಾಗಲೂ ಸಿದ್ಧವಾಗಿದೆ ಎಂದು ನಾಗ ಪುರದಲ್ಲಿ ನೂಡಿದ ಪೆಡರೇಷನ್ನಿನ ನಿರ್ಧಾರದಂತೆ ವರ್ತಿಸಿದ್ದೇ ಹೊರತು ಮತ್ತೇನೂ ಇಲ್ಲ ಎಂದರು

ನಮ್ಮ ದೇಶದಲ್ಲಿ ಕಾರ್ಮಿಕ ಸಂಘಗಳು ಕೆಲವು ಕಮ್ಯೂನಿಸ್ಟರ ಕೈಯಲ್ಲಿವೆ ಜನಜೀವನದಲ್ಲಿ ಅನಾಯಕ ತ್ವವನ್ನುಂಟುಮಾಡಿ ಸ್ವಾರ್ಥಸಾಧಿಸುವುದೇ ಎಷ್ಟಾದ ಎಲ್ಲ ಕಮ್ಯೂನಿಸ್ಟರ ಇಂದಿನ ನೀತಿಯಾಗಿದೆ ಭಾರತೀಯ ಕಮ್ಯೂನಿಸ್ಟರ ನೀತಿಯೂ ಇದೇ ಆಗಿದೆ

ಸಾಂಘಿಕ ಶಕ್ತಿಯನ್ನು ಒಡೆದು ಗೊಂದಲವೆಬ್ಬಿಸುವುದು ಸುಲಭ ಆದರೆ ಪುನಃ ಕಟ್ಟುವುದು ಬಲು ಕಷ್ಟ!

ವೈಗಾರಿಕೆಗಳು ಮತ್ತು ಸರ್ಕಾರದ ನೈಸರ್ಗಿಯನ್ನು ಕೆಡಿಸಿ, ಭಾರತದ ಶಕ್ತಿ ಬೆಳೆಯದಂತೆ ಮಾಡಿ ರಷ್ಯದ ಬಲವನ್ನು ಹೆಚ್ಚಿಸುವುದೇ ಭಾರತೀಯ ಕಮ್ಯೂನಿಸ್ಟರ ಉದ್ದೇಶವಾಗಿದೆ

ಕಮ್ಯೂನಿಸ್ಟರು ರಷ್ಯದ ಅಡಿಯಾಳುಗಳು

ಈ ಕವ ನೈಸರ್ಗರು ರಷ್ಯದ ಅಡಿಯಾಳುಗಳು ತನ್ನ ನೆರೆಯಲ್ಲಿರುವ ಯಾವ ರಾಜ್ಯವಾಗಿಲೀ ಒಳಗೊಂಡು ತಪ್ಪ ಪ್ರಭಾವದಿಂದ ದೂರವಾಗಿರಕೊಡದು ಎಂಬುದೇ ರಷ್ಯದ ಅಭಿಮತವಾಗಿದೆ ಭಾರತದಲ್ಲಿ ಕಮ್ಯೂನಿಸ್ಟ್ ಸರ್ಕಾರ ಸ್ಥಾಪಿಸಲು ಇಲ್ಲಿಯ ಕಮ್ಯೂನಿಸ್ಟರು ಪ್ರಾಂದಲೆ ನಡೆಸುತ್ತಿದ್ದಲ್ಲಿ ಭಾರತದ ರಷ್ಯದ ಕೈಬಾಡಕ್ಕೆ ಸಿಕ್ಕಲು ನಿರಾಕರಿಸಿದ್ದಲ್ಲಾ ದಾಂಧಲೆ ಮಾಡುತ್ತಿದ್ದಾರೆ

ಇಂತಹವರಿಗೆ ಕಾರ್ಮಿಕ ಹಿತಸಾಧನೆ ಎಲ್ಲಿಂದ ಬರ ಬೇಕು? ತಮ್ಮ ಸ್ವಾರ್ಥಸಾಧನೆಗಾಗಿ ಕಮ್ಯೂನಿಸ್ಟರು ರೈಲ್ವೆ ಮುಷ್ಕರವನ್ನು ದುರುಪಯೋಗಪಡಿಸಿಕೊಳ್ಳಲು ಈಗಾಗಲೇ ಶಕ್ಯ ಸನ್ನಾಹ ಮಾಡುತ್ತಿದ್ದಾರೆ

ಸರ್ಕಾರದ ವ್ಯವಸ್ಥೆಯನ್ನು ಕೆಡಿಸುವ ಈ ಧಾಂದಲೆ ಗಳು ಕ್ರಾಂತಿ ಎನ್ನುವುದು ಬರೀ ಭ್ರಾಂತಿ! ಕಮ್ಯೂನಿಸ್ಟರಿಗೆ ಹೊರಗಿನ ಎಷ್ಟೇ ಸಹಾಯವಿದ್ದರೂ ಭಾರತದಲ್ಲಿ ಅವರ ಬೇಳೆ ಬೇಯದು ಎಂದು ಹೇಳಿದರು

ದೇಶದ ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಮುಷ್ಕರ ಗಳು ಕೂಡದು ಎಂಬ ಕೂಗಿನ ಮರೆಯಲ್ಲಿ ಸ್ಯಾಬಿಸ್ಟ್ ನೀತಿ ಬೆಳೆಯುತ್ತಿರುವ ಪರಿಸ್ಥಿತಿಯನ್ನು ಕಾರ್ಮಿಕರು ಗುರುತಿಸಿ ದುಡುಕಿನ ಎಚ್ಚರಿಕೆಯಿಂದ ವರ್ತಿಸಬೇಕೆಂದು ತಿಳಿಸಿದರು

ಸರ್ಕಾರವು ರೈಲ್ವೆ ಕೆಲಸಗಾರರಿಗೆ ಇತ್ತಿರುವ ರಿಯಾಯಿತಿಗಳು ಹೆಚ್ಚಾಗಿಲ್ಲದಿದ್ದರೂ ಅಂಗೀಕಾರ ಯೋಗ್ಯವಾಗಿವೆ ಎಂದೂ, ಇಂದಿನ ಪರಿಸ್ಥಿತಿಯಲ್ಲಿ ಮುಷ್ಕರಕ್ಕೆ ಜನ ಬೆಂಬಲ ದೊರೆಯಲಾರದೆಂದೂ ಹೀಗಿರುವಾಗ ಮುಷ್ಕರದ ಆಲೋಚನೆಯನ್ನು ತೊರೆದು ರೈಲ್ವೆ ಕೆಲಸಗಾರರು ರಾಜಕೀಯವಾಗಿ ಸಾಂಘಿಕ ಶಕ್ತಿ ಬಡೆದು ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಸಲಹೆಯಿತ್ತರು

ಜಪಾನನ್ನು ರಕ್ಷಿಸಲು ಅಮೆರಿಕಕ್ಕೆ ಸಾಧ್ಯವಿಲ್ಲವೆಂದು ಹೇಳಿಲ್ಲ

ಅಮೆರಿಕ ನೌಕ ಇಲಾಖೆಯ ಸೆಕ್ರೆಟರಿಗಳಾದ ಮಿ|| ರಾಯಲ್‌ರವರ ಹೇಳಿಕೆ

ಯುದ್ಧ ಜರುಗಿದರೆ ಜಪಾನನ್ನು ಅಮೆರಿಕವು ರಕ್ಷಿಸುವುದು ಸಾಧ್ಯವಿಲ್ಲ ಎಂಬುವಾಗಿ ನಾವು ಹೇಳಿಲ್ಲ— ಟೋಕಿಯೋದ ಪತ್ರಿಕಾ ಗೋಷ್ಠಿಯಲ್ಲಿ ಈ ವಿಚಾರವನ್ನು ನಾವು ಚರ್ಚಿಸಿಲ್ಲ. ಎಂಬುದಾಗಿ ಅಮೆರಿಕದ ಸೇನಾ ಸೆಕ್ರೆಟರಿಗಳಾದ ಮಿ|| ಕೆವಿನ್ ರಾಯಲ್‌ರವರು ಒಂದು ಹೇಳಿಕೆ ಹೊರಡಿಸಿದ್ದಾರೆ.

ಅಮೆರಿಕವು ಯಾರೊಂದಿಗೆ ಬೇಕಾದರೂ ಯುದ್ಧ ಮಾಡಿ ಜಗೆದ್ದಿಸಿಕೊಳ್ಳಲು ಶಕ್ತಿಸಾಮರ್ಥ್ಯಗಳನ್ನು ಪಡೆದಿದೆ. ಜಪಾನಿನಿಂದ ಅಮೆರಿಕನ್ನರು ಹೊರಡುವ ಉದ್ದೇಶವೇ ಇಲ್ಲ ನಾನು ಟೋಕಿಯೋದಲ್ಲಿ ಸ್ಥಿನಿಕ ಅಥವಾ ಯಾವುದೇ ವಿಚಾರವಾಗಿ ಹೇಳಿಕೆ ಹೊರಡಿಸಿಲ್ಲ. ಈ ವಿಚಾರವಾಗಿ ಟೋಕಿಯೋ ಪತ್ರಿಕಾ ಗೋಷ್ಠಿಯಲ್ಲಿ ಚರ್ಚೆಯಾಗಿಲಿಲ್ಲ. ಮತ್ತು ನಾವು ಹೇಳಿಕೆ ತೊರಿಸಿಲ್ಲ ಎಂದು ಮಿ|| ರಾಯಲ್‌ರವರು ಹೇಳಿದ್ದಾರೆ.

ಬೃಹದ್ರಾಜಸ್ಥಾನದ ರಚನೆಯ ಒಪ್ಪಂದಕ್ಕೆ ರಾಜರ ಸಹಿ

ಭಾರತದಲ್ಲೆಲ್ಲಾ ಅತ್ಯಂತ ಭಾರೀ ಅಡಚಣೆ ಪ್ರದೇಶವಾಗಿದ್ದ ಬೃಹದ್ರಾಜಸ್ಥಾನವು ಏಪ್ರಿಲ್ ಮೊದಲನೇ ವಾರದಲ್ಲಿ ರಚಿತವಾಗಿ ಜಾರಿಗೆ ಬರಲಿದೆ ಈ ಬಗ್ಗೆ ಒಪ್ಪಂದಕ್ಕೆ ಸಂಬಂಧಪಟ್ಟ ರಾಜಸ್ಥಾನದ ರಾಜರು ದೆಹಲಿಯಲ್ಲಿ ತಮ್ಮ ಸಹಿ ಹಾಕಿದರು.

ಬೃಹದ್ರಾಜಸ್ಥಾನದಲ್ಲಿ ಜೈಪುರ, ಜೋಧ್‌ಪುರ, ಬಿಕಾನೀರ್, ಜೈಸಲ್ಮೀರ್ ಸಂಸ್ಥಾನಗಳೂ ಈಗಿನ ರಾಜಸ್ಥಾನ ಯೂನಿಯನ್ನಿನ ಉದಯಪುರ, ಕೋಟಾ, ಬೂಂದಿ ಮುಂತಾದ ಸಂಸ್ಥಾನಗಳೂ ಸೇರಿ ಒಟ್ಟು ೧೨೦೪೬ ಚದರ ಮೈಲಿ ವಿಸ್ತೀರ್ಣದ ಪ್ರಾಂತ್ಯವಾಗಿ ೧೭೦ ಲಕ್ಷ ಪ್ರಜಾಸಂಖ್ಯೆಯುಳ್ಳದಾಗುವುದು ಇದರಲ್ಲಿ ವಾರ್ಷಿಕ ಆದಾಯ ೧೧ ಕೋಟಿ ರೂ ಗಳು

ಸಂಸ್ಥಾನಗಳ ಇಲಾಖಾ ರಾಜಕೀಯ ಸಲಹೆಗಾರ ರಾದ ಶ್ರೀ ವಿ ಪಿ ಮೆನನ್‌ರವರು ಉದಯಪುರ ಮತ್ತು ಬಿಕನೇರ್ ಅರಸರ ಸಹಿ ಪಡೆಯಲು ಇತ್ತರಲ್ಲೇ ಅಲ್ಲಿಗೆ ತೆರಳಿದ್ದಾರೆ ೫ ಸಂದರ್ಭದಲ್ಲಿ ಮುಂದಿನ ವಾರಿ ಗ್ವಾಲಿಯರ್, ಭೂಪಾಲ್ ಮತ್ತು ಹೈದರಾಬಾದಿಗೆ ಭೇಟಿಕೊಡುವರು

ಈಗ ಮತ್ಸ್ಯ ಯೂನಿಯನ್ನಿನ ಭವಿಷ್ಯ ಕುರಿತು ಚರ್ಚೆ ನಡೆಯುತ್ತಿದೆ ಅಳ್ವಾರ್ ಮತ್ತು ಕರೌಲಿ ಸಂಸ್ಥಾನಗಳು ಬೃಹದ್ರಾಜಸ್ಥಾನದಲ್ಲೂ ಭರತಪುರ ಮತ್ತು ಧೋಲ್‌ಪುರ ಸಂಸ್ಥಾನಗಳು ಸಂಯುಕ್ತ ಪ್ರಾಂತ್ಯದಲ್ಲಿ ವಿಕ್ಯತಾಗುವ ನಿರೀಕ್ಷೆಯಿದೆ.

ಸ್ವೀಕಾರ

ತಿರಹಳ್ಳಿ ತಾ|| ಇಟಗಿ ಗ್ರಾಮದ ಬೃಹಸ್ಪತಿಪದ ಶ್ರೀ|| ಸಿದ್ಧರಾಮಯ್ಯನವರು ತಮ್ಮ ಮರದಲ್ಲಿ ತಮ್ಮ ಮೊಮ್ಮಕ್ಕಳ ದೀಕ್ಷಾ ಮತ್ತು ವಿವಾಹ ಸಮಾರಂಭವನ್ನು ನೆರವೇರಿಸಿದ ಸಮಯದಲ್ಲಿ ವಧೂವರರಕತೆಯೆಂದ ಪ್ರಭಾ ಪೋಷಣಕ್ಕೆಯಸ್ಕರ ಸಮರ್ಪಿಸಲ್ಪಟ್ಟ **3** ರೂ. ಗಳು ಒಟ್ಟೂರು ಹಿರೇಮಠದ ಶ್ರೀ|| ಪಂ|| ಬ್ರ|| ಪಟ್ಟದಸ್ವಾಮಿ ಗಳವರದ್ವಾರಾ ತಲಪಿರುತ್ತವೆ

ಬೆಂಗಳೂರು ಕಂಟೋನ್ಮೆಂಟ್‌ನಲ್ಲಿರುವ ಮಿ|| ರಾಗಿ ಟಿ ಬಿ ಬಸವರಾಜಯ್ಯನವರು ಕಾಶೀ, ರಾಮೇಶ್ವರಾ ದೈವೇಕ ಯಾತ್ರೆಗಳನ್ನು ನೆರವೇರಿಸಿಕೊಂಡು ಬಂದು ತತ್ಪೂರ್ಣಂಬಧವಾಗಿ ಗಂಗಾಪೂಜಾದಿಗಳನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾ ಪೋಷಣಕ್ಕೆಯಸ್ಕರ **2** ರೂ. ಗಳನ್ನು ಸಮರ್ಪಿಸಿದ್ದಾರೆ

ಸೊರಬ ತಾ|| ಮರೂರು ಪಟೇಲ್ ಎಂ ಬಿ ಗುರು ಒಪ್ಪಪ್ಪಗೌಡರು ತಮ್ಮ ಪುತ್ರ ಚಿ|| ಎಂ ಶಿಪ್ಪಯ್ಯಗೌಡನ ವಿವಾಹಮಹೋತ್ಸವವನ್ನು ಇದೇ ಮಾಘ ಶುದ್ಧ ೧೧ ಬುಧವಾರ ದಿನಸ ಕುಪ್ಪೆ ಎಂಬ ಗ್ರಾಮದಲ್ಲಿ ಮತಾ ವೈಭವದೊಡನೆ ನೆರವೇರಿಸಿದ ಸಮಯದಲ್ಲಿ ಪ್ರಭಾ ಪೋಷಣಕ್ಕೆಯಸ್ಕರ **2** ರೂ ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ನಿಜಾಂ ಇಲಾಖಾ ಗುಲ್ಬರ್ಗಾ ಜಲ್ಲಾ ಹಾಗರಗುಂಡಿಗಿ. ಗ್ರಾಮದಲ್ಲಿ ಶ್ರೀ ಶರಣಬಸವೇಶ್ವರ ಪುರಾಣಪ್ರವಚನ ವನ್ನು ಪ್ರಾರಂಭಿಸಿ ಮಾಘ ಶುದ್ಧ ಅಷ್ಟಮಿ ದಿವಸ ನಂದೂರು ಹೋಳಕಟ್ಟೆ ಹಿರೇಮಠದ ಶ್ರೀ ಪಂಡಿತ ಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಸಮಾಪ್ತಿಗೊಳಿಸಿದ ಸಮಯದಲ್ಲಿ ಸಮರ್ಪಿಸಲ್ಪಟ್ಟ **1** ರೂ. ಯು ಮಿ|| ರಾಜಿ ಶೆಟ್ಟರಿಂದ ಪ್ರೋರಿಸ್ ಪಾಟೀಲ್ ಇವರದ್ವಾರಾ ಕಲ್ಪಿರುತ್ತದೆ.

ಶ್ರೀ ಗಂಗಾಧರಯ್ಯ ಮೈಸೂರು ಇವರು ತಮ್ಮ ಪುತ್ರ ಚಿ|| ರಾಜಶೇಖರಯ್ಯ ಎಂಬ ಹೆಸರಿಗೆ ತಾ|| ೩೧-೧-೪೯ ನೆಯ ಸೋಮವಾರ ದಿವಸ ದೀಕ್ಷೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ **1** ರೂ. ಯನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಈ ಮೇಲ್ಕಂಡ ಮಹಾಕಯರಿಗೆಲ್ಲಾ ಶ್ರೀಜಗದ್ಗುರು ವಂಜಾಜಾರ್ಯರು ನಿತ್ಯಮಂಗಲವಪ್ಪಾಯಲೆಂದು ಹಾರೈಸುತ್ತೇವೆ.

ರಾಜಧಾನಿಯಲ್ಲಿ ಸರ್ದಾರ್ ಪಟೇಲರ ಕಾರ್ಯಕ್ರಮ

ಭಾರತದ ಉಪಪ್ರಧಾನಿ ಸರ್ದಾರ್ ವಲ್ಲಭಭಾಯಿ ಪಟೇಲರು ೪ನೇ ತಾ॥ ಬೆಳ್ಗ್ಗೆ ೯ ಗಂಟೆಗೆ ವಿಮಾನದಲ್ಲಿ ರಾಜಧಾನಿಗೆ ಆಗಮಿಸುವರು ಸಂಜೆ ೪ ಗಂಟೆಗೆ ರಾಜಧಾನಿಯ ಪೌರಸಭೆಯವರು ಅವರ ಗೌರವಾರ್ಥ ಸ್ವಾಗತ ಸಮಾರಂಭವನ್ನೇರ್ಪಡಿಸಿದ್ದಾರೆ ಶ್ರೀಮನ್ಮಹಾರಾಜರವರು ಚಾಮುಂಡಿ ಜಂಬೂಸವಾರಿಯಲ್ಲಿ ಅವರಿಗೆ ಗೌರವಾರ್ಥವಾಗಿ ಗಾರ್ಡ್‌ಆಫ್‌ಹಾನರ್ ಏರ್ಪಡಿಸಿರುವರೆಂದು ಗೊತ್ತಾಗಿದೆ

೫ನೇ ತಾ॥ ಬೆಳಿಗ್ಗೆ ೯ ಗಂಟೆಗೆ ಬೆಂಗಳೂರಿಗೆ ತೆರಳುತ್ತಾರೆ ಬೆಂಗಳೂರಿನಲ್ಲಿ ಸಂಜೆ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತಾರೆ ೬ನೇ ತಾ॥ಬೆಳಿಗ್ಗೆ ೭ ಗಂಟೆಗೆ ಬೆಂಗಳೂರಿನಿಂದ ವಿಮಾನದಲ್ಲಿ ಹೈದರಾಬಾದಿಗೆ ಪ್ರಯಾಣಮಾಡುತ್ತಾರೆ

ಬೆಳ್ಳಾರದ ಚಿನ್ನದಗಣಿ

ಮೈಸೂರು ದೇಶದ ಬೆಳ್ಳಾರಗ್ರಾಮದಲ್ಲಿ ಒಂದು ಖಾಸಗಿ ಸಂಸ್ಥೆಯ ಚಿನ್ನವುಳ್ಳ ಕಲ್ಲಿನ ಸಾಲು ೩೦೦೦ ಅಡಿ ಉದ್ದದಷ್ಟು ಇರುವುದೆಂದೂ ಅದರಿಂದ ಚಿನ್ನದ ಅಂಶವುಳ್ಳ ಕಲ್ಲು ಕೆಲವು ಸಾವಿರ ಟನ್ ಸಿಕ್ಕಬಹುದೆಂದೂ ಇದರಲ್ಲಿ ಟನ್‌ಗೆ ೯ ಔನ್ಸ್ ಟಿ ಸಾಧಾರಣ ಗ್ರೇಡಿನ ಚಿನ್ನ ದೊರೆಯುವುದೆಂದೂ ತಿಳಿಸಿರುವ ವ್ಯಾಪಾರದದೃಷ್ಟಿಯಿಂದ ಆ ಖಾಸಗಿ ಕಂಪೆನಿಗೆ ಲಾಭ ಕೋರಿಬರಲಿಲ್ಲ ವಾದ್ದರಿಂದ ಸಮ್ಮನಾಯಿತು ಆನಂತರ ಸರಕಾರದವರು, ೧೯೪೪ರಲ್ಲಿ ೧೨ ಲಕ್ಷ ರೂ ಕೊಟ್ಟು ಆಲ್ಲಿ ಚಿನ್ನ ತೆಗೆಯುವ ಯೋಜನೆಯನ್ನು ಸ್ಥಾರಂಭಿಸಿದರು ೧೯೪೭ರಲ್ಲಿ ಚಿನ್ನದ ಕಲ್ಲನ್ನು ಪುಡಿಮಾಡುವ ಯಂತ್ರವನ್ನು ಅಲ್ಲಿ ಸ್ಥಾಪಿಸಿದರು.

ಇದುವರೆಗೂ ಎಂದರೆ ೧೯೪೮ರ ವರೆಗೆ ೬೧೩ ಟನ್ಸ್ ಕಚ್ಚಾ ಚಿನ್ನ ದೊರೆತಿದ ಇದರಿಂದ ೫೬೧೯ ಟನ್ಸ್ ಚಿನ್ನವನ್ನು ಶೋಧಿಸಿ ಮಾರಿದ್ದರಿಂದ ರೂ ೧೩೩೮೮೦೪ ೯ ೦ ಬಂದಿದೆ

ಈಗ ನಡೆದಿರುವ ಸರ್ವೇಯಿಂದ ಮೊದಲು ಊಹಿಸಿದ ಎರಡರಷ್ಟು ಚಿನ್ನದ ಕಲ್ಲಿನ ಸಾಲು ಅಲ್ಲಿ ಇದೆಯೆಂದು ತಿಳಿದು ಬಂದಿದೆ ಆದ್ದರಿಂದ ಸರಕಾರವು ಹತ್ತು ವರುಷದ ಯೋಜನೆಯೊಂದನ್ನು ತಯಾರಿಸಿದ ಇಲ್ಲಿಗೆ ನೀರಿನ ಮತ್ತು ವಿದ್ಯುಚ್ಛಕ್ತಿ ಸರಬರಾಜು ಮಾಡಲು ಸರಕಾರದವರು ೩॥ ಲಕ್ಷ ರೂಪಾಯಿ ಕೊಟ್ಟಿರುತ್ತಾರೆ

ಲಕ್ಕವಳ್ಳಿ ಜಲಾತಯದ ಬಳಿ ಚಿನ್ನ ತೆಗೆಯಲು ಪ್ರಯತ್ನ

ಮೈಸೂರು ಸಂಸ್ಥಾನದ ಲಕ್ಕವಳ್ಳಿ ನೀರಾವರಿ ಯೋಜನೆಯಿಂದ ಚಿನ್ನದ ಅದಿರುಳ್ಳ ವಿಸ್ತಾರವಾದ ಭೂಮಿಯು ನೀರಿನಲ್ಲಿ ಮುಳುಗಿ ಹೋಗುವುದು ಈ ಭೂಮಿಯಲ್ಲಿ ಸಿಗುವ ಚಿನ್ನದ ಖಚಿತ ಸಂಪತ್ತು ಅಧಿಕ ವಾಗಿದೆಯೆಂದೂ, ೧೦ ವರುಷಗಳಿಗೊಳಗಾಗಿ ಚಿನ್ನವೆಲ್ಲ ವನ್ನೂ ತೆಗೆಯಬೇಕೆಂಬ ಉದ್ದೇಶವನ್ನು ಮೈಸೂರು ಸರಕಾರದವರು ಹೊಂದಿರುವರೆಂದೂ ತಿಳಿದುಬಂದಿದೆ. ಈ ವಿಚಾರದಲ್ಲಿ ಆರಂಭದ ಸರ್ವೇಕಾರ್ಯವೆಲ್ಲವೂ ಮುಗಿದಿದೆಯೆಂದು ಮಂತ್ರಿಗಳಾದ ಜನಾಬ್ ಹಿರೇಭರು ತಿಳಿಸಿರುತ್ತಾರೆ

ಕೋಲಾರದಲ್ಲಿರುವ ನಾಲ್ಕು ಗಣಿಗಳಲ್ಲದೆ ಸಂಸ್ಥಾನದ ಇತರ ಕೆಲವು ಸ್ಥಳಗಳಲ್ಲಿಯೂ ಚಿನ್ನವು ಸಿಕ್ಕಿದೆ ಅಂತಹ ಆರು ಸ್ಥಳಗಳನ್ನು ಈಗಾಗಲೇ ಭೂಶಾಸ್ತ್ರಜ್ಞರು ಪರಿಶೀಲಿಸಿದ್ದಾರೆ. ಕುಮಟಳ್ಳಿಯ ಬಳಿಯ ಬೆಳ್ಳಾರದಲ್ಲಿ ಚಿನ್ನವು ಅಧಿಕವಾಗಿ ಸಿಕ್ಕುವ ಸಂಭವವಿದೆಯೆಂದು ತಿಳಿದುಬಂದಿದೆ.

ನಂಜನಗೂಡು ಶ್ರೀಕಾಳಹಸ್ತೀಶ್ವರ ಸ್ವಾಮಿಗಳವರಿಂದ ಎಂದೋಮೆಂಟ್ ಬಿಲ್ಲು ಖಂಡನೆ!

ಪ್ರಾಚೀನ ಕಾಲದಿಂದಲೂ ಅದರಲ್ಲಿಯೂ ವಿದೇಶೀಯರ ಆಡಳಿತವಲ್ಲಿಯಂದು ಸಹ ಯಾವ ತೊಂದರೆಯೂ ಇಲ್ಲದ ನಡೆದುಬಂದಿರುವ ಪವಿತ್ರ ಮಠಗಳಿಗೆ ಇಂದು ಸ್ವತಂತ್ರ ಭಾರತದಲ್ಲಿ ವಿಪತ್ತೊದಗಿರುವುದು ವಿಪಾದಾಸ್ಪದವಾಗಿದ

ಸ್ವರ್ಗಕ್ಕೂ ಸ್ವಾತಂತ್ರ್ಯವಿರುವ ಈ ಕಾಲದಲ್ಲಿ ಮೊದಲಿನಿಂದಲೂ ಸ್ವತಂತ್ರವಾಗಿರುವ ಮಠಗಳ ಸ್ವಾತಂತ್ರ್ಯಾಪಹರಣವಾದುದೂ ಸ್ವತಂತ್ರದೇಶಕ್ಕೆ ಭೂಷಣವೇ? ಇದು ಸ್ವಾತಂತ್ರ್ಯದ ದುರುಪಯೋಗವಲ್ಲವೇ?

ಇಂದಿನ ಭಾರತ ಸರ್ಕಾರವು ಜಾತ್ಯತೀತ ರಾಜ್ಯವೆಂದು ಸಾರಿರವಾಗ ಮತ್ತು ಭಾರತ ಪೌಟಿನಾ ಸಮಿತಿಯಲ್ಲಿ ನಾನಾದ ಮೂಲಭೂತ ಹಕ್ಕುಗಳ ೩೦ನೇ ಕಾಲಮ್ಮಿನಲ್ಲಿ ಸಾರಿರುವಂತೆ 'ಪ್ರತಿಯೊಂದು ಧರ್ಮ ಸಂಸ್ಥೆಯು ತನ್ನ ಪದ್ಧತಿಯಂತೆ, ಆಚಾರವಿಚಾರ ನಡೆಸಿಕೊಂಡು ಒಂದಲು ಆಯಾ ಸಂಸ್ಥೆಗಳ ಚರಸ್ಥಿರ ಆಸ್ತಿಗಳನ್ನು ಸ್ವಾಮಿತ್ವವನ್ನು ಪಡೆದು ಆಡಳಿತ ನಡೆಸಿಕೊಂಡು ಒರಲು ಸ್ವತಂತ್ರವಿವೆ' ಎಂದು ಒಪ್ಪಿ ದರ್ಮದಿರಿಗಳ ಅದಿಕಾರವನ್ನು ಮನ್ನಿಸಿರುವಾಗ ಭಾರತದ ಒಂದಂಗವಾದ ಮದ್ರಾಸು ಸರ್ಕಾರವು ಫೌಟಿನಾಸಮಿತಿಯ ಮೂಲ ಭೂತ ಹಕ್ಕುಗಳ ನಿರ್ಣಯಕ್ಕೆ ವಿರುದ್ಧವಾಗಿ "ಎಂಡೋಮೆಂಟ್" ಬಿಲ್ಲನ್ನು ಅಸೆಂಬ್ಲಿಯಲ್ಲಿ ಮಂಡಿಸಿ ಅನೇಕ ಸದಸ್ಯರ ವಿರೋದವನ್ನು ದಿಕ್ಕರಿಸಿ ಬಹುಮತ ಬಲದಿಂದ ಬಿಲ್ಲನ್ನು ಸಲೆಕ್ಟ್ ಕಮಿಟಿಗೊಪ್ಪಿಸಿರುವುದು ಕೇಂದ್ರ ಸರ್ಕಾರದ ನೀತಿಗೆ ಕೊಡಲಿ ಪೆಟ್ಟು ಕೊಟ್ಟಂತಾಗಿದೆ

ನೆಡರಲ್ ಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಶ್ರೀ ಎಸ್ ವರದಾಚಾರಿ ನ್ಯಾಯಶಾಸ್ತ್ರ ಕೋವಿದರ್ ಅಲಂಡಿ ಕೃಷ್ಣಸ್ವಾಮಯ್ಯರ್ ಮತ್ತು ಜಸ್ಟೀಸ್ ಚಂದ್ರಶೇಖರಯ್ಯರ್, ಶ್ರೀ ಕೆ ಬಾಲಸುಬ್ರಹ್ಮಣ್ಯ ಅಯ್ಯರ್ ಹಾಗೂ ಶ್ರೀ ಟಿ ವೆಂಕಟರಾಮಶಾಸ್ತ್ರಿ ಮೊದಲಾದ ನ್ಯಾಯಶಾಸ್ತ್ರಪಟುಗಳು ಈ ಬಿಲ್ಲನ್ನು ತಲೆಬುಡ ಸರ್ಕಾರಕ್ಕೆ ಅದಿಕಾರವಿಲ್ಲವೆಂದು ಹೇಳದೂರ ಕೇವಲ ಅಡ್ವೋಕೇಟ್ ಜನರಲ್‌ರವರೊಬ್ಬರ ಒಪ್ಪಿಗೆಯ ಮಾತ್ರ ದಿಂದೇರ ಬಿಲ್ಲು ತರಲು ಅಧಿಕಾರವಿದೆಯೆಂದು ಮಂತ್ರಿಗೆ ಕೊಬ್ಬರು ಅಸೆಂಬ್ಲಿಯಲ್ಲಿ ಹೇಳಿರುವುದು ನ್ಯಾಯಬದ್ಧವಲ್ಲ

ಮಠಗಳನ್ನು ಯಾವ ಸರ್ಕಾರವೂ ಸ್ಥಾಪಿಸಲಿಲ್ಲ ಮತ್ತು ಇಂದಿನ ಸರ್ಕಾರವು ಅವಕ್ಕೆ ಏನೂ ಸಹಾಯ ಮಾಡುತ್ತಿಲ್ಲ ಅಂದಮೇಲೆ ತನ್ನಿಂದ ಸ್ಥಾಪಿಸಲ್ಪಡದ ಮತ್ತು ತನ್ನ ಅಧಿಕಾರಕ್ಕೊಳಪಡದ ಮಠಗಳ ವಿಷಯದಲ್ಲಿ ಕೈಹಾಕಲು ಸರ್ಕಾರಕ್ಕೆ ಖಂಡಿತ ಹಕ್ಕಿಲ್ಲ ಧರ್ಮ ಮತ್ತು ತತ್ವಪ್ರಚಾರಕ್ಕಾಗಿ ಅನೇಕ ಜನ ಆಚಾರ್ಯರು ಭಾರತದಲ್ಲಲ್ಲಿ ಅನೇಕ ಮಠಗಳನ್ನು ಸ್ಥಾಪಿಸಿದರು ಇಂತಹ ಪ್ರತಿ ಮಠಗಳಿಗೂ ಲಕ್ಷಾಂತರ ಜನ ಶಿಷ್ಯರು ಭಕ್ತಿ ಶ್ರದ್ಧೆಯಿಂದ ನಡೆದುಕೊಳ್ಳುತ್ತಿದ್ದಾರೆ. ಮಂತ್ರಿಗಳು ಹೇಳಿದಂತೆ ಮಠಗಳಲ್ಲಿ ಅವ್ಯವಸ್ಥೆ ಇದ್ದರೆ ಅದನ್ನು ಸರಿಪಡಿಸಲು ಕೋರ್ಟುಗಳು ಅವೆ. ಮತ್ತು ಶಿಷ್ಯರಿದ್ದಾರೆ. ಅದರಲ್ಲೂ ಇಂದು ಮಠದ ಶಿಷ್ಯರಿಗೆ ಆ ಮಠದ ಆಗು ಹೋಗುಗಳ ಬಗ್ಗೆ ಅಧಿಕಾರವಿದೆಯೇ ಹೊರತ. ಬೇರೆ ಬೇರೆ ಮಠಗಳ ಬಗ್ಗೆ ಅಧಿಕಾರವಿಲ್ಲವೆಂದಮೇಲೆ ಜಾತ್ಯತೀತ ಸರ್ವಜನ ಪ್ರತಿನಿಧಿಯಿಸಿದ ಸರಕಾರಕ್ಕೆ ಮಠಗಳ ವಿಚಾರದಲ್ಲಿ ಕೈಹಾಕಲು ಹೇಗೆ ಅಧಿಕಾರ ಬಂದೀತು? ಜನತಾ ಸರ್ಕಾರವೆಂದು ಹೇಳಿಕೊಳ್ಳುವ ನರು ಈ ವಿಚಾರದಲ್ಲಿ ಜನಾಭಿಪ್ರಾಯವು ಕೇಳಲು ಏಕೆ ಹಿಂಜರಿದರು? ಇದು ಪ್ರಜಾ ಸರ್ಕಾರದ ಲಕ್ಷಣವೇ? ಸರ್ಕಾರದ ಈ ನೀತಿಯನ್ನು ನೋಡಿದರೆ ಧರ್ಮಪೀಠಾಧಿಪತಿಗಳ ಅಧಿಕಾರವನ್ನು ಕಸಿದುಕೊಂಡು ಅವರ ಮೆಟ್ಟಿನ ಕೆಳಗಿಳಿಸಿ ಅವರನ್ನು ಸಾಮಾನ್ಯ ಕಮೀಷನರ ಅಡಿಯಾಳನ್ನಾಗಿ ಮಾಡುವುದೇ ಸರ್ಕಾರದ ಉದ್ದೇಶ್ಯ ವೆಂದು ಸ್ಪಷ್ಟವಾಗುತ್ತದೆ. ಇದು ಯಾವ ಉದ್ದೇಶ್ಯದಿಂದ ಮಠಗಳು ಸಾಧಿಸಲ್ಪಟ್ಟಿವೋ ಅದಕ್ಕೆ ಪೂರ್ತಿ ಧಕ್ಕೆ ತರತಕ್ಕದ್ದಾಗಿದೆಯಲ್ಲದೆ ಬಿಂದೂ ಧರ್ಮಕ್ಕೇ ದೊಡ್ಡ ವಿಪತ್ತನ್ನು ತರತಕ್ಕದ್ದಾಗಿದೆ. ಈ ಕಾರಣದಿಂದ ನಾವು ಲಕ್ಷಾಂತರ ಜನ ಶಿಷ್ಯರ ಪರವಾಗಿ ಈ ಬಿಲ್ಲನ್ನು ಪೂರ್ಣವಾಗಿ ವಿರೋಧಿಸಿ ಖಂಡಿಸುವುದಲ್ಲದೆ, ಕೂಡಲೇ ಈ ಬಿಲ್ಲಿನಿಂದ ಮಠಗಳನ್ನು ವಿನಹಿಸಿ ಪ್ರಜಾರಾಜ್ಯದ ನೀತಿಯನ್ನೂ ಸಾರ್ವಜನಿಕರ ಬೆಂಬಲವನ್ನೂ ಸರ್ಕಾರದವರು ಕಾಯ್ದುಕೊಳ್ಳುವಂತೆ ಸರ್ಕಾರದ ಪ್ರಥಮ ಕರ್ತವ್ಯವೆಂದು ಈ ಮೂಲಕ ಸರ್ಕಾರಕ್ಕೆ ಸೂಚಿಸುತ್ತೇವೆ

ನುರಾಧಿಪತಿಗಳಿಗೆ ಮತ್ತು ಸಾರ್ವಜನಿಕರಿಗೆ ಸಮ್ಮತವಲ್ಲದ ಮತ್ತು ಸಂದೇಹಾಸ್ಪದವಾದ ಈ ಬಿಲ್ಲನ್ನು ಸೆಲೆಕ್ಟ್ ಕಮಿಟಿಯವರು ಬಹು ಜಾಗರೂಕತೆಯಿಂದ ಪರಿತೀಲಿಸಬೇಕು ಮತ್ತು ನುರಾಧಿಪತಿಗಳ ಹಾಗೂ ಶಿಷ್ಯಮಂಡಲಿಯ ಅಭಿಪ್ರಾಯವನ್ನು ಸರಿಯಾಗಿ ತಿಳಿದು ಮುಂದುವರಿಸಬೇಕು ಘಟನಾ ಸಮಿತಿಯ ಮೂಲ ಭೂತ ಹಕ್ಕುಗಳ ನಿರ್ಣಯದ ಪ್ರಕಾರ ಸರ್ಕಾರದ ಅಧಿಕಾರಕ್ಕೆ ಒಳಪಡದ ಮಠಗಳ ಸ್ವಾತಂತ್ರ್ಯವನ್ನು ವಿಮರ್ಶಿಸುವಾಗ ಈ ಮೂಲಭೂತ ಹಕ್ಕುಗಳ ನಿರ್ಣಯವನ್ನು ಯಾವ ಕಮಿಟಿಯು ಕೇಂದ್ರದಲ್ಲಿ ತಯಾರು ಮಾಡಿದೆಯೋ ಆ ಸಮಿತಿಯ ಪೂರ್ಣ ಸಲಹೆ ಮತ್ತು ಒಪ್ಪಿಗೆಯನ್ನು ಪಡೆದು, ಜನಾಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಈ ವಿಚಾರದಲ್ಲಿ ಮುಂದುವರೆಯಬೇಕೆಂದು ಸೆಲೆಕ್ಟ್ ಕಮಿಟಿಯವರಿಗೆ ನಮ್ಮಿ ಸಲಹೆಯನ್ನು ಸೂಚಿಸುತ್ತೇವೆ

ದೀಕ್ಷಾ ಮತ್ತು ನಿವಾಹ ಸಮಾರಂಭ

ಧಾರವಾಡ ಡಿ॥ ವಿರಹಟ್ಟೆ ತಾ॥ ಇಟಗಿ ಗ್ರಾಮದ ಬೃಹನ್ಮಠದ ಶ್ರೀ॥ ಸಿದ್ಧರಾಮಯ್ಯನವರು ತಮ್ಮ ಮೊಮ್ಮಕ್ಕಳ ಮತ್ತು ಇತರ ವಟುಗಳ ದೀಕ್ಷಾ ಸಮಾರಂಭವನ್ನು ಇದೇ ಮಾಘ ಶುದ್ಧ ೧೩ ಶುಕ್ರವಾರ ದಿವಸ ಬಟ್ಟೂರು ಹಿರೇಮಠದ ಶ್ರೀ ಪಟ್ಟದಸ್ವಾಮಿಗಳವರ ಸನ್ನಿಧಿಯಲ್ಲಿ ಮಹಾವೈಭವದೊಡನೆ ನೆರವೇರಿಸಿದರು ಅದೇ ದಿವಸ ಚಿ॥ ಚಂದ್ರಶೇಖರಯ್ಯನ ವಿವಾಹಮಹೋತ್ಸವವನ್ನು ಸಹ ಸಂಭ್ರಮದೊಡನೆ ನೆರವೇರಿಸಿದರು ಬಹುಜನರಿಗೆ ಅನ್ನಸಂತರ್ಪಣೆಯು ನೆರವೇರಿತು ಈ ಮಂಗಲಸಮಯದಲ್ಲಿ ಸದರಿಯವರು ಪ್ರಭಾಪೂರ್ಣಣಕ್ಕೇಶ್ವರ ೨ ರೂ. ಗಳನ್ನೂ, ವಧುವಿನ ಕಡೆಯವರಾದ ನೇ॥ ಮಲ್ಲಯ್ಯನವರು ಮುದಗಲ್ಲಮಠ ಸಾ॥ ಸಾಸಲವಾಡ ಇವರು ೧ ರೂ. ಯನ್ನೂ ಸಮರ್ಪಿಸಿದರು ಶ್ರೀಜಗದಾಚಾರ್ಯರು ಸರ್ವರಿಗೂ ಸನ್ಮಂಗಲಗಳನ್ನು ಸಮ್ಮಗ್ರಹಿಸಲೆಂದು ಪ್ರಾರ್ಥಿಸುವ,

ಓರ್ವ ಗುರುಭಕ್ತ

ಯಾತ್ರಾ ಸಮಾರಾಧನ

ಬೆಂಗಳೂರು ಅಂಚೋನ್ಮೆಂಟ್‌ನಲ್ಲಿರುವ ಮು॥ ಟಿ ಬಿ. ಬಸವರಾಜಯ್ಯನವರು ಕಾಶೀ, ರಾಮೇಶ್ವರ, ಕಂಚಿ, ಚಿದಂಬರ ಮೊದಲಾದ ಯಾತ್ರೆಗಳನ್ನು ಪೂರೈಸಿ ತಾ॥ 7–12–48 ನೆಯ ದಿವಸ ಸುಖವಾಗಿ ಬಂದು ತಲಪಿದರು ಯಾತ್ರಾ ಪ್ರೀತ್ಯರ್ಥವಾಗಿ ತಾ॥ 13–2–49 ನೆಯ ಭಾನುವಾರ ವ್ಯಾಸರ್ಪೇಯಮಿಯ ದಿವಸ ತಮ್ಮ ಗೃಹದಲ್ಲಿ ಶ್ರೀ ಮೋರಬ ಗಂಗಾಧರಶಿವಾಚಾರ್ಯಸ್ವಾಮಿಗಳವರ ನೇತೃತ್ವದಲ್ಲಿ ಭಕ್ತಿಪುರ್ವಕವಾಗಿ ಗಂಗಾಪೂಜೆ ಲಲಿತಾಸ್ಪೋತ್ತರ ಶತನಾಮಾವಳಿ, ಕುಂಕುಮಾರ್ಚನೆ, ಶ್ರೀಮತ್ಪಂಚಾಚಾರ್ಯರ ಪೂಜಾದಿಗಳನ್ನು ನೆರವೇರಿಸಿ ಮಾಹೇಶ್ವರಾಧಿಪತ್ಯವನ್ನು ನಡೆಯಿಸಿದರು. ಸುಮಂಗಲಿಯರಿಗೆ ಮಂಗಳದ್ರವ್ಯವು ವಿನಿಯೋಗಿಸಲ್ಪಟ್ಟಿತು. ಶ್ರೀ ಜಗದಾಚಾರ್ಯರು ಮೇಲ್ಕಂಡ ಗುರುಭಕ್ತರಿಗೆ ಸಕಲ ಸನ್ಮಂಗಳಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ

Edited, Printed and Published by Pandit Kashinatha Shasthri at Sri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ ಪಂಚಾಸ್ಯಪೀಠಾಧಿಪರ್ ಪಂಚಕ್ಲೇಶವಿನಾಶಕರ್ ಪರತತ್ವಪ್ರಸಂಜಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಲಸತ್ಪಂಚಾಕ್ಷರೀಮೋದಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ. ೨ ಪಿ ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೭ ನೇ ಮಾರ್ಚಿ ೧೯೪೪ [ಸಂಚಿಕೆ ೪೩

ಸ್ವೀಕಾರ

ಧಾರವಾಡ ನಗರದಲ್ಲಿರುವ ಡಾ॥ ಶ್ರೀಶಾಂಕಯೋಗಿ ಸ್ವಾಮಿ ಕಟ್ಟೆಮಠರ ಸಂಸ್ಥಾನ ಕಿತ್ತೂರು ಇವರ ಕನ್ಯಾ ಪುತ್ರಿ ಚಿ॥ ಸೌ॥ ಜಗನ್ಮೋಹಿನೀದೇವಿಯವ್ಹನ್ನು ನೇ ತೋಟಪ್ಪಯ್ಯನವರು ಆರಳೆದೆ ಹಿರೇಮಠ ಮುಗುಳಖಿ ಸಾ। ಧಾರವಾಡ ಇವರ ದ್ವಿತೀಯ ಪುತ್ರ ಚಿ ಸಂಪಾ ಕ್ಷರಸ್ವಾಮಿಗೆ ಕೊಟ್ಟು ವಿವಾಹಮುಹೋರ್ತವನ್ನು ಮಹಾಸಂಭ್ರಮದೊಡನೆ ನೆರವೇರಿಸಿದ ಸಮಯ ದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯವರು ಸವ ರ್ಸಿಸಿದ **5** ರೂ ವಧುವಿನ ಕಡೆಯವರು ಸವರ್ಸಿಸಿದ **5** ರೂ ಗಳು ಒಟ್ಟು **10** ರೂ. ಗಳು ಶ್ರೀ ಪಕ್ಕಿ ಮಂಗಳೂರು ಆರಳೆಲೆ ಹಿರೇಮಠದ ಪಟ್ಟದಸ್ವಾಮಿಗಳ ವರ ದ್ವಾರಾ ತಲಪಿರುತ್ತವೆ

ಕಡಪಾ ಡಿ॥ ರಾಯಚೋಟಿ ತಾ॥ ರಾಯಾವರಂ ಗ್ರಾಮದಲ್ಲಿರುವ ಡಾ॥ ಎಸ್ ವೀರಯ್ಯದೇವರು ಮಹಾ ಶಿವರಾತ್ರಿಯ ಪರ್ವ ಸಮಯದಲ್ಲಿ ವೀರಶೈವ ಮತೋ ದ್ಧಾರಕ್ಕಾಗಿ ಜಪ್ಪೆಮೆತ್ತಿರುವ ಪಂಚಾಚಾರ್ಯ ಪ್ರಭಾ ಪೋಷಣಕ್ಕಾಗಿ **5** ರೂ. ಗಳನ್ನು ಸವರ್ಸಿಸಿ ಕಳುಹಿಸಿ ದ್ದಾರೆ

ಬಳ್ಳಾರಿ ಡಿ॥ ತೆಕ್ಕಲಕೋಟೆ ಗ್ರಾಮದ ಮ ಕೋರಿ ಗುರುಪಾದಪ್ಪನವರ ಪುತ್ರ ಚಿ॥ ಪಂಚಾಕ್ಷರಿಪ್ಪನಿಗೆ ರಾಯಚೂರು ಡಿ॥ ಗಂಗಾವತಿ ತಾ॥ ಒಡಗುಂಬಿ ಸೋಮಲಾಪುರದ ಚನ್ನಮಲ್ಲಪ್ಪನವರ ದ್ವಿತೀಯ ಪುತ್ರಿ ಚಿ॥ ಸೌ॥ ಶಂಕರಮ್ಮನವ್ಹನ್ನು ತಂದು ತಾ॥ ೭-೦-೪೨ ಬುಧವಾರ ದಿವಸ ನೆರವೇರಿಸಿದ ವಿವಾಹಮುಹೋರ್ತವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸವರ್ಸಿಸಿದ **4** ರೂ ಗಳು ಬಳ್ಳಾರಿ ಡಿ॥ ಹಿರೇಹಾಳವಿನಕೆರೆಮಠದ ಚರಮೂರ್ತಿಪ್ಪಜ್ಜಪ್ಪ ಶ್ರೀ ವಿರೂಪಾಕ್ಷಸ್ವಾಮಿಗಳವರ ದ್ವಾರಾ ತಲ್ಪರುತ್ತವೆ

ಕರ್ನೂಲ್ ಡಿ॥ ನಂದ್ಯಾಲ್ ಟವನ್ನಿನಲ್ಲಿರುವ ನಂ॥ ಗಂದೂಡಿ ಚಿಕ್ಕವೀರಪ್ಪನವರ ಪುತ್ರ ಚಿ॥ ಬಸಪ್ಪನಿಗೆ ತೆಕ್ಕಲಕೋಟೆ ಮಂ॥ ಕೋರಿ ಗುರುವಾದಪ್ಪನವರ ಪುತ್ರಿ ಚಿ॥ ಸೌ ಶಿವಮ್ಮನವ್ಹನ್ನು ಕೊಟ್ಟು ತೆಕ್ಕಲಕೋಟೆ ಗ್ರಾಮ ದಲ್ಲಿ ತಾ॥ ೭-೩-೪೨ ರಲ್ಲಿ ನೆರವೇರಿಸಿದ ವಿವಾಹಮುಹೋ ರ್ತವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸವರ್ಸಿಸಿದ **4** ರೂ ಗಳು ಯಪ್ಪಿಗನೂರು ಮಹಾಂತಿಸಮಠಾ ಧ್ಯಕ್ಷರಾದ ಶ್ರೀ ಮಹಾಂತಸ್ವಾಮಿಗಳವರ ದ್ವಾರಾ ತಲ್ಪರುತ್ತವೆ

ಹುಬ್ಬಳ್ಳಿ ಟವನ್ನಿನಲ್ಲಿರುವ ಲಿಮಿಂಗ್‌ಟನ್ ಹೈಸ್ಕೂಲಿನ ಅಧ್ಯಾಪಕರಾದ ವೇ॥ ಹುಮನಾಬಾದಿ ವೀರಭದ್ರ ಯ್ಯನವರ ಗೃಹದಲ್ಲಿ ಮಾಹೇಶ್ವರ ದೀಕ್ಷಾಸಮಾರಂಭವು ನೆರವೇರಿದ ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ ಎಲ್ಲ ನಮಟಗಳಿಂದ ತೆಗೆಯಿಸಿದ **4** ರೂ ಗಳು ನೇ॥ ನೀರ ಭದ್ರಯ್ಯನವರು ಹೊಸಮಠ ಇವರ ದ್ವಾರಾ ತಲಪರು ತ್ತವೆ

ರಾಯಚೂರು ಡಿ॥ ಮಾನ್ವಿ ತಾ॥ ಚಿಮಲಾಪುರ ಗ್ರಾಮದ ಪ್ಲೀಡರ್ಸ್ ಪ್ರಾಕ್ಟೀಲ್ ಅಮರೇಗೌಡರು ತಮ್ಮ ಗೃಹದಲ್ಲಿ ಶ್ರೀ ಮಾನ್ವಿ ಹಿರೇಮಠದ ವಿರೂಪಾಕ್ಷ ಶಿವಾಚಾರ್ಯರ ಗುರುತ್ವದಲ್ಲಿ ಏಕಾದಶರುದ್ರಪೂಜಾ ಗಣಾರಾಧನಾದಿಗಳನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸವರ್ಸಿಸಿದ **2** ರೂ ಗಳು ಪರಿಷತ್ತಿನವರಿಂದ ವಾಜ್ಞಾನಲಯವನ್ನು ಸ್ಥಾಪಿಸಿದ ಸಮಯದಲ್ಲಿ ಸವರ್ಸಿಸಿದ **2** ರೂ ಗಳು ಒಟ್ಟು **4** ರೂ ಗಳು ಮಾನ್ವಿ ಹಿರಿಯಮಠದ ಶ್ರೀನಿರೂಪಾಕ್ಷ ಶಿವಾಚಾರ್ಯಸ್ವಾಮಿಗಳವರ ದ್ವಾರಾ ತಲಪಿರುತ್ತವೆ

ಕಡೂರು ತಾ॥ ತಿಂಗಟಗೆರೆ ಹೋಬಳಿ ಪಂಚನ ಹಳ್ಳಿ ಗ್ರಾಮದಲ್ಲಿರುವ ವೇ॥ ಮರುಳಯ್ಯನವರ ತಮ್ಮ ಬಸವಲಿಂಗಯ್ಯನವರ ಪತ್ನಿ ಚಿ॥ ಸೌ॥ ಬಸವಮ್ಮನೆಂಬ ವಧುವಿಗೂ ಚಿಟ್ಟಹಳ್ಳಿಯಲ್ಲಿರುವ ವೇ॥ ಮರದ ಮರು ಳಯ್ಯನೆಂಬ ವರನಿಗೂ ತಾ॥ ೨೧-೨ ರ್ಸ ನೇ ವಿವಸ ಪಂಚನಹಳ್ಳಿಯಲ್ಲಿ ನೆರವೇರಿದ ವಿವಾಹ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸವರ್ಸಿಸಿದ **2** ರೂ ಗಳು ಮತ್ತು ಪಂಚನಹಳ್ಳಿ ಗ್ರಾಮದಲ್ಲಿರುವ ವೇ॥ ಮರುಳಯ್ಯನವರ ಸಿದ್ಧಯ್ಯನವರ ತಮ್ಮ ಬಸವ ಲಿಂಗಯ್ಯನವರ ಪುತ್ರ ಚಿ ಮರುಳಸಿದ್ಧಯ್ಯನೆಂಬ ವರ ನಿಗೂ ಅರಿಸಿಕೆರೆ ತಾ॥ ಬ್ರಹ್ಮಸಂದ್ರದ ವೇ॥ ಕರಿಸಿದ್ದಯ್ಯ ನವರ ಪುತ್ರಿ ಚಿ ನಿ॥ ಮರುಳಮ್ಮನೆಂಬ ವಧುವಿಗೂ ತಾ ೨೬-೨ ರ್ಸ ನೇ ದಿವಸ ಬ್ರಹ್ಮಸಂದ್ರಗ್ರಾಮದಲ್ಲಿ ನೆರವೇರಿದ ವಿವಾಹಮುಹೋರ್ತೋತ್ಸವ ಸಮಯದಲ್ಲಿ ಸವರ್ಸಿಸಿದ **2** ರೂ ಗಳು ಒಟ್ಟು **4** ರೂ ಗಳು ಸಂಚನಹಳ್ಳಿ ಗ್ರಾಮದಲ್ಲಿರುವ ವೇ॥ ಮರುಳಯ್ಯನವರ ತಮ್ಮ ಬಸವ ಲಿಂಗಯ್ಯನವರ ಪುತ್ರ ಚಿ ಮರುಳಸಿದ್ಧಯ್ಯನೆಂಬ ವರ ನಿಗೂ ಅರಿಸಿಕೆರೆ ತಾ॥ ಬ್ರಹ್ಮಸಂದ್ರದ ವೇ॥ ಕರಿಸಿದ್ದಯ್ಯ ನವರ ಪುತ್ರಿ ಚಿ ನಿ॥ ಮರುಳಮ್ಮನೆಂಬ ವಧುವಿಗೂ ತಾ ೨೬-೨ ರ್ಸ ನೇ ದಿವಸ ಬ್ರಹ್ಮಸಂದ್ರಗ್ರಾಮದಲ್ಲಿ ನೆರವೇರಿದ ವಿವಾಹಮುಹೋರ್ತೋತ್ಸವ ಸಮಯದಲ್ಲಿ ಸವರ್ಸಿಸಿದ **2** ರೂ ಗಳು ಒಟ್ಟು **4** ರೂ ಗಳು ಸಂಚನಹಳ್ಳಿ ಸ್ಕೂಲ್ ಮಾಸ್ಟರ್ ನೇ ಬಿ ನೀಲ ಕಂಠಯ್ಯನವರ ದ್ವಾರಾ ತಲಪಿರುತ್ತವೆ

ಚಿತ್ರಮಗಳೂರು ತಾಲ್ಲೂಕ್ ವಸ್ತಾರೆ ಜೋಳಿಗ ಕಲ್ಲಳ್ಳಿಮಠದ ವೇ॥ ರುದ್ರಯ್ಯನವರ ದ್ವಿತೀಯಪುತ್ರಿ ಚಿ ಸೌ॥ ಶಬ್ದಮ್ಮನವ್ಹನ್ನು ಇತೀಕಾಸಮಠದ ವೇ॥ ರುದ್ರಯ್ಯನವರ ಜ್ಯೇಷ್ಠ ಪುತ್ರ ಚಿ॥ ಮಲ್ಲಿಕಾರ್ಜುನಯ್ಯನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸವರ್ಸಿಸಲ್ಪಟ್ಟ **2** ರೂ ಗಳು ವಸ್ತಾರೆ ಪಟೇಲ್ ಜೌದೇಗೌಡರ ದ್ವಾರಾ ತಲಪಿ ರುತ್ತವೆ

ಸಾಗರ ತಾ॥ ತಡಗಳಲೆ ಗ್ರಾಮದಲ್ಲಿರುವ ಮಂ॥ ಬಿ ಚೆನ್ನಬಸಪ್ಪನವರು ಶಿವರಾತ್ರಿ ಪರ್ವಕಾಲ ನಿಮಿತ್ತವಾಗಿ **1** ರೂ ಯನ್ನು ಸವರ್ಸಿಸಿ ಕಳುಹಿಸಿದ್ದಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ

ಮಾಹೇಶ್ವರದೀಕ್ಷಾಸಮಾರೋತ್ಸವ
ಹುಬ್ಬಳ್ಳಿ

ಹುಬ್ಬಳ್ಳಿ ಟವನ್ನಿನಲ್ಲಿರುವ ಲಿಮಿಂಗ್ಟನ್ ಹೈಸ್ಕೂಲಿನ ಅಧ್ಯಾಪಕರಾದ ವೇ॥ ಹುಮನಾಬಾದಿ ವೀರಭದ್ರಯ್ಯ ನವರು ತಮ್ಮ ಗೃಹದಲ್ಲಿ ತಮ್ಮ ಸಹೋದರರಾದ ವೇ॥ ಚನ್ನಯ್ಯನವರ ಪುತ್ರರಾದ ಚಿ॥ ಗುರುಸಿದ್ಧಯ್ಯ ಮತ್ತು ಚಂದ್ರಲೇಖಯ್ಯ, ಧಾರವಾಡ ಸಾಲೀಮಠದ ವೇ॥ ವಿರುಪಯ್ಯನವರ ಪುತ್ರ ಚಿ॥ ಲಿಂಗಯ್ಯ ಮತ್ತು ತುಮರಿ ಕೊಪ್ಪದ ವೇ॥ ಮಲ್ಲಯ್ಯಗೌಡರ ಪುತ್ರ ಚಿ॥ ಮಲ್ಲಿಕಾ ರ್ಜುನಯ್ಯ ಈ ನಾಲ್ಕು ಜನ ನಮಟಗಳಿಗೆ ಮಾಹೇಶ್ವರ ದೀಕ್ಷೆಯನ್ನೂ ಮತ್ತು ವೇ॥ ಚನ್ನಯ್ಯನವರ ಪುತ್ರಿಯ ರಾದ ಚಿ॥ ಲಲಿತಾದೇವಿ, ಚಿ॥ ಪಾರ್ವತಿಯಿಣೀದೇವಿ, ಚಿ॥ ಸರೋಜಿನೀದೇವಿ ಇವರಿಗೆ ಶಿವದೀಕ್ಷೆಯನ್ನೂ ಇದೇ ಸರ್ವಧಾರಿ ಸಂವತ್ಸರ ಮಾಘ ಬಹುಳ ೧೦ ಮಂಗಳವಾರದಿವಸ ಶ್ರೀ॥ ಷ॥ ಬ್ರ॥ ಬ್ಯಾಹಟ್ಟಿ ಹಿರೇ ಮಠದ ಪಟ್ಟದ ಸ್ವಾಮಿಗಳವರ ಗುರುತ್ವದಲ್ಲಿ ವಿಧ್ಯುಕ್ತ ವಾಗಿ ನೆರವೇರಿಸಿದರು ರಾಯಚೂರು ಶಿವರಮಠಾಧ್ಯಕ್ಷ ಶ್ರೀಗುರುಲಿಂಗವಾಜ್ಞಾಚಾರ್ಯರ ಅಭಿಪ್ರಾಯದಂತೆ ಹೋ ಮಾದಿಗಳು ನೆರವೇರಿಸಲ್ಪಟ್ಟುವು. ಈ ಮಹೋತ್ಸವಕ್ಕೆ ಹುಬ್ಬಳ್ಳಿಯ ಪ್ರಮುಖರೆಲ್ಲರೂ ಆಗಮಿಸಿದ್ದರು ಈ ಕಾರ್ಯದಲ್ಲಿ ವಿಶೇಷ ಶ್ರಮವಹಿಸಿದ ಹುಬ್ಬಳ್ಳಿಯ ಭೂಸಾರ ವ್ಯಾಪಾರಿಗಳಿಗೆ ಶ್ರೀಜಗದ್ಗುರು ಪಂಚಾಚಾರ್ಯರು ಸಕಲ ಸನ್ಮಂಗಲಗಳನ್ನೀಯಲೆಂದು ಪ್ರಾರ್ಥಿಸುವ,

ವೀರಭದ್ರಯ್ಯ ಹೊಸಮಠ,
ಹುಬ್ಬಳ್ಳಿ

ಕರ್ನಾಟಕ ಏಕೀಕರಣಕಾರ್ಯ

ನಿಜಾಂ ಇಲಾಖಾ ರಾಯಚೂರು ಡಿ॥ ತಾಲೂಕು ಮಾಸ್ಕಿಗ್ರಾಮದಲ್ಲಿರುವ ಶ್ರೀ॥ ಷ॥ ಬ್ರ॥ ಹಿರಿಯನುರದ ಚರಪಟ್ಟಾಧ್ಯಕ್ಷ ಶ್ರೀವಿರೂಪಾಕ್ಷ ಶಿವಾಚಾರ್ಯರು ತಮ್ಮ ಪ್ರಾಂತದಲ್ಲಿ ಪ್ರತಿಯೊಂದು ಗ್ರಾಮಕ್ಕೂ ಹೋಗಿ ಸಭೆ ಯನ್ನು ಕೂಡಿಸಿ ಕರ್ನಾಟಕದ ಏಕೀಕರಣದ ಬಗ್ಗೆ ಭಾಷಣಗಳನ್ನು ಮಾತುತ್ತ ಜನತೆಯಲ್ಲಿ ಜಾಗೃತಿಯ ನ್ನುಂಟುಮಾಡಿತ್ತಿರುವುದು ಸ್ತೋತ್ರಾರ್ಹವಾಗಿದೆ ಶ್ರೀಸ್ವಾಮಿಗಳವರು ತಾ॥ ೫ ೨ ರ್ಸ ನೇ ದಿವಸ ಹರವಿ ಎಂಬ ಗ್ರಾಮಕ್ಕೆ ಆಗಮಿಸಿ ಭಾಷಣಮಾಡಿ ಜಾಗೃತಿ ಯನ್ನುಂಟುಮಾಡಿದರಲ್ಲದೆ ಆ ಗ್ರಾಮದ ಜನರಲ್ಲಿ ಬಹು ದಿವಸಗಳಿಂದ ಬೇರೂರಿದ್ದ ದ್ವೇಷಾಸೂಯೆಗಳನ್ನು ನಿರ್ಮೂಲಮಾಡಿ ಗ್ರಾಮದಲ್ಲಿ ಐಕ್ಯತ್ಯವನ್ನುಂಟುಮಾಡಿ ದರು. ಇದೇ ಸಮಯದಲ್ಲಿ ಗ್ರಾಮಸ್ಥರಿಂದ ೧೧೦ ರೂ. ಗಳನ್ನು ಕೂಡಿಸಿ ಒಂದು ವಾಜ್ಞಾನಲಯವನ್ನು ಸ್ಥಾಪಿಸಿ ಕನ್ನಡದೇಶದ ಎಲ್ಲ ಪತ್ರಿಕೆಗಳೂ ಬರುವಂತೆ ವಿಚಾರಿಸು ಮಾಡಿದರು

ಪ್ರತ್ಯಕ್ಷದರ್ಶಿ

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ.

ಫಾಲ್ಗುನ ಶುದ್ಧ ೧೪ (13—3—1949) ಭಾನುವಾರ



ಶ್ರೀಕಾಲ ಪಾಕ ಸೋಮನಾಥಲಿಂಗದಿಂದ ಶ್ರೀಜಗದ್ಗುರು
ರೇಣುಕಾಚಾರ್ಯರ ಅವತಾರ

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವವನ್ನು ಫಾಲ್ಗುನ ಶುದ್ಧ ೧೪ ಭಾನುವಾರ (ತಾ|| ೧೩-೩-೧೯೪೯) ದಿವಸ ಬರಹಪಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತಭಕ್ತಿಯಿಂದ ನೆರವೇರಿಸಬೇಕು ಶ್ರೀರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಗುರುಪೀಠ ಗುರುರೂಪವನ್ನು ಧರಿಸಿ ಮೂರು ಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು ಗರ್ವಾಂಧನಾದ ಗೋರಕ್ಷನ ಗರ್ವವನ್ನು ತನ್ನು ಮಹಿಮಾತಿಶಯದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತನ್ನು ಘೋರನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು ನೀಲಗಲಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವುದಕ್ಕೋಸ್ಕರ ಕೋಟ್ಯನುಕೋಟಿ ಪುಮಧ್ಯರೂಪವನ್ನು ಧರಿಸಿ, ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು ಕಾಂಚೀಕ್ಷೇತ್ರವಲ್ಲಿರುವ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾತಿಶಯದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿ ಭಕ್ತಿಯಿಂದ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ವರ್ತಮಾನ ಸಂಗ್ರಹ

ರಚನಾತ್ಮಕ ಕಾರ್ಯಕ್ಕೆ ಒಂದು ಕೋಟಿ ರೂ ಗಳು

ಮುಂಬಯಿ ಸರಕಾರವು ರಚನಾತ್ಮಕ ಕಾರ್ಯಗಳನ್ನು ಹಳ್ಳಿಯಲ್ಲಿ ಪ್ರಚಾರ ಮಾಡಲು ನಿರ್ಧರಿಸಿದೆ ಇದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಮೀಸಲಾಗಿ ಇಟ್ಟಿದೆ ಎಂದು ಮುಂಬಯಿ ಪ್ರಧಾನಿ ಶ್ರೀ ಹೇರರು ಹೇಳಿದ್ದಾರೆ

ಸಂಯುಕ್ತ ಪ್ರಾಂತ್ಯದ ತಾತ್ಕಾಲಿಕ ಗೌರ್ನರ್

ಸಂಯುಕ್ತ ಪ್ರಾಂತ್ಯದ ಗೌರ್ನರ್ ರಾಗಿದ್ದ ಶ್ರೀಮತಿ ಸರೋಜಿನಿನಾಯ್ಡುರವರ ನಿಧನದಿಂದ ಖಾಲಿಯಾಗಿರುವ ಗೌರ್ನರ್‌ರವರ ಸ್ಥಾನಕ್ಕೆ ಎಲಹಾಬಾದ್ ಹೈಕೋರ್ಟಿನ ನ್ಯಾಯಾಧೀಕರಿಂದ ಶ್ರೀ ಬಿ ಬಿ ಮ್ಯಾಕ್‌ರನ್ನು ತಾತ್ಕಾಲಿಕ ಗೌರ್ನರ್ ಆಗಿ ನೇಮಕ ಮಾಡಲಾಗಿದೆ

ಕೊಲ್ಲಾಪುರವು ಬೊಂಬಾಯಿ ಪ್ರಾಂತದಲ್ಲಿ ಏಕೀಕರಣವಾಯಿತು

ಕೊಲ್ಲಾಪುರದ ಸಂಸ್ಥಾನವು ಮಾಜಿ ೧೧ ನೆಯ ತಾರೀಖಿನಿಂದ ಬೊಂಬಾಯಿ ಪ್ರಾಂತದೊಡನೆ ಸೇರಿಕೆಯಾಯಿತು ಚರಿತ್ರಾರ್ಹವಾದ ಈ ಸಮಾರಂಭದಲ್ಲಿ ಭಾಗವಹಿಸುತ್ತಿರುವ ಬೊಂಬಾಯಿ ಪ್ರಧಾನರಾದ ಶ್ರೀ ಬಿ ಜಿ ಖೇರ್ ರವರು ಕೊಲ್ಲಾಪುರ ಸಂಸ್ಥಾನದಿಂದ ಪ್ರಜಾಪ್ರತಿನಿಧಿಗಳನ್ನು ಕೊಲ್ಲಾಪುರ ಸಂಸ್ಥಾನವು ಇಂದಿನಿಂದ ಬೊಂಬಾಯಿ ಪ್ರಾಂತದ ಒಂದು ಅವಿಭಾಜ್ಯ ಅಂಗವಾಗಿ ಪರಿಗಣಿಸಲ್ಪಡುವುದೆಂದು ಘೋಷಿಸಿದರು

ಕ್ಯಾಪ್ಟನ್ ವಿ ನಂಜಪ್ಪನವರನ್ನು ಕೊಯಮತ್ತೂರಿನ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳನ್ನಾಗಿಯೂ ನೇಮಕ ಮಾಡಲಾಗಿದೆ ಎಂದು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಕಾರ್ಯದರ್ಶಿಗಳಾದ ಶ್ರೀ ಟಿ ಪ್ರಕಾಶಮ್ ಮತ್ತು ರಾಪ್ಪಾಯ್ ರವರು ತಿಳಿಸಿದ್ದಾರೆ

ಭಾರತ ಪಾರ್ಲಿಮೆಂಟಿನಲ್ಲಿ ಹಣಕಾಸಿನ ಮಂತ್ರಿಗಳ ಹೇಳಿಕೆ

ಹಣಕಾಸಿನ ಸಚಿವರಾದ ಡಾ॥ ಜಾನ್ ಮತ್ತಾಯ್ ರವರು ಸ್ವತಂತ್ರ ಭಾರತದ ಎರಡನೇ ವರ್ಷದ ಬಜೆಟ್ ಅಂದಾಜನ್ನು ಭಾರತ ಪಾರ್ಲಿಮೆಂಟಿನ ಮುಂದೆ ಮಂಡಿಸುತ್ತಾ, ಅನೇಕ ಪ್ರಗತಿದಾಯಕವಾದ ಅಂಶಗಳನ್ನು ಪ್ರಕಟಿಸಿದರು ಮುಖ್ಯ ವಿವರಗಳಿವು —

ಈಗಿನ ತೆರಿಗೆಯ ವಿಧಾನದ ಮೇಲೆ ಮುಂದಿನ ವರ್ಷದ ವರಮಾನ ೩೦೭ ಕೋಟಿ ರೂ ಗಳು ನೆಚ್ಚಿದ ೩೨೨ ಕೋಟಿ ರೂಪಾಯಿಗಳು

ಅಂದರೆ ಸುಮಾರು ೧೫ ಕೋಟಿ ರೂ ಕಡಿಮೆ ಬೀಳುವದು

ನೆಚ್ಚಿದ ಬಾಬಿನಲ್ಲಿ ಸುಮಾರು ಹೊರಕ್ಕೆ ಏನತ್ತ ರಷ್ಟು ರೆಲ್ವೆಇಲಾಖೆಯ ಖರ್ಚು ನೆಚ್ಚಿಗಳಿಗೆ ಸೇರಿದೆ

ಈ ವರ್ಷ ರಕ್ಷಣಾಬಾಬಿಗೆ ೧೫೫ ಕೋಟಿ ರೂ ಗಳು, ಮುಂದಿನ ವರ್ಷ ೧೫೭೭ ಕೋಟಿ ರೂ ಗಳು ನೆಚ್ಚಿ ವಾಗಿದೆ

ಆಹಾರದ ಸಬ್ಸಿಡಿ

ಆಹಾರದ ಸಬ್ಸಿಡಿ ಬಾಬ್ತು ಈ ವರ್ಷ ೩೨ ಕೋಟಿ ರೂ ಗಳು, ಮುಂದಿನ ಸಾಲಿಗೆ ೩೩ ಕೋಟಿ ರೂ ಗಳೂ ನೆಚ್ಚಿವಾಗಿವೆ

ಈ ವರ್ಷ ೪೦ ಲಕ್ಷ ಟನ್ ಅಂದರೆ ಸುಮಾರು ೪ ಕೋಟಿ ಚೀಲ ಆಹಾರ ಧಾನ್ಯಗಳನ್ನು ವಿದೇಶಗಳಿಂದ ತರಿಸಿಕೊಳ್ಳಬೇಕಾಗಿದೆ

ಹಣಕಾಸಿನ ಮಂತ್ರಿಗಳು ತೆರಿಗೆ ವಿಚಾರದಲ್ಲೂ ಅನೇಕ ರಿಯಾಯಿತಿಗಳನ್ನು ಪ್ರಕಟಿಸಿದ್ದಾರೆ

ಹತ್ತುಸಾವಿರ ರೂ ಗಳ ವರಮಾನದವರೆಗೆ ಆದಾಯದ ತೆರಿಗೆ ನರವನ್ನು ರೂಪಾಯಿಗೆ ಕಾಲಾಣೆಯಂತೆ ಕಡಿಮೆ ಮಾಡಲಾಗಿದೆ

ಇದರಿಂದ ಒಂದನೇ ಮಟ್ಟದಲ್ಲಿ ತೆರಿಗೆಯನ್ನು ಒಂದು ಆಣೆಯಿಂದ ಒಂಬತ್ತು ಕಾಸಿಗೆ ಎರಡನೆಯ ಮಟ್ಟದಲ್ಲಿ ಎರಡೂಕಾಲಿಯಿಂದ ಒಂದೂಮುಕ್ಕಾಲಾಣೆಗೂ ತೆರಿಗೆ ದರವನ್ನು ಇಳಿಸಲಾಗಿದೆ ಇದರಿಂದ ಸುಮಾರು ಮೂರು ಕೋಟಿ ರೂ ನಷ್ಟದ ಅಂದಾಜಾಗಿದೆ

ಸೂಪರ್ ಟ್ಯಾಕ್ಸ್ ಪರಮಾವಧಿ ದರ ರೂಪಾಯಿಗೆ ಆರ ಕಾಸಿನಂತೆ ರಿಯಾಯಿತಿ ಕೊಡಲಾಗುವುದು ಇದರಿಂದ ೩೦ ಕೋಟಿ ರೂ ನಷ್ಟವಾಗುವ ಸಾಧ್ಯತೆ ಇದೆ

ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುವ ಎಲ್ಲಾ ವೀಕ್ಷಣೆಗಳು ಮತ್ತು ನಿರ್ಣಯಗಳ ಆಯಾರ್ಥಗಳ ಮೇಲಿನ ತೆರಿಗೆಯನ್ನು ಸಂಬಂಧಪಟ್ಟ ತೆರಿಗೆ ಕಾಯ್ದೆಯ ಪ್ರಕಾರ ಸೂಕ್ತ ತೆರಿಗೆ ಹೊಳ್ಳಲಾಗಿದೆ ಇದರಿಂದಲೂ ೧೫ ಕೋಟಿ ರೂ ನಷ್ಟವಾಗಲಿದೆ

ವಿದೇಶಗಳಿಗೆ ಬಂಡವಾಳ ಪೆಟ್ರೋಲಿನ ಸುಂಕದ ದರವನ್ನು ಎಂಟಾಣೆಗೆ ಏರಿಸಲಾಗಿದೆ ಇದರಿಂದಾಗಿ ೧೫ ಕೋಟಿ ರೂ ನಷ್ಟವಾಗಲಿದೆ

ಇನ್ನು ಸೇಲ್ ಸಂಬಂಧವಾದ ಟ್ಯಾಕ್ಸ್ ಬಗ್ಗೆ ಟೂಲ್ಸ್ ಗಳ ಮೇಲೆ ಎಕ್ಸೈಸ್ ಡ್ಯೂಟಿಯನ್ನು ರದ್ದುಮಾಡಲಾಗಿದೆ

[illegible] ಜಿನ ಜೆಲ್ಲಿ ಎಂಬ ಔಷಧಿಯ ಮೇಲಿನ ಸುಂಕವನ್ನು ಕಡಿಮೆ ಮಾಡಲಾಗಿದೆ

ಇತರ ವಿಚಿತ್ರಗಳ ಸ್ವರೂಪ

ಕಚ್ಚಾ ರೇಷ್ಮೆ ನೂಲು ಮತ್ತು ದರ ಬಣ್ಣವಿಲ್ಲದ ಸ್ಪಿನ್ನಿನ ಸಮಾನುಗಳ ಮೇಲಿನ ಸುಂಕವನ್ನು ಕಡಿಮೆ ಮಾಡಲಾಗಿದೆ

ವಕ್ರವಾದ ಪತ್ರಿಕೆಗಳಿದ ಬೀಡಿಯ ಎಲೆಗಳ ಮೇಲಿನ ಸುಂಕವನ್ನು ಹೆಚ್ಚಿಸಲಾಗಿದೆ

ಕಬ್ಬಿಣ ಸಾಮಾನುಗಳು ಕಟ್ಟರಿ ಫಾಸ್ಟ್ ಬೈಟ್, ಟೂಲ್ಸ್ ಸಾಮಾಗ್ರಿ ಗಡಿಯಾರಗಳು ಇತ್ಯಾದಿಗಳ ದರವನ್ನು ಹೆಚ್ಚಿಸಲಾಗಿದೆ

ಮೋಟಾರು ಟೈರ್ ಮೇಲೂ ತೆರಿಗೆಯನ್ನು ಹೆಚ್ಚಿಸಲಾಗಿದೆ ಹೆಚ್ಚಿನ ತೆರಿಗೆಗಳ ಪರಿಣಾಮವಾಗಿ ೧೯೪೯-೫೦ ಬಜೆಟ್‌ನಲ್ಲಿ ೪೫ ಲಕ್ಷ ರೂ ಹೆಚ್ಚುವರಿ ಕಿಲ್ಲುಳಿಯುವುದಾಗಿದೆ

ಒಳದೇಶದ ಶಾಂತಿಪಾಲನೆ ನಿಮಿತ್ತ ನೇಪಾಳದ ಸೈನ್ಯವನ್ನು ಕರಿಸಿಕೊಂಡಿರುವುದೂ, ಕಾಶ್ಮೀರ ಮತ್ತು ಹೈದರಾಬಾದು ಕಾರ್ಯಾಚರಣೆಗಳೂ ರಕ್ಷಣಾ ಖಾತೆಯ ವೆಚ್ಚ ಅಧಿಕವಾಗಿರಲು ಮುಖ್ಯ ಕಾರಣಗಳು ಎಂದು ಡಾ॥ ಜಾನ್ ಮ್ಯಾಥಾಯ್‌ರವರು ತಿಳಿಸಿದರು.

ಮೈಸೂರಿಗೆ ಸರ್ದಾರರ ಸಂದೇಶ

ಸರ್ದಾರ್ ವಲ್ಲಭಭಾಯಿ ಪಟೇಲರವರು ಮೈಸೂರು ಸಂಸ್ಥಾನಕ್ಕೆ ಭೇಟಿ ಇತ್ತ ಸಂಬಂಧದಲ್ಲಿ, ಇಲ್ಲಿಂದ ತೆರಳಿದ ಮೇಲೆ ಸಂಸ್ಥಾನದ ಒಳ್ಳೆ ತನ್ನು ಮೆಚ್ಚುಗೆಯನ್ನು ವ್ಯಕ್ತಪಡಿಸಿ ಶ್ರೀಮನ್ಮಹಾರಾಜರವರಿಗೆ ಕಳುಹಿಸಿಕೊಟ್ಟಿರುವ ಸಂದೇಶವು ಈ ರೀತಿ ಇದೆ —

ನನಗೆ ಕೊಟ್ಟ ಅಭೂತಪೂರ್ವವಾದ ಸ್ವಾಗತಕ್ಕಾಗಿ ಮತ್ತು ನಾನು ಅಲ್ಲಿದ್ದಾಗ ನನ್ನ ಬಗ್ಗೆ ತೋರಿಸಿದ ಅದರ ವಿಶ್ವಾಸಗಳಾಗಿ ತಮಗೂ ತಮ್ಮ ಸರ್ಕಾರಕ್ಕೂ ತಮ್ಮ ಸಂಸ್ಥಾನದ ಪ್ರಜೆಗಳಿಗೂ, ನನ್ನ ಹೃತ್ಪೂರ್ವಕವಾದ ವಂದನೆಗಳು ೧೯ ವರ್ಷಗಳ ಮೇಲೆ ತಮ್ಮ ಮತ್ತು ತಮ್ಮ ಸಂಸ್ಥಾನದೊಡನೆ ಮತ್ತೆ ಸಂಪರ್ಕವನ್ನು ಚಿಗಿಸಿ ಕಾಣಿ ತಮ್ಮ ಪ್ರಜೆಗಳ ಆಕಾಂಕ್ಷೆಗಳನ್ನು ನೆರವೇರಿಸಿರುವುದನ್ನೂ ತಮ್ಮ ಪ್ರಜೆಗಳು ಸೌಖ್ಯದಿಂದ ಪ್ರಗತಿ ಹೊಂದಿರುವುದನ್ನೂ ನೋಡಿ ನನಗೆ ನಿಜವಾದ ಸಂತೋಷವುಂಟಾಯಿತು ಮೈಸೂರು ಪ್ರಗತಿಪರವಾದ ಸಂಸ್ಥಾನವೆಂಬುದಾಗಿ ಹೆಸರುಗೊಂಡಿರುವ ದನ್ನು ತಾವೂ ಉತ್ತಮ ತಮ ಸಕ ರದನರೂ ಅಂಥಕಗೊಳಿಸುತ್ತಿದ್ದಾರಿ ನನ್ನ ಭೇಟಿಯ ಸಂಬಂಧದಲ್ಲಿ ಮಾಡಿದ್ದ ದಿವ್ಯವಾದ ಏರ್ಪಾಟಿಗಳಿಗಾಗಿ ಸಂಬಂಧಪಟ್ಟವರಿಗೆಲ್ಲಾ ನನ್ನ ವೈಯಕ್ತಿಗಳನ್ನು ವಂದನೆಯನ್ನೂ ಅಂಪು ತಿಳಿಯಪಡಿಸಬೇಕೆಂದು ಕೋರುವೆನು

ವೈನಾಯಕ ಹೋಶ್ಯನ್ಸ್ ಧಾರವಾಡ

ಧಾರವಾಡ ನಗರದಲ್ಲಿರವ ಡಾ॥ ಶ್ರೀಕಾಂತವೀರ ಸ್ವಾಮಿ ಕಟ್ಟಿಮನ ಸಂಸ್ಥಾನ ಕೆಚ್ಚಿರಿಯ ಇವರು ತಮ್ಮ ಪತ್ನಿ ಚಿ॥ ಸೌ॥ ಜಗನ್ಮೋಹಿನಿಯ ವಿ ಎಂಬ ಕನ್ಯಾರತ್ನವನ್ನು ವೇಗಿ ತೊಟಪ್ಪಯ್ಯನವರು ಅರಳೆಲೆ ಬಸೆಮಠ ಮುಂಗಳೂರ ಇವರ ಧಾರವಾಡ ಇವರ ದ್ವಿತೀಯ ಪುತ್ರ ಚಿ॥ ಪಂಚಾಕ್ಷರಸ್ವಾಮಿಗೆ ಕೊಟ್ಟು ಇದೇ ಸರ್ವಧಾರಿ ನಾಮ ಸಂವತ್ಸರ ಮಾಘ ಬಹುಳ ೬ ಶುಕ್ರವಾರ ತಾ॥ ೧೫ ೨ ೪೯ ದಿವಸ ಶುಭಮುಹೂರ್ತದಲ್ಲಿ ವಿವಾಹ ಮಹೋತ್ಸವವನ್ನು ಮಹಾಸಂಭ್ರಮದೊಡನೆ ನೆರವೇರಿಸಿದರು ವಿವಾಹಸಂಬಂಧವು ಸಾನಾವಿಧವಾದ ವಿದ್ಯುದ್ದೀಪಗಳಿಂದ ಪ್ರಕಾಶಮಾನವಾಗಿದ್ದು ನೋಡುವವರ ಕಣ್ಮನಗಳಿಗೆ ಮಹಾನಂದವನ್ನುಂಟುಮಾಡುತ್ತಲಿತು ಈ ಮಂಗಲಕಾರ್ಯಕ್ಕಾಗಿ ವಧೂವರರಿಗೆ ಸಂಬಂಧಪಟ್ಟ ಸಕಲ ಬಂಧುಬಾಂಧವರೂ ಪುರಪ್ರಮುಖರೂ, ಆಗಮಿಸಿದ್ದರು ವಿವಾಹಸಂಸ್ಕಾರವು ಕೊಪ್ಪಳ ಜಿಲ್ಲಾ ಮಂಗಳೂರು ಅರಳೆಲೆ ಹಿರೇಮಠದ ಶ್ರೀ॥ ಷ॥ ಬ್ರ॥ ಪಡದೇರೇಶ್ವರಾಚಾರ್ಯ ಪಟ್ಟದೇವರು ಮತ್ತು ಎಲಬರ್ಗಿ ಹುಲಿಕಂಠಿಮಠದ ಶ್ರೀ॥ ಷ॥ ಬ್ರ॥ ಪಟ್ಟದೇವರುಸ್ವಾಮಿಗಳವರ ಗುರುತ್ವದಲ್ಲಿ ವಿಜೃಂಭ್ರಣವಾಗಿ ನೆರವೇರಿತು

ಕರ್ನಾಟಕದೇಶದಲ್ಲಿ ಮಹಾಮಹಿಮಶಾಲಿಗಳೆಂದು ಪ್ರಸಿದ್ಧರಾಗಿ ಹೋಗಿರುವ ಯತಿವರ್ಯವರಾದ ಮಂಗಳೂರು ಅರಳೆಲೆ ಮರದ ಲಿಂಗೈಕ್ಯ ಶ್ರೀಪಟ್ಟದೇವರುಸ್ವಾಮಿಗಳವರ ಪವಿತ್ರ ಸಮಾಧಿಗೆ ಸಂದರವಾದ ಶಿಲಾಮಂಟಪವನ್ನು ಕಟ್ಟಿಸಲು ಈ ಮೊದಲೇ ವಾಗ್ದಾನಮಾಡಿದ್ದ ಕನ್ಯೆಯು ಮಾತಾಪಿತೃಗಳು ೩೦೦ ರೂ ಗಳನ್ನು ಈಗಿನ ಶ್ರೀ ಪಟ್ಟದೇವರುಸ್ವಾಮಿಗಳವರಿಗೆ ಸಮರ್ಪಿಸಿದರು ವರನ ಅಣ್ಣಂದಿರಾದ ವೇ॥ ಹಡಪದ ಸಿದ್ಧಯ್ಯನವರು ಒಂದು ಕೋಲಿಯನ್ನು ಕಟ್ಟಿಸಿಕೊಡಲು ವಾಗ್ದಾನಮಾಡಿದರು ಈ ವಿವಾಹಮಹೋತ್ಸವ ಸಮಯದಲ್ಲಿ ವೀರಶೈವ ಮತೋದ್ಧಾರಕಾಗಿ ಜನ್ಮತೆತ್ತಿರುವ ಪರಮಪೂಜ್ಯ ಪ್ರಾತಃಸ್ಮರಣೀಯ ಜಗದ್ಗುರು ಶ್ರೀ ಪಂಚಾಚಾರ್ಯ ವಧೂವರರಿಂದ ೧೦ ರೂ ಗಳು ಸಮರ್ಪಿಸಲ್ಪಟ್ಟುವು ಶ್ರೀಜಗದಾಚಾರ್ಯರು ನೂತನ ವಧೂವರರಿಗೆ ಸಕಲ ಸನ್ಮಂಗಲಪರಂಪರೆಯನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

ಪರತತ್ವಪಂಡಿತಂಗಳಿಗೆಯೆಲ್ಲವ್ಯನೀ ಧರಣಿ ತಂತ್ರಸ್ಥರೋ !
ಪರಮಪುಮಾನೀಕೃತಮಮಾಸಂ ನೆರೆ ಕಿಮಿಸಿ ಪೂಜ್ಯರಾದ ಕಿ
ದ್ಧುರುಪರ್ಯ್ಯಕಾರ ನವನಾಥವರಿಗೆ ಸುಭ್ಯಕ್ಕಾಶ್ರಯಂ !
ಕರುಣಿಸಿ ಸರ್ವಸಂಪತ್ಸಾಸ್ಪತ್ಯಮಿಂ ಸಲೆ ಪೂರ್ಣ ನುಷ್ಯಗಿತ್ತಿ

ಓರ್ವ ಗುರುಪುತ್ರ

ಮಂತ್ರಾಸುಷ್ಠಾನಸಮಾಪ್ತಿ ಸಮಾರಂಭ ಹಿರೇಹಡಗಲಿ

ಶಾಖಿಕವಸ್ಥಿತಿಯಾಧಿ ಈ ವರ್ಷ ಶ್ರೀ ಬಾಲ ಶಿವಯೋಗಿ ಸಿದ್ಧಲಿಂಗಶಿವಾಚಾರ್ಯಸ್ವಾಮಿಗಳು ಉಜ್ಜಯಿನಿ ಒಡೆಯರ ಮಠ ಅಂಗಡಿಂದ ಇವರು ಹಿರೇಹಡಗಲಿ ಗ್ರಾಮ ನಿವಾಸಿಕ ನೃಂದದ ಕೋರಿಕೆಯ ಮೇರೆಗೆ ಮಾಘ ಶುದ್ಧ ದಿತೀಯಾದಿಂದ ಸಲಾಪಾರಿಸ್ಯಂತ ೭೧ ದಿವಸಗಳ ಅವಧಿ ಲಕ್ಷ ಜಪಾನುಷ್ಠಾನವನ್ನು ರೇವಣಸಿದ್ಧೇಶ್ವರ ದೇವಾಲಯದಲ್ಲಿ ನಿರವಧಿ ಇದರು ತಂತ್ರಿಗಳ ನಿಲಯ ಭವನವಾದ, ಸ್ವಾಮಿಜಿ ಭಕ್ತರು ಮಹಾಗಣಾಧಿಪತ್ಯವನ್ನು ನಡೆಸಿದರು ಅವರಿಗೆ ಸಾಯಂಕಾಲ ೨ ಘಂಟೆಗೆ ಶ್ರೀಬಾಲಶಿವಯೋಗಿಗಳ ಪಲ್ಲಕ್ಕಿಮಹೋತ್ಸವವು ವೈಭವದೊಡನೆ ನೆರವೇರಿತು ಈ ಮಹಾಕಾರ್ಯಕ್ಕೆ ಹೊಳಗುಂದಿ ಗ್ರಾಮದ ಒಜನ ಮಂಡಳಿಯವರು ಬಂದು ಶ್ರೀಗುರುಸೇವೆಯನ್ನು ಭಕ್ತಿ ಪೂರ್ವಕವಾಗಿ ಸಲ್ಲಿಸಿದರು ಗ್ರಾಮದ ಪ್ರಮುಖರಿ ಪ್ರಧಾನೆಯಂತೆ ಶ್ರೀ ಪಟೆ ಬಾಲಬ್ಯಪ್ಪಶೆಟಿ ಗಂಗಾಧರಶಿವಾಚಾರ್ಯಸ್ವಾಮಿಗಳವರು ಜಡೆಯಮರ ಪೊರಬ ಇವರು ದಯಮಾಡಿಸಿದ್ದರಿಂದ ಈ ಮೇಗಳ ಪ್ರಸಂಗಕ್ಕೆ ಒಯ್ ಶೋಭೆಯಂಬಾಗಿದ್ದಿತು ರಾತ್ರಿ ೯ ಘಂಟೆ ಪುಷ ಒಡೆಯರ ಪಾದದಲ್ಲಿ ಶ್ರೀಗುರುವರ ತಪ್ಪಲ್ಲಕ್ಕೆಯಲ್ಲಿ ಸಭೆ ಸೇರಿತು. ವಂಗಲಗಿತ್ತಿನ ತರ ವೇ ಂ ಸಿ ಯಂ ಗುರುಶಾಂತಶಾಸ್ತ್ರಿಗಳು ಮೊದಲು ವರ್ಣಾದ ಬಗ್ಗೆ ಮಾತನಾಡಿದರು. ಆನೇಲೆ ಹೊಳಗುಂದಿ ಶ್ರೀಗುರುವರ ಕರಕಮಲಸಂಜಾತರಾದ ಶ್ರೀ ಬಿಜ್ಜರ್ಪತಿಯವರು ಆಪ್ತಿಕ್ಷಿಪತ್ರ ಅನುಷ್ಠಾನಕ್ಕೆ ಈ ವಿಷಯಗಳಿಗೆ ರಾಸ್ತೀಯವಾಗಿ ೧೦ ಯುಕ್ತಿಯುಕ್ತವಾಗಿಯಾ ೧ ಘೆಂಟೆಯವರೆಗೆ ಪ್ರತಿಪಾದಿಸಿ ನವೆಯಾದ ದರ್ಸರಹಸ್ಯವನ್ನು ಸ್ಪಾರಸ್ಯವಾಗಿ ವಿಶ್ಲೇಷಿಸಿದರು ಶ್ರೀಗುರವರ ಅಮಿಚ್ಛೆಪ್ರಕಾರ ವಾದ ವಾಗ್ಧರಿಯನ್ನು ಕೇಳಿ ಸಭೆಗೆ ಸಭೆಯೇ ಮಂತ್ರಮುಗ್ಧವಾಯ ತು. ನಮ್ಮ ನಾಡಿನಲ್ಲಿ ಸಮಾಜದಲ್ಲಿ ಇಂಥ ಶ್ರೀಗುರುವರ ವಿರಾಜಮಾನರಾಗಿರವದು ನಮ್ಮೆಲ್ಲರ ಸುದೈವವೆಂದು ಸಮಸ್ತರೂ ನುಡಿಯತ್ತಲಿದ್ದರು ಆನಂತರ ಜಗದಾಚಾರ್ಯರ ಜಗನ್ನಿಯಾಮಕ ಪಾರ್ವತೀಪರಮೇಶ್ವರರ ಮಂಗಲ ಜಯಘೋಷದೊಂದಿಗೆ ಸಭಾಕಾರ್ಯವು ಶುಭರ್ಸಮಾಪ್ತಿಯಾಯಿತು

ಬರಣಿಕೆ ವಿರಚಿತ ಚಂದ್ರಶೇಖರಶ್ಯ

ಸನಾತನಧರ್ಮೋದ್ಧಾರ ಶುಭಾಗಮನ ಅಪೇಕ್ಷಿಗೇರಿ

ಧಾರವಾಡ ಡಿ ಸ್ಟ್ರಿಂಟ್ ವಾಲ್ಲೂಕ ಪೈಕಿ ಅಪೇಕ್ಷಿಗೇರಿ ಗ್ರಾಮದಲ್ಲಿ ಸನಾತನಧರ್ಮಪ್ರೇಷಕರಾದ ಶ್ರೀಚಿಕ್ಕವಣ್ಣಾರ ಸ್ವಾಮಿಗಳವರು ಆಗಮಿಸಿದರು ನಂದೀಶ್ವರ ಪಂಚಾಕ್ಷರಿಪೀಠದ ಶಾಖಾ ೧೦೮ ಜಗದ್ಗುರು ಶ್ರೀಮದುಮಾಪತಿ ದಿವಸ ಶ್ರೀ ೧೦೮ ಜಗದ್ಗುರು ಲಕ್ಷ್ಮೀಪತಿಯಲ್ಲಿ ಸಭೆಯು ನಡೆಯಿತು ತಾ ೧೫-೧೦-೪೮ ನೇ ದಿವಸ ಶ್ರೀ ೧೦೮ ಜಗದ್ಗುರು ಲಕ್ಷ್ಮೀಪತಿಯಲ್ಲಿ ಸಭೆಯು ನವೆಯಿತು ಪೆಲ ಕ್ಕಿಲ್ಕಿಗಾರ ಗವಾಯಿ ಕರವೀರಪ್ಪನವರು ನಂದೀಶರಸ್ತೋಪದೇಸ ಜಗದಾಚಾರ್ಯರ ಮಂಗಲ ಸ್ತೋತ್ರಗಳನ್ನು ಪಾಡಿದ ಬಳಿಕ ಶ್ರೀಚಿಕ್ಕವಣ್ಣಾರು ಸ್ವಾಮಿಗಳವರ ಸಂಗಡಿಕರಾದಿಸ ಮಂಜುಳಸ್ವರದಿಂದ ಶ್ರೀಲಗದ್ಗುರು ರೇಣುಕಾಚಾರ್ಯರ ಮಂಮೆಯನ್ನು ಚಿತ್ರರೂಪದಿಂದ ಬೋಧಮಾಡಿದರು ಎಲ್ಲ ಗುರು ಸಾಹಿತ್ಯ, ನೀನು ಮೋಕ್ಷಪದವನ್ನು ಆನುಗ್ರಹಿಸು ವವನೂ, ದಯಾಸಮುದ್ರನೂ, ಅಪಾರಮಯ ನಾ, ಸ್ವಪ್ರಕಾಶನೂ, ಸಾಕ್ಷಾತ್ ಪರಮೇಶ್ವರನೂ, ಆಗಿರುವೆ ನಿನಗೆ ನಾಶವಿಲ್ಲ ನೀನು ಎಲ್ಲ ಕಡೆಯಲ್ಲಿಯೂ, ಎಲ್ಲಾ ಕಾಲದಲ್ಲಿಯೂ ವ್ಯಾಪಿಸಿರುವೆ ಎಲ್ಲಿ ಜಗದ್ಗುರುವೇ, ನಿನ್ನ ಕೃಪೆಯಾದ ಕೂಡಲೆ ಸಂಸಾರಬಂಧನವು ತಪ್ಪುವದು, ಮಾಯೆಯು ದೂರಾಗುವದು, ಇಂತಹ ಜಗದಾಚಾರ್ಯರಲ್ಲಿ ಭಕ್ತಿಯನ್ನಿಟ್ಟು ರಂಭೆ ದೇವನು ಹಾಗೂ ಮಂತ್ರಜಾತನು ಕೈವಲ್ಯಪದವಿಗೆ ಅರ್ಹರಾದರು ನೀವಾದರೂ ಇವರ ಅನುಕರಣವನ್ನು ಮಾಡಿ ಭಕ್ತಿಯಿಂದ ನಡೆದು ಗುರುಕೃಪೆಗೆ ಪಾತ್ರರಾಗಬೇಕೆಂಬ ಬೋಧಮಾಡಿದರು ಇವರ ಬೋಧಾಮೃತವನ್ನು ಪಾನಮಾಡಿ ಸರ್ವರೂ ಆನಂದಸಾಗರದಲ್ಲಿ ಮಿಂದರು ಶ್ರೀಚಿಕ್ಕವಣ್ಣಾರು ಸ್ವಾಮಿಗಳವರು ವೇದ ಸಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಬರೆಯಲ್ಪಟ್ಟ ಪ್ರತಿಗಳನ್ನು ಪ್ರಕಟಿಸಬೇಕೆಂಬ ತಮ್ಮ ಗ್ರಂಥಾಸಕ್ತಿಯನ್ನು ಒದಿ ದಸ್ಯರಿಗೆ ಬೇಕೆಂದು ತಾವು ಹೋದಕಡೆಯಲ್ಲೆಲ್ಲಾ ಬೋಧಮಾಡಿ ತಿರಿಸಿಕೊಟ್ಟು ಪ್ರಯತ್ನಿಸಿದ್ದರಿಂದ ಸಾಕಷ್ಟು ಧನಸಂಗ್ರಹವಾಗಿ ಗ್ರಂಥಮುದ್ರಣಕ್ಕೆ ಪ್ರಾರಂಭವಾಗಿದೆ ಈ ವಿಷಯವನ್ನು ಕೇಳಿ ಸಭೆಗೆ ಸಭೆಯೇ ಸಂತೋಷಭರಿತವಾಯಿತು ಸಭೆಯಲ್ಲಿ ಸೇರಿದ್ದ ಸಮಸ್ತರೂ ಸನಾತನಧರ್ಮಪ್ರೇಷಕರಾದ ಶ್ರೀಚಿಕ್ಕವಣ್ಣಾರ ಸ್ವಾಮಿಗಳವರ ಶುಭಾಗಮನವನ್ನು ಅಪೇಕ್ಷಿಸಿದರು ಸಭೆಯು ಸಮಾಪ್ತಿಯಾಯಿತು

ಲಿಂಗಪ್ಪ ಜನಪ

ಶಿವಕಥಾಕಾಲಕ್ಷೇಪ

ಶಿವಮೊಗ್ಗಾ ಡಿ ಚಾಮೇನಹಳ್ಳಿ ರಾಮೇಶ್ವರ ಲಿಂಗದಾಸಲಯದಲ್ಲಿ ನೂಂಭಾಗದಲ್ಲಿ ಶ್ರೀಂರಿಸಿದ ಚಿಕ್ಕಪ್ಪರ ದಲ್ಲಿ ವರ್ತಾಶಿವರಾತ್ರಿಯವರೆಗೆ ಪ್ರತಿ ದಿವಸ ರಾತ್ರಿ ಜಾಗರಣೆಯ ನಿಮಿತ್ತ ೧೦ ಒಸವಕಟ್ಟಿಪ್ಪ ಎಂಬವರ ಪ್ರಾರ್ಥನೆಯಂತೆ ಕೀರ್ತನಕೇಸರಿ ವೇ ಗುಬ್ಬಿ ಶಿವರುದ್ರಶಾಸ್ತ್ರಿಗಳವರು ಬೇದರ ಕಣ್ಣಪ್ಪ ಎಂಬ ಭಕ್ತರಸಪ್ರಧಾನವಾದ ಶಿವಕೀರ್ತನೆಗಳನ್ನು ಮಾಡಿ ಸರ್ವರನ್ನೂ ಆನಂದಗೊಳಿಸಿದರು ಪ್ರತ್ಯಕ್ಷದರ್ಶಿ

ಕರಿಕೆಯು ಒಕ್ಕಲಿಗನ ವೈರಿ

ಭೂಮಿಯಲ್ಲಿ ಒಳ್ಳೆಯ ಜನ್ಮಾಗಿ ಒರಿಬೇಕಾದರೆ ಕರಿಕೆಯನ್ನು ನಿರ್ಮೂಲ ಮಾಡಬೇಕು ಕರಿಕೆಯು ಒಹಳ ದೂರದ ವರೆಗೆ ಬೇರುಬಿಟ್ಟು ಬೆಳೆಯುವ ಒಂದು ಜಾತಿಯ ಹುಲ್ಲು ಸಾಗು ಭೂಮಿಗಳನ್ನು ಹಾಳುಮಾಡುವ ಹುಲ್ಲಿದು ಕರಿಕೆಯ ಬೇರುಗಳು ೧೨ ರಿಂದ ೧೫ ಇಂಚು ಬೂಮಿಯೊಳಗೆ ಇಳಿಯುವವು ಹೊಳೆ ಕಳ್ಳಗಳ ದಂಡೆಯಲ್ಲಿದ್ದ ಹೊಲಗಳಲ್ಲಿ ಅದರ ಬೇರು ಗಳು ೧೫ ಇಂಚಿಗಿಂತ ಹೆಚ್ಚಿ ಕೆಳಗೆ ಹೋಗಲಾಲ್ಲವು ೬೦ ರಿಂದ ೮೦ ವರೆಗೆ ಆಶ್ಚರ್ಯಕ್ಕಿಯುಳ್ಳ ಮತ್ತು ಯೋಗ್ಯ ಸಲಕರಣೆಯುಳ್ಳ ಟ್ರ್ಯಾಕ್ಟರು ೧೨ ರಿಂದ ೧೫ ಇಂಚು ಆಳವಾಗಿ ಇಳಿಯುವುದು ಕರಿಕೆ ಹತ್ತಿದ ಭೂಮಿಗೆ ಇಷ್ಟು ಆಳವಾಗಿ ನೇಗಿಲು ಹೂಡಿದರೆ ಸಾಕು, ಕರಿಕೆಯು ನಾಶವಾಗುತ್ತದ

ಯಂತ್ರಸಹಾಯದಿಂದ ಒಕ್ಕಲತನ ಮಾಡುವುದು ಬರುವ ಮೊದಲು, ಗುದ್ದಲಿಗಳಿಂದ ಆಗೆದು ಕರಿಕೆಯನ್ನು ಕೀಳಲಾಗುತ್ತಿತ್ತು ಅದಕ್ಕೆ ಎಕರೆಗೆ ೧೫೦ ರೂ ಯಿಂದ ೨೦೦ ರೂ ವರೆಗೆ ವೆಚ್ಚ ಬರುತ್ತಿತ್ತು ಆದರೆ ಟ್ರ್ಯಾಕ್ಟರಿನಿಂದ ಕರಿಕೆಯನ್ನು ಕಿತ್ತು ಒಗೆಯಲು ಎಕರೆಗೆ ೩೨ ರೂ ಮಾತ್ರ ಸೆಚ್ಚ ಒರುವುದು

ಪ್ರತಿನಿರ್ದ ಅಕ್ಟೋಬರಿನಿಂದ ನೂಡಿಯವರೆಗೆ ಆಳವಾಗಿ ನೇಗಿಲ ಹೂಡಿಯುವ ಕೆಲಸವನ್ನು ಮಾಡ ಬೇಕು ಏಪ್ರಿಲ್ ಆದ ಮೇಲೆ ಈ ಕೆಲಸವನ್ನು ನಡೆಸು ವದು ಉಚಿತವಲ್ಲ ಏಕೆಂದರೆ ಆಗ ಆದ್ರ ಮಳೆ ಬರುವ ದರಿಂದ ಪ್ರಯೋಜನವಾಗುತ್ತುದಲ್ಲ

ಕರಿಕೆಯು ಸಂಪೂರ್ಣವಾಗಿ ನಿರ್ಮೂಲವಾಗಬೇಕಾದರೆ ಎರಡು ಕೆಲಸಗಳನ್ನು ಮಾಡಬೇಕಾಗುತ್ತದೆ ಮೊದಲನಯದು ಬೂಮಿಯಲ್ಲಿ ಟ್ರ್ಯಾಕ್ಟರಿನಿಂದ ೧೨ ರಿಂದ ೧೫ ಇಂಚು ಆಳವಾಗಿ ಸೂಡಿಯಬೇಕು ಎರಡನಯದ, ಹೆಂಚಿಗರನ್ನು ಎರಡು ಅಡಿಯಾ ಮರು ತಿಂಗಳ ವರೆಗೆ ಬಿಸಲಿಗೆ ಬಿಟ್ಟು ಆ ಮೇಲೆ ಹೊಲವನ್ನು ತರಗಬೇಕು ಹೂರನಯದು ಹೊಲಗಳು ತಕ್ಕುಮಟ್ಟಿಗೆ ಪುಟ್ಟವಾಗಿದ್ದರೆ ಒಕ್ಕಲಿಗರು ಕಿತ್ತುಬಿದ್ದ ಕರಿಕೆಯನ್ನು ಆರಿಸಿ ಒಗೆಯಬೇಕು

ಅನೇಕ ಅಡ್ಡಿ ಆಂತಕಗಳಿದ್ದರೂ ಟ್ರ್ಯಾಕ್ಟರ ನೇಗಿಲನ್ನು ಆಳವಾಗಿ ಹೊಡಿದರೆ ಉತ್ತಮ ಫಲ ದೊರೆಯುವದೆಂದು ಕಂಡುಬಂದಿದೆ ಆದರೆ ಟ್ರ್ಯಾಕ್ಟರು ಹೊಡಿದ ಬಳಿಕ ಒಕ್ಕಲಿಗರು ಕಿತ್ತುಬಿದ್ದ ಕರಿಕೆಯನ್ನು ಆರಿಸಿ ಒಗೆಯುವಲ್ಲಿ ದಕ್ಷತೆ ವಹಿಸಬೇಕು. ಟ್ರ್ಯಾಕ್ಟರು ಹೊಡಿದರೆ ಸಾಕು, ಕರಿಕೆಯು ನಿರ್ಮೂಲವಾಯಿತೆಂದು ಯಾರೂ ತಿಳಿಯಬಾರದು ಟ್ರ್ಯಾಕ್ಟರೂ ಬೇಕು, ಆದರಿಂದೇ ರೈತನ ಪ್ರಯತ್ನವೂ ಬೇಕು ಆಗ ಮಾತ್ರ ಕರಿಕೆಯು ನಿರ್ಮೂಲವಾಗುವುದು

ನಮ್ಮಲ್ಲಿ ಒಡ ದೇಶ ನಮ್ಮ ಇನ ಒಡವರು ಟ್ಯಾಕ್ಟರನ್ನು ಕೊಳ್ಳುವ ಮಾತಿರಲಿ, ಅದನ್ನು ತರಿಸಿ ಹೊಡಿಸುವದೂ ಸಾಧ್ಯವಿಲ್ಲ ಸಾಧ್ಯವಿದ್ದವರು ಕರಿಕೆ ಹತ್ತಿದ ಹೊಲಗಳಿಗೆ ಮೊದಲು ತರಿಸಿ ಹೊಡಿಯಬೇಕು ಸರ್ಕಾರದವರು ಇದಕ್ಕಾಗಿ ಬಹಳ ನೆರವು ನೀಡುತ್ತಿದ್ದಾರೆ ೪ ಬೈಟ್ಕೊಬ್ಬರಿಂದಾಗಿ ತರಿಸಿ ಹೊಡಿದು ಹೊಲಗಳನ್ನು ಜೋಕ್ಯಮಾಡಬೇಕು ಕರಿಕೆಯು ಬಹಳವಾಗಿರುವ ಹೊಲದಲ್ಲಿ ಹೊನ್ನು ಬಿತ್ತಿದರೂ ಕೈಗೆ ಸಿಕ್ಕುವುದು ನಸ್ಟೇ ಈ ವೈರಿಯನ್ನು ಮೆದಲು ನಿರ್ನಾಮ ಮಾಡ ಬೇಕು ಹೊಲ ಜೋಕ್ಯಾಗಬೇಕು ಆಗ ಭೂಮಿತಾಯಿಯು ನಮಗೆ ಸಾಕಷ್ಟು ಅನ್ನವನ್ನು ಕೊಟ್ಟಾಳು, ನಾಡು ಸುಖನಾಡೀತು ಹೂನ್ನನ್ನು ಬಿತ್ತಿ ಹೊನ್ನೇ ಬೆಳೆದೇವು !

« ಬಿಳಕು »

ಮುದುಕಿಯ ಮೋಸ !

ಕೋಲಾರ ಡಿ|| ಶಿಡ್ಲಘಟ್ಟ ನಗರದ ಮಾ ರಾ ಎರ್ರಪ್ಪ ಎಂಬವರ ಮನೆಗೆ ಒಬ್ಬ ಅಪರಿಚಿತ ಮುದುಕಿಯು ಹೋಗಿ ಕಾಯಿಲೆಯಿಂದ ನರಳುತ್ತಿದ್ದ ಅವರ ಹೆಂಡತಿಗೆ ಗುಣಮಾಡುವುಣಾಗಿ, ನಂಬಿಕೆ ಹುಟ್ಟಿಸಿ, ೩೦೦ ರೂ ಬೆಲೆ ಬಾಳುವ ಆಭರಣಗಳನ್ನೂ, ೬೦೦ ರೂ ನೋಟುಗಳನ್ನೂ ಪೂಜೆಗಿರಿಸಿ ಎಲ್ಲವನ್ನೂ ಅಪಹರಿಸಿಕೊಂಡು ಪರಾರಿಯಾಗಿರುತ್ತಾಳೆ ಪೋಲೀಸಿನವರು ಪತ್ತೆ ನಡೆಸುತ್ತಿದ್ದಾರೆ

ನೈದಿಕಲಿನಪೂಜಾವಿಧಿ

(೨ ನೆಯ ಮುದ್ರಣ)

ಮೇಲ್ಕಂಡ ಗ್ರಂಥವು ವೇ|| ಪಂ ಶ್ರೀಕಾಶೀನಾಥ ಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ, ಆದರೆ ಮುದ್ರಾಪಕರಿಗೆ ವೈದಿಕ ಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧ ಮಂತ್ರಗಳನ್ನೇ ಸಂಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದ ಇಲ್ಲಿಯವರೆಗೆ ಮುದ್ರಿತವಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಛಾಗವೂ ಮಾಡಲ್ಪಟ್ಟಿಲ್ಲ ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಯಸ್ಕೃತವಾದ ಯಜುರ್ವೇದಮಂತ್ರಗಳನ್ನೆಲ್ಲ ಕೂಲಂಕಷವಾಗಿ ಪರೀಕ್ಷಿಸಿ ವಿಶಿಷ್ಟವಾದ ಪ್ರಪಂಚಿಕೃತ ಮಹಾಪಕಾರವನ್ನು ಮಾಡಿದ್ದಾರೆ ಈ ಶಿವಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದವ ಯಾವ ಭಾಗದಲ್ಲಿರುವುವೆಂಬುದು ವಿವರವಾಗಿ ತೋರಿಸಲ್ಪಟ್ಟಿದೆ ಈ ವಿವಪೂಜಾವಿಧಿಯಲ್ಲಿ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀಪದನಿ ನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀಪದನಿ ನಾಮಾವಳಿ, ಷಣ್ಮುಖಸ್ತೋತ್ರಮಿನಾವ ಸಾವಳಿ, ವಿಘ್ನೇಶ್ವರ ನಾಮಾವಳಿ, ಶ್ರೀಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು ದೇವಿಸ್ತೋತ್ರಗಳು, ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ವೀರಶೈವರಿಗೆ ಕಲ್ಪವೃಕ್ಷವೆಂಬಿರು ವೆದು ಉದುರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು

ಕೋರಿಕೆ ಬೆಲೆ ೧ ರೂ. ೪ ಆಣೆ.

ಸ್ಮೃನೇಜರ್

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore.

REGISTERED No. M. 2266 ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾವನಪಂಕಜಾತಋಷಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿಖಾತಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀದೀಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾರಿಪ್ಪುದೀ ದೇಶಮಂ ॥

ಸ್ಥಳವರಿಗೆ ೨ ರೂ. ೪ ಆಣೆ ಪರಸ್ಥಳವರಿಗೆ ೩ ರೂ ಪಿ. ಪಿ ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೪ ನೇ ಮಾರ್ಚಿ ೧೯೪೪ [ಸಂಚಿಕೆ ೪೪

ಶ್ರೀಶೈವತಿಲ್ಲಿ ಬ್ರಹ್ಮರ್ಷಿ ಗುರುಕುಲದ ಪ್ರಾರಂಭೋತ್ಸವ

ಭಾರತೀಯ ಶಿಲ್ಪಕಲೆಯಲ್ಲಿ ಆನ್ಯಾದೃಶವಾದ ಪಾಂಡಿತ್ಯವನ್ನು ಸಂಪಾದಿಸಿ ವಿಶ್ವವಿಖ್ಯಾತರಾಗಿರುವ ಶಿಲ್ಪಸಿದ್ಧಾಂತಿ ಶ್ರೀಸಿದ್ಧಲಿಂಗಸ್ವಾಮಿಗಳವರು ಅತ್ಯಂತ ಕ್ಷೀಣದಶೆಯಲ್ಲಿರುವ ಶಿಲ್ಪಕಲೆಯನ್ನು ಪುನರುಜ್ಜೀವನಗೊಳಿಸುವದಕ್ಕಾಗಿ, ಮೈಸೂರು ರಾಜಧಾನಿಯಲ್ಲಿ ಮೇಲ್ಮಂಡ ಹೆಸರಿನಿಂದ ಸುಂದರವೂ ಒಂಭರವೂ ಆದ ಶಿಲ್ಪವಿದ್ಯಾಮಹಾಮಂದಿರವೊಂದನ್ನು ಸ್ಥಾಪಿಸಿರುವರು ಈ ವಿದ್ಯಾಲಯದ ಕಟ್ಟಡಕ್ಕಾಗಿ ಸುಮಾರು ಮೂರು ಲಕ್ಷ ರೂಪಾಯಿಗಳವರೆಗೆ ವೆಚ್ಚವಾಗಿರುವುದೆಂದು ತಿಳಿದು ಬರುತ್ತದೆ ಶಿಲ್ಪಶಿಕ್ಷಣಕ್ಕಾಗಿ ಇಂತಹ ವಿಶಾಲಮಂದಿರವು ಇಂಡಿಯಾದೇಶದಲ್ಲೆಲ್ಲಿಯೂ ಇಲ್ಲವೆಂದು ಹೇಳಬಲೆ ಅತಿಶಯೋಕ್ತಿಯೆನಿಸಲಾರದು ರಾಜರ್ಷಿಗಳಾದ ಶ್ರೀಮನ್ಮಹಾರಾಜರವರು ಇದೇ ತಿಂಗಳು ೬ನೆಯ ತಾರೀಖಿನ ದಿವಸ ತಮ್ಮ ಅಮೃತ ಹಸ್ತದಿಂದ ಇದರ ಅರಂಭೋತ್ಸವವನ್ನು ಪರಮಸಂತೋಷದಿಂದ ನೆರವೇರಿಸಿದರು ಈ ಶುಭಸಮಯದಲ್ಲಿ ಸವರ್ಣಮಯ ಚೌಕಟ್ಟಿನಿಂದ ರಾರಾಜಿಸುವ ರಜತಪತ್ರದಲ್ಲಿ ಮನೋಹರವಾದ ಸ್ವಾಗತ ಪದ್ಯರತ್ನಪಂಚಕವನ್ನು ಕೆಲವು ಮಹಾಪ್ರಭುಗಳವರಿಗೆ ಸಮರ್ಪಿಸಲಾಯಿತು ಕಾರ್ಯಕ್ರಮವು ಸಮಾಪ್ತಿಗೊಂಡಮೇಲೆ ಮಹಾಪ್ರಭುಗಳವರು ಈ ಮಹಾಮಂದಿರದ ಸಕಲ ಭಾಗಗಳನ್ನು ಪರಾಮರ್ಶಿಸಿ ಪರಮಾನಂದಭರಿತರಾದರು ಈ ಮಂದಿರದ ಮುಂಭಾಗದಲ್ಲಿ ವಿನ್ಯಾಸವಾಗಿರುವ ದೇವತಾಮೂರ್ತಿಗಳ ದರ್ಶನವನ್ನು ಮಾಡಿದಕೂಡಲೇ ನಾಸ್ತಿಕನಲ್ಲಿಯೂ ಸಹ ಆಸ್ತಿಕ್ಯಭಾವವು ಉಂಟಾಗುವುದು ಪ್ರತಿಯೊಂದು ದೇವತಾಮೂರ್ತಿಯ ಮುಖದಲ್ಲಿ ಅನಂದ ಕಳೆಯು ಉಕ್ಕುತ್ತಿರುವದು

ಶ್ರೀಭುವನೇಶ್ವರೀ ಮಹಾದೇವಿಯ ಸೌಂದರ್ಯವಂತೂ ವರ್ಣನಾತೀತವಾಗಿರುವದು ಆ ಮಹಾತಾಯಿಯು ತನ್ನ ದರ್ಶನಕ್ಕಾಗಿ ಬರುತ್ತಿರುವ ಭಕ್ತರೊಡನೆ ಪ್ರತ್ಯಕ್ಷವಾಗಿ ಮಾತನಾಡುತ್ತಿರುವಳೋ ಎಂಬಂತೆ ಭಾಸವಾಗುತ್ತಿರುವದು ಇಂತಹ ಪ್ರಸನ್ನ ಮೂರ್ತಿಯು ಈ ಲೋಕದಲ್ಲಿ ದೊರೆಯುವುದೇ ದುರ್ಲಭವೆಂದು ಮುಕ್ತಕಂಠದಿಂದ ಉದ್ಘೋಷಿಸಬಹುದಾಗಿದೆ ಇದಲ್ಲದೆ ಮಂದಿರದಲ್ಲಿ ಇನ್ನೂ ಅನೇಕಾನೇಕ ಮೂರ್ತಿಗಳು ಅತ್ಯಂತ ದರ್ಶನೀಯಗಳಾಗಿನೆ ಈ ಮಂದಿರವು ಒಂದು ಮಹಾ ವಸ್ತುಪ್ರದರ್ಶನ ಶಾಲೆಯಂತೆ ಕಂಗೊಳಿಸುತ್ತಿರುವದು ಪ್ರತಿ ದಿವಸವೂ ಸಾವಿರಾರು ಜನರು ಇಲ್ಲಿ ಮೂರ್ತಿಮತ್ತಾಗಿರುವ ಶಿಲ್ಪಕಲಾಚಾತುರಿಯನ್ನು ನೋಡಿ ಪರಮಾನಂದಭರಿತರಾಗುತ್ತಿರುವರು ಸನಾತನ ಧರ್ಮಕ್ಕೆ ಮೂಲ ಜೀವನಾಳದಂತಿರುವ ಶಿಲ್ಪಕಲೆಯು ಈ ಮೂಲಕ ಉದ್ದೀಪಿತವಾಗಿ, ಸಂಸ್ಥಾಪಕರೆನಿಸಿಕೊಳ್ಳುವ ಶ್ರೀಜಗದ್ಗುರ್ವೀಶ್ವರನ ಆಶೀರ್ವಾದದಿಂದ ಫಲಿಸುವಂತಾಗಲೆಂದಾಶಿಸುತ್ತೇವೆ.

ಸ್ವಾಗತ ಪದ್ಯರತ್ನ ಪಂಚಕಂ

ಯಃ ಕರ್ಣಾಟಕಭೂಪತಿಃ ಶಿವರತಿಃ ಶ್ರೀರತ್ನಸಿಂಹಾಸನೇ ।
ಪಾರಂಪರ್ಯಸಮಾಗತೇ ಪ್ರವಿತತೇ ವಿಬ್ರಾಜತೇ ಭಾರತೇ ॥
ಶ್ರೀಮತ್ಸದ್ಗುರುಪಾದಪಂಕಜಯುಗೇ ಭೃಂಗೋಪಮೋ ಯಃ ಸದಾ ।
ತಸ್ಯ ಶ್ರೀಜಯಚಾಮರಾಜನೃಪತೇರಾಶಾಸ್ಮಹೇ ಸ್ವಾಗತಂ ॥೧॥

ಯಃ ಶ್ರೀಮದ್ಯದುವಂಶಪದ್ಮತರಣಿರ್ಧರ್ಮಾತ್ಮಚಿಂತಾಮಣಿಃ ।
ರಾಜದ್ರಾಜಶಿರಾನುಣಿರ್ಬುಧಮಣಿಃ ಸದ್ಧರ್ಮರಕ್ಷಾಮಣಿಃ ॥
ದ್ವೈವಾದ್ಯಾಗತರಾಜನೀತಿಸರಣಿರ್ವ್ಯಾಘ್ರಾಗ್ರಸಂಪತ್ಪ್ರದಾನಿಃ ।
ತಸ್ಯ ಶ್ರೀಜಯಚಾಮರಾಜನೃಪತೇರಾಶಾಸ್ಮಹೇ ಸ್ವಾಗತಂ ॥೨॥

ಯಃ ಶ್ರೀಶಿಲ್ಪಕಲಾಮಯಂ ಶಿವಮಯಂ ಶಾಸ್ತ್ರಂ ಪರಂ ಚಿನ್ಮಯಂ ।
ಲೋಕೇ ಪ್ರಜ್ವಲಿತುಂ ಸಹಾಯಮತುಲಂ ಕೃತ್ವಾ ಹಿ ರಾರಾಜತೇ ॥
ಭವ್ಯಂ ಶ್ರೀಭುವನೇಶ್ವರೀಸುಭವನಂ ನಿರ್ಮಾಪ್ಯ ಸಂಮೋದತೇ ।
ತಸ್ಯ ಶ್ರೀಜಯಚಾಮರಾಜನೃಪತೇರಾಶಾಸ್ಮಹೇ ಸ್ವಾಗತಂ ॥೩॥

ಭಸ್ಮಾಕ್ಷಾದಿವಿಭೂಷಿತಃ ಶಿವಯುತಃ ಸದ್ಧರ್ಮವಿಭ್ರಾಜಿತಃ ।
ಶ್ರೀಕಂಠೇಶ್ವರಪುಂಜಕಃ ಶಿವಮಹಾಪಂಚಾಕ್ಷರೀಜಾಪಕಃ ॥
ನಿತ್ಯಂ ಯಃ ಸಗುಣಾರ್ಚಕೋಽಪಿ ರಮತೇ ತತ್ತ್ವೇ ಪರೇ ನಿರ್ಗುಣೇ ।
ತಸ್ಯ ಶ್ರೀಜಯಚಾಮರಾಜನೃಪತೇರಾಶಾಸ್ಮಹೇ ಸ್ವಾಗತಂ ॥೪॥

ಸದ್ಧರ್ಮರೂಪಃ ಶಮಿತಾರ್ತತಾಪಃ ।
ವಿಧ್ವಸ್ತಕೋಪಃ ಧೃತಶಾಂತಿಚಾಪಃ ॥
ಸತ್ಯಸ್ವರೂಪಃ ಯದುವಂಶದೀಪಃ ।
ಜೀಯಾಜ್ಜಿರಂ ಶ್ರೀಜಯಚಾಮರಕ್ಷ್ಮಭೃಪಃ ॥೫॥

ತಾ॥ ೬ಳಿ॥ ೧೪೭೦ ಶ್ರೀ ಸರ್ವಧಾರಿ ಸಂ॥
ಶಾಲ್ಮಸ ತೆಳ್ಳ ೭ ಇಂದುವಾಸರೇ ॥

॥ ಓಂ ॥

ನಮ್ಮ ಜೀವನದ ಪರಿಸ್ಥಿತಿ ಮತ್ತು ಅದರ ಗುರಿ

(ಲೇಖಕರು: ಶ್ರೀಮಾನ್ ಎಂ ಎಲ್ ನಾಗೇಶನವರು, ಅಧ್ಯಕ್ಷರು ಆತ್ಮವಿಚಾರಮಂಡಿರ, ಮೈಸೂರು)

ಈ ಲೋಕದಲ್ಲಿ ಅಕ್ಷರ್ಯಗಳಲ್ಲಿ ಆಶ್ಚರ್ಯವ್ಯತ್ಪದು ಅಂದರೆ, ಪ್ರತಿಯೊಬ್ಬನೂ ತನಗಿಂತ ಅನ್ಯವಾದ ವಿಷಯವನ್ನು ತಿಳಿಯಲು ಕುತೂಹಲಪಡುತ್ತಾನೆಯೇ ಹೊರತು ತಾನು ಯಾರು? ತನ್ನ ಸ್ವರೂಪವೇನು? ತಾನು ಈ ಜನ್ಮಕ್ಕೆ ಬರುವುದಕ್ಕಿಂತ ಮುಂಚೆ ಏನಾಗಿದ್ದನು? ಈ ಜನ್ಮವು ಕಳೆದನಂತರ ನಾನು ಏನಾಗುತ್ತೇನೆ? ಎಂಬುದನ್ನು ವಿಚಾರಮಾಡಿ ತಿಳಿಯಲು ಕುತೂಹಲಪಡುವುದಿಲ್ಲ ಇದಲ್ಲದೆ ಪ್ರತಿಯೊಬ್ಬನೂ ತಾನು ವೃದ್ಧನಾಗುವವರೆಗೆ ಬದುಕಿದರೆ ಆಗ ಸುಖವಾಗಿರುವದಕ್ಕೂ, ಒಂದು ವೇಳೆ ತಾನು ಆಕಾಲದಲ್ಲಿ ಗತಿಸಿ ಹೋದರೆ ತನ್ನ ಹೆಂಡತಿ ಮಕ್ಕಳುಗಳು ಸುಖವಾಗಿರುವದಕ್ಕೂ ತಕ್ಕ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಯತ್ನ ಪಡುತ್ತಾನೆಯೇ ಹೊರತು, ತಾನು ನಿಜಾನಾವಾಗಿ ಯಾಗಲೀ ಅಥವಾ ಜಾಗ್ರತೆಯಾಗಿಯಾಗಲಿ ಈ ಲೋಕವನ್ನು ಬಿಡುವದು ನಿಜವಾಗಿದ್ದರೂ ತಾನು ಈ ಲೋಕವನ್ನು ಬಿಟ್ಟನಂತರ ಸುಖವಾಗಿರುವದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುವ ಯೋಚನೆಯೇ ಅವನಿಗೆ ಹುಟ್ಟುವದಿಲ್ಲ ಇಷ್ಟೇ ಅಲ್ಲದೆ, ಲೋಕದಲ್ಲಿ ಜನಗಳು ತತ್ತುರಿಹಸ್ಯಗಳನ್ನು ತಿಳಿಯದೇ ಅಧರ್ಮ (ಸ್ವಾರ್ಥ)ವೆ ಅಂದರೆ ತಮ್ಮ ಸುಖಲಾಭಗಳಿಗೋಸ್ಕರ ಇತರರಿಗೆ ಕಷ್ಟ ನಷ್ಟಗಳನ್ನುಂಟುಮಾಡುವದು) ಮತ್ತು ಪರಸ್ಪರ ಮತದ್ವೇಷ (ಅನ್ಯಮತೀಯರನ್ನು ದ್ವೇಷಿಸಿ ಅವರನ್ನು ನಾಶಗೊಳಿಸುವ ಪ್ರಯತ್ನ) ಗಳುಳ್ಳವರಾಗಿ ಪೋರಾವಾದ ಯುದ್ಧಗಳು, ಕೋಮುವಾರು ಕಲಹಗಳು, ದುರ್ಭಿಕ್ಷ, ಸಾಂಕ್ರಾಮಿಕ ರೋಗಗಳು ಇವೇ ಮುಂತಾದ ದುಃಖಗಳನ್ನು ಅನುಭವಿಸುತ್ತಲಿದ್ದಾರೆ

ನಾವು ಭರತಖಂಡವೆಂಬ ಪುಣ್ಯಭೂಮಿಯಲ್ಲಿ ಈಶ್ವರ ಕೃಪೆಯಿಂದ ಜನಿಸಿರುತ್ತೇವೆ ನಮ್ಮ ಜೀವನದ ಪರಿಸ್ಥಿತಿಯು ಕೇವಲ ದುಃಖಸ್ವರೂಪವಾದುದರಿಂದ ನಾವು ಅದನ್ನು ತಿಳಿದು, ಸರ್ವದುಃಖಗಳಿಂದಲು ಬಿಡುಗಡೆಯಾಗಿ ಶಾಶ್ವತವಾದ ಆನಂದ (ಸುಖ) ವನ್ನು ಅಂದರೆ ಮೋಕ್ಷವನ್ನು ಹೊಂದುವುದಕ್ಕೆ ಅನುಕೂಲವಾದ ಮಾರ್ಗವೇ ಮತ ಎಂಬುದಾಗಿ ಕರೆಯಲ್ಪಡುತ್ತದೆ ಮನುಷ್ಯರಿಗು ಮತ್ತು ಪಶುಗಳಿಗು ಆಹಾರ, ನಿದ್ರೆ, ಸಂಭೋಗ ಇವುಗಳನ್ನು ನೂಡುವದರಲ್ಲಿಯು ಮತ್ತು ಭಯಪಡುವದರಲ್ಲಿಯು ಯಾವ ನ್ಯತ್ಯಾಸವೂ ಇರುವುದಿಲ್ಲ ಆದರೆ, ತನ್ನ ಜೀವನದ ಪರಿಸ್ಥಿತಿಯನ್ನು ತಿಳಿದು ಮೋಕ್ಷವನ್ನು ಹೊಂದುವದಕ್ಕೆ ತಕ್ಕ ಪ್ರಯತ್ನವನ್ನು ಮನುಷ್ಯರು ನೂಡುತ್ತಾರೆ ಪಶುಗಳಾದೋರೇ ಅರೀತಿ ನೂಡುವುದಿಲ್ಲ ಆದುದರಿಂದ ಮನುಷ್ಯರಾಗಿ ಹುಟ್ಟಿ ಮೋಕ್ಷವನ್ನು ಪಡೆಯುವುದಕ್ಕೆ ತಕ್ಕ ಪ್ರಯತ್ನವನ್ನು ಮಾಡೀರೆ ಇರುವವರು ನರಪಶು.ಗಳು ಎಂಬುದಾಗಿ ಕರೆಯಲ್ಪಡುತ್ತಾರೆ ಮನುಷ್ಯಜನ್ಮವಲ್ಲದೆ ಇನ್ನಾವ ಜನ್ಮದಲ್ಲಿಯು ಮೋಕ್ಷವನ್ನು ಪಡೆಯುವದಕ್ಕೆ ಸಾಧ್ಯವಿಲ್ಲದ್ದರಿಂದ ಮನುಷ್ಯಜನ್ಮವು ಎಲ್ಲ ಜನ್ಮಗಳಿಗಿಂತಲು ಶ್ರೇಷ್ಠವಾದದ್ದೆಂದು ಹೇಳಲ್ಪಡುತ್ತದೆ ಇಂತಹ ಶ್ರೇಷ್ಠವಾದ ಜನ್ಮವು ಪ್ರಾಪ್ತವಾಗಿರುವಾಗ ನೀಚ್ರತ್ವವನ್ನು ಪಡೆಯದೆ ಈ ಜನ್ಮವನ್ನು ನಾವು ಕಳೆದುಕೊಂಡರೆ ಮುಂದಕ್ಕೆ ಮನುಷ್ಯಜನ್ಮವನ್ನೇ ನಾವು ಪಡೆಯುತ್ತೇವೆ ನೆಂಬ ಭರವಸೆಯಿಲ್ಲ ಏತಕ್ಕೆಂದರೆ, ನಮ್ಮ ಸಂಚಿತ ಕರ್ಮಗಳಿಗನುಸಾರವಾಗಿ ನಾಯಿ, ಹಂದಿ, ಗೂಬೆ ಇತ್ಯಾದಿ ಹೀನಜನ್ಮಗಳು ಮುಂದೆ ನಮಗೆ ಬರಬಹುದು ಪ್ರತಿಯೊಂದು ಮತವು ಮೋಕ್ಷಕ್ಕೆ ಮಾರ್ಗವಾಗಿದ್ದರೂ, ಈ ಕಾಲದಲ್ಲಿ ಆನೇಕರು ಮತ ಅಂದರೆ ಸಹಭೋಜನ ಮತ್ತು ದೇಶಸಂಬಂಧ ಇವುಗಳನ್ನು ಮಾಡುವದಕ್ಕೆ ಏರ್ಪಾಡಾದೆ ಒಂದು ಪಂಗಡ ಎಂಬುದಾಗಿಯೂ, ಆಚಾರ್ಯತನಾದ ವ್ಯಕ್ತಿಯನ್ನಾಗಲಿ ಅಥವಾ ಒಂದು ಮೊಹ್ಮ ಪದವಿಯನ್ನಾಗಲಿ ಹೊಂದುವದು ಮತ್ತು ಸ್ವೇಚ್ಛೆಯಾಗಿ ಕ್ಷಣಿಕವಾಗಿಯು ಮತ್ತು ಅದ್ಯಂತಗಳಲ್ಲಿದು ಖವನ್ನು ಕೊಡಬಕ್ಕದ್ದಾಗಿಯು ಇರುವ ವಿಷಯ ಭೋಗ್ಯಗಳನ್ನು ಅನುಭವಿಸುವದು ತಮ್ಮ ಜೀವನದ ಮುಖ್ಯ ಗುರಿಯೆಂದು ತಿಳಿದಿರುತ್ತಾರೆ

ವಿಚಾರಮಾಡಿನೋಡಿದರೆ ಲೋಕದಲ್ಲಿ ಅತ್ಯಂತ ಆಸಹ್ಯಗಳಾದ ಪದಾರ್ಥಗಳಿಪ್ಪಿರುವುವೋ ಅವೆಲ್ಲವೂ ನಮ್ಮ ಶರೀರದಲ್ಲೇ ಇರುತ್ತವೆ ಆದುದರಿಂದ ನಮ್ಮ ದೇಹವು ಅತ್ಯಂತ ಹೇಯವಾದದ್ದು ಅನ್ನು ವದರಲ್ಲಿ ಯಾವ ಸಂದೇಹವೂ ಇರುವುದಿಲ್ಲ ಇಂತಹ ಹೇಯವಾದ ಶರೀರವನ್ನು ನಾವು ಧರಿಸಿ, ಆ ಶರೀರವೇ ನಾನೆಂದು ಅಭಿಮಾನಿಸುವದರಿಂದ ಶರೀರವು ಮಾಡತಕ್ಕ ಕರ್ಮಗಳೆಲ್ಲಲ್ಕೂ ನಾವು ಹೊಣೆಯಾಗಿ ಅವುಗಳ ಫಲವನ್ನು ಅನುಭವಿಸುವದಕ್ಕಾಗಿ ನಾವು ಪುನಃ ಪುನಃ ಹುಟ್ಟಿ ಸಾಯುತ್ತೇವೆ ನಾವು ಒಂದುಸಾರಿ ಹುಟ್ಟಿ ಒಂದು ಶರೀರವನ್ನು ಪಡೆಯಬೇಕಾದರೆ ನಾವು ಕೆಲವು ಕಾಲ ತಾಯಿಯ ಗರ್ಭದಲ್ಲಿ ಕೃಂತ ಆಸಹ್ಯವು ಮತ್ತು ದುರ್ಗಂಧಮಯವು ಆಗಿರುವ ಮಾಸಲು ಜೀಲದಲ್ಲಿ ವಾಸಮಾಡಬೇಕು ಗರ್ಭದಲ್ಲಿ ನಮ್ಮ ನಿಳನೆಯ ತಿಂಗಳಿನಲ್ಲೇ ನಮಗೆ ಜ್ಞಾನವುಂಟಾಗಿ, ಹಿಂದೆ ಅನುಭವಿಸಿದ ಆಗ ಅನುಭವಿಸುತ್ತಿರುವ ಮತ್ತು ಮುಂದೆ ಅನುಭವಿಸಬಹುದಾದ ದುಃಖಗಳನ್ನು ತಿಳಿದು ನಾವು ಬಹಳ ದುಃಖಿಸುತ್ತಿರುತ್ತೇವೆ ಒಂಭತ್ತು ತಿಂಗಳು ತುಂಬಿತ್ತಲು ಸೂತಿ ಎಂಬ ವಾಯುವು ಹಿಡಿಲಿಗೆ ಸವಾನವಾದ ಶಬ್ದವನ್ನು ಮಾಡಿ ನಮ್ಮನ್ನು ಗರ್ಭದಿಂದ ಹೊರಕ್ಕೆ ತಳ್ಳುತ್ತದೆ ಆ ಸಮಯದಲ್ಲಿ ಕಂಬಟ್ಟೆನಲ್ಲಿ ತಂತಿಯು ಎಳೆಯಲ್ಪಡುವಂತೆ ತಾಯಿಯ ಯೋನಿಯಿಂದ ನಾವು ಹೊರಗೆ ಎಳೆಯಲ್ಪಡುತ್ತೀನೆ ಆಗ ನಮಗೆ ಉಂಟಾಗುವ ಬಾಧೆಯನ್ನ ಯಾರಿಂದಲೂ ವರ್ಣಿಸುವುದಕ್ಕೆ ಸಾಧ್ಯವಿಲ್ಲ ಇದಿರಿಂದಲೇ ನಾವು ಮಕ್ಕಳನ್ನು ಬೆದರಿಸುವಾಗ ಹುಟ್ಟಿದ ದಿವಸವನ್ನು ಕಾಣಿಸುತ್ತೇವೆ' ಎಂದು ಹೇಳುವದು ರೂಢಿಯುಂಟು ಇದರಿಂದ 'ನೀವು ಹುಟ್ಟಿದಾಗ ನಿಮಗೆ ಎಷ್ಟು ಬಾಧೆಯಾಯಿತೋ ಆದಕ್ಕೆ ಸಮಾನವಾದ ಬಾಧೆಯನ್ನು ಕೊಡಬಕ್ಕ ಅತ್ಯಂತ ಕಠಿಣವಾದ ಶಿಸ್ತುಯನ್ನು ಮಾಡುತ್ತೇನೆ' ಎಂದು ಾೀಶಿಕ್ಷಾಗಾಗುತ್ತದೆ ನಮಗೆ ಮರಣವಾಗುವಾಗ ಪಂಚ ಪ್ರಾಣಗಳು ತಮ್ಮ ತಮ್ಮ ಸ್ಥಾನಗಳನ್ನು ಬಿಟ್ಟು ದೇಹದಿಂದ ಹೊರಗೆ ಹೊರಡುತ್ತವೆ ಆಗ, ಒಂದೇ ಕಾಲದಲ್ಲಿ ನೂರಾರು ಚೇಳುಗಳು ಕಡಿದರೆ ಎಷ್ಟು ಬಾಧೆಯಾಗುತ್ತದೋ ಅಷ್ಟು ಬಾಧೆಯು ಆಗುವದಲ್ಲದೆ ಪ್ರಾಣಗಳು ಹೊರಗೆ ಹೋಗುವದು ಒಂದು ಕ್ಷಣಾನಾದೂ ಮರಣವನ್ನು ಹೊಂದುವವರು ಆ ಒಂದು ಕ್ಷಣದಲ್ಲಿ ಅನುಭವಿಸುವ ದುಃಖವು ಸಪಸ್ರಾರು ವರ್ಷಗಳು ಅನುಭವಿಸಿದಂತೆ ಆಗುತ್ತವೆ ಆದುದರಿಂದೇ ಮರಣಸಂಕಟಕ್ಕಿಂತ ಹೆಚ್ಚಿನ ಸಂಕಟ ವಿಲ್ಲವೆಂದು ಏೀಳುವದು ರೂಢಿಯಲ್ಲಿದೆ

ಜನನಮರಣ ದು ಖಗಳಲ್ಲದೆ ಜನನಾನಾದಂದಿನಿಂದ ಮರಣಾವಾಗುವವರೆಗೂ ನಾವು ಅನೇಕವಿಧವಾದ ಸು ಖ ಗಳನ್ನು ಅನುಭವಿಸುತ್ತೇವೆ ಆವು ಯಾವುವೆಂದರೆ, ನೆನ್ನು ದೇಹವು ಅತ್ಯಂತ ಹೇಯವಾಗಿರುವದಲ್ಲದೆ ಪ್ರಸಂಚದಲ್ಲಿರುವಕಕ್ಕ ಸರ್ವರೋಗಗಳಿಗೆ ತವರುಮನೆಯಾಗಿರುವುದರಿಂದ ನಮಗೆ ಯಾವಾಗಲೂ ಏಸಾದರೂ ಒಂದು ರೋಗವಿದ್ದು ನಮಗೆ ದುಃಖವನ್ನುಂಟುಮಾಡುತ್ತದೆ ಪ್ರಾಪಂಚಿಕ ಪದಾರ್ಥಗಳಲ್ಲಿ ಕೆಲವು ನಮಗೆ ಇಷ್ಟವಾಗಿಯು ಮತ್ತೆ ಕೆಲವು ನಮಗೆ ಆನಿಷ್ಟವಾಗಿಯು ಇರುವದರಿಂದ ಸಾಮಾನ್ಯವಾಗಿ ನಮಗೆ ಇಷ್ಟವಾದ ಪದಾರ್ಥಗಳು ಪ್ರಾಪ್ತವಾಗದೆ ಅನಿಷ್ಟವಾದ ಪದಾರ್ಥಗಳೇ ಪ್ರಾಪ್ತವಾಗುವದರಿಂದ ನಮ್ಮ ಮನಸ್ಸಿನಲ್ಲಿ ಯಾವಾಗಲೂ ಏನಾದರೂ ಒಂದು ಚಿಂತೆಯು ಇದ್ದು ಅದು ನಮಗೆ ದುಃಖವನ್ನುಂಟುಮಾಡುತ್ತದೆ ಈ ರೀತಿಯಾಗಿ ಹೊರಗೆ ದೇಹದಲ್ಲಿಯೂ, ಒಳಗೆ ಮನಸ್ಸಿನಲ್ಲಿಯೂ ನಮಗೆ ಉಂಟಾಗುವ ದುಃಖವು 'ಆಧ್ಯಾತ್ಮಿಕ ದುಃಖ' ಎಂಬುದಾಗಿ ಹೇಳಲ್ಪಡುತ್ತದೆ. ಇದಲ್ಲದೆ ನಮಗೆ ಅನ್ಯವಾದ ಸೊಕ್ಕೆ, ತಿಗಣೆ, ಚೇಳು, ಹಾವು, ಹುಲಿ, ಕರಡಿ, ದುಷ್ಟರು, ಶತ್ರುಗಳು, ಳಳ್ಳರು ಮುಂತಾದ ಭೌತಿಕಪ್ರಾಣಿಗಳಿಂದ ನಮಗೆ ಆಗಾಗ್ಗೆ ದುಃಖವುಂಟಾಗುತ್ತದೆ ಈ ದುಃಖವು 'ಆಧಿಭೌತಿಕ ದುಃಖ' ಎಂಬುದಾಗಿ ಹೇಳಲ್ಪಡುತ್ತದೆ. ಇವೆರಡು ದುಃಖಗಳಲ್ಲದೆ ಈಶ್ವರಾಜ್ಞೆಯಿಂದ ಸಿಡಿಲು, ಬಿರುಗಾಳಿ, ಪ್ರವಾಹ, ಭೂಕಂಪ ಮುಂತಾದವುಗಳಿಂದ ನಮಗೆ ದು ಖವುಂಟಾಗುತ್ತದೆ ಈ ದುಃಖವು 'ಅಧಿದೈವಿಕ ದುಃಖ' ಎಂಬುದಾಗಿ ಹೇಳಲ್ಪಡುತ್ತದೆ ಈ ಮೂರು ವಿಧವಾದ ದುಃಖಗಳಲ್ಲದೆ ಕುಟುಂಬದಲ್ಲಿ ಹೆಂಡತಿ ಮಕ್ಕಳುಗಳು ಅವಿಧೇಯರಾದರೇ ಆಗಲಿ, ರೋಗಗ್ರಸ್ತರಾದರೇ ಆಗಲಿ ಅಥವಾ ಇನ್ನಾವ ವಿಪತ್ತಿಗೊಳಗಾದರೇ ಆಗಲಿ ನಮಗೆ ಮಹತ್ತಾದ ದುಃಖವುಂಟಾಗುವುದು. ದಾರಿದ್ಯವನ್ನು ಅನುಭವಿಸುವಾಗಲು, ಧನವನ್ನು ಸಂವಾದಿಸುವಾಗಲು, ಆದನ್ನು ರಕ್ಷಿಸುವಾಗಲು, ಅದು ಖರ್ಚಾಆವಾಗಲು ಅನುಭವಿಸುವಾಗಲೂ ನಮಗೆದುಃಖವುಂಟಾಗುತ್ತದೆ ಇದುವರಿಗು ಹೇಳಿದಂತೆ ಗರ್ಭದಲ್ಲಿರುವಾಗಲು, ಜನನವಾಗುವಾಗಲು, ಮರಣವಾಗುವಾಗಲು, ಜನನವಾದಂದಿನಿಂದ ಮರಣವಾಗುವವರೆಗು **ನಾವು** ಅಪೇಕ್ಷ ವಿಧವಾದ ದುಃಖಗಳನ್ನು ಅನುಭವಿಸುತ್ತೇವಲ್ಲದೆ, **ನಾವು** ಈ ಲೋಕದಲ್ಲಿರುವಾಗ ನಮ್ಮ ಮತ್ತು ನಮ್ಮ ಹೆಂಡತಿ ಮಕ್ಕಳ ಜೀವನಕ್ಕೆ ಸಾಕಾದಷ್ಟು ಅನುಕೂಲವು ನಮಗೆ ಪ್ರಾಪ್ತಿಯಾಗಿದ್ದರೂ ಅಥವಾ ಇಲ್ಲದೇ ಇದ್ದರೂ ನಮ್ಮ ಹೆಂಡತಿ ಮಕ್ಕಳುಗಳಿಗೆ ವಿಕೇವಮಾದಾ ದೈವ್ಯವನ್ನು ಸಂಗ್ರಹಸಾಡಬೇಕೆಂಬ ಕುತೂಹಲದಿಂದ ತಿಳಿದೂ ತಿಳಿಯದೆಯೂ ಹೆಚ್ಚಾಗಿ ಪಾಪಕಾರ್ಯಗಳನ್ನು **ನಾವು** ಮಾಡುತ್ತೇವಾದ್ದರಿಂದ ನಮ್ಮ ಮರಣಾನಂತರ ನರಕ ದಲ್ಲಿಯೂ ಸಹ ನಮ್ಮ ಕರ್ಮಗಳಗನುಸಾರವಾಗಿ ಸಹಿಸ ಲಶಕ್ಯವಾದ ದುಃಖಗಳನ್ನು **ನಾವು** ಅನುಭವಿಸುತ್ತೇವೆ. (ನಾವು ಸಂಗ್ರಹಿಸುವ ಧನವನ್ನು ಅನುಭವಿಸುವದಕ್ಕೆ ನಮ್ಮ ಹೆಂಡತಿ ಮಕ್ಕಳು ಆರ್ಹರೇ ಹೊರತು **ನಾವು** ಮಾಡುವ ಪಾಪಕರ್ಮಗಳಿಗೂ ಅವರಿಗೂ ಯಾವ ಸಂಬಂಧವೂ ಇಲ್ಲ ಎಂಬುದನ್ನು **ನಾವು** ನೆನಪಿನಲ್ಲಿಡಬೇಕು) ಈರೀತಿಯಾಗಿ ಒಂದು ದುಃಖವಾನನಂತರ ಇನ್ನೊಂದು ದುಃಖವನ್ನು, ಇನ್ನೊಂದು ನುಃಖವಾದ ನಂತರ ಮತ್ತೊಂದು ದು'ಖವನ್ನು ಹೊಂದಿ ದುಃಖ ನೆಂಬ ಚಕ್ರದಲ್ಲಿ ನಾವು ಸುತ್ತುತ್ತಿರುವದರಿಂದ ಇದು ಸಂಸಾರವೆಂದು ಕರೆಯಲ್ಪಡುವದು. ಇದರಿಂದಲೇ "ಸಂಸಾರೋ ದುಃಖಸಾಗರಃ" ಎಂಬಂತೆ ಸಂಸಾರವು ದುಃಖಸಮುದ್ರವಾಗಿರುವದು ಆದುದರಿಂದಲೇನೇ ಈ ಲೋಕದಲ್ಲಿ ಭಿಕ್ಷುಕನಿಂದಿಯಾಗಿ ಚಕ್ರವರ್ತಿಯವರೆಗೆ ದುಃಖವಿಲ್ಲದೆ ಸುಖವಾಗಿರುವವರು ಯಾರೂ ಇಲ್ಲ ಇದೇ ನಮ್ಮ ಜೀವನದ ಪರಿಸ್ಥಿತಿ

ಈರೀತಿಯಾಗಿ ನಮ್ಮ ಜೀವನದ ಪರಿಸ್ಥಿತಿಯು ದುಃಖಮಯವಾಗಿದ್ದರೂ ಬಚ್ಚಲಿನಲ್ಲಿರುವ ಹುಳುವು ತಾನು ಬಚ್ಚಲಿನಲ್ಲೇ ಹುಟ್ಟಿ, ಬಚ್ಚಲಿನಲ್ಲೇ ಬೆಳೆದು, ಬಚ್ಚಲಿನ ದುರ್ಗಂಧವನ್ನೇ ಸದಾ ಅನುಭವಿಸುತ್ತಿರುವದರಿಂದ, ಬಚ್ಚಲು ದುರ್ಗಂಧಮಯವು ಎಂಬುದು ಅದಕ್ಕೆ ಸ್ವಲ್ಪವೂ ತೋಚದೆ ಅದಕ್ಕೆ ಬಚ್ಚಲಿನ ದುರ್ಗಂಧವು ಹಿತವಾಗಿ ಬಚ್ಚಲಿನಿಂದ ಹೊರಗೆ ಹೋಗುವದಕ್ಕೆ ಇಷ್ಟ ಪಡದೇ ಇರುವಂತೆ ನಾವು ಆಸಾಧ್ಯನೆಂಕಕೋಟಿ ಜನ್ಮ ಗಳಿಂದಲು ಹಿಂದೆ ಕೇಳಿದಂತೆ ದುಃಖದಲ್ಲೇ ಹುಟ್ಟಿ, ದುಃಖದಲ್ಲೇ ಬೆಳೆದು, ದುಃಖದಲ್ಲೇ ಮುಳುಗಿ ದುಃಖವನ್ನು ನಾವು ಅನುಭವಿಸಕಕ್ಕದ್ದೇ ನಮಗೆ ಸ್ವಭಾವವಾಗಿ ಹೋಗಿ, ನಾವು ದುಃಖದಲ್ಲಿದ್ದೇವೆ ಎಂಬುದೇ ನಮಗೆ ತಿಳಿಯದೇ ಇರುವದರಿಂದ ಅದನ್ನು ಪರಿಹಾರಮಾಡಿ ಕೊಂಡು ಸುಖವನ್ನು ಹೊಂದಬೇಕೆಂಬ ಇಚ್ಛೆಯೇ ನಮಗೆ ತೋರುವುದಿಲ್ಲ ನಮ್ಮಲ್ಲಿ ಯಾರಿಗಾದರೂ ಸತ್ಯುರುಷರ ಸಹವಾಸವು ಮೊರಕೆ ಆವರು ನಮಗೆ ಇರ ತಕ್ಕ ದುಃಖಗಳನ್ನು ಪುನಃ ಪುನಃ ನಮಗೆ ತಿಳುಹಿಸಿ ನಮಗೆ ಎಚ್ಚರಿಸಿದರೆ ಆ ದುಃಖಗಳಲ್ಲಿ ನಮಗೆ ಭಯ ಬಂದು ರೋಗಯಾಗಿರತಕ್ಕವನು ರೋಗದ ಬಾಧೆಯನ್ನು ಸಹಿಸಲಾರದೆ ರೋಗವನ್ನು ನಿವಾರಣೆಮಾಡಬಲ್ಲ ವೈದ್ಯ ನಲ್ಲಿಗೆ ಹೋಗಿ ರೋಗನನ್ನು ನಿವಾರಣೆಮಾಡಿಕೊಡ ಬೇಕೆಂದು ಹೇಗೆ ಹೊರೆ ಇಡುತ್ತಾನೋ ಹಾಗೆ ನಮ್ಮ ದುಃಖಗಳನ್ನು ನಿವಾರಣೆಮಾಡಲು ಈಶ್ವರನೊಬ್ಬನೇ ಶಕ್ತನಾದ್ದರಿಂದ ಆವ್ಯಗಳನ್ನು ನಿವಾರಣೆಮಾಡಬೇಕೆಂದು ಈಶ್ವರನಲ್ಲಿ ಅತ್ಯಂತ ವೈಕ್ಯದಿಂದ ನಾವು ಮೊರೆಯಿಡುತ್ತೀವೆ ಇದೇ ಸಹಜವಾದ ಭಕ್ತಿ ಇದರ ಜೊತೆಗೆ ಧರ್ಮದಿಂದ ದೈವ್ಯವನ್ನು ಅರ್ಜಿಸಿ ನಮ್ಮವರು ಅನ್ಯರು ಎಂಬ ಭೇದವಿಲ್ಲದೆ ದುಃಖಪಡತಕ್ಕ ಪ್ರಾಣಿಗಳಿಗೆ ಕೈಲಾಆದಷ್ಟು ಸಹಾಯಮಾಡುತ್ತೀವೆ. ಇದೇ

ನಿಷ್ಕಾಮವಾದ ಸತ್ಕರ್ಮ ಈಶ್ವರನು ನನ್ನ ಮೊರೆಯನ್ನು ಕೇಳಿ ನನ್ನುಳ್ಳಿ ಕಷ್ಟಕರಗೊಂಡು ನಾವು ಮಾಡತಕ್ಕ ಪರೋಪಕಾರಗಳನ್ನು ನೋಡಿ ಸಂತೋಷಪಟ್ಟು ನನ್ನ ಸರ್ವ ಮುಖಗಳನ್ನು ಪರಿಷ್ಕಾರಮಾಡಿ ನಾವು ಶಾಶ್ವತವಾದ ಸುಖವನ್ನು ಹೊಂದುವ ಮಾರ್ಗವನ್ನು ತೋರಿಸಕತ್ಕ ಗುರುವನ್ನು ನಮಗೆ ದೊರಕಿಸಿಕೊಡುತ್ತಾನೆ ಆ ಗುರುವು "ಪರಬ್ರಹ್ಮವಸ್ತು ಒಂದೇ ಸತ್ಯವು ಪರಬ್ರಹ್ಮದ ವಿನಹ ಸತ್ಯವಾದ ಪದಾರ್ಥವು ಇನ್ನು ಯಾವುದೂ ಇರುವುದಿಲ್ಲ ಈ ಪರಬ್ರಹ್ಮನಿಸ್ವರೂಪವನ್ನೇ ಅನೇಕ ಮತೀಯರು ಅನೇಕ ಹೆಸರುಗಳಿಂದ ಕರೆಯುತ್ತಾರೆ ಮಾಯಾವಿಯಾಗಿರತಕ್ಕವನು ತನ್ನ ಮಂತ್ರ ಶಕ್ತಿಯಿಂದ ತಾನು ಇದ್ದಹಾಗೆ ಇದ್ದುಕೊಂಡು ಇತರರಿಗೆ ಅನೇಕ ರೂಪಗಳಿಂದ ತೋರುವಂತೆ ಪರಬ್ರಹ್ಮವಸ್ತುವು ಅವರಲ್ಲಿರತಕ್ಕ ಅಭಿವಿಧಭಿನ್ನಾಕ್ತಿಯ ಸಾಮರ್ಥ್ಯದಿಂದ ತಾನೇ ದೇಹಾದಿ ಪ್ರಪಂಚರೂಪವಾಗಿಯು ಮತ್ತು ಸರ್ವ ಪ್ರಾಣಿಗಳಾಗಿಯೂ ತೋರುತ್ತದೆ ಆದುದರಿಂದ ದೇಹಾದಿಪ್ರಪಂಚವು ನಿನಗಾದರೆ ತೋರಕಕ್ಕ ಪದಾರ್ಥಗಳಂತೆ ಸತ್ಯವಾಗಿಲ್ಲದೆ ಕಲ್ಪಿತವಾಗಿ ಪ್ರಾಪಂಚಿಕ ವಿಷಯ ಭೋಗಗಳೆಲ್ಲವೂ ನಶ್ವರವಾಗಿಯು ಮತ್ತು ಮುಖವನ್ನು ಕೊಡತಕ್ಕವುಗಳಾಗಿಯು ಇವೆ. ಸ್ವಪ್ನದಲ್ಲಿ ವಿಷಯಗಳನ್ನು ನಾವು ಅನುಭವಿಸುವಾಗ ಅವುಗಳನ್ನು ಸತ್ಯವೆಂದೇ ತಿಳಿಯುತ್ತೇವೆ ಜಾಗ್ರದವಸ್ಥೆಗೆ ಬಂದನಂತರ ಸ್ವಪ್ನ ಪದಾರ್ಥಗಳೆಲ್ಲವೂ ಸತ್ಯವಲ್ಲದೆ ಕಲ್ಪಿತಗಳಾಗಿದ್ದವು ಎಂದು ತಿಳಿಯುತ್ತೀರಿ ಅದರಂತೆಯೇ ಜಾಗ್ರದವಸ್ಥೆಯಲ್ಲಿ ವಿಷಯಗಳನ್ನು ನಾವು ಅನುಭವಿಸುವಾಗ ಅವುಗಳೆಲ್ಲವೂ ಸತ್ಯವೆಂದೇ ಅನುಭವಿಸುತ್ತೀವಿ ನಮ್ಮ ಪರಬ್ರಹ್ಮಸ್ವರೂಪವು ನಮಗೆ ಸಾಕ್ಷಾತ್ತಾಗಿ ನಾವು ಆ ಸ್ಥಿತಿಯಲ್ಲಿ ನಿಂತರೆ, ಜಾಗ್ರದವಸ್ಥೆಯೂ ಕೂಡಾ ಸ್ವಪ್ನದಂತೆ ಕಲ್ಪಿತ ಎಂಬುವುದು ನಮ್ಮ ಅನುಭವಕ್ಕೆ ಒರುತ್ತದೆ ಒಬ್ಬ ಸೂರ್ಯನೇ ಸಹಸ್ರಾರು ವೀರಿನ ಗಡಿಗೆಗಳಲ್ಲಿ ಪ್ರತಿಬಿಂಬಗಳ ರೂಪದಿಂದ ಹೇಗೆ ತೋರುತ್ತಾನೋ ಹಾಗೆ ಒಂದೇ ಪರಬ್ರಹ್ಮನನ್ನು ಕೋಟ್ಯಂತರ ದೇಹಗಳಲ್ಲಿರತಕ್ಕ ಅಂತಃಕರಣಗಳಲ್ಲಿ ಪ್ರತಿಬಿಂಬಿಸಿ ಜೀವರೂಪದಿಂದ ತೋರುತ್ತಾನೆ ಸೂರ್ಯನ ಪ್ರತಿಬಿಂಬಗಳು ಸೂರ್ಯನಿಗೆ ಹೇಗೆ ಅನ್ಯವಾಗದೆ ಸೂರ್ಯನ ಸ್ವರೂಪವೇ ಆಗಿರುವುವೋ ಹಾಗೆ ಪರಬ್ರಹ್ಮದ ಪ್ರತಿಬಿಂಬರೂಪರಾದ ಜೀವರು ಪರಬ್ರಹ್ಮಕ್ಕೆ ಅನ್ಯರಾಗಿರದೆ ಪರಬ್ರಹ್ಮಸ್ವರೂಪವೇ ಆಗಿರುತ್ತಾರೆ" ಎಲಾ ತತ್ಕರಹಸ್ಯಗಳನ್ನು ಶ್ರುತಿಪ್ರಮಾಣಗಳನ್ನು ಕೊಟ್ಟು ತರ್ಕಿಕತ್ಕ ಪ್ರಾಂತಗಳಿಂದ ನಮ್ಮ ಅನುಭವಕ್ಕೆ ಬರುವಂತೆ ತೋಷಿಸುವದಲ್ಲದೆ, ಆ ಸ್ಥಿತಿಯಲ್ಲಿ ನಾವು ಸದಾ ನಿಲ್ಲುವ ರೀತಿ ಸಾಧನೆಗಳನ್ನು ತಿಳಿಸಿಕೊಡುತ್ತಾನೆ ಶ್ರೀಗುರುವಿನ ಸುಪದೇಶದಿಂದ ನಾವಾಯಿಯಾಗಿ ಸರ್ವ ಪ್ರಾಣಿಗಳು ಪರಬ್ರಹ್ಮ ಅಂದರೆ ಈಶ್ವರಸ್ವರೂಪವೆಂದು ತಿಳಿದರೆ ನುನಿಸ್ವರಲ್ಲಿಯೇ ವಿಕೆ " ಸರ್ವ ಪ್ರಾಣಿಗಳಲ್ಲಿಯೂ ಈಶ್ವರವಾದ ಸಂಬಂಧವು ತೋರಿ ಇತರರ ಸುಖವೇ ನಮ್ಮ ಸುಖ, ಇತರರ ದುಃಖವೇ ನಮ್ಮ ದುಃಖ ಎಂಬಂತಾಗಿ ತಿಳಿಯುತ್ತೀವೆ. ಅಂದರೆ ಪ್ರಾರಂಭದಲ್ಲಿ ನನಗೆ ನಮ್ಮ ನಮ್ಮ ಹೆಂಡತಿ ಮಕ್ಕಳುಗಳಲ್ಲಿ ಮಾತ್ರ ಪ್ರೇಮ ಇರುತ್ತದೆ ನಾವು ತತ್ಕವನ್ನು ತಿಳಿದು ಅದನ್ನು ಅನುಭವಕ್ಕೆ ತೆಗೆದುಕೊಂಡಹಾಗೆಲ್ಲ ಆ ಪ್ರೇಮವು ನಮ್ಮ ಬಂಧುಗಳಾದವರಲ್ಲಿಯೂ, ಅನಂತರ ನಮ್ಮ ಮತೀಯರೆಲ್ಲರಲ್ಲಿಯೂ, ಆಮೇಲೆ ನಮ್ಮ ಪೀಠದವರಲ್ಲಿಯೂ, ಕೊನೆಗೆ ಇಡೀ ಪ್ರಪಂಚದಲ್ಲಿರತಕ್ಕ ಸರ್ವಪ್ರಾಣಿಗಳಲ್ಲಿಯೂ ಸಮಾನವಾಗಿ ಹರಿಯುತ್ತದೆ ಇದೇ ವಿಶ್ವಪ್ರೇಮ ಈ ಸ್ಥಿತಿಯನ್ನು ನಾವು ಪಡೆದರೆ ನಮಗೆ ಎಲ್ಲದರಲ್ಲಿಯೂ ಈಶ್ವರ ಭಾವನೆಯು ಇರುವದರಿಂದ ನಾನು, ನನ್ನದು ಎಂಬ ಭಾವ ಹೋಗಿ ನಮ್ಮ ಪ್ರಾರಬ್ಧ ಕರ್ಮವು ತೀರಿದ ಒಡನೆ ಮುಕ್ತಿಪಥವನ್ನು ಮತ್ತು ನಿತ್ಯಾನಂದಸ್ವರೂಪವು ಆದ ಈಶ್ವರನಲ್ಲಿ ನಾವು ಏಕತ್ವವನ್ನು ಹೊಂದುತ್ತೀವೆ ಇಂದರೆ ನಾವು ಈಶ್ವರಸ್ವರೂಪವಿಂದಿರುತ್ತೀವೆ. ಇದರಿಂದ ನಮಗೆ ಪುನರ್ಜನ್ಮವಿಲ್ಲವೆಂಬುವುದು ಇದಕ್ಕೆ ಮೋಕ್ಷವೆಂದು ಕೆಸರು ಇತೇ ನಮ್ಮ ಜೀವನದ ಗುರಿ

ಜಾತಿ, ಕುಲ, ವರ್ಣಭೇದಗಳಲ್ಲಿದೆ ಪ್ರತಿಯೊಂದು ಸುಟುಂಬದಲ್ಲಿರತಕ್ಕ ಪುರುಷರು, ಸ್ತ್ರೀಯರು, ಮಕ್ಕಳು ಇವೂ ಸಹ ಮೇಲೆ ಹೇಳಿದ ತತ್ಕರಹಸ್ಯಗಳಲ್ಲಿವನ್ನೂ ಸುಲಭವಾಗಿ ಅನುಭವಕ್ಕೆ ತಂದುಕೊಳ್ಳುವಂತಕ್ಕಾಗಿ ಸರ್ವೇಶ್ವರನ ಸ್ವಾರ್ಥನಾಸಪ್ಯಮಾಲಿಕೆಯು ರಚಿಸಲ್ಪಟ್ಟು ಮುದ್ರಿಸಲ್ಪಟ್ಟಿರುತ್ತದೆ ಇದರ ಅರ್ಥವನ್ನು ಜಿಜ್ಞಾಸಿಗಳಿಗೆ ತಿಳಿಸುಕೊಂಡು ಪದ್ಯಗಳನ್ನು ಪ್ರತಿ ನಿತ್ಯವೂ ಹೇಳುತ್ತಾ ಇದ್ದರೆ ತತ್ಕರಹಸ್ಯಗಳು ಅನುಭವಕ್ಕೆ ಬಂದು ಧರ್ಮ ಬುದ್ಧಿಯು ಮತ್ತು ದೈವಭಕ್ತಿಯು ಉಂಟಾಗಿ ಎಲ್ಲರೂ ಈ ಜನ್ಮದಲ್ಲಿಯೂ, ಈ ಜನ್ಮಾನಂತರವೂ ಸುಖವಾಗಿರುವರು ಸೇಲ್ಕಂಡ ಸ್ವಾರ್ಥನಾಸಪ್ಯಮಾಲಿಕೆಯ ಪ್ರತಿಗಳು ಆತ್ಮವಿಚಾರ ಮಂದಿರದಲ್ಲಿ ಉಚಿತವಾಗಿ ದೊರೆಯುತ್ತವೆ

ವರ್ತಮಾನ ಸಂಗ್ರಹ

ಒಂದು ಕ್ರಯಿಸರಿನ ಬೆಲೆ ೯೪ ಲಕ್ಷ ರೂ.

ಬ್ರಿಟನ್ನಿನಿಂದ ಭಾರತಕ್ಕಾಗಿ ಕೊಂಡುಕೊಂಡ ಕ್ರಯಿಸರಿನ ಬೆಲೆ ೯೪ ಲಕ್ಷ ರೂ ಗಳು ಎಂದು ಡಾ|| ಜಾನ್ ಮಾಥೈರವರು ಪಾರ್ಲಿಮೆಂಟಿನಲ್ಲಿ ತಿಳಿಸಿದರು

ಭಾರತದ ಸುಪ್ರೀಂ ನ್ಯಾಯಾಸ್ಥಾನವನ್ನು ದೆಹಲಿಯಲ್ಲಿ ಸ್ಥಾಪಿಸಲಾಗುವುದು

ಭಾರತದ ಸುಪ್ರೀಂ ನ್ಯಾಯಾಲಯವನ್ನು ದೆಹಲಿಯಲ್ಲಿ ಸ್ಥಾಪಿಸಬೇಕೆಂದು ನಿರ್ಧರಿಸಲಾಗಿದೆ

ಅಂಡಮಾನ್‌ದ್ವೀಪವು ಮಿಲಿಟರಿ ನೆಲೆಯಾಗುವುದೇ ?

ಅಂಡಮಾನ್ ದ್ವೀಪಗಳನ್ನು ಏ ಲಿಟರಿ ನೆಲೆಯನ್ನಾಗಿ ಮಾಡಲಾಗುವ ವಿಚಾರವು ರಹಸ್ಯವಾರುದು ಅದನ್ನು ಬಹಿರಂಗ ಪಡಿಸಲು ಸಾಧ್ಯವಿಲ್ಲವೆಂದು ರಕ್ಷಣ ಸಚಿವರಾದ ಸರ್ದಾರ್ ಬಲದೇವಸಿಂಗರು ಪಾರ್ಲಿಮೆಂಟಿನಲ್ಲಿ ತಿಳಿಸಿದರು

ಹೈದ್ರಾಬಾದ್ ಬಜೆಟ್ಟಿನಲ್ಲಿ ೨ ಕೋಟಿ ರೂ. ಜೋತಾ

ಹೈದರಾಬಾದಿನ ೧೯೪೯-೫೦ ರ ಬಜೆಟ್ ಈಗ ಸಿದ್ಧವಾಗಿದೆ ಈ ಆಂದಾಜಿನ ಪ್ರಕಾರ ಈ ವರುಷದ ಬಜೆಟ್ಟಿನಲ್ಲಿ ೨ ಕೋಟಿ ರೂ ಜೋತಾ ಕಂಡುಬರುತ್ತಿದೆ ಇನ್ನು ಸರಿದೂಗಿಸಲು ಕೆಲವು ಹೊಸ ತೆರಿಗೆಗಳನ್ನು ಹಾಕಲು ನಿರ್ಧರಿಸಲಾಗಿದೆ

ಗೋಡ್ಸೆಯ ಅಪೀಲು ಪ್ರಾ|| ಪಂಜಾಬ್ ಹೈಕೋರ್ಟಿನಲ್ಲಿ ಪರಿಶೀಲನೆ

ಪೂರ್ವಪಂಜಾಬು ಹೈಕೋರ್ಟಿನ ಮುಂದೆ, ಗಾಂಧೀ ನೋಕರ್ತನೆಯಲ್ಲಿ ಆಪರಾಧಿಯಾದ ನಾಥೂರಾಂ ಗೋಡ್ಸೆಯ ಆಪೀಲು ಬಂದಿದೆ ಇದರಲ್ಲಿ ಆತನು ತನಗೆ ನೀಡಿರುವ ಸಾವಿನ ಶಿಕ್ಷೆಯನ್ನು ಮತ್ತಷ್ಟು ಅನುಕೂಲಗಳನ್ನು ಕಲ್ಪಿಸಿ ಕೊಡಬೇಕೆಂದೂ, ತನ್ನ ಅಡ್ವೋಕೇಟರೊಡನೆ ಮಾತನಾಡಲು ಅವಕಾಶಬೇಕೆಂದೂ, ತಾನೇ ಸ್ವತಃ ಹೈಕೋರ್ಟಿನಲ್ಲಿ ವಾದಿಸುವುದಕ್ಕೆ ಅವಕಾಶ ಕೊಡಬೇಕೆಂದೂ ಕೇಳಿದ್ದಾನೆ

ನೋದಲನೆಯ ಸ್ವಾರ್ಥನಿಗೆ ಸರಕಾರವನ್ನು ಕೇಳಬೇಕೆಂದೂ, ಎರಡನೆಯ ಸ್ವಾರ್ಥನಿಗೆ ಜೈಲು ಮಾನ್ಯುಯಲ್ ನಲ್ಲಿರುವಷ್ಟು ಅವಕಾಶವನ್ನು ಮಾತ್ರ ಕೊಡಲು ಸಾಧ್ಯವೆಂದೂ ಜಡ್ಜಿಗಳು ತಿಳಿಸಿದರು

ಭಾರತದಿಂದ ರಷ್ಯಕ್ಕೆ ವಿಮಾನ ಸೌಕರ್ಯ

ಭಾರತ ಮತ್ತು ರಷ್ಯಾಗಳಿಗೆ ನೇರವಾಗಿ ವಿಮಾನ ಸೌಕರ್ಯವೇರ್ಪಡಿಸಬಹುದೆಂದು ರಷ್ಯಾತ ಸೂತನೆ ಇತ್ತುದರಿಂದ ಆದರ ಸಾಧ್ಯಸಾಧ್ಯತೆಯ ಬಗ್ಗೆ ವಿಚಾರ ಮಾಡಲಾಗುತ್ತಿದೆ ಈ ಬಗ್ಗೆ ಒಂದು ಒಪ್ಪಂದವಾದರೂ ಕೂಡ, ವರ್ಷದ ಎಲ್ಲ ಕಾಲಗಳಲ್ಲೂ ವಿಮಾಲಯದ ಮಾರ್ಗದಲ್ಲಿ ವಿಮಾನಗಳನ್ನು ನಡೆಸುವುದಕ್ಕೆ ಬಹಳ ಕಷ್ಟಗಳಿವೆ ಈ ಯೋಜನೆಯು ಯಶಸ್ವಿಯಾಗಬೇಕಾದರೆ ಆ ಕಷ್ಟಗಳನ್ನೆಲ್ಲ ನಿವಾರಣೆ ಮಾಡಿಕೊಳ್ಳಬೇಕಾಗಿದೆ ಪೌಷರ್ ಮತ್ತು ಕಾಬೂಲಿಗೆ ಮೂಲಕ ವಿಮಾನಗಳು ಹೋಗಲು ಅವಕಾಶ ಕೊಡಬೇಕೆಂದು ಆಫ್ಘಾನ್ ಮತ್ತು ಪಾಕಿಸ್ತಾನ ಸರ್ಕಾರಗಳನ್ನು ಕೇಳಲಾಗಿದೆ

ಶ್ರೀಜಗದ್ಗುರು ರೇಣುಕಾಚಾರ್ಯ ಲಿಂಗೋದ್ಭವಮೂರ್ತಿ ಪ್ರತಿಷ್ಠಾಮಹೋತ್ಸವ

ಶ್ರೀಸದ್ರಂಭಾಪುರೀ ಮಹಾಸ್ಸಂಸ್ಥಾನದಲ್ಲಿ ನಿರ್ಮಾಣವಾಗಿರುವ ನೂತನ ಶಿಲಾಮಂಟಪದಲ್ಲಿ ಇದೇ ಫಾಲ್ಗುನ ಶುದ್ಧ ೧೦ (10-3 49) ಗುರುವಾರ ದಿವಸ ಶ್ರೀರೇಣುಕಭಗವತ್ಪಾದರ ಲಿಂಗೋದ್ಭವಮೂರ್ತಿ ಪ್ರತಿಷ್ಠಾಮಹೋತ್ಸವವು ವಿಘ್ನರಹಿತವಾಗಿ ನೆಹಾ ಸಂಭ್ರಮದೊಡನೆ ನೆರವೇರಿತು

ಬೆಂಗಳೂರು ಸಂಸ್ಕೃತ ಕಾಲೇಜಿಗೆ ಧರ್ಮಪ್ರಕಾಶ ಎ.ಆರ್. ರುದ್ರಯ್ಯನವರ ಉದಾರ ದಾನ

ಬೆಂಗಳೂರು ಸಂಸ್ಕೃತ ಕಾಲೇಜಿನ ಕ್ಯಾಂಟೀನ್ ನಿಧಿಗೆ ಈಗಾಗಲೇ ಏಮುನೂರು ರೂಪಾಯಿಗಳನ್ನು ದಾನ ಮಾಡಿರುವ ಧರ್ಮಪ್ರಕಾಶ ವೇ|| ಎಸ್ ರುದ್ರಯ್ಯನವರು ಬೆಂಗಳೂರು ಡಾಮಲಾಜೀಂದ್ರ ಸಂಸ್ಕೃತ ಕಾಲೇಜನ್ನಲ್ಲಿ ನೇದಾಂತ ಭಾಗವನ್ನು ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಬಹುಮಾನ ಕೊಡುವುದರ ಮೂಲಕ ಉತ್ಕೃಷ್ಟಜನರೀಯುವುದಕ್ಕಾಗಿ ತಮ್ಮ ಧರ್ಮಪತ್ನಿಯವರಾದ ಸೌ|| ರುದ್ರಮ್ಮನವರ ಹೆಸರಿನಲ್ಲಿ ಒಂದು ನಿಧಿಯನ್ನು ಸ್ಥಾಪಿಸಲು ಒಂದು ಸಾವಿರದ ಏಮೂರು ರೂಗಳನ್ನು ಉದಾರವಾಗಿ ದಾನ ಮಾಡಿರುತ್ತಾರೆ

ಸ್ವೀಕಾರ

ಧಾರವಾಡ ಡಿ|| ಗರಗ ಗ್ರಾಮದವ್ಲಿರುವ ಮಿ|| ಬಳೆಗಾರ ವೀರಪ್ಪನವರು ತಮ್ಮ ಗೃಹದಲ್ಲಿ ಮಹಾಶಿವರಾತ್ರಿಯ ದಿವಸ ವೇ|| ಚೆನ್ನಮಲ್ಲಯ್ಯನವರು ಗುಡ್ಡದಮಠ ಇವರ ವೈದಿಕಕ್ಕದಲ್ಲಿ ಪತ್ನೀಪುತ್ರ ಸಮೇತರಾಗಿ ಶ್ರೀ ಜಗದ್ಗುರು ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಜಯಂತೀ ಮಹೋತ್ಸವವನ್ನು ಮಹಾ ವೈಭವದೊಡನೆ ನೆರವೇರಿಸಿದ ಸಮಯದಲ್ಲಿ ಪ್ರಭಾಪ್ರೇಷಣಕ್ಕೋಸ್ಕರ 4 ರೂ ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಬಳ್ಳಾರಿ ಡಿ|| ಹಿರೇಹಡಗಲಿ ಶ್ಮಮಣಿ ಮಠದ ವೇ|| ಸಿದ್ಧಾಂತಿ ಕೊಟ್ರಯ್ಯನವರು ಮಹಾಶಿವರಾತ್ರಿಯ ದಿವಸ ತಿಂಗಳೊಲಾರು ಸ್ಥೇತ್ರದಲ್ಲಿ ಪೂಜಾದಿಗಳನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪ್ರೇಷಣಕ್ಕೋಸ್ಕರ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ನಿಜಾಂ ಇಲಾಖೆ ಗಂಗಾವತಿ ತಾ|| ಪೆನ್ನೂರು ಗ್ರಾಮದಲ್ಲಿ ಎಮ್ಮಿಗನೂರು ಮಹಾಂತಿನಮಠದ ಶ್ರೀ ಪಟ್ಟದಸ್ವಾಮಿಗಳವರಿಗೆ ನೂತನ ಮಠವನ್ನು ಆಚ್ಚಿಸಿಕೊಟ್ಟ ಸಮಯದಲ್ಲಿ ಆ ಗ್ರಾಮದ ದೈವದವರು ಪ್ರಭಾಪ್ರೇಷಣಕ್ಕೋಸ್ಕರ 1 ರೂಪಾಯಿ ಸಮರ್ಪಿಸಿ ಕಳುಹಿಸಿದ್ದಾರೆ.

ಕಲಬುರ್ಗಿ ನಗರದ ಸಗಣಗೇರಿಯಲ್ಲಿ ಮಹಾಶಿವರಾತ್ರಿಯ ದಿವಸ ನೆರೆದಿರಿದ ಜಗದ್ಗುರುಗಳ ಜಯಂತೀಮಹೋತ್ಸವ ಸಮಯದಲ್ಲಿ ಅಲ್ಲಿಯ ತರುಣ ಮಂಡಳಿಯವರು ಸಮರ್ಪಿಸಿದ 1 ರೂ. ಯು ಮಿ|| ರಾಜಶಿವಯೋಗಪ್ಪಸ್ವಾಮಿ ಇವರ ದ್ವಾರಾತಲ್ಲಿರುತ್ತದೆ.

ಈ ಮೇಲ್ಕಂಡ ಮಹಾಸಭೆಯಲ್ಲೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಶಿವರಾತ್ರಿಪೂಜಾಸಮಾರಂಭ

ಬಳ್ಳಾರಿ ಡಿ॥ ಹಿರೇಹಡಗಲಿ ಗ್ರಾಮದಲ್ಲಿರುವ ವೇ॥ ಶಬ್ದಮಣಿ ಮರಿದ ಸಿದ್ಧಾಂತಿ ಕೊಟ್ಟೂರಯ್ಯನವರು ಕೈಲಾಶೀ ಜಗದ್ಗುರು ವೀರಭದ್ರಶಿವಾಚಾರ್ಯ ಮಹಾಸ್ವಾಮಿಗಳವರ ಅಪ್ಪಣೆಯ ಮೇರೆಗೆ ತಮ್ಮ ಪುತ್ರ ಚಿ॥ ವಿಶ್ವಾರಾಧ್ಯನನ್ನು ಕಾಶಿಗೆ ಕರೆದುಕೊಂಡುಹೋಗಿ ಇದೇ ಸರ್ವಧಾರಿ ಸಂ॥ ಕಾರ್ತಿಕ ಶು॥ ೧೧ ಶುಕ್ರವಾರದ ದಿವಸ ಕುರವತ್ತಿ ಹಿರೇಮಠದ ಶ್ರೀ ಪಟ್ಟದಸ್ವಾಮಿಗಳವರ ಹಸ್ತದಿಂದ ಮಾಹೇಶ್ವರ ದೀಕ್ಷೆಯನ್ನು ಸ್ವೀಕರಿಸಿದರು ಅಲ್ಲಿಂದ ಬಂದಮೇಲೆ ಮಹಾಶಿವರಾತ್ರಿಯ ದಿವಸ ಶ್ರೀ ಹಿಂಗಿಸಾಲೂರು ವೀರಭದ್ರ ದೇವಸ್ಥಾನಕ್ಕೆ ಪತ್ನಿಸಮೇತರಾಗಿ ಹೋಗಿ ಹೊಗಳಂತಿ ಉಜ್ಜಯಿನೀ ಒಡೆಯರಮಠದ ಶ್ರೀ॥ ಷ॥ ಬ್ರ॥ ಸಿದ್ಧಲಿಂಗಶಿವಾಚಾರ್ಯರ ಸನ್ನಿಧಿಯಲ್ಲಿ ಮಹಾಶಿವರಾತ್ರಿ ಪೂಜೆಯನ್ನು ನೆರವೇರಿಸಿದಮೇಲೆ ಮಹಾತಪೋನಿಧಿ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಪುರಾಣವನ್ನು ಸಂಪೂರ್ಣವಾಗಿ ಪರಿಸಿದರು ಜಗದ್ಗುರುಗಳ ಚರಿತ್ರವನ್ನು ಕೇಳಿ ಆ ದಿನ ಅಲ್ಲಿ ನೆರೆದಿದ್ದ ಸರ್ವರೂ ಧನ್ಯರಾದರು ಇದೇ ರೀತಿ ಸಡಾ ಧರ್ಮಕಾರ್ಯಗಳಲ್ಲಿ ನಿರತರಾಗಿರುವ ವೇ॥ ಕೊಟ್ಟಯ್ಯನವರಿಗೆ ಶ್ರೀ ಜಗದಾಚಾರ್ಯರು ಸಕಲ ಸನ್ಮಂಗಳಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

ಓರ್ವ ಗುರುಭಕ್ತ

ಶಿವರಾತ್ರಿಸಮಾರಂಭ

ಹೊಸಪೇಟೆ ತಾಲೂಕು ಇಟಿಗಿ ಶ್ರೀಯುತ ಬಸವಲಿಂಗಪ್ಪ ಸಹೋದರರಾದ ವೀರಸಗೌಡರು ತಮ್ಮ ಪ್ರಮಕ್ಕೆ ಶ್ರೀ ಹಂಪಿನಾಯರದೇವರು ಯಮ್ಮಿಗನೂರು ಮಹಾಂತಿನಮಠದ ಶ್ರೀ ಸಿದ್ಧಲಿಂಗಶಿವಾಚಾರ್ಯರನ್ನು ಬರಮಾಡಿಕೊಂಡು ಶಿವರಾತ್ರಿ ದಿವಸ ತಮ್ಮಿಗ ಪಲ್ಲಕ್ಕಿ ರುದ್ರಾಭಿಷೇಕ ನರವೇರಿದ ಬಳಿಕ ಶ್ರೀ ಸಂಗಮೇಶ್ವರನಿಗೆ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನಾದಿಗಳನ್ನು ನೆರವೇರಿಸಿದರು ಆಮೇಲೆ ಶ್ರೀಗಳವರು ಶಿವರಾತ್ರಿಯ ಪ ಹಿಮೆಯನ್ನು ಸರ್ವ ಸಭಿಕರಿಗೆ ಬೋಧಿಸಿದರು

ಪ್ರಸನ್ನ ಸಿದ ಶಿವಲಿಂಗನಗೌಡ ಇಟಿಗಿ

ಶ್ರೀಜಗದಾಚಾರ್ಯರ ಜಯಂತೀಮಹೋತ್ಸವ ಕಲಬುರ್ಗಿ

ನಿಜಾಂ ಇಲಾಖಾ ಕಲಬುರ್ಗಿ ನಗರದ ಸಗಸಣಗೇರಿಯಲ್ಲಿ ಮನೆತುಂಬಿರುವ ಮಾಘ ಶುದ್ಧ ತ್ರಯೋದಶಿ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಜಯಂತೀ ಸುರ್ಯೋತ್ಸವನ್ನು ಮಹಾಸಂಭ್ರಮದಿಂದ ನೆರವೇರಿಸು ಮೊದಲು ಪೂಜಾದಿಗಳು ನರವೇರಿದನೆಲೆ ಮಃ॥ ರಾ॥ ವೀರಭದ್ರಪ್ಪ ಎಲಬಂಡಿ ಇವರ ಅಧ್ಯಕ್ಷತೆಯಲ್ಲಿ ಸಭೆ ಗೂಡಿತು ಆಗ ವೇ॥ ಶಿವಯ್ಯಸ್ವಾಮಿ ಬಿಜಸಪುರ ಇವರು ಆಚಾರ್ಯರ ಜಯಂತಿಯ ಒಳ್ಗುಗುರು, ಶಿವರಾತ್ರಿಯ ಮಹಿಮೆಯ ಒಳ್ಗುಗುರು, ಅಮೋಘವಾದ ಭಾಷಣ ಮಾಡಿದರು ಆಮೇಲೆ ಮಃ॥ ರಾ॥ ಜಾವಳಿ ಬಸವಣ್ಣಪ್ಪನವರು ಉಭಯ ಜಗದ್ಗುರುಗಳವರ ಮಹಿಮೆಯನ್ನು ಕುರಿತು ಮನೋಹರವಾದ ಭಾಷಣ ಮಾಡಿದರು ಬಳಿಕ ಅಧ್ಯಕ್ಷರು ಶಿವಲಿಂಗಮಹಿಮೆಯ ಬಗ್ಗೆ ಪ್ರಮಾಣಪುರಸ್ಸರವಾಗಿ ಮಾತನಾಡಿ ಸರ್ವರನ್ನೂ ಸಂತೋಷಪಡಿಸಿದರು ತರುವಾಯ ಮಃ॥ ರಾ॥ ಕಾಳಾ ಶಂಕರಪ್ಪನವರು ಶಿವಕೀರ್ತನೆ ಮಾಡಿದರು ಆಮೇಲೆ ಸೂರ್ಯೋದಯವಾಗುವ ವರೆಗೆ ಶಿವಭಜನೆಯು ನಡೆಯಿತು ಸೂರ್ಯೋದಯವಾದಮೇಲೆ ಮಹಾಮಂಗಳಾರತಿಯಾಗಿ ಜಗದಾಚಾರ್ಯರ ಜಯ ಘೋಷದೊಡನೆ ಕಾರ್ಯವು ಸಮಾಪ್ತಿಗೊಂಡಿತು ಈ ಮಂಗಲಕಾರ್ಯವನ್ನು ಆ ಓಣಿಯ ತರುಣ ಮುಂದಾಳು ಗಳಾದ ಮಃ॥ ರಾ॥ ಶಿವಶರಣಪ್ಪ ಬೆನ್ನೂರ, ಗುರು ಲಿಂಗಪ್ಪ, ಮಹಾದೇವಪ್ಪ ಮುಂತಾದವರು ಒಳ್ಳೇ ಉತ್ಸಾಹದಿಂದ ನೆರವೇರಿಸಿದರು ಜಗದಾಚಾರ್ಯರು ಈ ತರುಣ ಮಂಡಲಿಗೂ ಈ ಕಾರ್ಯದಲ್ಲಿ ಭಾಗವಹಿಸಿದ್ದ ಸರ್ವರಿಗೂ ಸಕಲ ಸನ್ಮಂಗಲಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

ಪ್ರತ್ಯಕ್ಷದರ್ಶಿ

ಮರಣಾವನೆ

ನಿಜಾಂ ಇಲಾಖಾ ಗಂಗಾವತಿ ತಾಲೂಕು ಬೆನ್ನೂರು ಗ್ರಾಮದ ಬೇರಿಗಿ ಶ್ರೀಯುತ ಭೀಮನಗೌಡರು ವೀರಭದ್ರಗೌಡರು, ಕಲಕರ್ಣಿ ವಿರೂಪಾಕ್ಷಗೌಡರು, ವುಳ್ಳೆನೂರು ಮುದ್ದೀರನಗೌಡರು ತಮ್ಮ ಗ್ರಾಮಕ್ಕೆ ಶ್ರೀ ಹಂಪಿನಾಯರದೇವರು ಎಮ್ಮಿಗನೂರು ಮಹಾಂತಿನ ಮಠದ ವೀರತಪಸ್ವಿ ಶ್ರೀ॥ ಷ॥ ಬ್ರ॥ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳವರನ್ನು ಬರಮ ಕೊಂಡು ಸುಳಿ ೬॥ ೧೨ ಗುರುವಾರ ದಿವಸ ಶ್ರೀಗಳವರಿಗೆ ಮರಸ್ಥಾಪನೆಯನ್ನು ಮಾಡಿ ಮಹಾಗಣಾರಾಧನೆಯನ್ನು ಜರುಗಿಸಿದರು ಈ ಕಾರ್ಯಕ್ಕೆ ಇಟಿಗಿ ಶ್ರೀಮಾನ್ ಬಸವಲಿಂಗನಗೌಡರು ಜಾ॥ ವೀರಣ್ಣನವರು ಕಂಪ್ಲಿ ಗುರುಕಾತಯ್ಯನವರು ಮತ್ತು ಎಮ್ಮಿಗನೂರು, ವುಳ್ಳೆನೂರು ಕಕ್ಕರಗೊಳ್ಳ ಮೊದಲಾದ ಗ್ರಾಮಗಳ ಭಕ್ತಾದಿಗಳು ಬಂದಿದ್ದರು ೯ ಘಂಟೆಗೆ ವೀರತಪಸ್ವಿಗಳು ಶಿವ ಜೀವ ಜಗತ್ತು ಈ ವಿಷಯದ ಬಗ್ಗೆ ದಿವ್ಯವಾದ ಭಾಷಣ ಮಾಡಿದರು ಅನಂತರ ಕಾಮಿನ್ನಾಯಕ ಚರವರ್ಯ ಶ್ರೀ ಷ॥ ಬ್ರ॥ ಗುರುಸಿದ್ಧಶಿವಾಚಾರ್ಯರು ಭಕ್ತಿಯ ವಿಷಯದಲ್ಲಿ ಭಾಷಣಮಾಡಿದರು ಒಳಕ ಶ್ರೀಗವರನ್ನು ವಾದ್ಯವೈಭವದೊಡನೆ ಶ್ರೀ ಭೀಮನಗೌಡರ ಗೃಹಕ್ಕೆ ಕರೆದೊಯ್ದರು ಅಲ್ಲಿ ದರ್ಶನದ ಒಗ್ಗೆ ಭಾಷಣವು ನರವೇರಿದ ಮೇಲೆ ಜಗದಾಚಾರ್ಯರ ಜಯಘೋಷದೊಡನೆ ಕಾರ್ಯವು ಮುಗಿಸಲ್ಪಟ್ಟಿತು

ಪ್ರತ್ಯಕ್ಷದರ್ಶಿ

ಕೊಚ್ಚಿ-ತಿರುವಾಂಕೂರು ಸಂಸ್ಥಾನಗಳ ವಿಲಿನ

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳ ಕಾಂಗ್ರೆಸ್ ಸಂಸ್ಥಗಳು ಕೊಚಿನ್ ತಿರುವಾಂಕೂರುಗಳು ಏಕ್ಯವಾಗಬಹುದೆಂದು ನಿರ್ಧರಿಸಿವೆ

ಮಹಾರಾಜಸ್ಥಾನವು ೧ ಲಕ್ಷ ೨೦ ಸಾವಿರ ಚದರ ಮೈಲಿ ವಿಸ್ತೀರ್ಣವುಳ್ಳದ್ದಾಗಿದೆ ವಾರ್ಷಿಕ ವರಮಾನವು ೧೧ ಕೋಟಿ ರೂ ಗಳು ಪ್ರಜಾಸಂಖ್ಯೆ ೧ ಕೋಟಿ ೨೨ ಲಕ್ಷ ಪ್ರಿಂತರನ್ನಾಳುವ ರಾಜಪ್ರಮುಖ ಸಂಸ್ಥಾನಗಳು ಈ ಯೂನಿಯನ್ನಿಗೆ ಸೇರಿವೆ ಜಯಪುರದ ಮಹಾರಾಜರು ಮಹಾರಾಜಸ್ಥಾನದ ರಾಜಪ್ರಮುಖರಾಗಿಯೂ, ಕೋಟಾಸಂಸ್ಥಾನದ ರಾಜರು ಉಪರಾಜಪ್ರಮುಖರಾಗಿಯೂ, ನೇಮಕಗೊಂಡಿದ್ದಾರೆ ಉದಯಪುರದ ಅರಸರು ಮಹಾರಾಜಪ್ರಮುಖರಾಗಿರುವರು

ಕಲ್ಕತ್ತ ಬಳಿ ವಿಮಾನ ದುರಂತ

ನೇಪಾಳ ಮಹಾರಾಜರ ಸೋದರರ ದುರಂತ ಮರಣ

ಕಲ್ಕತ್ತೆಯ ೧೬ ಮೈಲಿ ದೂರದಲ್ಲಿ ೨೭ ನೇ ತಾ॥ ಸೋಮವಾರ ಎರಡುಸಾವಿರ ಅಡಿ ಎತ್ತರದಿಂದ ವಿಮಾನ ವ್ಯಾಯು ೦೦೦ ನಡಿಗೆ ಉರುಳಿ ಬಿದ್ದುದರ ಪರಿಣಾಮವಾಗಿ ವಿಮಾನ ನಡೆಸುತ್ತಿದ್ದ ವಿಂಗ್ ಕಮ್ಯಾಂಡರ್ ಜೇಮ್ ಚೌಧರಿಯವರೂ ಅವರೊಡನಿದ್ದ ಮಿ॥ ಧಾನ್ಸಿಂಗ್ ಮರಣ ಹೊಂದಿದರು

ವಿಂಗ್ ಕಮಾಂಡರ್ ಹೇಮ್ ಚೌಧರಿಯವರು ಬ್ಯಾರಕ್ ಪುರ ವಿಮಾನ ನಿಲ್ದಾಣದಿಂದ ವಿಮಾನವನ್ನು ನಡೆಸಿಕೊಂಡು ಹೊರಟರು ಅವರ ಜೊತೆಯಲ್ಲಿ ಕಲ್ಕತ್ತೆದಲ್ಲಿರುವ ಆಮೆರಿಕದ ಕಾನ್ಸಲ್ ಜನರಲ್ ಕರ್ನೇಯ ಪ್ರತಿನಿಧಿ ಕಾಪೆಯ ಮಿ॥ ಧಾನ್ಸಿಂಗ್‌ರವರು ಸಹ ಕುಳಿತಿದ್ದರು ವಿಮಾನವು ಸುಮಾರು ೩೦೦೦ ಅಡಿ ಎತ್ತರದಲ್ಲಿ ಹಾರಾಡುತ್ತಿದ್ದಾಗ ಇಂಜಿನ್ ತೊಂದರೆ ಪ್ರಾರಂಭವಾಗಿ ಗಂಗಾನದಿಗೆ ಉರುಳಿ ಬಿತ್ತು ೪೦ ನಿಮಿಷಗಳ ಕಾಲ ಹುಡುಕಿದನಂತರ ಅವರ ಮೃತದೇಹಗಳು ಸಿಕ್ಕವಂತೆ!

ಶ್ರೀಶರಣಬಸವೇಶ್ವರ ದೇವಸ್ಥಾನದ ಶಿಖರದ ಮೇಲೆ ಸ್ವರ್ಣಕಲಶಸ್ಥಾಪನೆ, ಕಲಬುರ್ಗಿ

ನಿಜಾಂ ಇಲಾಖಾ ಕಲಬುರ್ಗಿ ನಗರದಲ್ಲಿ ಶ್ರೀಶರಣ ಬಸವೇಶ್ವರ ದೇವಾಲಯವು ವಿರಾಜಿಸುತ್ತಿರುವ ವಿಚಯವು ನರ್ವರಿಗೂ ತಿಳಿದೇ ಇದೆ. ಈ ದೇವಸ್ಥಾನವು ಮಹಿಮಾತಿಶಯದಿಂದ ಕರ್ನಾಟಕ ಮತ್ತು ಮಹಾರಾಷ್ಟ್ರದೇಶಗಳಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆದಿರುವುದು. ಇಂತಹ ಮಹತ್ವಪೂರ್ಣದೇವಾಲಯದ ಶಿಖರದ ಮೇಲೆ ಸುವರ್ಣಕಲಶವನ್ನು ಸ್ಥಾಪಿಸಬೇಕೆಂದು ಈಗ್ಗೆ ೪೦-೯೦ ವರ್ಷಗಳ ಪೂರ್ವದಲ್ಲಿ ಚಿತಾವುರಗ್ರಾಮದ ಹಿರೆ ಸಾಧ್ಯೀಮಣಿಯು ಏಳು ಆಡಿ ಎತ್ತರವಿರುವ ತಾವ್ಪುದ ಕಲಶವನ್ನು ಮಾಡಿಸಿ ಅದರಮೇಲೆ ಬಂಗಾರದ ರೇಖುಗಳ ಕೂಡಿಸಿ ಸಂಂಧವಾಗಿ ಮಾಡಿಸಿದ್ದರು. ಆದರೆ ಮುಸಲ್ಮಾನರ ಅಳಿಕೆಯಲ್ಲಿ ಅಂದಿನಿಂದ ಇಂದಿನವರೆಗೂ ಈ ಕಲಶಸ್ಥಾಪನೆಗೆ ಅವಕಾಶವು ದೊರೆಯದೆ ಈ ಮಹಾ ಭಕ್ತಳ ಸಂಕಲ್ಪವು ನೆರವೇರಲಿಲ್ಲ ಆದರೆ ಶ್ರೀಕರಣಬಸವೇಶ್ವರರ ಮಹಿಮಾತಿಶಯದಿಂದಲೂ ಆ ಮಹಾ ಭಕ್ತಳ ಭಕ್ತಿಪ್ರಭಾವದಿಂದಲೂ ಹೈದರಾಬಾದ್ ಸಂಸ್ಥಾನದಲ್ಲಿ ಭಾರತ ಸರ್ಕಾರದ ನೇತೃತ್ವದಲ್ಲಿ ಉತ್ತಮವಾದ ಆಡಳಿತವು ವಿರ್ಪಟ್ಟಿದುದರಿಂದ ಕಲಶಸ್ಥಾಪನೆಗೆ ಅವಕಾಶವು ದೊರೆಯಿತೆಂಬುದನ್ನು ತಿಳಿಸಲು ಅತ್ಯಂತ ಸಂತೋಷವನ್ನುಪಡುತ್ತೇವೆ ಈಗ ಹೈದರಾಬಾದ್ ಸಂಸ್ಥಾನದಲ್ಲಿ ಮಿಲಿಟರಿ ಗವರ್ನರ್ ಆಗಿರುವ ಮೇಜರ್ ಜನರಲ್ ಶ್ರೀ ಚೌಧರಿಯವರೂ ಮತ್ತು ಹೈದರಾಬಾದಿನಲ್ಲಿ ರಿವಿನ್ಯೂ ಮಂತ್ರಿಗಳಾಗಿರುವ ಶ್ರೀವಿಶ್ವನಾಥ್ ನಂಜಪ್ಪಾಯವರೂ, ಬಹು.ಜನರ ಪ್ರಾರ್ಥನೆಯನ್ನು ಚಿತ್ತಕ್ಕೆ ತಂದುಕೊಂಡು ಕಲಶಸ್ಥಾಪನೆಗೆ ಹುಕುವನ್ನು ದಯಪಾಲಿಸಿರು ಈ ಬಗ್ಗೆ ಶ್ರೀಮಾನ್ ಸರ್ದಾರ ಶರಣಗೌಡರು ವಿಶೇಷ ಪ್ರಯತ್ನಮಾಡಿ ಈ ಕಾರ್ಯವನ್ನು ಸಫಲಗೊಳಿಸಿದರು ೩೦ ನೇ ತಾ॥ ೩೦-೪-೪೯ ನೇ ದಿನಸೆ ಸದರಿ ಕಲಶದ ಮೆರವಣಿಗೆಯು ನಗರದಲ್ಲಿ ಮಹಾ ವೈಭವದೊಡನೆ ನೆರವೇರಿತು ಮರುದಿನಸೆ ಶ್ರೀಶರಣ ಬಸವೇಶ್ವರ ರಥೋತ್ಸವವು ನೆರವೇರಿತು ತಾರೀಖು ೨೦-೪-೪೯ ನೇ ದಿನಸೆ ಈ ಮಹಾಕಲಶವು ದೇವಸ್ಥಾನದ ನೋಟ್ಟರದಮೇಲೆ ೧೧ಶ್ವತ್ಥಾಗಿ ಸ್ಥಾಪಿಸಲ್ಪಟ್ಟಿತು ಅಂದು ಮಹಾಜನಗಳಲ್ಲಿ ಉಂಟಾದ ಆನಂದಕ್ಕೆ ಪಾರವೇ ಇರಲಿಲ್ಲ ಎಲ್ಲಿ ನೋಡಿದರೂ ಆನಂದವೇ ಆನಂದವಾಗಿದ್ದಿತು ಈ ಮಹಾಕಾರ್ಯಕ್ಕೋಸ್ಕರ ನೆರಳ್ಳಾಸ್ಥಾರದಿಂದ ರಾವ್‌ಬಹದ್ದೂರ್ ನಾಗಪ್ಪನವರು ಎಬ್ಬುಲ್ ಪುಂಕರ್, ಶ್ರೀಮಾನ್ ಬಾಬೂಸಾಹೇಬ್ ವಾರದ ಇವರೇ ನೊದಲಾದ ಜನೇಕಜನ ಶ್ರೀಮಂತರು ಆಗಮಿಸಿದ್ದರಲ್ಲದೆ ವಿಜಾಪು ಇಲಾಖೆಯ ಲಕ್ಷಾಂತರ ಜನರು ಕೂಡಿದ್ದರು ಶ್ರೀ ಮುಗಳನಾಗಾವಿ, ಕಲಿಕೇರಿ, ಮಲಕೇಡ, ಹಾಗರಗಿ, ನಂದೂರು, ಆಲಮಟ್ಟಿ, ಕಲ್ಯಾಣ ಮೊದಲಾದ ಗ್ರಾಮಗಳಿಂದ ಶ್ರೀ ಪಟ್ಟಶಾಖಾ ಕಾರಿಗಳು ಆಗಮಿಸಿದ್ದರು ಕೇದಾರಪೀಠದಿಂದ ಶ್ರೀಕೈಲಾಸಂಗತಿವಾಚಾರ್ಯರು ದಯಮಾಡಿಸಿದ್ದರು ಕಲಶ ಸ್ಥಾಪನಕಾರ್ಯವು ಸಮಾಪ್ತಿಗೊಂಡಮೇಲೆ ಸಭೆಯು ನೆರೆದಿರುವ ಅಪೇಕ್ಷರು ಭಾಷಣಮಾಡಿದರು

ಸದ್ಯ ಈ ಸಂಸ್ಥಾನದ ಆಧಿಪತಿಗಳಾಗಿರುವ ಶ್ರೀಮಾನ್ ಪೊಡ್ಡಪ್ಪ ಆಪ್ಪ ಉರ್ಫ್ ಶರಣಬಸವಪ್ಪ ನವರು ಕಾಂತಿ, ಶಾಂತಿ, ವಿವೇಕ, ವೈರಾಗ್ಯ, ದಯೆ, ಸರೋಸಕಾರ ಮೊದಲಾದ ಸದ್ಗುಣಸಮೂಹದಿಂದ ಭೂಷಿತರಾಗಿದ್ದು ಬಹುಜನ ಪ್ರಿಯರಾಗಿರುವರು ಈ ಅದ್ಭುತ ವಿಜಯಕ್ಕೆ ಇವರ ಆತ್ಮ ತೇಜಸ್ಸಿನ ಪ್ರಭಾವವೇ ಮೂಲಕಾರಣವೆಂದು ಹೇಳಿದರೆ ತಪ್ಪಾಗದು ಇವರು ಶಿವಪೂಜಾಧುರೀಣರಾಗಿದ್ದು ಆದ್ಯದಾಸೋಹರಾಗಿರುವರು ಇವರ ಮುಂದಿರದಲ್ಲಿ ಪ್ರತಿದಿವಸವೂ ನೂರಾರು ಜನರಿಗೆ ಅನ್ನದಾನವು ನಡೆಯುತ್ತಲೇ ಇರುತ್ತದೆ ಇವರು ಲಾಕಿಕ ಪಾರಮಾರ್ಥಿಕಗಳೆರಡರಲ್ಲಿಯೂ, ನಿಷ್ಣಾತರಾಗಿದ್ದು ಜನಕನಂತೆ ವಿರಾಜಿಸುತ್ತಿರುವರು ಈ ಕಾಲದಲ್ಲಿ ಇಂತಹ ಸತ್ಪುರುಷರು ಜನ್ಮವೆತ್ತುವುದು ದುರ್ಲಭವೆಂದು ಹೇಳಿದರೆ ಅತಿಶಯೋಕ್ತಿಯೆನಿಸದು ಇವರ ಪುಣ್ಯಪ್ರಭಾವದಿಂದ ಇವರ ಧರ್ಮಪತ್ನಿಯವರೂ ಸಹ ಸಕಲ ಸದ್ಗುಣಸಂಪನ್ನೆಯರಾಗಿ ವಿರಾಜಿಸುತ್ತಿರುವರು. ಇವರಿಗೆ ಇಬ್ಬರು ಪುತ್ರರೂ, ಮೂವರು ಪುತ್ರಿಯರೂ ಇರುವರು ಈ ಸುಳ್ಳಳ್ಳರೂ ಶಿವಪೂಜಾ ಧುರೀಣರೂ. ಸಮಾಜಾಸಂಪನ್ನರೂ ಆಗಿದ್ದು ಈ ಶರಣ ಮನೆತನಕ್ಕೆ ಗತ್ಯ ಕಲಶದಂತೆ ಒಪ್ಪುತ್ತಿರುವರು. ಇದಕ್ಕೆಲ್ಲಾ ಆದಿ ಶರಣಬಸವೇಶ್ವರರ ಅನುಗ್ರಹವೇ ಮುಖ್ಯಕಾರಣವೆಂದು ಸಾರಿ ಸಾರಿ ಹೇಳಬಹುದಾಗಿದೆ ಶ್ರೀಜಗದ್ಗುರುಗಳಾರ ಆಶೀರ್ವಾದಬಲದಿಂದ ಈ ಶರಣರ ಮನೆತನವು ಇದೇ ರೀತಿ ಅಭಿವೃದ್ಧಿಯನ್ನು ಹೊಂದುತ್ತಾ ಆಚಂದ್ರಾರ್ಕವಾಗಿ ಧರಾತಲದಲ್ಲಿ ಬೆಳಗಲೆಂದು ಪ್ರಾರ್ಥಿಸುವ.

ಓಂ ಗುರುಭ್ಯಸ್ತ್ವ

ಸಿದ್ಧಾಂತ ಶಿಖಾಮಣಿ

ವೀರಶೈವಸಾಹಿತ್ಯ [illegible] ಶ್ರುತಿಯೆಲ್ಲ ಸಿದ್ಧಾಂತಿಕ ಎಲ್ಲ ಪ್ರಾಣದಂತಿರುವುದು ಈ ಮಹಾಗ್ರಂಥರತ್ನ ಶ್ರೀ [illegible] ಜಗದ್ಗುರು ಜಗ ವಿಖ್ಯಾತರಾದ ಅನೇಕ ಮಹಾಪುರುಷರಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ನಿಮಿತ್ತ [illegible] ಗಳಲ್ಲಿ ಪ್ರಮುಖ ವೀರಶೈವಮಂತ್ರಜ್ಞ [illegible] ಯ್ಯ ಗ್ರಂಥಗಳಲ್ಲಿಲ್ಲ ಇದೇ ಮುಖ್ಯ ಪ್ರಯೋಜನವಿರುವುದರಿಂದ ಇದಕ್ಕೆ ಸಿದ್ಧಾಂತ ಶಿಖಾಮಣಿ ಎಂಬ ಪ್ರಸಿದ್ಧ ನಾಮಧೇಯವನ್ನು ಕೊಟ್ಟಿರುವುದು ಈ ಗ್ರಂಥವನ್ನು ಸಂಸ್ಕೃತ ಪಂಡಿತರಿಗೆ ಮಾತ್ರವಲ್ಲದೆ ಕನ್ನಡ ಓದಲು ಬರೆಯಲು ಬಲ್ಲ ಪ್ರತಿಯೊಬ್ಬ ವೀರಶೈವನೂ ಓದಿ ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ. ಇಂಥ ಮಹಾ

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಯ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಸಪಂಚಜಾತಜಪಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಫಲಾಮಕರ್ ಪರಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮಪರ್ ಪಾಲಿಪ್ಪುದೀಲೋಕಮಂ ॥

ಸ್ಥಳವರಿಗೆ ೩ ರೂ ೪ ಆಣೆ. ಪರಸ್ಥಳವರಿಗೆ ೩ ರೂ ವಿ. ಪಿ ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೧ನೇ ಏಪ್ರಿಲ್ ೧೯೪೪ [ಸಂಚಿಕೆ ೪೮

ಶ್ರೀ ಕೇದಾರಪೀಠದ ಬಗ್ಗೆ ಗ್ರಂಥರಚನೆ

ಶಾಖೀ ವೀರಶೈವ ವಿದ್ವತ್ಸಂಘವು ಶ್ರೀ ಹಿಮವತ್ ಕೇದಾರಪೀಠದ ಬಗ್ಗೆ ಒಂದು ಉಪಯುಕ್ತ ಪುಸ್ತಕವನ್ನು ಪ್ರಚುರಪಡಿಸಬೇಕೆಂದು ನಿರ್ಣಯಿಸಿಕೊಂಡ ಮೂಲಕ ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸಲು ಆರಂಭಿಸಿದೆ ಶ್ರೀ ಕೇದಾರಪೀಠವು ವೀರಶೈವರ ಪಂಚ ಜಗದ್ಗುರು ಪೀಠಗಳಲ್ಲಿ ಒಂದೆನ್ನುವದು ಎಲ್ಲರಿಗೂ ತಿಳಿದ ವಿಷಯ ಆದರೆ ಅದರ ಪ್ರಾಚೀನತೆಯು ಅತಿ ಪ್ರಸಿದ್ಧವಿದ್ದು, ಅದರ ಅನೇಕ ಅಧೀನ ಮಠಗಳು ಕರ್ನಾಟಕದಲ್ಲಿ ವಿಶೇಷವಾಗಿ ನಿಜಾಂ ಸ್ಟಾಂತದಲ್ಲಿ ಇರುವ ಕಾರಣದಿಂದ ವಿಷಯ ಸಂಗ್ರಹಕಾರ್ಯವು ಸುಲಭವಾಗಿ ತೋರುವುದಿಲ್ಲ ಅದಕ್ಕಾಗಿ ಕೇದಾರ ಪೀಠದ ಬಗ್ಗೆ ಏನಾದರೂ ವಿಷಯ ತಿಳಿದ ಮಹಾಜನರಲ್ಲಿ ಈ ಮೂಲಕ ವಿಜ್ಞಾಪಿಸಿಕೊಳ್ಳುವುದೇನೆಂದರೆ — ಅವರು ದಯವಿಟ್ಟು ತಮಗೆ ಗೊತ್ತಿದ್ದ ವಿಷಯವನ್ನು ಅಥವಾ ಪುಸ್ತಕಾದಿ ಸಾಧನಗಳನ್ನು ನಮಗೆ ತಮ್ಮ ಪೂರ್ಣ ವಿಳಾಸದೊಂದಿಗೆ ಕಳುಹಿಸಿಕೊಟ್ಟಲ್ಲಿ ನಾವು ಅವರಿಗೆ ಕೃತಜ್ಞರಾಗುವೆವಲ್ಲದೆ, ಅವರ ಲೇಖನ ಅಥವಾ ಪುಸ್ತಕಾದಿಗಳನ್ನು ಆದಷ್ಟು ಬೇಗ ಹಿಂತಿರುಗಿ ಕಳುಹಿಸಿಕೊಡುತ್ತೇವೆ ಕಳುಹಲಾರದಂಥ ಅಮೂಲ್ಯ ಗ್ರಂಥಗಳು ಯಾರಲ್ಲಾದರೂ ಇದ್ದರೆ, ಅವರು ತಮ್ಮ ಪೂರ್ಣ ವಿಳಾಸವನ್ನು ದಯವಿಟ್ಟು ತಿಳುಸಬೇಕು ಅಂದರೆ ನಮ್ಮಲ್ಲಿಂದ ಯಾರಾದರೂ ಅವುಗಳನ್ನು ಓದಿಕೊಂಡು ಬರಲು ವ್ಯವಸ್ಥೆಮಾಡಲಾಗುತ್ತದೆ ಕೇದಾರ ಪೀಠದ ಪ್ರಾಚೀನತೆಯ ಬಗ್ಗೆ ಆಧಾರಬದ್ಧ ವಿಷಯಗಳು ಪ್ರಮಗೆ ಅತ್ಯವಶ್ಯವೆಕು ಈ ವಿಷಯದಲ್ಲಿ ಸಹಾಯಮಾಡಬಯಸುವ ಮಹಾನುಭಾವರೆಲ್ಲರೂ ನಮಗೆ ಅವಶ್ಯ ಬರೆಯಬೇಕು

ಕಾರ್ಯದರ್ಶಿ
ವೀರಶೈವ ವಿದ್ವತ್ಸಂಘ ಶಾಖೆ,
ಜಂಗಮವಾಡಿಮಠ ಬನಾರಸ್

ವಜ್ರಾರಂಭೋತ್ಸವ ಇಂಗಳೇಶ್ವರ

ವಿಜಾಪುರ ತಾ॥ ಇಂಗಳೇಶ್ವರ ಗ್ರಾಮದಲ್ಲಿರುವ ಹಿರೇಮಠದಲ್ಲಿ ತಾ॥ ೨೯-೩-೪೪ ನೇ ದಿವಸ ಗುರು ಗದ್ದುಗೆಗೆ ರುದ್ರಾಭಿಷೇಕಾದಿಗಳು ನೆರವೇರಿದುವು ಆಮೇಲೆ ಇಲ್ಲಿಯ ಭಜನ ಮಂಡಲಿಯವರು ಮನೋ ಹರವಾಗಿ ಭಜನೆಯನ್ನು ಮಾಡಿದರು ಮರುದಿವಸ ಅಂದರೆ ಯುಗಾದಿಯ ದಿವಸ ಶ್ರೀ ಶಿವಬಸವಸ್ವಾಮಿಗಳವರಿಂದ ಪಂಚಾಂಗ ಶ್ರವಣ ನಾಯಿತು ಆಮೇಲೆ ದಿಂಡವಾರ ಹೆಡ್‌ಮಾಸ್ಟರ್ ಬೀಳಗಿ ಇವರು ಪ್ರೌಢ ಶಿಕ್ಷಣದ ಬಗ್ಗೆ ಭಾಷಣ ಮಾಡಿದರು. ಬಳಿಕ ಮತದಲ್ಲಿ ವಾಚನಾಲಯವು ಸ್ಥಾಪಿಸಲ್ಪಟ್ಟಿತು. ಆಮೇಲೆ ವಾಚನಾಲಯದ ಕಾರ್ಯದರ್ಶಿಗಳಾದ ಚಬನೂರ ಮಾಸ್ತರರು ಭಾಷಣ ಮಾಡಿದರು ತರುವಾಯ ಜಗದಾಚಾರ್ಯರ ಮಂಗಲ ದೊಡನೆ ಕಾರ್ಯಕ್ರಮವು ಸಮಾಪ್ತಿಗೊಂಡಿತು

ಸೆಕ್ರೆಟರಿ ಶ್ರೀಸಿದ್ಧೇಶ್ವರ ವಾಚನಾಲಯ,
ಇಂಗಳೇಶ್ವರ

ಪೂಜ್ಯತಿಥಿ ಸಮಾರಂಭ ಮಂಗಳೂರು

ಕೊಪ್ಪಳ ಜಿಲ್ಲಾ ಮಂಗಳೂರು ಗ್ರಾಮದ ಆರಳೆಲಿ ಹಿರೇಮಠದ ಪರಮಪೂಜ್ಯ ನಿಧಿ ಕೈ॥ ಪಟ್ಟದಸ್ವಾಮಿ ಗಳವರ ಪೂಜ್ಯತಿಥಿನೋತ್ಸವವು ಯುಗಾದಿಯ ದಿವಸ ಮಹಾನ್ಪ್ರಭದೊಡನೆ ನೆರವೇರಿಸಲ್ಪಟ್ಟಿತು ಅಂದು ಪ್ರಾತಃಕಾಲ ಶ್ರೀಗಳವರ ಗದ್ದುಗೆಗೆ ಶ್ರೀ ಷಡಕ್ಷರ ಶಿವಾಚಾರ್ಯರ ಮತ್ತು ಶ್ರೀ ಬೆದವಟ್ಟಿ ಹಿರೇಮಠದ ಪಟ್ಟದಸ್ವಾಮಿಗಳವರ ನೇತೃತ್ವದಲ್ಲಿ ರುದ್ರಾಭಿಷೇಕಾದಿ ಗಳು ನೆರವೇರಿದುವು ಮಧ್ಯಾಹ್ನ ಅನ್ನಸಂತರ್ಪಣೆಯು ನೆರವೇರಿತು ಒಳಕ ಶ್ರೀಗಳವರ ಭಾವಚಿತ್ರದ ಮೆರ ವಣಿಗೆಯು ನಡೆಯಿತು ಆಮೇಲೆ ಶ್ರೀ ಬೆದವಟ್ಟಿ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಭಾಷಣ ಗಳಾದುವು ಈ ಉತ್ಸವದಲ್ಲಿ ವೀ॥ ಚಂದ್ರಶೇಖರಯ್ಯ ಆರಳೆಲಿಮಠ ಗದಗ, ಮಹಾಲಿಂಗಯ್ಯ ಜಾಲಿಹಾಳ, ಗುರುಲಿಂಗಯ್ಯ ಮಂಗಳೂರು, ಸಿದ್ದಲಿಂಗಯ್ಯ ಮಂಗಳೂರು, ಪಂಚಾಕ್ಷರಯ್ಯ ಮಂಗಳೂರು, ವೀರ ಭದ್ರಪ್ಪ ಸಂಕದ, ಶಿವನಗೌಡ ಮಾಲೀ ಪಾಟೀಲ, ಲಿಂಗನಗೌಡ, ವಿಶ್ವನಾಥ ಮೊದಲಾದವರು ಭಾಗವಹಿಸಿ ವಿಶೇಷ ಶ್ರದ್ಧೆಯಿಂದ ಕೆಲಸಮಾಡಿದರು ಇವರೆಲ್ಲರಿಗೂ ಜಗದಾಚಾರ್ಯರು ಮಂಗಲವನ್ನೀಯಲಿ

ಸಂಗನಗೌಡ ಪೋಲೀಸ್ ಪಾಟೀಲ

ಹೆಗಲು ಹುಣ್ಣು

"ಎತ್ತಿಲ್ಲದವನಿಗೆ ಏದೆ ಇಲ್ಲ" ಎಂಬ ಮಾತು ಹಳ್ಳಿ ಗಳಲ್ಲಿ ಈಗಲೂ ಕೇಳಬರುತ್ತಿದೆ ದನಗಳೇ ರೈತನ ಸಂಪತ್ತು ಬೇಸಾಯಕ್ಕೆ, ಕಪಿಲೆ ಹೊಡೆಯುವುದಕ್ಕೆ, ಸಂಚಾರ, ಮೊದಲಾದ ಎಲ್ಲೋ ಕೆಲಸಕ್ಕೆ ಎತ್ತು ಗಳು ಸಹಕಾರಿಗಳಾಗಿವೆ ಎತ್ತನ್ನು ನಮ್ಮವರು ಪೂಜಿ ಸುತ್ತಾರೆ ಬರೆಯ ಪೂಜೆಯಲ್ಲೇ ಎತ್ತಿನ ಸಾಲುವಿಕೆ ಕೊಯಿಗಾಗಬಾರದು ಅದನ್ನು ಪುಷ್ಕಿಯಾಗಿರುವಂತೆ ಸಾಕುವುದು ಮುಖ್ಯ

ಸ್ವಾಭಾವಿಕವಾಗಿ ದನಗಳು ಅನೇಕ ರೋಗಗಳಿಗೆ ತುತ್ತಾಗುವವು ಅದರಲ್ಲಿ ಹೆಗಲುಹುಣ್ಣು ಬಹಳ ಕೆಟ್ಟದ್ದು. ಇದನ್ನು 'ಠಾಳ' ಎಂತಲೂ ಕರೆಯುತ್ತಾರೆ. ಹೆಗಲುಹುಣ್ಣು ಅನೇಕ ರೀತಿಯಿಂದ ಉಂಟಾಗುತ್ತದೆ. ತೆಳುವಾದ ಹೊಗಲಿನ ದನಗಳು, ಬೆದರುವ ಮತ್ತು ಸಿಡಕಿನ ದನಗಳಿಗೆ ಈ ರೋಗ ಬಹಳ ಹೂಡುವ ನೊಗವು ನುಣುಪಾಗಿಲ್ಲದೆ ಹುರುಕು ಪರಕಾಗಿರುವುದು, ಬಂಡಿ ಅಥವಾ ಬೇಸಾಯಕ್ಕೆ ಇಟ್ಟೋಡಿ ಎತ್ತುಗಳನ್ನು ಹೂಡುವುದು, ಒಂಡಿಯನ್ನು ಕೊರಕಲಿರುವ ತಿರುವು ಮುರುವು ದಾರಿಯಲ್ಲಿ ಹೂಡಿಯುವುದು, ಗಾಡಿಗಳ ಚಕ್ರ ಸಮತೂಕವಾಗಿ ತ್ವಿದಿರುವುದು, ಗಾಡಿಯನ್ನು ಹೊಡೆಯುವವನು ಎಚ್ಚರವಿಲ್ಲದೆ ಸಿಕ್ಕಾಪಟ್ಟೆ ಹೊಡೆಯುವುದು ಮುಂತಾದ ಕಾರಣಗಳಿಂದ ಹೆಗಲುಹುಣ್ಣು ಒರುತ್ತದೆ ಹೆಗಲ ಹುಣ್ಣಾದ ದನವು ಒಣಲ ಸಂಕಟ ದಿಂದ ದುಡಿಯಬೇಕಾಗುತ್ತದೆ ಒತ್ತಾಯಪಡಿಸಿದ ಹೊರತು ನೊಗಕ್ಕೆ ಹೆಗಲನ್ನು ಕೊಡುವುದೇ ಇಲ್ಲ ಅದನ್ನು ಹೂಡಿದೆ ಬಿಟ್ಟರೆ ಸಾಕುವವನಿಗೆ ಅದೊಂದು ಭಾರ ಹೆಗಲುಹುಣ್ಣಾದ ಎತ್ತಿನ ಬೆಲೆಯೂ ಕಡಿಮೆ ಈ ರೀತಿ ರೈತನಿಗೆ ಬಹಳ ನಷ್ಟವಾಗುತ್ತದೆ

ಇದನ್ನು ಒರದಂತೆಯೇ ತಡೆಯಬಹುದು ಮಣು ಪಾದ ನೊಗ, ಸಂಜೋಡಿಯಾದ ಎತ್ತನ್ನು ಹೂಡು ವುದು, ಹುಷಾರಾಗಿ ಬಂಡಿಯನ್ನು ಹೊಡೆಯುವುದು ಈ ರೀತಿ ಮುಂಜಾಗ್ರತೆ ಶ್ರನುಗಳನ್ನು ಕೈಕೊಂಡರೆ ಹೆಗಲುಹುಣ್ಣು ಬರುವುದೇ ಇಲ್ಲ

ಒಂದುಪಕ್ಷ ಬಂದರೆ, ಅದಕ್ಕೆ ಔಷಧವನ್ನು ಹಾಕಿಸಿ ಸರಿಯಾದ ರೀತಿಯಲ್ಲಿ ನೋಡಿಕೊಳ್ಳಬೇಕು ಹೆಗಲು ಹುಣ್ಣಾದ ಕೂಡಲೆ ಎತ್ತಿಗೆ ವಿಶ್ರಾಂತಿ ಕೊಡಬೇಕು ಯಾವ ಕೆಲಸಕ್ಕೂ ಅದನ್ನು ಹೂಡುವಾರದು ದನಗಳ ಅಪ್ಪತ್ತಿಗೆ ಹೊಡೆದುಕೊಂಡು ಹೋಗುವುದು ಎಲ್ಲಕ್ಕೂ ಉತ್ತಮ ಹಳ್ಳಯಲ್ಲಿ ಅನೇಕರು ಕಾದ ಕಬ್ಬಿಣದಿಂದ ಸುಡುವಂತೆ ಹೇಳುತ್ತಾರೆ ಇದು ಶುದ್ಧ ತಪ್ಪು ಗಾಯವು ಹಳೆಯದಾಗಿದ್ದರೆ ಆಪರೇಷನ್‌ನಿಂದ ಗುಣ ಪಡಿಸುವುದು ಸಾಧ್ಯ ಇಂತಹ ಸಂದರ್ಭಗಳಲ್ಲಿ ದನ ಗಳನ್ನು ಅಪ್ಪತ್ತಿಗಳಿಗೆ ಹೊಡೆದುಕೊಂಡು ಹೋಗುವುದೇ ಮೇಲು

ಹಳ್ಳಿಗಳಲ್ಲಿ ಎಣ್ಣೆಯನ್ನು ಹಚ್ಚಿ ತಿಕ್ಕಿದರೆ ಚರ್ಮ ಮೃದುವಾಗುವುದು ಹತ್ತಿರದಲ್ಲಿ ಅಪ್ಪತ್ತಿಯಿದ್ದರೆ ಅಯೋಡಿನ್ ಮುಲಾಮನ್ನು ತಂದು ವಾರಕ್ಕೆ ಎರಡು ಸಲ ಉತ್ತಿಗೆಗೆ ತಿಕ್ಕಬೇಕು ಆ ಭಾಗವು ಇನ್ನೂ ಒರಟಾ ಗಿದ್ದರೆ ಬೇವಿನ ತೊಪ್ಪಲನ್ನು ಉಪ್ಪಿಟೊಬೆಂಗಿಗೆ ಸೇರಿಸಿ ಪುಡಿಮಾಡಿ ಹಚ್ಚುವುದು ಒಳ್ಳೆಯದು ಗಾಯ ಒಣಿದ ಮೇಲೆ ಜಾಲಿತೊಗಟೆಯ ಬೂದಿ ಮತ್ತು ಕರ್ಪೂರವನ್ನು ತಿಕ್ಕಿ ಉಪಚಾರ ಮಾಡಬೇಕು. ನೊಣಗಳು ಮಾತ್ರ ಕೂಡ್ರದಂತೆ ಹುಷಾರಾಗಿ ನೋಡಿಕೊಳ್ಳಬೇಕು

ಈ ರೀತಿ ಮಾಡಿದರೆ ಗಾಯವು ಬೇಗನೆ ಮಾಯು ವುದು ಒಟ್ಟಿನಲ್ಲಿ ಹೆಗಲುಹುಣ್ಣು ಬರದಂತೆ ನೋಡಿ ಕೊಳ್ಳುವವನು ಜಾಣ ಒಂದು ನಕ್ಷತ್ರ ಬಂದರೆ, ಅವನ್ನು ಕೂಡಲೆ ಗುಣಮಾಡುವವನು ವೈದ್ಯಾಧಿಪುಣ.

(ಹೆಳಕು)

ಪಂಚಾಚಾರ್ಯಪ್ರಭಾ

೧೯೪೯ನೆಯ ಏಪ್ರಿಲ್ ತಾ|| ೧೧ನೆಯ ಸೋಮವಾರ

ನವವಿಧಭಕ್ತಿಸ್ವರೂಪ

ಯಾವನ ಹೃದಯದಲ್ಲಿ ಭಕ್ತಿಯು ಅಂಕುರಿಸುವುದೋ ಅವನು ತನ್ನ ಒಂದುಗಳ ಆಲೆಯನ್ನು ಬಿಟ್ಟು ಶಿವಭಕ್ತರನ್ನೇ ತನ್ನ ಬಂಧುಗಳನ್ನಾಗಿ ಭಾವಿಸುವನು ಅಂಕುರಿಸಿದ ಭಕ್ತಿಯು ಎಂದು ಪುಷ್ಪಿತನಾಗುವುದೋ ಅಂದು ಭಕ್ತನನ್ನೇ ರಾಜನೆಂದು ಭಾವಿಸುವನು ಪುಷ್ಪಿತವಾದ ಆ ಭಕ್ತಿಯು ಎಂದು ಸಲಿಸುವುದೋ ಅಂದು ಭಕ್ತನನ್ನೇ ಪ್ರತ್ಯಕ್ಷ ಈಶ್ವರನೆನ್ನಾಗಿ ಭಾವಿಸುವನು ಹೀಗೆ ಭಕ್ತಿವಿಶೇಷಗಳಿಂದ ಒನ್ದ ಭಕ್ತನೇ ಒಹು ಪ್ರಕಾರವಾಗಿ ತೋರುವನೆಂದು ಧರ್ಮಶಾಸ್ತ್ರವು ಭಕ್ತಿಯ ಮಹಿಮೆಯನ್ನು ಸರ್ವತೋಮುಖವಾಗಿ ಕೊಂಡಾಡಿದು ಭಕ್ತಿಯಲ್ಲಿ ಮೂಡಭಕ್ತಿಯೆಂದೂ, ಪ್ರೌಢಭಕ್ತಿ ಯೆಂದೂ ಎರಡು ವಿಧ ವೀರಶೈವಮತವು ಯಾವಾಗಲೂ ಪ್ರೌಢಭಕ್ತಿಯನ್ನು ಅವಲಂಬಿಸಿರುವುದಲ್ಲದೆ ಮೂಢಭಕ್ತಿಯನ್ನೆ ವಲಂಬಿಸಿರುವುದಿಲ್ಲ ಏಕೆಂದರೆ— ಇವರ ಮೋಕ್ಷಸಾಧನವಾದ ಷಟ್‌ಸ್ಥಲಗಳಲ್ಲಿ ಭಕ್ತಸ್ಥಲವೇ ಮೊದಲನೆಯ ಸ್ಥಲವಾಗಿದೆ

ಧರ್ಮಾದಿಷ್ವನುಷಾರ್ಥಾನಾಂ ಚತುರ್ಣಾಂ ಪರತಃ ಸದಾ
ಪಂಚಮಃ ಪುರುಷಾರ್ಥೋ ಯಃ ಭಕ್ತಿಸ್ತಸ್ಯೇ ಸನಾತನೀ

ಧರ್ಮ ಅರ್ಥ ಕಾಮ-ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಿಗಿಂತಲೂ ಶಿವಭಕ್ತಿಯೆಂಬುದು ಅತ್ಯುತ್ಕೃಷ್ಟವಾದ ಐದನೆಯ ಪುರುಷಾರ್ಥ-ವೆ-ದು ಅವ ಭವಸಂಹಾರಕಾರಿಯೆಂದು ಹೇಳುವುದನ್ನು ನೋಡಿದರೆ, ಭಕ್ತಿಯೆಂಬುದು ಜನ್ಮಾಂತರಪುಣ್ಯವಿಶೇಷದಿಂದ ಸಾದಿಸತಕ್ಕ ಮಹಾಪುರುಷಾರ್ಥವೆಂದು ಸಿದ್ಧವಾಗುತ್ತದೆ ಪ್ರತಿಯೊಬ್ಬ ವೀರಶೈವನೂ ಮೊದಲು ಭಕ್ತಸ್ಥಲಸನ್ನಾಶ್ರಯಿಸದ ಮುಂದು ಮುಂದಣ ಸ್ಥಲಗಳನ್ನಾಶ್ರಯಿಸುವಂತಿಲ್ಲ ಭಕ್ತಸ್ಥಲವೇ ಆತ್ಮಾನಾತ್ಮವಿಚಾರಪೂರ್ವಕವಾಗಿ ಶಿವದೀಕ್ಷಾ ಲಿಂಗ ಧಾರಣಾದಿ ಕ್ರಿಯೆಗಳಿಗವಕಾಶವನ್ನು ಕೊಟ್ಟಂತೆ ಭಕ್ತಿಯು ಹೇಗೆ ಹಾಗೆ ಸರಿಸಾಕ್ಷಾತ್ಸೌಖ್ಯವನ್ನು ಹೊಂದುವುದೋ ಹಾಗೆ ಹಾಗೆ ಮುಂದುಮುಂದಣ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯಗಳೆಂಬ ಷಟ್‌ಸ್ಥಲ ಗಳು ಸಿದ್ಧಿಸುವವು ಈ ಆರು ಸ್ಥಲಗಳನ್ನನುಭವಿಸಿದ ಮಹಾಪುರುಷನನ್ನು ಷಟ್‌ಸ್ಥಲಬ್ರಹ್ಮವೆಂಬುದು ಶಾಸ್ತ್ರವು ಪ್ರತಿಪಾದಿಸಿರುವದು ಷಟ್‌ಸ್ಥಲಜ್ಞಾನಿಗಳಾಗಬೇಕಾದರೆ ಈ ಭಕ್ತಿಯು ಶ್ರವಣ ಕೀರ್ತನ ಸ್ಮರಣ ಪಾದಸೇವನ ಅರ್ಚನ ವಂದನ ದಾಸ್ಯ ಸಖ್ಯ ಆತ್ಮನಿವೇದನ ಎಂದು ಒಂಭತ್ತು ವಿಧವಾಗಿ ಪರಿಣಮಿಸಿದೆ ಇದು ಸತಿ ಪತಿನ್ಯಾಯವೆಂತಿರಲು ಲಿಂಗಾಂಗಸಾವ ರಸ್ಯಕ್ಕೆ ಚಿನ್ನಾಗಿ ಅನ್ವಯಿಸುತ್ತದ

ಶ್ರವಣ—ವಿತಹಿಪುರುಷನು ರೂಪಲಾವಣ್ಯಾದಿ ಸೌಂದರ್ಯಗಳಿಂದ ಕೂಡಿದ ಸ್ತ್ರೀಯರ ಹಾವಭಾವಲಾಸಗಳನ್ನು ವಿಶೇಷವಾಗಿ ವರ್ಣಿಸಿದರೆ ಅದನ್ನು ವಿಕಾರ್ಯ ಚಿತ್ತದಿಂದ ಕೇಳುವಂತೆ ಶಿವಭಕ್ತನು ಶಿವನ ಕಲ್ಯಾಣ ಗುಣಗಳನ್ನು ಬಹು ಆಸಕ್ತಿಯಿಂದ ಕೇಳುವುದೇ ಶ್ರವಣ

ಕೀರ್ತನೆ—ಯಾವಾಗಲೂ ತನ್ನನ್ನು ಆಶ್ರಯಿಸಿ ಕೊಂಡಿರುವ ಪ್ರತಿಪಾತ್ರಳಾದ ಸ್ತ್ರೀಯಸಂಬಂಧಿಯು ವನ್ನು ಶ್ಲಾಘಿಸುವ ವಿಟಸಹಾಗೆ ಅನಂದಬಾಷ್ಪವು ಉಕ್ಕಿ ಗದ್ಗದಸ್ವರದೊಡನೆ ಶಿವಲಿಂಗದ ಮಹಿಮೆಯನ್ನು ಹೊಗಳುವುದೇ ಕೀರ್ತನವೆನಿಸುವದು.

ಸ್ಮರಣೆ—ಭ್ರಮರದ ಅಧೀನವಾದ ಕೀಟವು ತನ್ನ ದೇಹಧರ್ಮಗಳನ್ನೆಲ್ಲ ಮರೆತು ಬಾಹ್ಯಪ್ರಪಂಚವನ್ನು ತಿಳಿಯದೆ ಆ ಭ್ರಮರವನ್ನೇ ಯಾವಾಗಲೂ ಧ್ಯಾನಿಸುವ ಹಾಗೆ ತನ್ನ ದೇಹೇಂದ್ರಿಯಾದಿ ವ್ಯಾಪಾರಗಳಲ್ಲಿ ಪ್ರವರ್ತಿಸದೆ ಸ್ಥಿರವಾಸ್ಥಿನಿಸ್ಸಿನಿಂದ ಅಂತರಂಗದಲ್ಲಿ ಶಿವಲಿಂಗ ಮೂರ್ತಿಯನ್ನು ಧ್ಯಾನಿಸುತ್ತಿರುವುದೇ ಸ್ಮರಣವೆನಿಸುವದು.

ಪಾದಸೇವನ—ಹೆಂಡತಿ ಮಕ್ಕಳು ಮನೆ ಹಣ ಮುಂತಾದ ವಸ್ತುಗಳ ಮೇಲಿನ ಆಸೆಯಿಂದ ತಪ್ಪ ದೇಹಾಯಾಸವನ್ನು ನೋಡದೆ ಅನೇಕ ವ್ಯಾಪಾರ ಗಳನ್ನು ನಡೆಸುವ ಗೃಹಸ್ಥನಂತೆ ಹಸಿವು ಬಾಯಾರಿಕೆ ನಿದ್ರೆ ನೋವುಗಳೊಂದನ್ನೂ ಲಕ್ಷಿಸದೆ ಶಿವನೊಬ್ಬ ನನ್ನು ಉಪಚರಿಸುವದರಲ್ಲಿ ನಿರತವಾಗಿರುವುದೇ ಪಾದ ಸೇವನವೆನಿಸುವದು

ಅರ್ಚನ—ರೂಪವತಿಯಾದ ಸ್ತ್ರೀಯಳು ತನ್ನನ್ನು ನೋಡಿ ಮೋಹಿಸಬೇಕೆಂಬ ಉದ್ದೇಶದಿಂದ ಕಾಮುಕ ನಾದವನು ತನ್ನ ದೇಹವನ್ನೂ ವಸ್ತ್ರಾಭರಣ ಗಂಧ ಮಾಲ್ಯಗಳಿಂದಲಂಕರಿಸಿಕೊಳ್ಳುವಂತೆ ಲಿಂಗಮೂರ್ತಿ ಯನ್ನು ಚೆನ್ನಾಗಿ ಅಲಂಕರಿಸಿ ಷೋಡಶೋಪಚಾರ ಗಳಿಂದ ಪೂಜಿಸುತ್ತಿರುವುದೇ ಅರ್ಚನವೆನಿಸುವದು

ವಂದನ—ಶಿವನ ಅನುಗ್ರಹಾರ್ಥವಾಗಿ ಶರಣಾಗತ ನಾದ ತನ್ನನ್ನು ಕಾಪಾಡಬೇಕೆಂಬ ಎಡೆ-ತಲೆ ಮನಸ್ಸು-ಮಾತು ಪಾದಗಳು ಕೈಗಳು ಈ ಎಂಟು ಅಂಗಗಳೊಡನೆ ಶಿವಲಿಂಗದ ವಂದ ದೇಹವನ್ನು ಕೆಡಿಯುವುದೇ ವಂದನವೆನಿಸುವದು

ದಾಸ್ಯ—ಸಿಂಹಾಸನದ ಮೇಲೆ ಕುಳಿತುಕೊಂಡು ರಾಜನಿಗೆ ಕೇವಲ ವಿನಯದಿಂದ ಭಕ್ತಿಜ್ಞಾನವಾದಿ ರಾಜೋಪಕರಣಗಳನ್ನು ಒಪ್ಪಿಸುವ ಸೇವಕನಂತೆ ಭಯ ಭಕ್ತಿಪೂರ್ವಕವಾಗಿ ಶ್ರೀಕರಗಳಿಂದಲೂ ಶ್ರೀಲಿಂಗ ಮೂರ್ತಿಯ ಚರಣಕಮಲವನ್ನು ಆರಾಧಿಸುತ್ತಿರುವುದೇ ದಾಸ್ಯವೆನಿಸುವದು

ಸಖ್ಯ—ಉತ್ತಮವಾದ ಮಾತಿನಿಂದಲೂ ಅಂಗ ಸುಖದಿಂದಲೂ ಪುರುಷನನ್ನು ಮೆಚ್ಚಿಸಿದ ಸ್ತ್ರೀಯಂತೆ ನಿನ್ನ ಅನುಗ್ರಹಕ್ಕೆ ಪಾತ್ರನಾಗುವುದೇ ಸಖ್ಯವೆನಿಸುವುದು

ಆತ್ಮನಿವೇದನ—ಪತಿಭಕ್ತಿಸಂಪನ್ನಳಾದ ಪರಮ ಪತಿವ್ರತೆಯು ತನ್ನ ಪತಿಗೆ ದೇಹವನ್ನೇ ಸಮರ್ಪಿ ಸುವಂತೆ ಶಿವಲಿಂಗಕ್ಕೆ ತನ್ನ ದೇಹಾರ್ಪಣಾಪ್ರಾಣಮನ ಗಳನ್ನೆಲ್ಲ ಸಮರ್ಪಿಸುವುದೇ ಆತ್ಮಾರ್ಪಣವೆನಿಸುವುದು

ಈ ರೀತಿ ಒಂಭತ್ತು ವಿಧವಾದ ಭಕ್ತಿಯುಳ್ಳವನೇ ವೀರಶೈವನೆಂದೂ ಪ ಪ್ರಾಣವಿಭಕ್ತನೆಂದೂ ಧರ್ಮ ಶಾಸ್ತ್ರಗಳು ಹೊಗಳಿರುತ್ತವೆ ಇಂದ ಸಹಜವಾದ ಶಿವ ಭಕ್ತಿಯು ಯಾರಲ್ಲಿ ಉದಯಿಸುವುದೋ ಅವರಿಗೆ ಬೆಂಕಿಯು ಶೀತಲವಾಗುವದು, ವೈಶ್ಯದೇವತೆಯು ವೀರಶೈವನೆಂದೂ ಪ ಪ್ರಾಣವಿಭಕ್ತನೆಂದೂ ಧರ್ಮ ಸೇವಿಕೆಯಾಗುವಳು ಸಿಡಿಲು ಪುಷ್ಪದಂತಾಗುವದು, ಕರ್ಮಪಾಶವು ಸಡಿಲವಾಗುವದು, ಬ್ರಹ್ಮಲಿಪಿಯು ಜಲಲಿಪಿಯಾಗಿ ಪರಿಣಮಿಸುವದು ಇಂಥ ಶಿವಭಕ್ತ ರನ್ನು ಅರ್ಚಿಸುವವೀ ವೀರಶೈವನ ಕರ್ತವ್ಯ! ಆದುದ ರಿಂದ ಸರ್ವರೂ ಇಂಥ ಭಕ್ತರ ಲಕ್ಷಣಗಳನ್ನು ತಿಳಿದು ಅನುಷ್ಠಿಸಿ ಶಿವನೊಲುಮೆಗೆ ಪಾತ್ರರಾಗಬೇಕು

ವರ್ತಮಾನಸಂಗ್ರಹ

ವಿದೇಶೀ ಬಂಡವಾಳಗಾರರಿಗೆ ಪಂಗಿ ನೆಹ್ರೂರವರ ಭರವಸೆ

ಈಗ ಭಾರತದಲ್ಲಿ ತಮ್ಮ ಬಂಡವಾಳವನ್ನು ವಿನಿಯೋಗಿಸಿರುವ ವಿದೇಶೀಯರ ಮೇಲೆ ಯಾವ ವಿಧವಾದ ನಿಯಮ ನಿರ್ಬಂಧಗಳನ್ನೂ ಹಾಕಲಾಗುವ ದಿಲ್ಲ ಭಾರತೀಯ ಬಂಡವಾಳಗಾರರಿಗೆ ಹಾಕಿದ ಇರು ವಾಗ ನಿರ್ಬಂಧನ್ನೂ ವಿದೇಶೀಯರಿಮೇಲೆ ಹೇರುವು ದಿಲ್ಲ ವಿದೇಶೀ ಬಂಡವಾಳಗಾರರು ತಮ್ಮ ಹಣವನ್ನು ಭಾರತದಲ್ಲಿ ವಿನಿಯೋಗಿಸಿ ತಮ್ಮೂಲಕ ಉಭಯರಿಗೂ ಅನುಕೂಲವಾಗುವಂತೆ ಭಾರತ ಸರ್ಕಾರವು ತನ್ನ ನೀತಿಯನ್ನು ರೂಪಿಸಿಕೊಳ್ಳಲಾಗುವುದು" ಎಂದು ಭಾರತದ ಪ್ರಧಾನಿ ಪಂಡಿತ ಜವಾಹರಲಾಲ್ ನೆಹರೂ ರವರು ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ತಿಳಿಸಿರುವು ಈ ಹೇಳಿಕೆಗಾಗಿ ಜನತೆ ಬಹಳ ದಿನಗಳಿಂದ ಕಾದಿದ್ದಿತು. ವಿದೇಶೀ ಬಂಡವಾಳಗಾರರು ಲಾಭಗಂಡಾದಿಸಲು ಎಲ್ಲರಿಗೂ ಅನ್ವಯಿಸುವ ನಿಬಂಧನೆಗೊಳಪಟ್ಟು ಅವ ಕಾಶ ಕೊಡಲಾಗುವುದು. ಒಂದು ನೇಳೆ ಸರ್ಕಾರವು ಯಾವ ವಿದೇಶೀ ಉದ್ಯಮವನ್ನೇ ಆಗಲಿ ವಶಸಿಕೊಂಡರೆ ಅದಕ್ಕೆ ನ್ಯಾಯವಾದ ಬೆಲೆಯನ್ನು ಕೊಡಲಾಗುವುದು ಈ ಬಗ್ಗೆ ಸರ್ಕಾರವು ತನ್ನ ನೀತಿಯನ್ನು ಮುಂಚೆಯೇ ತಿಳಿಸಿರುತ್ತಿದೆ ಎಂದು ಪಂಡಿತ ನೆಹರೂರವರು ತಿಳಿಸಿದರು

ಭಾರತೀಯ ಕೈಗಾರಿಕೋದ್ಯಮಗಳಿಗೆ ಹೆಚ್ಚು ಉತ್ತೇಜನ ಕೊಡುವುದು ಸರ್ಕಾರದ ನೀತಿಯಾದರೂ ಬ್ರಿಟಿಷ್ ಉದ್ಯಮಿಗಳೂ ಹೇರಳವಾದ ಅವಕಾಶ ವಿದೆಯೆಂದು ಅವರು ಹೇಳಿದರು.

"ಬ್ರಿಟಿಷ್ ಆಥವಾ ಭಾರತೀಯೇತರರಿಗೆ ಯಾರಿಗೇ ಆಗಲಿ ಪಾಸಿಮಾಡಲು ಸರಕಾರದ ಆಜ್ಞೇಪ್ಪೆ ಇಲ್ಲ. ಭಾರತದ ಆರ್ಥಿಕ ಸ್ಥಿತಿಯನ್ನು ರಚಿಸಾತ್ಮಕವಾಗಿ ಅಭಿವೃದ್ಧಿಗೊಳಿಸಲು ವಿದೇಶೀ ಬಂಡವಾಳಕ್ಕೆ ಸ್ವಸಂತೋಷದಿಂದ ಅವಕಾಶಕೊಡುತ್ತೀನೆ" ಎಂದು ಪಂಡಿತ ನೆಹರೂ ರವರು ನುಡಿದರು.

ಭಾಷಾವಾರು ಪ್ರಾಂತರಚನೆಗೆ ಕಾಲ ಪರಿಪಕ್ವವಾಗಿಲ್ಲ

ಶ್ರಿಮೂರ್ತಿ ಸಮಿತಿಯ ವರದಿ

"ಭಾಷಾವಾರು ಪ್ರಾಂತರಚನೆಯನ್ನು ಇನ್ನು ಕೆಲವು ವರ್ಷಗಳವರೆಗೆ ಮುಂದುವರಿಸಬೇಕು ಅಲ್ಲದೆ ಈ ಸಮಯದಲ್ಲಿ ಇದಕ್ಕಿಂತಲೂ ಮುಖ್ಯವಾದ ಸಮಸ್ಯೆಗಳ ಕಡೆ ನಾವು ಗಮನವಿಡಬೇಕು" ಎಂದು ಭಾಷಾವಾರು ಪ್ರಾಂತರಚನೆಯ ಬಗ್ಗೆ ಜಯಪುರ ಕಾಂಗ್ರೆಸ್ ಅಧಿವೇಶನದಲ್ಲಿ ರಚಿಸಲಾಗಿದ್ದ ಶ್ರಿಮಾರ್ಗಿಗಳ ಸಮಿತಿ ತನ್ನ ವರದಿಯಲ್ಲಿ ತಿಳಿಸಿದೆ. ಪಂ|| ಜವಾಹರಲಾಲ್, ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಕಾಂಗ್ರೆಸ್ ಅಧ್ಯಕ್ಷರಾದ ಪಟ್ಟಾಭಿ ಸೀತಾರಾಮಯ್ಯನವರೇ ಈ ಸಮಿತಿಯ ಸದಸ್ಯರು.

ಪ್ರಜಾಭಿಪ್ರಾಯಕ್ಕೆ ಮನ್ನಣೆ

ಪ್ರಜಾಭಿಪ್ರಾಯವು ಭಾಷಾವಾರು ಪ್ರಾಂತರಚನೆಯ ಬಗ್ಗೆ ಅಭಿಮುಖವಾಗಿದ್ದರೆ, ಪ್ರಜಾಪ್ರಭುತ್ವವಾದಿಗಳಾದ ನಾವು ಇದಕ್ಕೆ ತಲೆ ಬಾಗಲೇಬೇಕು. ಆದರೂ ಸಹ ಇದು ಅಖಂಡ ಭಾರತದ ಹಿತದೃಷ್ಟಿಯಿಂದ ಒಂದು ಜ್ವಾಕಟ್ಟಿನಲ್ಲಿ ಮಾರ್ಜಾಡಬೇಕು

ಮಿಕ್ಕ ಯಾವುದೇ ಪ್ರಾಂತರಚನೆಯಾಗುವ ಮೊದಲು ಆಂಧ್ರಪ್ರಾಂತದ ರಚನೆಗೆ ಅಭಿಪ್ರಾಯಸಟ್ಟಿದೆ.

ಜೊಂಬಾಯಿ ಪ್ರಾಂತವು ಭಾಷಾವಾರಾಗಿ ಹಂಚಿಕೆಯಾದ ಪಕ್ಷದಲ್ಲಿ ಜೊಂಬಾಯಿ ನಗರವು ಪ್ರತ್ಯೇಕ ಸ್ವತಂತ್ರಪ್ರಾಂತವಾಗಿ ರಚಿಸಲ್ಪಡುವುದಲ್ಲದೆ ಅದನ್ನು ಯಾವ ಭಾಷಾ ಪ್ರಾಂತದಲ್ಲೂ ಸೇರಿಸಲಾಗುವುದಿಲ್ಲವೆಂದೂ ವೆಂದೂ ಮದ್ರಾಸ್ ನಗರಕ್ಕೂ ಸಹ ಇದೇ ಪರಿಸ್ಥಿತಿ ಒದಗುವುದರಿಂದ ಆಂಧ್ರ ಪ್ರಾಂತರಚನೆಯಾದಲ್ಲಿ ಮದ್ರಾಸನ್ನು ಆಂಧ್ರದಲ್ಲಿ ಸೇರಿಸಲಾಗುವುದಿಲ್ಲವೆಂದೂ ಸಮಿತಿಯು ನಿರ್ದಿಸ್ಪವಾಗಿ ಹೇಳಿದೆ.

ಕಾರಣಗಳು

ಈಗ ನಾವು ಜಾಗರೂಕರಾಗಿದಿದ್ದರೆ, ದೇಶಕ್ಕೆ ಅಪಾಯ ಒದಗಬಹುದು ಗಳಿಸಿರುವ ರಾಜಕೀಯ ಸ್ವಾತಂತ್ರ್ಯವನ್ನು ಸರಿಪಡಿಸುವ ಕಡೆಗೆ ಗಮನ ಕೊಡ ಬೇಕು ನಾವು ಈಗ ಕಾರ್ಯಾತತ್ಪರರಾಗದಿದ್ದಲ್ಲಿ ಇಂದಿನ ಮತ್ತು ಹಿಂದಿನ ಜನತೆಯು ಅನೇಕ ವರ್ಷಗಳ ಬಲಿದಾನದಿಂದ ಗಳಿಸಿದ ಸ್ವಾತಂತ್ರ್ಯಕ್ಕೆ ಗಂಡಾಂತರ ಬರಬಹುದು

ಈಗಾಗಲೇ ಅನೇಕ ಪ್ರದೇಶಗಳು ಜೊಂಬಾಯಿ ಒರಿಸ್ಸಾ, ಮಧ್ಯಪ್ರಾಂತಗಳಗೆ ಸೇರಿರುವುದರಿಂದ ಆಡಳಿತ ವಿಚಾರದಲ್ಲಿ ತೊಂದರೆಯಾಗಿದೆ ಈಗ ಹೊಸತ ಪ್ರಾಂತ ಗಳನ್ನು ರಚಿಸುವುದರಿಂದ ಇನ್ನೂ ಹೆಚ್ಚಿನ ತೊಂದರೆ ಯಾಗುವುದು ಎಂದು ಸಮಿತಿಯ ವರದಿಯಲ್ಲಿ ಹೇಳ ಲಾಗಿದೆ.

ಪ್ರಾಂತಗಡಿ ನಿರ್ಣಯ ಸುಲಭವಲ್ಲ

ದ್ವಿಭಾಷಿಗಳು ಪ್ರಜಾಕರಲ್ಲಿರುವ ಗಡಿ ಪ್ರದೇಶಗಳನ್ನು ನಿರ್ಣಯ ಮಾಡುವುದು ಅಷ್ಟು ಸುಲಭವಲ್ಲ. ಇದರಿಂದಾಗಿ ಅನೇಕ ತೊಂದರೆಗಳು ಉದ್ಭವಿಸುವುವು. ಇಡೀ ಪ್ರಾಂತ ಪರಿಸ್ಥಿತಿಯು ಇಡಿದು ಮುಖ್ಯ ವಿಚಾರಗಳ ಕಡೆ

ಗಮನ ಕೊಡದಂತೆ ಆಗಬಹುದಾದ್ದರಿಂದ ಸರಿಯಾದ ಸಮಯದಲ್ಲಿ ಈ ಸಮಸ್ಯೆಯನ್ನು ಪರಿಶೀಲಿಸುವುದು ಸೂಕ್ತವಾದುದು.

ಧಾರ್ ಸಮಿತಿಯವರು ಸೂಚಿಸಿರುವಂತೆ ನೂತನ ಪ್ರಾಂತ ರಚನೆಯಿಂದ ಆಡಳಿತದಲ್ಲಿ ತೊಂದರೆ ಉದ್ಭವಿಸುವುದಲ್ಲದೆ, ಆರ್ಥಿಕ ಪರಿಸ್ಥಿತಿಯು ಹದಗೆಡುವ ಸಂಭವವಿದೆ. ಇದರಿಂದ ಆರ್ಥಿಕ, ರಾಜಕೀಯ ಮತ್ತು ಆಡಳಿತದ ಕಷ್ಟಗಳು ಹೇಳತೀರದಾಗುವುವು ಎಂಬ ಧಾರ್ ಸಮಿತಿಯ ವರದಿಯನ್ನು ಈ ಸಮಿತಿಯು ಎತ್ತಿ ಹಿಡಿದಿದೆ.

ಕರ್ನಾಟಕ ಪ್ರಾಂತ ರಚನೆ

ಬಹುಭಾಷಾ ಪ್ರಾಂತಗಳಲ್ಲಿ ಸೇರಿ ಕರ್ನಾಟಕ ಮತ್ತು ಕೇರಳ ಪ್ರಾಂತದವರು ಅನೇಕ ವರ್ಷಗಳಿಂದ ಹೋರಾಡಿದ್ದಾರೆಂಬುದು ನಿಜ. ಮತ್ತು ಭಾಷಾವಾರು ಪ್ರಾಂತ ರಚನೆಯ ಬಗ್ಗೆ ಜನಗಳ ಪೂರ್ಣ ಬೆಂಬಲವಿದೆ ಎಂಬುದು ಗೊತ್ತು.

ಕರ್ನಾಟಕ ಮತ್ತು ಕೇರಳದಲ್ಲಿ ಬಹುಭಾಗ ದೇಶೀಯ ಸಂಸ್ಥಾನಗಳ ಆಡಳಿತಕ್ಕೊಳಪಟ್ಟಿರುವುದರಿಂದ ಈ ಎರಡು ಪ್ರಾಂತಗಳ ರಚನೆ ಅತ್ಯು ಸುಲಭಸಾಧ್ಯವಲ್ಲ. ಆದುದರಿಂದ ಸಂಸ್ಥಾನಗಳಲ್ಲಿ ಮಿಕ್ಕ ಪ್ರದೇಶವನ್ನು ವಿಲೀನ ಗೊಳಿಸುವುದರಿಂದ ಕಾರ್ಯಸಾಧಿತವಾಗುವುದಿಲ್ಲ ಅದರ ಜೊತೆಗೆ ಸಂಸ್ಥಾನಗಳೇ ವಿಲೀನವಾಗಬೇಕು ಆಗ ಈ ಪ್ರಾಂತಗಳ ರಚನೆ ಸಾಧ್ಯವಾದೀತು ಆದುದರಿಂದ ಕೇರಳ ಕರ್ನಾಟಕ ಪ್ರಾಂತಗಳ ರಚನೆಗೆ ಸಮಯ ಕಾಯಲೇಬೇಕು. ಸಂಸ್ಥಾನಗಳ ಸಮಸ್ಯೆಯು ಒಂದು ಸಾರಿ ಸಂಪೂರ್ಣವಾಗಿ ಪರಿಹಾರವಾಯಿತೆಂದರೆ ಭಾಷಾವಾರು ಪ್ರಾಂತ ರಚನೆಯ ಕೆಲಸವು ಸುಲಭ ಸಾಧ್ಯವಾದೀತು ಸ್ವಾಂತಂತ್ರ್ಯಾನಂತರವೂ ಸಹ ಆರಂಭದಲ್ಲಿ ದ್ವಿಭಾಷಾ ಪ್ರದೇಶಗಳನ್ನು ಳಿದು ನೊದಲು ಸ್ವಾಂತ ರಚನೆಯಾಗುವುದು ಅನಂತರ ಸರಿಯಾದ ಗಡಿ ನಿರ್ಣಯಿಸಲಾಗುವುದು ಆದುದರಿಂದ ಸಂತೋಷದಿಂದಲೂ ಒಪ್ಪಿಗೆಯಿಂದಲೂ ಈ ಕೆಲಸಗಳು ಸಾಧಿತವಾದರೆ ಸ್ವಾಂತರಚನೆಯ ಪ್ರಶ್ನೆ ಹುಗುರವಾದೀತು

ಈ ಎಲ್ಲ ವಿಷಯಗಳನ್ನೂ ಕುರಿತು ನಿರ್ದೇಪಾಗಿ ಸಮಿತಿಯು ಪರ್ಯಾಲೋಚಿಸುವುದರ ಪ್ರಯುಕ್ತ ಭಾಷಾವಾರು ಪ್ರಾಂತರಚನೆಗೆ ಇದು ಪರಿಪಕ್ವವಾದ ಕಾಲವಲ್ಲ ಎಂದು ಅಭಿಪ್ರಾಯ ಪಡುತ್ತದೆ

ಇನ್ನೂ ಅರಂಭ ದೆಸೆಯಲ್ಲಿರುವುದರಿಂದ ಬಾರೆಬದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಪ್ರಗತಿಗೆ ಇದರಿಂದ ನಿಸ್ಸಂದೇಹವಾಗಿ ತೊಂದರೆಯಾಗುವುದು

ಇತ್ಯಾದಿರೂ ಜನಾಭಿಪ್ರಾಯವು ಭಾಷಾವಾರು ಸ್ವಾಂತ ರಚನೆಯ ಅಭಿಮುಖವಾಗಿದ್ದರೆ ಅದಕ್ಕೆ ಪೂರ್ಣ ಮನ್ನಣೆ ಕೊಡುವ ಸಲುವಾಗಿ ಪುನಃ ಪರಿಶೀಲಿಸಿ ನಡೆಸಬೇಕೆಂದು ಸಮಿತಿಯು ವರದಿಯಲ್ಲಿ ಹೇಳಲಾಗಿದೆ

ಮದ್ರಾಸಿನ ನೂತನ ಮಂತ್ರಿಮಂಡಲ

ಶ್ರೀ ಪಿ. ಎಸ್ ಕುಮಾರಸ್ವಾಮಿ ರಾಜಾರವರ ನೇತೃತ್ವದಲ್ಲಿ ರಚಿತವಾಗಿರುವ ಮದ್ರಾಸಿನ ನೂತನ ಮಂತ್ರಿಮಂಡಲವು ೬ ನೇ ತಾ|| ದಿನ ಅಧಿಕಾರ ಸ್ವೀಕರಿಸಿತು ನೂತನ ಪ್ರಧಾನರಾದ ಶ್ರೀ ಕುಮಾರಸ್ವಾಮಿ ರಾಜಾರವರು ಆ ದಿನ ನೂತನ ಮಂತ್ರಿಮಂಡಲದ ಸದಸ್ಯರ ಪಟ್ಟಿಯನ್ನು ಗವರ್ನರಿಗೆ ಒಪ್ಪಿಸಿದರು.

ಮಂತ್ರಿಮಂಡಲದ ಸಚಿವರು—ಶ್ರೀ ಪಿ. ಎಸ್ ಕುಮಾರಸ್ವಾಮಿ ರಾಜಾ (ಮುಖ್ಯ ಸಚಿವರು), ಶ್ರೀಗಳಾದ ಭಕ್ತವತ್ಸಲಂ, ಕೆ. ಮಾಧವಮೆನನ್, ಕೆ. ಚಂದ್ರ ಮೌಳಿ, ಎಚ್. ಸೀತಾರಾಮರೆಡ್ಡಿ, ಬಿ ಗೋಪಾಲರೆಡ್ಡಿ, ಡಾ|| ಟಿ. ಎಸ್. ಸೌಂದರ್, ಶ್ರೀ ಎ ಬಿ ಶೆಟ್ಟಿ, ಶ್ರೀ ಸಂಜೀವರೆಡ್ಡಿ ಮತ್ತು ಶ್ರೀ ಪರಮೇಶ್ವರನ್ (ಹರಿಜನ.) ಇನ್ನು ಕೆಲವು ಜನ ಮಂತ್ರಿಗಳನ್ನು ತೆಗೆದು ಕೊಳ್ಳಬೇಕೆಂದಿದ್ದೇನೆ ಅವರ ಹೆಸರುಗಳು ಇನ್ನಷ್ಟೆ ಯೇ ಪ್ರಕಟವಾಗಲಿವೆ. ಪ್ರಾದೇಶಿಕ ದೃಷ್ಟಿಯಿಂದ ಕೆಲಜನ ಮಂತ್ರಿಗಳನ್ನು ಆರಿಸಿಕೊಳ್ಳಬೇಕಾಗಿದೆ. ಉಪ ಮಂತ್ರಿಗಳನ್ನು ಮತ್ತು ಪಾರ್ಲಿಮೆಂಟರಿ ಕಾರ್ಯದರ್ಶಿಗಳನ್ನು ನೇಮಕಮಾಡುವ ವಿಷಯವೂ ನಷ್ಟ ಗಮನದಲ್ಲಿದೆ. ಎಂದು ಮುಖ್ಯಮಂತ್ರಿಗಳು ಹೇಳಿದರು.

ಇತಿಹಾಸ ಪ್ರಸಿದ್ಧವಾದ ಅಟ್ಲಾಂಟಿಕ್ ಒಪ್ಪಂದ

೨೦ ವರ್ಷಗಳ ಅಟ್ಲಾಂಟಿಕ್ ರಕ್ಷಣ ಒಪ್ಪಂದಕ್ಕೆ ೧೨ ರಾಷ್ಟ್ರಗಳ ಪ್ರತಿನಿಧಿಗಳು ವಾಷಿಂಗ್‌ಟನ್ನಿನಲ್ಲಿ ಸಹಿ ಹಾಕಿದರು.

ಬೆಲ್ಜಿಯಂ ಪ್ರಧಾನಿಗಳೂ ಮತ್ತು ವಿದೇಶಾಂಗ ಸಚಿವರೂ ಆದ ಮಿ|| ಪಾಲ್‌ಹೆನ್ರಿ ಸ್ಪಾಕ್‌ರವರು ಈ ಇತಿಹಾಸಪ್ರಸಿದ್ಧ ಒಪ್ಪಂದಕ್ಕೆ ನೊದಲು ಸಹಿ ಹಾಕಿ ಗೌರವ ಪಡೆದರು ಇತರ ಪ್ರತಿನಿಧಿಗಳು ಅಕ್ಷರಾನುಕ್ರಮದಂತೆ ಸಹಿಹಾಕಿದರು

ಕೆನಡ, ಡೆನ್ಮಾರ್ಕ್, ಫ್ರಾನ್ಸ್, ಐಸ್ಲೆಂಡ್, ಇಟಲಿ, ಲಕ್ಸೆಂಬರ್ಗ್, ನೆದರ್ ಲ್ಯಾಂಡ್ಸ್, ನಾರ್ವೆ, ಪೋರ್ಚುಗಲ್, ಯುನೈಟೆಡ್ ಕಿಂಗ್‌ಡಂ, ಮತ್ತು ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕದ ವಿದೇಶಾಂಗ ಸಚಿವರು ಕ್ರಮವಾಗಿ ಸಹಿ ಹಾಕಿದರು

ಅಚಿಸ್ಸನ್‌ರ ವಿವರಣೆ

೧೧ ಜನ ವಿದೇಶಾಂಗ ಸಚಿವರುಗಳನ್ನು ಅಮೆರಿಕದ ಸ್ಟೇಟ್ ಸೆಕ್ರಟರಿಯವರಾದ ಡೀನ್ ಅಚಿಸನ್ನರು ಸ್ವಾಗತಿಸಿದರು

ಯಾರು ಯುದ್ಧ ಮಾರ್ಗದಲ್ಲಿ ನಡೆಯಲು ಅಪೇಕ್ಷಿಸುತ್ತಾರೋ, ಅವರಿಗೆ ಈ ಒಪ್ಪಂದವು ಎಚ್ಚರಿಕೆ ಕೊಡುತ್ತದೆ ಯಾರು ದಾಳಿ ಮಾಡುವರೋ ಅವರು ದುರ ದೈವ್ಯವಂತರು, ಅವರ ಮೇಲೆ ನಾವು ಒಟ್ಟಾಗಿ ದಾಳಿ ನಡಾಯುವೆವು ಎಂದು ಡೀನ್ ಅಚಿಸನ್ನರು ಹೇಳುತ್ತ ಈ ಸಮಾರಂಭಕ್ಕೆ ಆಗಮಿಸಿದ್ದ ೧೩೦೦ ರಾಯಭಾರ ಕಛೇರಿಗಳ ಅಧಿಕಾರಿಗಳನ್ನು ಸ್ವಾಗತಿಸಿದರು

ಇದು ಕೇವಲ ರಕ್ಷಣ ಒಪ್ಪಂದ

ಎಲ್ಲ ವಿದೇಶಾಂಗ ಸಚಿವರು ಮಾತನಾಡಿದ ನೊಲೆ ಮತ್ತು ಒಪ್ಪಂದಕ್ಕೆ ಸಹಿಹಾಕುವ ನೊದಲು ಅಧ್ಯಕ್ಷ ಟ್ರೂಮನ್ನರು ಭಾಷಣ ಮಾಡಿದರು "ಒಪ್ಪಂದವನ್ನು ದಾಳಿಒಪ್ಪಂದ ಎಂದು ರೆಷ್ಯಾ ಕರೆದಿರುವುದು ಬಲ್ಲ ತಪ್ಪು, ರಷ್ಯಾ ಕೆನ್ನ ದಾಳಿ ಮನೋಭಾವವನ್ನು ಮುಚ್ಚಲು ಈ ರೀತಿ ಹೇಳುತ್ತಿದೆ ಇದೊಂದು ಕೇವಲ ಶಾಂತಿ ಒಪ್ಪಂದ ರಾಷ್ಟ್ರಗಳು ಯುದ್ಧಭೀತಿಯಿಂದ ತೈಸ್ತರಾಗಿರಲು ಇದೊಂದು ಗುರಾಣಿ ಎಂದೂ ಟ್ರೂಮನ್ ಹೇಳಿದರು

ಬ್ರಿಟಿಷರ ಅಂಗೀಕಾರ

ಅಟ್ಲಾಂಟಿಕ್ ಒಪ್ಪಂದಕ್ಕೆ ಬ್ರಿಟಿಷ್ ಜನತೆಯು ಏಕಕಂಠದಿಂದ ಅನುಮತಿ ಕೊಟ್ಟಿತೆ—ಎಂದು ಬ್ರಿಟಿಷ್ ವಿದೇಶಾಂಗ ಸಚಿವರಾದ ಮಿ|| ಬೆವಿನ್ ಹೇಳಿದರು

ಒಪ್ಪಂದದ ರೂಪರೇಷೆಗಳು

ಸಹಿ ಹಾಕಿದ ರಾಷ್ಟ್ರಗಳ ಪ್ರಾದೇಶಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಾಗ ರಾಜಕೀಯ ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗ ಅಥವಾ ಜಗತ್ತಿನ ಯಾವುದೇ ಒಂದು ಭಾಗದ ಪ್ರದೇಶದ ರಕ್ಷಣೆಗೆ ಭೀತಿ ತಲೆದೋರಿದಾಗ ಈ ರಾಷ್ಟ್ರಗಳು ಒಟ್ಟಾಗಿ ಕಲೆತು ಸಮಾಲೋಚನೆ ನಡೆಸಲು ಒಪ್ಪಿಕೊಂಡಿವೆ

ಒಪ್ಪಂದವು ಮೊದಲು ೧೦ ವರ್ಷಗಳ ವರೆಗೆ ಜಾರಿಯಲ್ಲಿರುವುದು ಅನಂತರ ಪುನಃ ವಿಮರ್ಶಿಸಲ್ಪಟ್ಟು ಮತ್ತೆ ೧೦ ವರ್ಷಗಳ ಕಾಲ ಜಾರಿಗೆ ಬರುವುದು

ಅಮೆರಿಕವಲ್ಲದೆ ಬ್ರಿಟನ್ ಮತ್ತು ಫ್ರಾನ್ಸ್‌ಗಳ ಮೇಲೆ ಸೈನಿಕ ಸಹಾಯ ಕೊಡುವ ಭಾರ ಬೀಳುತ್ತದೆಂದು ಸೈನಿಕ ತಜ್ಞರು ಅಭಿಪ್ರಾಯ ಪಡುತ್ತಾರೆ

ಎಂಟು ತಿಂಗಳ ಗುಪ್ತಾಲೋಚನೆ

ಅಟ್ಲಾಂಟಿಕ್ ಒಪ್ಪಂದ ಮಾಡಿಕೆಳ್ಳಲು ೮ ತಿಂಗಳ ಕಾಲ ಗುಪ್ತಾಲೋಚನೆ ನಡೆಯಿತು ಬ್ರಿಟನ್, ಅಮೆರಿಕ, ಫ್ರಾನ್ಸ್, ಬೆಲ್ಜಿಯಂ, ಕೆನಡ, ಲಕ್ಸೆಂಬರ್ಗ್ ಮತ್ತು ಹಾಲೆಂಡ್ ರಾಷ್ಟ್ರಗಳು ಒಪ್ಪಂದಕ್ಕೆ ಸಹಿ ಹಾಕಲು ಒಪ್ಪಿಕೊಂಡವು. ಮಾರ್ಚ್ ೧೮ ನೇ ತಾ|| ದಿನ ಈ ೭ ದೇಶಗಳ ರಾಜಧಾನಿಗಳಲ್ಲಿ ಏಕಕಾಲದಲ್ಲಿ ಒಪ್ಪಂದದ ವಿವರಗಳನ್ನು ಪ್ರಕಟಿಸಲಾಯಿತು. ವಾಷಿಂಗ್‌ಟನ್ನಿನಲ್ಲಿ ಒಪ್ಪಂದಕ್ಕೆ ಸಹಿ ಬೀಳಬೇಕೆಂದು ಆಗಲೇ ನೊಷ್ಟಾಗಿದ್ದಿತು. ಮತ್ತು ನಾರ್ವೆ, ಡೆನ್‌ಮಾರ್ಕ್, ಐಸ್ಲೆಂಡ್, ಪೋರ್ಚುಗಲ್ ಮತ್ತು ಇಟಲಿಗಳು ಒಪ್ಪಂದದಲ್ಲಿ ಭಾಗಿಯಾಗಲು ಆಮಾನ್ಯತೆಗಳನ್ನು ಕಳಿಸಬೇಕೆಂದೂ, ಅವು ಒಪ್ಪಿದರೆ ಅವುಗಳು ಸಹಿ ಹಾಕಲುಹುದೆಂಬಂತೆ ನೊಷ್ಟಾಗಿದ್ದಿತು

ವಿಶ್ವಸಂಘದ ಅಧಿಕಾರವ್ಯಾಪ್ತಿ

ವಿಶ್ವಸಂಘದ ಸದಸ್ಯರಾಷ್ಟ್ರಗಳು ಪ್ರಾದೇಶಿಕ ರಕ್ಷಣ ಒಪ್ಪಂದಗಳನ್ನು ಮಾಡಿಕೊಳ್ಳಬಿಡ್ಡರೆ ಭದ್ರತಾಸಮಿತಿಯು ರಾಷ್ಟ್ರಗಳ ಭದ್ರತೆಯಕ್ಕಾ ಕಾನಾಲಯ ಅಸ ಮರ್ಥವಾಗುತ್ತದೆ ಎಂಬ ಆಂಕವನ್ನು ಅಟ್ಲಾಂಟಿಕ್ ಒಪ್ಪಂದಕ್ಕೆ ಸಹಿಹಾಕಿದ ರಾಷ್ಟ್ರಗಳು ಗುರಿಸಿವೆ.

ವಿಶ್ವಸಂಘದ ಅಧಿಕಾರಕ್ಕೆ ಮನ್ನಣೆ ಕೊಡುವುದಾಗಿ ಈ ಒಪ್ಪಂದ ರಚಿತವಾಗಿದೆ ವಿಶ್ವಸಂಘವು ಎಲ್ಲಿ ತಪ್ಪ ಪ್ರಭಾವವನ್ನು ಬೀರಲು ಸಾಧ್ಯವಿಲ್ಲವೋ ಅಲ್ಲಿ ಇಂತಹ ಒಪ್ಪಂದಗಳು ಅವಶ್ಯಕ ಎಂಬಂತಿವೆ ಅಟ್ಲಾಂಟಿಕ್ ಒಪ್ಪಂದದಲ್ಲಿ ಹೊಗಲಾಗಿದೆ

ಮೈಸೂರು ಸಂಸ್ಥಾನದಲ್ಲಿ ಖನಿಜಸಂಪತ್ತು

ಮೈಸೂರು ಸಂಸ್ಥಾನದಲ್ಲಿ ಅನೇಕ ಕಡೆಗಳಲ್ಲಿ ನಮಿಕುಳ್ಳೆಲ್ ಎಂಬ ಹೊಸ ಖನಿಜವು ಹೇರಳವಾಗಿ ಸಿಗುವುದೆಂದು ಜಿಯಲಾಜಿಕಲ್ ಇಲಾಖೆಯವರು ಸಂಶೋಧಿಸಿದ್ದಾರೆ ಈ ಲೋಹವನ್ನು ಸೌಂಡ್ ಪ್ರೂಫ್ ಮತ್ತು ಫೈರ್‌ಪ್ರೂಫ್ ಕಟ್ಟಡಗಳನ್ನು ಕಟ್ಟುವಾಗ ವಿದೇಸವಾಗಿ ಉಪಯೋಗಿಸಲಾಗುವುದು. ಮೊದಲು ಇದು ತುಮಕೂರಿನಲ್ಲಿ ಮೊರೆಯಿತು ಈ ಲೋಹವು ಚಿನ್ನರಾಯಪಟ್ಟಣ ತಾಲೂಕು, ಅರಸೀಕೆರೆ ತಾಲೂಕು, ಕೃಷ್ಣರಾಜನಗರ ತಾಲೂಕುಗಳಲ್ಲಿ ಅಧಿಕ ಪ್ರಮಾಣದಲ್ಲಿ ಸಿಗುವುದೆಂದು ತಿಳಿದುಬಂದಿದೆ

ತಿದ್ದು ಪಡಿ

ತಾ|| ೨೮-೩-೫೬ ನೆಯ ನಮ್ಮ ಪತ್ರಿಕೆಯಲ್ಲಿ ಹೊಂಬಳ ಹಿರೇಮಠದ ವೀರಭದ್ರಯ್ಯನವರು ತಾ|| ೧೩ ೩-೫೬ ನೆಯ ದಿವಸ ಶಿವಾಧೀನರಾದರೆಂದು, ತಪ್ಪು ಬಿದ್ದಿದೆ ತಾ|| ೧೪ ೩-೫೬ ಭಾಲ್ಗುಣ ಶು|| ೧೫ ಸೋಮವಾರ ಶಿವಾಧೀನರಾದರೆಂದು ಓದಿಕೊಳ್ಳಬೇಕು.

ವ್ಯಾನೇಜರ್

ಸ್ವೀಕಾರ

ಚಿಕ್ಕಮಗಳೂರು ತಾ| ಎಲಗೋಡಿಗೆ ಗ್ರಾಮದ ಮಿ| ಅಕ್ಕೆಗೌಡರ ಅಣ್ಣಂದಿರಾದ ಲೇಟ್ ನಿರ್ವಾಣಗೌಡರ ಜ್ಯೇಷ್ಠಪುತ್ರ ಎ. ಎಸ್ ಭಾಗಣ್ಣ ಬಸವೇಗೌಡ ಯಾನೆ ಶಂಕರಗೌಡನೆಂಬ ವರಪಿಗೆ ಕಾರಾದ ಹಳ್ಳಿ ಸಿದ್ದೇಗೌಡರ ತಮ್ಮ ಲೇಟ್ ನಂಜೇಗೌಡರ ಜ್ಯೇಷ್ಠ ಪುತ್ರಿ ಚಿ|| ಸೌ|| ನಂಜಮ್ಮನವ್ವನ್ನು ಕೊಟ್ಟು ತಾ|| ೧೦-೩-೫೬ ನೇ ದಿವಸ ನೆರವೇರಿದ ಏವಾಹ ಸಮಯದಲ್ಲಿ ಪ್ರಭಾವೋಪಣಕ್ಕೋಸ್ಕರ ವಧೂವರರು ಸಮರ್ಪಿಸಿದ 4 ರೂ. ಗಳು ಅಲ್ಲೂರು ಗ್ರಾಮದ ಮಿ|| ಬಿ ಪಿ ಮಲ್ಲಪ್ಪಶೆಟ್ಟರ ದ್ವಾರಾ ತಲುಪಿರುತ್ತವೆ

ಕೊಪ್ಪಳ ಜಲ್ಲಾ ಮಂಗಳೂರು ಅರಳೆಲಿಮಠದ ಪರಮತಪೋನಿಧಿ ಕೈ|| ಶ್ರೀ ಪಟ್ಟದವ್ವಾಮಿಗವರ ಪುಣ್ಯದಿನೋತ್ಸವ ಸಮಾರಂಭ ಸಮಯದಲ್ಲಿ ಸದರಿ ಮಠದ ಪಟ್ಟಾಧ್ಯಕ್ಷ ಶ್ರೀ ಹಡಪದರಾಚಿವಾಹಯರು ಪ್ರಭಾವೋಪಣಕ್ಕೋಸ್ಕರ 1 ರೂ. ನ್ನೆ ಸಮರ್ಪಿಸಿ ಳಕುಹಿಸಿದ್ದಾರೆ.

ವಿಜಾಪುರ ಡಿ|| ಇಂಗಳೇಶ್ವರ ಗ್ರಾಮದ ಹಿರೇಮಠದಲ್ಲಿ ಯುಗಾದಿಯ ದಿವಸ ವಾರ್ಷಿಕಾಲಯವು ಸ್ಥಾಪಿತವಾದ ಸಮಯದಲ್ಲಿ ಸದರಿ ಮಹಾಧಿಪತಿಗಳು ಪ್ರಭಾವೋಪಣಕ್ಕೋಸ್ಕರ 1 ರೂ. ನ್ನು ಸಮರ್ಪಿಸಿ ಳಕುಹಿಸಿದ್ದಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿಶ್ಕ್ಷೇಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶಿವಾದ್ವೈತಮಂಜರಿ

ಈ ಗ್ರಂಥವು ನಿರಂಜನ ಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಈ ಗ್ರಂಥವನ್ನು ಕಾಶ್ಮೀರ ದೇಶದ ಸ್ವಪ್ರಭಾನಂದಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿರುವರು ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹು ಕಠಿನವಿದ್ದುದರಿಂದ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೬೩ ಪುಟಗಳಷ್ಟಾಗಿದೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡ ಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನು ದಯಪಾಲಿಸಿದರು ಈ ಮಹಾಗ್ರಂಥವು ಬಹು ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿದ್ದು ಸುಂದರವಾದ ಬೈಂಡಿನಿಂದೊಡಗೂಡಿದೆ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ವೀರಶೈವ ಸಿದ್ಧಾಂತಸ್ವರೂಪವನ್ನು ತಿಳಿದು ಧನ್ಯರಾಗಬೇಕು ಈ ಮಹಾಗ್ರಂಥದ ಬೆಲೆ ೮ ರೂಪಾಯಿ.

ಮಾಹೇಶ್ವರ ದೀಕ್ಷಾವಿಧಿ

(೩ನೆಯ ಆವೃತ್ತಿ)

ಈ ಮಾಹೇಶ್ವರ ದೀಕ್ಷಾವಿಧಿಯು ಈ ಮೊದಲು ೨ ಸಾರೆ ಮುದ್ರಿತವಾಗಿದೆ ಆ ಪುಸ್ತಕಗಳಲ್ಲಿ ಕೆಲವು ವೇದಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಈ ಸಾರೆ ಯಸ್ಮೈದ ಮತ್ತು ಯಜುರ್ವೇದಗಳನ್ನೆಲ್ಲಾ ಚನ್ನಾಗಿ ಪರಿಶೀಲಿಸಿ ಒಂದು ಅಕ್ಷರವೂ ಸಹ ತಪ್ಪಿಲ್ಲದಂತೆ ಮುದ್ರಿಸಲಾಗಿದೆ ಆದುದರಿಂದ ಶ್ರೀಪಟ್ಟಚಂದ್ರಾಧಿಕಾರಿಗಳು ಮತ್ತು ಗುರುವರ್ಗದವರು ಈ ಮೊದಲು ಮುದ್ರಿಸಲ್ಪಟ್ಟಿರುವ ದೀಕ್ಷಾವಿಧಿಯಲ್ಲಿರುವಂತೆ ಮಂತ್ರಗಳನ್ನು ಪಠಿಸದೆ, ಅಶುದ್ಧವಾಗಿ ಮುದ್ರಿತವಾಗಿರುವ ಈ ದೀಕ್ಷಾವಿಧಿಯನ್ನು ತರಿಸಿಕೊಂಡು, ಇದರಲ್ಲುಕ್ತವಾಗಿರುವಂತೆ ಮಂತ್ರಗಳನ್ನು ಪಠಿಸಿ ದೀಕ್ಷಾಕರ್ಮವನ್ನು ಮಾಡಿ ಶಿವಪ್ರೀತಿಗೆ ಪಾತ್ರರಾಗಬೇಕೆಂದು ಆಶಿಸುತ್ತೇವೆ ಬೆಲೆ ೧ ರೂ.

ಪಂಚಾಚಾರ್ಯರ ಪ್ರಾಚೀನತ್ವ

ಶ್ರೀಮದ್ವೀರಶೈವಮಹಾಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ವಿಷಯವು ತ್ರಿ ಶ ೧೨ ನೆಯ ಶತಮಾನಕ್ಕಿಂತ ಪೂರ್ವದ ಶಾಸನಗಳಲ್ಲಿ ಎಲ್ಲಿಯೂ ಕಂಡುಬರುವುದಿಲ್ಲವೆಂದು ಕೆಲಜನ ಮಹಾಶಯರು ಸರ್ವಜ್ಞ ಮೂರ್ತಿಗಳಂತೆ ಸಾರುತ್ತಿರುವುದು ಎಲ್ಲರಿಗೂ ತಿಳಿದೇ ಇದೆ ಇವರ ಈ ವಿಧವಾದ ವಾದವು ಕೇವಲ ಭ್ರಮಾತ್ಮಕವಾದುದೆಂದು ನಿರ್ಣಯಿಸಿ, ಪ್ರಾಚೀನಶಾಸನಾದಿ ಪ್ರಮಾಣಗಳ ದ್ವಾರಾ ಶ್ರೀಮತ್ಪಂಚಾಚಾರ್ಯರ ಪ್ರಾಚೀನತ್ವದ ಬಗ್ಗೆ ಒಂದು ಗ್ರಂಥವನ್ನು ಬರೆದು ಪ್ರಕಟಿಸಬೇಕೆಂದು ಅನೇಕಜನ ಗುರುಭಕ್ತರು ಪ್ರಾರ್ಥಿಸಿಕೊಂಡ ಮೇರೆಗೆ, **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಅಮೂಲ್ಯವಾದ ಈ ಗ್ರಂಥರತ್ನವನ್ನು ರಚಿಸಿದ್ದಾರೆ ಈ ಗ್ರಂಥದ ಯೋಗ್ಯತೆಯು ಎಷ್ಟು ಮಹತ್ವಕರವಾಗಿರುವುದೆಂಬುದು ಇದನ್ನು ಓದಿನೋಡಿದಮೇಲೆ ವಾಚಕರಿಗೆ ವೇದ್ಯವಾಗುವುದು

ಈ ಗ್ರಂಥದಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವವೂ, ಆ ಮಹಾಚಾರ್ಯರಿಂದ ಸ್ಥಾಪಿತವಾದ ಲಿಂಗಧಾರಣದ ಪ್ರಾಚೀನತ್ವವೂ, ಪರಮಪೂಜ್ಯರಾದ ಜಂಗಮರ ಪ್ರಾಚೀನತ್ವವೂ ಅನೇಕ ಪುರಾತನ ಶಾಸನ ಪ್ರಮಾಣಗಳಿಂದ ಪ್ರತಿಪಾದಿಸಲ್ಪಟ್ಟಿರುವುದು ಈ ಬಗ್ಗೆ **ಕನ್ನಡ ದೇಶದಲ್ಲಿರುವ** ಚಿತ್ರದುರ್ಗ ತಾ॥ ಜೀವಿಹಳ್ಳಿ, ಶಿಕಾರಿಪುರ ತಾ॥ ಬೆಳಗಾಂವಿ, ಹರಪನಹಳ್ಳಿ ತಾ॥ ಬಾಗಳ್ಳಿ, ಹೂವಿನಹಡಗಲಿ ತಾ॥ ಸೋಗಿ, ಬಳ್ಳಾರಿ ಡಿ॥ ಆಲೂರು ತಾ॥ ರಾಮದುರ್ಗ, **ತಲಗು ದೇಶದಲ್ಲಿರುವ** ಕಡಪಾ ಡಿ॥ ದೊಂಗಲಸಾನಿ, ಅನಂತಪುರ ಡಿ॥ ತಾಡಪತ್ರಿ, ಕರ್ನೂಲ್ ಡಿ॥ ಪಾಣ್ಯಂ, ವಿಜಯವಾಡ, ಜೆಪ್ಪೋರ್ಲ್, **ತಮಿಳು ದೇಶದಲ್ಲಿರುವ** ಮಾಮಲ್ಲಪುರಂ, ಸಾಲವಂಕುಪ್ಪಂ, ಶಿಚಿತಾಪಳ್ಳಿ, ಕಾಂಚಿ, ವಾಯಲೂರು ಮೊದಲಾದ ಗ್ರಾಮಗಳಲ್ಲಿರುವ ಪ್ರಾಚೀನ ಶಿಲಾಶಾಸನಗಳು ಉದಾಹರಿಸಲ್ಪಟ್ಟಿರುವವು ಅಲ್ಲದೆ ಪಂಚಪೀಠಗಳ ಪ್ರಾಚೀನತ್ವದ ಬಗ್ಗೆ **ಬಾಂಬೆ ಹೈಕೋರ್ಟ್, ಅಲಹಾಬಾದ್ ಹೈಕೋರ್ಟ್** ಮತ್ತು **ಮದ್ರಾಸ್ ಹೈಕೋರ್ಟ್**ಗಳ ತೀರ್ಮಾನಗಳೂ, ಪರಮತೀಯರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿರುವ **ಮಹಾಭಾರತ, ಸೌರಪುರಾಣ, ಕಾಶೀಖಂಡ, ಕೇದಾರಖಂಡ** ಮೊದಲಾದ ಪ್ರಾಚೀನ ಗ್ರಂಥಗಳ ಪ್ರಮಾಣಗಳೂ, ಮಿ॥ ಸಿ. ಪಿ. ಬ್ರೌನ್, ಮಿ॥ ಇ. ಥರ್ಸ್ಟನ್, ಮಿ॥ ಜೆ. ಎಸ್ ಫಾಕ್ಸ್‌ಹಾರ್ ಮೊದಲಾದ ಸುಪ್ರಸಿದ್ಧ ಯೂರೋಪಿಯನ್ನರ ಗ್ರಂಥಪ್ರಮಾಣಗಳೂ, ಡಾ॥ ಆರ್. ಜಿ. ಭಾಂಡಾರಕರ್ ಇವರೇ ಮೊದಲಾದ ಅನೇಕಜನ ಸುಪ್ರಸಿದ್ಧಭಾರತೀಯರು ಬರೆದಿರುವ ಗ್ರಂಥಪ್ರಮಾಣಗಳೂ ಉದಾಹರಿಸಲ್ಪಟ್ಟಿರುವವು ಪಂಚಾಚಾರ್ಯರೆ ಸರ್ವಸ್ವನೇ ಈ ಗ್ರಂಥದಲ್ಲಿ ಆಡಕನಾಗಿರುವದು ಸೀಕಾಳಮಾಸಿ ಗಳಗೆಂತೂ ಈ ಗ್ರಂಥವು ಪ್ರಾಣಸ್ವರೂಪವಾಗಿರುವದು ಸಂದರ್ಭಾನುಸಾರವಾಗಿ ಎಲ್ಲಲ್ಲಿ ಪ್ರಾಚೀನತಾಸೂಚಕವಾಗಿಗಳ ೧೪ ಫೋಟೋಗಳು ಮುದ್ರಿಸಲ್ಪಟ್ಟಿರುವವು

ಪಂಚಪೀಠಗಳ ಬಗ್ಗೆ ಅನೇಕ ಮಹತ್ವ ವಿಷಯಗಳಿಂದೊಡಗೂಡಿ ಸಚಿತ್ರವಾಗಿಯೂ ಸರ್ವಾಂಗಸುಂದರವಾಗಿಯೂ ಮುದ್ರಿತವಾಗಿರುವ ಈ ಗ್ರಂಥರತ್ನವನ್ನು ಸರ್ವರೂ ತರಿಸಿಕೊಂಡು, ಎಂದೂ ಕೇಳದ ಮತ್ತು ನೋಡದ ಅಮೂಲ್ಯವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದಾಶಿಸುತ್ತೇನೆ ಬೆಲೆ ೧ ರೂ.

ವೀರಶೈವರತ್ನ

(೫ನೆಯ ಮುದ್ರಣ)

ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ವಿರಚಿಸಿರುವ ಈ ಗ್ರಂಥವನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಇದರ ಮಹತ್ವವನ್ನು ಮುಕ್ತಕಂಠದಿಂದ ಹೊಗಳುತ್ತಿರುವರು ವೀರಶೈವ ಮತದ ಸರ್ವಸ್ವನೇ ಈ ಗ್ರಂಥದಲ್ಲಿ ಅಡಗಿರುವುದು ಇದರಲ್ಲಿ ಪ್ರತಿಪಾದಿತವಾಗಿರುವ ವಿಷಯಗಳ ಮಹತ್ವವನ್ನು ವರ್ಣಿಸಲಸಾಧ್ಯವಾಗಿರುವುದು ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದಕ್ಕೆ "ವೀರಶೈವರತ್ನ" ಎಂಬ ನಾಮವನ್ನಿತ್ತಿರುವರು ಈ ಗ್ರಂಥವು ಈಗ ೫ ಸಾರೆ ಮುದ್ರಿಸಲ್ಪಟ್ಟಿರುವುದರಿಂದ ಈ ಗ್ರಂಥದ ಮಹತ್ವವು ಎಷ್ಟರಮಟ್ಟಿಗೆ ಗಿರಬಹುದೆಂಬುದನ್ನು ಬೇರೆ ವರ್ಣಿಸಬೇಕಾಗಿಲ್ಲ. ಈ ಗ್ರಂಥವು ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೬೦ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಇದರಲ್ಲಿರುವ ಅಮೂಲ್ಯ ವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇನೆ ಬೆಲೆ ೨ ರೂಪಾಯಿ.

ವೈದಿಕ ಶಿವಪೂಜಾವಿಧಿ

(೨ನೆಯ ಮುದ್ರಣ)

ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ, ಆದರೆ ಮಾಧ್ವಕರಿಗೆ ವೈದಿಕ ಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧ ಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ಇಲ್ಲಿಯವರೆಗೆ ಮುದ್ರಿತವಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ ಈ ಶಿವಪೂಜಾದಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಮಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವ ಪ್ರಸಂಚಿಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಶಿವಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದು ವಿವರವಾಗಿ ತೋರಿಸಲ್ಪಟ್ಟಿದೆ ಈ ಶಿವಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀದೇವಿ ನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವಿ ನಾಮಾವಳಿ, ಪಂಚಮುಖಸ್ಯನಿನಾಮಾವಳಿ, ವಿಶ್ವೇಶ್ವರ ನಾಮಾವಳಿ, ಶ್ರೀಸೂರಾಚಾರ್ಯರ ನಾಮಾವಳಿಗಳು ನಾನಾವಿಧ ಶಿವಸ್ತೋತ್ರಗಳು, ದೇವತಾಸ್ತೋತ್ರಗಳು ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ವೀರಶೈವರಿಗೆ ಕಲ್ಪವೃಕ್ಷದಂತಿರುವದು ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. ಬೆಲೆ ೧ ರೂ. ೪ ಆಣೆ.

ಮ್ಯಾನೇಜರ್.

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು.

Edited Printed and Published by Pandit Kashunatha Shasthi at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾವತಸಂಭವಾತಿಶಯಿತಿಶ್ರೀ ಪಂಚಾಸ್ಯಪೀಠಾಧಿಪರ್ । ಪಂಚಚ್ಛೇದವಿನಾಶಕರ್ ಪರಪರಶ್ರೀಹುಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಲಸತ್ಪಂಚಾಕ್ಷರೀಮೋದಧರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀದೇಳಮುಂ ॥

ಶ್ಯೆಳದವರಿಗೆ ೩ ರೂ. ೪ ಆಣೆ ಪರಶ್ಯೆದವರಿಗೆ ೩ ರೂ ವಿ ಪಿ. ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೮ನೇ ಏಪ್ರಿಲ್ ೧೯೪೪ [ಸಂಚಿಕೆ ೪೪

ಮೈಸೂರು ಇಡೀ ವಿಶ್ವದಲ್ಲಿ ಖ್ಯಾತಿಗಳಿಸಿದೆ

ಸರ್ ಟಿ ವಿಜಯರಾಘವಾಚಾರ್ಯರವರ ಪ್ರತಿಜ್ಞೆ

ರಾಜಧಾನಿಯಲ್ಲಿ ನಡೆದ ಅಂತರರಾಷ್ಟ್ರೀಯ ಅರಣ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಸರ್ ಟಿ ವಿಜಯರಾಘವಾಚಾರ್ಯರವರು ಆ ನೇ ತಾ॥ ರಾತ್ರಿ ಆಕಾಶವಾಣಿ ಪ್ರಸಾರ ಕೇಂದ್ರದಿಂದ ಭಾಷಣ ಮಾಡುತ್ತ " ಮೈಸೂರು ಸಂಸ್ಥಾನದ ಸಿವಿಲ್ ಸರ್ವಿಸ್ ಉತ್ಕರ್ಷವಾಗಿದೆ ನಾನು ೧೪೯೭ ರಲ್ಲಿ ಮೈಸೂರಿಗೆ ಬಂದಿದ್ದಾಗ್ಗೆ ಸಿವಿಲ್ ಸರ್ವಿಸ್ ಪರೀಕ್ಷೆಗೆ ಕುಳಿತಿದ್ದೆನು ನನಗೆ ತೇರ್ಗಡೆಯಾಗದಿದ್ದರೂ ನೆನಗಿಂತಲೂ ಉತ್ತಮ ಮಟ್ಟದವರಾದವರು ತೇರ್ಗಡೆ ಹೊಂದಿದರು. ದಿವಾನ್ ರಂಗಾಚಾರ್ಯ, ಶ್ರೀ ಕೆ ಶೇಷಾದ್ರಿ ಐಯ್ಯರ್, ಮೋಕ್ಷಗುಂಡಂ ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಮುಂತಾದ ಗಣ್ಯವ್ಯಕ್ತಿಗಳ ಮೇಧಾಶಕ್ತಿ, ಆಡಳಿತ ಚತುರತೆಗಳಿಂದಲೇ ಮೈಸೂರು ಇತರರಿಗೆ ಮಾರ್ಗದರ್ಶಕವಾಗಿದೆ ಇಡೀ ಭಾರತದಲ್ಲೇ ? ವಿಶ್ವದಲ್ಲೇ ಖ್ಯಾತಿಗಳಿಸಿದೆ ಇಂದು ಮೈಸೂರಿನವರಿಗೆ ಹೊಳೆದಷಂತರ ನಾಳೆ ದಿಹಲಿಯಲ್ಲಿ ಅದನ್ನು ನೋಡುತ್ತಾರೆ.

ಇಲ್ಲಿ ಅರಣ್ಯ ಸಮ್ಮೇಳನವು ಯಶಸ್ವಿಯಾಗಿ ಜರುಗಲು ನೀವೂ, ಭಾರತ ಸರಕಾರದವರೂ ಮಾಡಿದ ವ್ಯವಸ್ಥೆಗಳು ಬಹಳ ಸ್ತುತ್ಯರ್ಹವಾಗಿವೆ ಹಿಂದೊಮ್ಮೆ ಸಂಪತ್ತು ಮೈದ್ಧಿಯಿಂದ ಕೂಡಿದ್ದ ಗ್ರೀಕ್, ರೋಂ ಚಕ್ರಾಧಿಪತ್ಯ ದಲ್ಲಿ ಅರಣ್ಯಗಳನ್ನು ಕಡಿದು ಜನರು ದುರುಪಯೋಗ ಪಡಿಸಿದರು. ಈಗ ಅಲ್ಲಿಯ ಭೂಸಾರವೆಲ್ಲ ಜಾಲಾಗಿ ಹೋಗಿ ಆ ಪ್ರದೇಶವು ಬೆಂಡಾಗಿದೆ ನಮ್ಮ ನಾಡಿನಲ್ಲಿ ಹಾಗಾಗಬಾರದು " ಎಂದು ತಿಳಿಸಿದರು

ಮೈಸೂರು ದೇಶದ ಆಡಳಿತದ ಬಗ್ಗೆ ಶ್ರೀ ವಿ. ಪಿ. ಮೆನನ್‌ರವರ ಪ್ರಶಂಸೆ!

" ಮೈಸೂರಿನ ಭವಿಷ್ಯವನ್ನು ಕುರಿತು ಸರದಾರ್ ಪಟೇಲರೂ ನಾನು ಕೆಲವು ದಿನಗಳ ಹಿಂದೆ ಸ್ವತಃ ವಿಮರ್ಶೆ ನಡೆಸಿದೆವು ಕಳೆಕ್ಕಳ್ಳ ೧೦ ವರ್ಷಗಳಿಬೆಗಾದರೂ ಮೈಸೂರಿನ ಗೋಜಿಗೆ ಹೋಗದೆ, ಆದರ ಪಾಡಿಗೆ ಅದನ್ನು ಬಿಟ್ಟುಬಿಡಬೇಕೆಂದು ನಾವು ತೀರ್ಮಾನಿಸಿದ್ದೇವೆ ಅದರ ಗಡಿಗಳನ್ನು ಅಭಿವೃದ್ಧಿಯನ್ನೆಲ್ಲ ಬಿಡಲಾಯಿಸಲು ಈಗ ಯಾವುದೇ ಬಗೆಯ ಪ್ರಯತ್ನ ಮಾಡಿದರೂ ಅದರಿಂದ ಉಗ್ರವಾದ ಭಾಷಾವಾರು ತಿಕ್ಕಾಟ ಪ್ರಾರಂಭವಾಗುತ್ತದೆ. ಏನೇ ಆಗಲಿ ಅಂತಹ ಪರಿಸ್ಥಿತಿಯನ್ನು ತಪ್ಪಿಸಬೇಕೆಂದು ಕೇಂದ್ರ ಸರಕಾರವು ಸಂಕಲ್ಪಮಾಡಿದೆ" ಎಂಬುದಾಗಿ ಸಂಸ್ಥಾನಗಳ ಖಾಯಿಲೆಯ ಸಲಹಾಕಾರರಾದ ಶ್ರೀ ವಿ. ಪಿ. ಮೆನನ್‌ರವರು ಜನವಾಣಿ ವಿಶೇಷ ಪ್ರತಿನಿಧಿಗಳಿಗೆ ಇತ್ತ ಛೇಟಿಯಲ್ಲಿ ತಿಳಿಸಿದರು.

ಮೈಸೂರಿನ ಪ್ರಭುತ್ವವನ್ನು ಕುರಿತು ಪ್ರಶಂಸೆ

ಕರ್ನಾಟಕ ಪ್ರಾಂತ್ಯ ರಚನೆಯ ಸಂಬಂಧದಲ್ಲಿ ಮೈಸೂರಿನ ಭವಿಷ್ಯ ವಿನಾಗಿರಬೇಕು ? ಅದನ್ನು ಸುತ್ತ ಮುತ್ತಲ ಪ್ರದೇಶಗಳೊಡನೆ ಏಕ್ಯಗೊಳಿಸಬೇಕೋ ಹೇಗೆ ? ಎಂಬ ಪ್ರಶ್ನೆಯನ್ನು ಕುರಿತಿಪ್ಪತ್ತ ೧೦ ವರ್ಷ ಗಳಾಲ ವಿಮರ್ಶೆಗೆ ತೆಗೆದುಕೊಳ್ಳುವುದಿಲ್ಲವೆಂದು ಅವರು ಸ್ಪಷ್ಟಪಡಿಸಿದರು

' ಸಂಸ್ಥಾನಗಳಲ್ಲೆಲ್ಲ ಮೈಸೂರು ಹೆಸರುವಾಸಿಯಾಗ ಮತು ಅಲ್ಲಿ ದಕ್ಷತೆಯಿಂದ ಕೂಡಿದ ಪ್ರಭುತ್ವ ವ್ಯವಸ್ಥೆ ಇದೆ ಆಡಳಿತದ ದಕ್ಷತೆಯಲ್ಲಿ ಅದು ಯಾವ ವ್ಯಾಂತ್ಯೆ ಗಳಿಗೂ ಹಿಂದೆ ಬೀಳುವುದಾಗಿಲ್ಲ ಹೀಗಿರುವಲ್ಲಿ, ಮೈಸೂರಿನಲ್ಲಿ ಮತ್ತು ಅದರ ಸುತ್ತ ಭಾಷಾವಾರು ಪ್ರೆಕ ಮೈಕ್ಕೆ ಎಡೆ ಕೊಟ್ಟು ಮೈಸೂರನ್ನು ದುರ್ಬಲಗೊಳಿಸು ವುದು ದೊಡ್ಡ ತಪ್ಪಾದೀತು ' " ಎಂಬುದಾಗಿ ಶ್ರೀ ಮೆನನ್‌ರವರು ಸೂಚಿಸಿದರು

ಮೈಸೂರು ದಕ್ಷಿಣ ಭಾರತದ ಹೃದಯದಂತಿದೆ

ಮೈಸೂರು ಕೈಗಾರಿಕೆಯಲ್ಲಿ ಶೀಘ್ರವಾಗಿ ಅಭಿವೃದ್ಧಿ ಹೊಂದುತ್ತಿದೆ ಅದು ದಕ್ಷಿಣ ಭಾರತಕ್ಕೆ ಹೃದಯ ದಂತಿದೆ ಆದ್ದರಿಂದ ಮೈಸೂರಿನ ಆಡಳಿತವನ್ನು ಬಲ ಪಡಿಸಿ, ಅದು ಹೆಚ್ಚು ವಸ್ತುತೆಯಿಂದ ಕೆಲಸ ಮಾಡುವಂತೆ ಮಾಡುವುದರಲ್ಲಿ ಕೇಂದ್ರಸರಕಾರವು ಆಸಕ್ತವಾಗಿದೆ

ಕಳೆದ ಎರಡು ವರ್ಷಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಮೈಸೂರಿನ ಪ್ರಭುಗಳೂ ಮತ್ತು ಪ್ರಜಾನಾಯಕರೂ ತೋರಿಸಿದ ದೇಶ ಪ್ರೇಮ ಮತ್ತು ಸಹಕಾರದ ಮನೋ ಭಾವನೆಗಾಗಿ ಅವರನ್ನು ಮುಕ್ತಕಂಠದಿಂದ ಪ್ರಶಂಸಿಸಿ ದರು

ಮೈಸೂರಿನ ರಾಜಕೀಯ ಭದ್ರತೆಗೂ ಮತ್ತು ಆಡಳಿತ ಶಕ್ತಿಗೂ ಇದೇ ಮೂಲವೆಂದು ತಾವು ಭಾವಿಸಿ ರುವುದಾಗಿ ಶ್ರೀ ಮೆನನ್‌ರವರು ತಿಳಿಸಿ, ಮೈಸೂರಿನ ಸಿವಿಲ್ ಸರ್ವಿಸ್ ಅಧಿಕಾರಿಗಳ ಯೋಗ್ಯತೆಯನ್ನು ಕುರಿತು ಪ್ರಶಂಸೆ ಮಾಡಿದರು ಹೊಸದಾಗಿ ರೂಪು ಗೊಳಿಸುವ ಸಂಸ್ಥಾನಗಳ ಯೂನಿಯನ್‌ಗಳಲ್ಲಿ ಆಡಳಿತ ಯಂತ್ರಗಳನ್ನು ಪುನರ್ವ್ಯವಸ್ಥೆಗೊಳಿಸಲೋಸುಗ ಕೇಂದ್ರ ಸರಕಾರದವರು ಮೈಸೂರಿನಿಂದ ಹಲವು ಅಧಿಕಾರಿಗಳನ್ನು ಎರವಲು ಪಡೆಯಬಹುದೆಂದು ತಿಳಿಸಿದರು

ಹಿಂದಿಯೇ ರಾಷ್ಟ್ರಭಾಷೆಯಾಗಬೇಕು

ಉತ್ತರ ಭಾರತದ ಜನರು ಹಿಂದಿಯು ರಾಷ್ಟ್ರಭಾಷೆ ಯಾಗಬೇಕೆಂದು ಹಾತುರರಾಗಿದ್ದಾರೆಂದೂ, ಈ ವಿಷಯ ವಾಗಿ ದಕ್ಷಿಣ ಭಾರತದ ಜನರಲ್ಲಿ ಸರಿಯಾಗಿ ತಿಳುವಳಿಕೆ ಉಟುಮಾಡಬೇಕೆಂದೂ ಅದಕ್ಕಾಗಿ ತಾವು ದಕ್ಷಿಣ ಭಾರತದಲ್ಲಿ ಪ್ರವಾಸ ಕೈಗೊಳ್ಳುವುದಾಗಿಯೂ ಅಖಿಲ ಭಾರತ ಹಿಂದೀ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಸೇಠ್ ಗೋವಿಂದದಾಸರು ತಿಳಿಸಿದ್ದಾರೆ.

ಶಿನಳಹಾಶಾಲಕ್ಷೇಪ

ನೂತನ ವರ್ಷದ ನಿಮಿತ್ತವಾಗಿ ಶಿವಮೊಗ್ಗಾ ಜಿ॥ ಹಾರನಹಳ್ಳಿ ಗ್ರಾಮದ ಪೇಟೆ ಶ್ರೀಬಸವೇಶ್ವರ ದೇವಾ ಲಯದಲ್ಲಿ (ತಾ॥ ೩೧-೩ ೧೯೪೪) ಗುರುವಾರ ರಾತ್ರಿ ಕೀರ್ತನಕೇಸರಿ, ಕವಿರತ್ನ ವೇ॥ ಗುಬ್ಬೀ ಶಿವರುದ್ರಶಾಸ್ತ್ರಿ ಗಳವಂದ " ಪುಸ್ತವೇಣಿ " ಎಂಬ ಶಿವಸಂಕೀರ್ತನೆಯು ಸಿದ್ಧಾಪುರದ ಜಯಕರ್ನಾಟಕ ನಾಟ್ಯಸಂಘದ ಬಸ ವಣ್ಣನವರ ಫಿಟ್ಟು, ನೇಮಿಚಿ ದೊಡ್ಡಬಸಪ್ಪನವರ ಹಾರ್ಮೋನಿಯಂ, ಸಾಸಿವೆಹಳ್ಳಿ ಮುರಿಗಪ್ಪನವರ ತಬಲಾ, ಹಕ್ಕಬಾದ್ಯಗಳೊಡನೆ ನಡೆದು ಶ್ರೀಪುರುಷರಾದಿ ಯಾಗಿ ನೆರೆದ ಸಮಸ್ತ ಜನರು ಶ್ರವಣಾನಂದದ ತುದಿಲ ರಿದರು ಈ ಕಾರ್ಯಕ್ಕಾಗಿ ಸಹಾಯವನ್ನು ನೀಡಿದ ಗ್ರಾಮದ ಮಹಾಜನರಿಗೂ, ಈ ಕಾರ್ಯವನ್ನು ಯಶ ಸ್ವಿಯಾಗಿ ನೆರವೇರಿಸಿದ ಮಿ॥ ರಾ॥ ಮುಮ್ಮಿ ವಿರುಪಣ್ಣ ನವರಿಗೂ, ಬಂಡಿಗಡಿ ಸಾ॥ ನಾಗಪ್ಪಶೆಟ್ಟಿರಿಗೂ, ಮಲೆ ಬೆನ್ನೂರು ಪರಮೇಶ್ವರಪ್ಪನವರಿಗೂ, ಲಕ್ಷ್ಮಣಾವ್ ಇವರಿಗೂ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುವ,

ಓರ್ವ ಪ್ರತ್ಯಕ್ಷದರ್ಶಿ

ಯುಗಾದಿಸಮಾರಂಭ, ಯರಹಾಲ

ಈ ಸಂವತ್ಸರದ ಯುಗಾದಿಯ ಕಾರ್ಯಕ್ರಮವು ಈ ಗ್ರಾಮದಲ್ಲಿ ವೈಭವದಿಂದ ನಡೆಯಿತು. ಮಾನವ ಜೀವನದಲ್ಲಿ ಸಹಜವಾಗಿ ಬಂಬೊದಗುವ ಸುಖದುಃಖ ಗಳನ್ನು ಹಿರಿದು ಕಿರಿದಿನ್ನೆದೆ ಹಗ್ಗದೆ ದೇವದತ್ತ ಪ್ರಸಾದವೆಂದು ಭಾವಿಸಿ, ಆತ್ಮಸಂತೋಷದಿಂದ ಅನು ಭವಿಸುವುದೇ ಯುಗಾದಿಯ ದಿನ ಮೆಲ್ಲುವ ಬೇವುಬೆಲ್ಲ ಗಳ ಸಂಕೇತವಾಗಿದೆ ಮಾನವೀವನು ಸಮುದ್ರಮಥನ ದಿಂದುಂಟಾದ ಬೆಣ್ಣೆಅಮೃತ ವನ್ನು ಸಮಸ್ತ ದೇವಾಸುರರ ಪ್ರಾರ್ಥನೆಯಂತೆ ಕಂಬದಲ್ಲಿ ಧರಿಸಿ ನೀಲಕಂಠನಾದ ಮಹಿನವಿಮು ಎಂಬುದಾಗಿ ಅದಿನ ಸಾಯಂಕಾಲ ಸೇರಿದ ಸಭೆಯಲ್ಲಿ ಮೊರಬದ ಜಮೆಗಾರದ ಶ್ರೀಗಂಗಾಧರಶಿವಾಚಾರ್ಯರು ಬೋಧಿಸಿ ದರು ಮಗುದಿನ ಶ್ರೀಹುಣಸೀಗಟ್ಟೆ ಪಟ್ಟಾಧ್ಯಕ್ಷರು ನೀತಿ, ಧರ್ಮ ಇವುಗಳ ಬಗ್ಗೆ ಸಮಂಜಸವಾಗಿ ಉಪ ದೇಶಿಸಿದರು ಈ ಮಂಗಲಕಾರ್ಯಕ್ಕೆ ಶ್ರೀಮಂತ ಅಪ್ಪಾಜಾಹೇಬ ಇನಾಮದಾರ ನೇಗಿನಹಾಳ ಮತ್ತು ಶ್ರೀಮಾನ್ ಚಂದ್ರಶೇಖರಪ್ಪನವರು ವೈಲವಾಡ, ಮೊರಬದ ಶಿವಬಸಪ್ಪನವರು, ಮೊರಬದ ಸೋಮಪ್ಪ ನವರು, ನೇ॥ ಶಿವಬಸಯ್ಯನವರು, ಶಿವಲಿಂಗಪ್ಪ ಅಂಗಡಿ ನೇಗಿನಹಾಳ ಮೊದಲಾದವರು ಆಗಮಿಸಿದ್ದರು

ಮೇಲ್ಕಂಡ ಗ್ರಾಮದ ಭಕ್ತಸಮೂಹಕ್ಕೆ ಶ್ರೀಜಗದಾ ಚಾರ್ಯರು ಮಂಗಲವನ್ನು ಆಶಂಸ್ಸಿಸಲೆಂದು ಪ್ರಾರ್ಥಿಸುತ್ತೇನೆ.

ವಿರೂಪಾಕ್ಷಗೌಡ ಕಂಳಕಗೌಡ, ಪಾಟೀಲ

ದಾನದ ಆವಶ್ಯಕತೆ

ಈ ಲೋಕದಲ್ಲಿ ಎಲ್ಲರೂ ಸುಖವನ್ನೇ ಆಪೇಕ್ಷಿಸುತ್ತಾರೆ ಆದರೆ, ನಾವು ನೋಡಿದ ಹಾಗೆ ಸ್ವಲ್ಪ ಜನಗಳು ಮಾತ್ರ ಸುಖಿಗಳಾಗಿದ್ದಾರೆ ಇತರರೆಲ್ಲರೂ ದುಃಖಿಗಳಾಗಿ ರುತ್ತಾರೆ ಮಾನವ ಜಂಗಗಳನ್ನು ಪಾಕಿದವರು ಮಾನವ ಹಣ್ಣುಗಳನ್ನೂ, ಜೀವನ ಮರಗಳನ್ನು ಪಾಕಿದವರು ಜೀವನ ಹಣ್ಣುಗಳನ್ನೂ ಹೇಗೆ ಪಡೆಯುವರೋ ಹಾಗೆಯೇ ಹಿಂದಿನ ಜನ್ಮಗಳಲ್ಲಿ ಸ್ವಾರ್ಥ ಕೆಲಸಗಳನ್ನು ಮಾಡಿದವರು ಈ ಜನ್ಮದಲ್ಲಿ ಸುಖನನ್ನೂ, ಹಿಂದಿನ ಜನ್ಮಗಳಲ್ಲಿ ಸಾಪಕೆಲಸಗಳನ್ನು ಮಾಡಿದವರು ಈ ಜನ್ಮದಲ್ಲಿ ದುಃಖವನ್ನೂ ಅನುಭವಿಸುತ್ತಲಿರುವರು ಹಿಂದಿನ ಜನ್ಮಗಳಲ್ಲಿ ನಾವು ಮಾಡಿದ ಕರ್ಮಗಳ ಪಲಗಳನ್ನು ಈ ಜನ್ಮದಲ್ಲಿ ನಾವು ಹೇಗೆ ಅನುಭವಿಸುತ್ತಿರುವೆವೋ, ಹಾಗೆಯೇ ಈ ಜನ್ಮದಲ್ಲಿ ನಾವು ಮಾಡಿದ ಕರ್ಮಗಳ ಫಲಗಳನ್ನು ಮುಂದಿನ ಜನ್ಮಗಳಲ್ಲಿ ನಾವು ಅನುಭವಿಸುವೇ ತೀರಬೇಕು

ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ । ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ ॥

ಎಂಬ ವಚನದಂತೆ ದಾನಧರ್ಮ ಪರೋಪಕಾರಗಳಿಂದ ಇತರರ ದುಃಖವನ್ನು ನಿವಾರಣೆಮಾಡಿ ಅವರ ಮನಸ್ಸನ್ನು ಸಂತೋಷಪಡಿಸುವದೇ ಪುಣ್ಯಕರ್ಮವೆಂಬುದಾಗಿಯೂ, ಇತರರಿಗೆ ಹಿಂಸೆಯನ್ನು ಮಾಡಿ ಅವರ ಮನಸ್ಸಿಗೆ ನೋವನ್ನುಂಟುಮಾಡುವದೇ ಪಾಪಕರ್ಮ ವೆಂಬುದಾಗಿಯೂ ಕರೆಯಲ್ಪಡುವದು ಆದರೆ, ಲೋಕ ದಲ್ಲಿ—

ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾಃ । ನ ಪಾಪಫಲಮಿಚ್ಛಂತಿ ಪಾಪಂ ಕುರ್ವಂತಿ ಯತ್ನತಃ ॥

ಎಂಬ ವಚನದಂತೆ ಜನಗಳು ಪುಣ್ಯದ ಫಲವಾದ ಸುಖವನ್ನು ಅಪೇಕ್ಷಿಸುತ್ತಾರೆಯೇ ಹೊರತು ಪುಣ್ಯವನ್ನು ಮಾಡುವದಕ್ಕೆ ಇಚ್ಛೆಯುವದಿಲ್ಲ ಸಾಪವನ್ನಾ ದರೋ ಪ್ರಯತ್ನ ಪೂರ್ವಕವಾಗಿ ಮಾಡುವರು ಆದರೆ, ಆದರ ಫಲವಾದ ದುಃಖವನ್ನು ಅನುಭವಿಸುವದಕ್ಕೆ ಅವರು ಇಷ್ಟಪಡುವದಿಲ್ಲ ಇದು ಅವಿವೇಕಿಗಳ ವಿಷಯ ವೇನಿಕ್ಕಿ ಗಳಾದರೋ ತಾವು ಯಾವಾಗಲೂ ಪಾಪಕರ್ಮಗಳನ್ನು ಮಾಡದೆ ತಮ್ಮ ಕೈಲಾದ ಮಟ್ಟಿಗೆ ಪುಣ್ಯಕರ್ಮಗಳನ್ನೇ ಮಾಡಿ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖವನ್ನು ಪಡೆಯುವರು

ಅನ್ನದಾನಂ ಮಹಾದಾನಂ ವಿದ್ಯಾದಾನಂ ತತೋಽಧಿಕಂ । ಅನ್ನೇನ ಕ್ಷಣಿಕಾತೃಪ್ತಿ ರ್ಯಾವಜ್ಜೀವಂತು ವಿದ್ಯಯಾ ॥

ಎಂದು ಹೇಳಿರುವಂತೆ ಎಲ್ಲ ದಾನಗಳಿಗಿಂತಲೂ ಅನ್ನ ದಾನವು ಶ್ರೇಷ್ಠವು ಏಕೆಂದರೆ, ಇತರ ಯಾವ ಪದಾರ್ಥಗಳನ್ನಾ ದರೂ ದಾನಮಾಡಿ ಕೊಟ್ಟರೆ ಅವುಗ ಳನ್ನು ದಾನಮಾಡಿ ತೆಗೆದುಕೊಂಡವರು ಅವುಗಳಿಂದ ಕೈತೃಪಡದೆ ಅವುಗಳನ್ನು ಇನ್ನೂ ಹೆಚ್ಚಾಗಿ ಕೊಟ್ಟಿದ್ದರೆ ಚೆನ್ನಾಗಿತ್ತೆಂದು ಮನಸ್ಸಿನಲ್ಲಾದರೂ ಅಂದುಕೊಳ್ಳು ತ್ತಾರೆ. ಹಸಿವು ಇರಕಕ್ಕವರಿಗೆ ಅನ್ನವನ್ನಿಟ್ಟರೆ ಅವರು ಊಟಮಾಡಿ ಒಂದು ತುತ್ತನ್ನಾದರೂ ಹೆಚ್ಚಾಗಿ ಆಪೇಕ್ಷಿ ಸದೆ ತೃಪ್ತಿಪಡುವರು ಈ ಅನ್ನದಾನಕ್ಕಿಂತಲೂ ಲೌಕಿಕ ವಿದ್ಯಾದಾನವು ಮತ್ತೂ ಶ್ರೇಷ್ಠವು. ಲೌಕಿಕ ವಿದ್ಯಾದಾನ ಕ್ಕಿಂತಲೂ ಬ್ರಹ್ಮವಿದ್ಯಾದಾನವು ಇನ್ನೂ ಶ್ರೇಷ್ಠವು ಏಕೆಕ್ಕೆಂದರೆ, ಲೌಕಿಕ ವಿದ್ಯೆಯಿಂದ ಆದನ್ನು ಕಲಿತವನು ಒಂದು ಜನ್ಮದಲ್ಲಿ ತಾನು ಜೀವನವನ್ನು ಮಾಡಬಹುದೇ ಹೊರತು, ಬ್ರಹ್ಮವಿದ್ಯೆಯಿಂತೆ ಲೌಕಿಕ ವಿದ್ಯೆಯು ಸರ್ವ ಮುಃಖಗಳಿಂದಲೂ ಬಿಡುಗಡೆ ಮಾಡಿ ನಿತ್ಯಾನಂದ (ಮೋಕ್ಷ)ವನ್ನು ಕೊಡುವದಿಲ್ಲ ಆದುದರಿಂದ ಬ್ರಹ್ಮ ವಿದ್ಯಾದಾನವನ್ನು ಮಾಡುವದಕ್ಕೆ ಸಹಾಯವನ್ನು ಮಾಡುವವರು ಸರ್ವೋತ್ಕೃಷ್ಟವಾದ ಫಲವನ್ನು ಹೊಂ ದುವರು.

ಒಬ್ಬನಿಗೆ ಒಂದು ಖಂಡಗ ಬೀಜವರಿ ಜಮೀನಿದ್ದು ಆದರಲ್ಲಿ ಅವನು ಈ ವರ್ಷ ಒಂದು ಖಂಡಗ ಭತ್ತವನ್ನು ಬಿತ್ತಿದರೆ ಅದು ಬೆಳೆಯಾಗಿ ಮುಂದಿನ ವರ್ಷ ೨೦ ಖಂಡಿಗ ಬತ್ತವು ಅವನಿಗೆ ಸಿಗುವದು. ಈ ೨೦ ಖಂಡಗ ದಲ್ಲಿ ಒಂದು ಖಂಡಗ ಭತ್ತವನ್ನು ಮುಂದಿನ ವರ್ಷ ಬಿತ್ತಿದರೆ ಅದು ಬೆಳೆಯಾಗಿ ಆದರ ಮುಂದಿನ ವರ್ಷ ಪುನಃ ೨೦ ಖಂಡಗ ಭತ್ತವು ಹೊರೆಯುವದು ಬಿತ್ತುವ ದಕ್ಕೆ ಒಂದು ಖಂಡಗ ಭತ್ತವನ್ನು ಬರ್ಜು ಮಾಡಿದರೆ ೧೯ ಖಂಡಗ ಪಾತ್ರ ಉಳಿಯುವದು ಎಂಬ ಯೋಚನೆ ಯಿಂದ ಒಂದು ಖಂಡಗ ಬತ್ತವನ್ನು ಬಿತ್ತದೇ ಹೋದರೆ ಆದರ ಮುಂದಿನ ವರ್ಷ ಬೆಳೆಯೇ ಇಲ್ಲದಿರುವದರಿಂದ ಊಟಕ್ಕೆ ಅನ್ನವಿಲ್ಲದ ದುಃಖಪಡಬೇಕಾಗುತ್ತದೆ ಇದರಂತೆ, ಯಾರು ತಮ್ಮ ಪೂರ್ವಜನ್ಮದಲ್ಲಿ ಧರ್ಮದ ಬೀಜವನ್ನು ಬಿತ್ತಿದ್ದರೋ ಅಂದರೆ ದಾನ ಧರ್ಮ ಪರೋಪಕಾರಗಳನ್ನು ಮಾಡಿದ್ದರೋ ಅವರು ಈ ಜನ್ಮದಲ್ಲಿ ಶ್ರೀಮಂತರಾಗಿರುತ್ತಾರೆ ಆದುದರಿಂದ ಶ್ರೀಮಂತರಾದವರು ಬಾವು ಮತ್ತು ತಮ್ಮ ಹೆಂಡತಿ ಮಕ್ಕಳು ಸುಖವಾಗಿ ಜೀವನ ಮಾಡುವದಕ್ಕೆ ಎಷ್ಟು ಆವಶ್ಯಕವೋ ಅಷ್ಟನ್ನು ತೆಗೆದಿಟ್ಟು ಉಳಿದಿದ್ದನ್ನು ಉತ್ತಮ ದರ್ಮಕಾರ್ಯಗಳಿಗೆ ಉಪಯೋಗಿಸಬೇಕು

ಈ ಜನ್ಮದಲ್ಲಿ ಯಾರು ದಾನ ಧರ್ಮ ಪರೋಪಕಾರ ಗಳನ್ನೂ ಮಾಡದೆ ತಮ್ಮ ಹೆಂಡತಿ ಮಕ್ಕಳ ಜೀವನ ಕ್ಕೋಸ್ಕರ ದನನನ್ನು ಸಂಗ್ರಹಿಸಿ ಇಡಬೇಕೆಂಬ ಉದ್ದೇಶ ದಿಂದ ಪಾಪ (ಅದರ್ಮ) ಕಾರ್ಯಗಳನ್ನು ಮಾಡುವರೋ ಅವರು ಈ ದೇಪನವನ್ನು ಬಿಟ್ಟುನಂತರ ತಮ್ಮ ಪಾಪ ಕಾರ್ಯಗಳಿಗನುಸಾರವಾಗಿ ನರಕದಲ್ಲಿ ಸಹಿಸಲಶಕ್ಯವಾದ ಶಿಕ್ಷೆಯನ್ನು ಅನುಭವಿಸುವರು

ಅದಾನದೋಷೇಣ ಧನೇದ್ಧರಿದ್ರೋ । ದಾರಿದ್ರ್ಯದೋಷೇಣ ಕರೋತಿ ಪಾಪಂ । ಪಾಪಾಪನಶ್ಯಂ ನರಕಂ ಪ್ರಯಾತಿ । ಪುನರ್ದರಿದ್ರಃ ಪುನರೇವ ಪಾಪೀ ॥

ಎಂಬುದಾಗಿ ಮಹಾತ್ಮರು ಹೇಳಿರುವಂತೆ ದಾನ ಧರ್ಮ ಪರೋಪಕಾರಗಳನ್ನು ಮಾಡದೆ ಇರುವದರಿಂದ ಮುಂದಿನ ಜನ್ಮದಲ್ಲಿ ದರಿದ್ರರಾಗಿ ಹುಟ್ಟುವರು ದಾರಿದ್ರ್ಯವನ್ನೆಯೆಂದ ತಮ್ಮ ಜೀವನಕ್ಕೋಸ್ಕರ ಮಾಡಬಾರದ ಪಾಪಕಾರ್ಯಗಳನ್ನು ಮಾಡುವರು. ಈ ಪಾಪಕಾರ್ಯಗಳ ದನೆಯಿಂದ ಅವರಿಗೆ ನರಕವು ಅವಶ್ಯವಾಗಿ ಪ್ರಾಪ್ತವಾಗುವದು ನರಕಾನುಭವವಾದ ನಂತರ ಪುನಃ ದರಿದ್ರರಾಗಿ ಹುಟ್ಟುವರು ಪುನಃ ಪಾಪ ಕಾರ್ಯಗಳನ್ನು ಮಾಡಿ ನರಕವನ್ನು ಹೊಂದುವರು ಈರೀತಿಯಾಗಿ ದಾರಿದ್ರ್ಯ ಮತ್ತು ನರಕ ದುಃಖಗಳನ್ನು ಪುನಃ ಪುನಃ ಅನುಬವಿಸುವರು ತಮ್ಮ ಹೆಂಡತಿ ಮಕ್ಕಳಗೋಸ್ಕರ ಅಧರ್ಮದಿಂದ ಧನಸಂಗ್ರಹವನ್ನು ಮಾಡಿದರೆ ಆ ದನನನ್ನು ಅನುಭವಿಸುವದಕ್ಕೆ ಮಾತ್ರ ಹೆಂಡತಿ ಮಕ್ಕಳು ಆರ್ಪರೇ ಹೊರತು, ಆಧರ್ಮ ಕಾರ್ಯಗಳ ಪಲವಾದ ದುಃಖಕ್ಕೆ ಅವರು ಭಾಗಿಗಳಾಗು ವುದಿಲ್ಲ. ಆದರೆ ಆ ಧನವನ್ನು ಸಂಗ್ರಹಮಾಡಿದವರೇ ಭಾಗಿಗಳಾಗಿರುತ್ತಾರೆಂಬುದನ್ನು ಎಲ್ಲರೂ ನೆನೆಪಿನಲ್ಲಿಡ ತಕ್ಕದ್ದು.

ಬಯ ಜನರು ದನಸಂಗ್ರಹವೇ ಸುಖವನ್ನು ಕೊಡು ತ್ತದೆಂದು ತಿಳಿದು ಧನವನ್ನು ಬಾವು ಅನುಭವಿಸಲೆಯೂ ಮತ್ತು ಇತರರಿಗೆ ದಾನವಾಗಿ ಕೊಡದೆಯೂ ದನಸಂಗ್ರ ಹದಲ್ಲೇ ನಿರತರಾಗಿರುತ್ತಾರೆ ಏಕೆಕ್ಕೆಂದರೆ, ಒಬ್ಬನಲ್ಲಿ ಒಂದು ಲಕ್ಷ ಆಥವಾ ಒಂದು ಕೋಟಿ ರೂಪಾಯಿಗಳ ಆಸ್ತಿಯಿದ್ದರೆ, 'ನಾನು ಲಕ್ಷಾಧೀಶ, ನಾನು ಕೋಟ್ಯ ಧೀಶ' ಎಂಬುದಾಗಿ ಅವನು ಅಬಿಮಾನಿಸುವಾಗ ಆ ಒಂದು ಕ್ಷಣ ಅವನಿಗೆ ಸುಖವಾದಹಾಗೆ ತೋರುತ್ತದೆ ವಿಚಾರಿಸಿದ ನೋಡಿದರೆ—

ಆರ್ಥಾನಾಮರ್ಜನೇ ದುಃಖಂ ತಪ್ಯೈವ ಪರಿ ಪಾಲನೇ । ನಾಶೇ ದುಃಖಂ ವ್ಯಯೇ ದುಃಖಂ ಧಿಗರ್ಥಾನ್ ಕ್ಲೇಶಕಾರಿಣಃ ॥

ಧನವನ್ನು ಸಂಪಾದಿಸುವಾಗ ದುಃಖವುಂಟಾಗುತ್ತದೆ ಅದನ್ನು ಕಾಪಾಡುವಾಗಲೂ ದುಃಖವುಂಟಾಗುತ್ತದೆ. ಅದು ನಷ್ಟವಾದರೆ ಆಗಲಿ ಆಥವಾ ವ್ಯಯವಾದರೇ ಆಗಲಿ ದುಃಖವುಂಟಾಗುತ್ತದೆ. ಈರೀತಿಯಾಗಿ ಧನವು ಯಾವಾಗಲೂ ದುಃಖಕ್ಕೆ ಕಾರಣವಾಗಿರುವದರಿಂದ ಆಮ ತಿರಸ್ಕರಿಸಲ್ಪಡುವದಕ್ಕೆ ಯೋಗ್ಯವಾಗಿದೆ. ಎಂದು ಮಹಾತ್ಮರು ಸಾರಿರುವರು. ಆದರೆ, "ಧನಾದ್ಧರ್ಮಸ್ತತಸ್ಸುಖಂ" ಎಂಬಂತೆ ಧನವು ದಾನಧರ್ಮ ಪರೋಪಕಾರಗಳಿಗೆ ಉಪಯೋಗಿಸಲ್ಪಟ್ಟಿರೆ, ಅದು ನಮಗೆ ಸುಖವನ್ನುಂಟುಮಾಡುತ್ತದೆ ಆದುದ ರಿಂದ ಧರ್ಮ ಸಂಗ್ರಹಕ್ಕೋಸ್ಕರ ಧರ್ಮದಿಂದ ಧನಾ ರ್ಜನೆಯನ್ನು ಮಾಡಬೇಕು.

ಧನದಲ್ಲಿ ವಿಶೇಷ ಪ್ರೀತಿಯುಳ್ಳ ಕೆಲವು ಶ್ರೀಮಂತ ರಿಗೆ ಭಿಕ್ಷುಕರ ದರ್ಶನವಾದರೆ ಯಮದರ್ಶನವಾದಂತಿ ಆಗುವದು. ಏತಕ್ಕೆಂದರೆ, ಪ್ರಾಣಗಳನ್ನು ತೆಗೆದು ಕೊಂಡು ಹೋಗುವವನು ಯಮನು. "ಅರ್ಥಾ ಬಹಿಶ್ಚರಾಃ ಪ್ರಾಣಾಃ" ಎಂಬಂತೆ ಶ್ರೀಮಂತರಿಗೆ ಧನವು ಹೊರಗಿನ ಪ್ರಾಣಗಳಾದ್ದರಿಂದ ಅದನ್ನು ಕೀಡುಕೊಂಡು ಹೋಗುವದಕ್ಕೆ ಬರುವ ಭಿಕ್ಷುಕರು ಅವರಿಗೆ ಯಮ ಸ್ವರೂಪರಾಗಿ ತೋರುತ್ತಾರೆ

ಶಿಕ್ಷಯಂತಿ ನ ಯಾಚಂತೇ ಧನಿನೋ ಭಿಕ್ಷುಕಾ ಭುವಿ । ಅದತ್ತಾ ಮಾದ್ಯತೋ ಮಾ ಭೂಃ ಚಿತ್ತಾ ತ್ವಂ ತ್ಯಾದ್ದತೋ ಭವ ॥

ಎಂದು ಹೇಳಿರುವಂತೆ ಭಿಕ್ಷುಕರು ಶ್ರೀಮಂತರ ಬಳಿಗೆ ಹೋದರೆ ಅವರು ಭಿಕ್ಷೆಗೋಸ್ಕರ ತಮ್ಮಲ್ಲಿಗೆ ಬಂದರಿವ ರೆಂದು ತಿಳಿಯದೆ, 'ನಾವು ನಮ್ಮ ಹಿಂದಿನ ಜನ್ಮದಲ್ಲಿ ನಿನ್ನಂತೆ ಶ್ರೀಮಂತರಾಗಿದ್ದು ಯಾವ ದಾನಧರ್ಮ ಪರೋಪಕಾರಗಳನ್ನೂ ಮಾಡದೆ ಇದ್ದುದರಿಂದ ಈ ಜನ್ಮದಲ್ಲಿ ದರಿದ್ರರಾಗಿ ಹುಟ್ಟಿದ್ದೇವೆ ನೀವೂ ಸಹ ಈಗ ದಾನ ಧರ್ಮ ಪರೋಪಕಾರಗಳನ್ನು ಮಾಡದೆ ಮುಂದಿನ ಜನ್ಮದಲ್ಲಿ ನಮ್ಮಂತೆ ದರಿದ್ರರಾಗಿ ಹುಟ್ಟಬೇಡಿರಿ ; ಈಗ ನೀವು ದಾನ ಧರ್ಮ ಪರೋಪಕಾರಗಳನ್ನು ಮಾಡಿ ಈ ಜನ್ಮದಲ್ಲಿ ಶ್ರೀಮಂತರಾಗಿರುವಂತೆ ಮುಂದಿನ ಜನ್ಮ ದಲ್ಲಿಯೂ ಶ್ರೀಮಂತರಾಗಿ ಹುಟ್ಟಿರಿ. ಎಂಬುದಾಗಿ ನಿನೇಳ ನನ್ನು ಹೇಳುವದಕ್ಕೆ ಬಂದಿದ್ದಾರೆಂದು ತಿಳಿದು ಅವರನ್ನು ಆದಾದರಿಸದೆ ಸಂತೋಷದಿಂದ ಅವರಿಗೆ ಸಾಧ್ಯವಾದಷ್ಟು ಸಹಾಯವನ್ನು ಮಾಡತಕ್ಕದ್ದು.

ಕೊಟ್ಟಿದ್ದು ತನ್ನದು । ಇಟ್ಟಿದ್ದು ಪರರದು । ಕೊಟ್ಟಿದ್ದ ಕೆಟ್ಟಿತೆನಬೇಡ ಮುಂದಕ್ಕೆ । ಕಟ್ಟಿಟ್ಟ ಬುತ್ತಿ ಸರ್ವಜ್ಞ ॥

ಎಂದು ಸರ್ವಜ್ಞಮೂರ್ತಿಯು ಹೇಳಿರುವಂತೆ ತಾನು ದಾನಧರ್ಮಪರೋಪಕಾರಗಳಿಗೋಸ್ಕರ ಉಪಯೋಗಿಸಿದ ಹೊನವನ್ನು ನಷ್ಟವೆಂದು ತಿಳಿಯದೆ, ಆದು ತಾನು ಈ ಲೋಕವನ್ನು ಬಿಟ್ಟುನಂತರ ತನ್ನ ಸುಖಕ್ಕೋಸ್ಕರ ಶೇಖರಿಸಿಟ್ಟ ಪುಣ್ಯದ ಬುತ್ತಿಯೆಂಬುದಾಗಿಯೂ, ದಾನಧರ್ಮಪರೋಪಕಾರಗಳನ್ನು ಮಾಡದೆ ಬಚ್ಚಿಟ್ಟ ಧನವು ಪರರ ಸುಖಕ್ಕೋಸ್ಕರ ಶೇಖರಿಸಿಟ್ಟ ಹಣವೆಂಬು ದಾಗಿಯೂ ತಿಳಿಯತಕ್ಕದ್ದು

ಪಂಥೋ ವಲಕ್ಷಿ ಕಕ್ಷೀನ ಬಿಭ್ರಾ ಗಿಲತಿ ಲೀಲಯಾ । ಉಚ್ಚೈಂ ನೀಚಾಜಿತವಿತ್ತಸ್ಯ ಭೋಗೋಭಾಗ್ಯವತಾಂ ಭವೇತ್ ॥

ಹಲ್ಲು ಬಹು ಕಷ್ಟಪಟ್ಟು ತಿನ್ನತಕ್ಕ ಪದಾರ್ಥಗಳನ್ನು ನುಂಗಿಸಿ ಮಾಡುವುದು. ಆದರೆ ಅದನ್ನು ಲೀಲಾಜಾಲವಾಗಿ ನುಂಗುವುದು ನಾಲಗೆ ಹಲ್ಲಿಗೆ ವೈರಾ ಪಠಕ್ತಿಮವಲ್ಲದೆ ಅದಕ್ಕೆ ಯಾವ ಸುಖವೂ ಇಲ್ಲ ಆ ಸುಖವನ್ನು ಆನು ಭವಿಸುವುದು ನಾಲಗೆಗೆ ಮಾತ್ರವಷ್ಟೆ! ಇದರಂತೆಯೇ ಕೃಪಣನು ಗಳಿಸಿಟ್ಟ ಹಣವು ಭಾಗ್ಯಶಾಲಿಗೆ ಸಲ್ಲುವುದು. ಎಂದು ಮಹಾತ್ಮರು ಹೇಳಿರುವ ವಿಷಯವು ಯಥಾರ್ಥ ವಾಗಿದೆ ಆದುದರಿಂದ ಕೃಪಣತನದಿಂದ ಗಳಿಸಿಟ್ಟ ದ್ರವ್ಯವನ್ನು ಅನ್ಯರ ಸಾಲು ಮಾಡದೆ ತಾವಿರುವಾಗಲೇ ದಾನಧರ್ಮಗಳನ್ನು ಮಾಡಿ ದೇವರ ಪ್ರೀತಿಗೆ ಪಾತ್ರ ರಾಗುವುದು ಶ್ರೇಯಸ್ಕರವು.

ಕೃಚ್ಛ್ರಾಲ್ಲಬ್ಧಂ ಧನಮಪಿ ತತಾಂತಾಧಿಕೆ ಸ್ಯಾತ್ಪ್ರಿಯಹೇತೋಃ । ಪಶ್ಚೇ ಕಂಚಿದ್ಗಿರಿತಮುಪೈಲ ಶ್ಯೈವ ಸರ್ವಂ ಕೃಜಾನುಃ ॥ ತಾತ್ಪೈರ್ಯಕ್ಷೇ ತತಗುಣಾಂತಾಧಿಕೆಸ್ಯಾತ್ಪ್ರಿಯಹೇತೋಃ । ನೃರ್ಥಂ ತಂಕಾಳುಪಪ್ಪದಯೂ ನೋಕ್ಷ್ಮಜಾಮೋರ್ಥ ಲೇಕಂ ॥

ಎಂದು ಹೇಳಿರುವಂತೆ, ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಜನಗಳು ನೂರಕ್ಕೆ ಒಂದು ರೂಪಾಯಿ ಬಡ್ಡಿಯ ಆಶೆಯಿಂದ ಒಂದು ಕಾಗದವನ್ನು ಬರೆಯಿಸಿ ಕೊಂಡು ಕೊಟ್ಟು ಎಲ್ಲವನ್ನೂ ಕಳೆದುಕೊಳ್ಳುತ್ತಾರೆ. ಹಣವನ್ನು ಧರ್ಮರೂಪವಾಗಿ ಉಪಯೋಗಿಸಿದರೆ ಒಂದಕ್ಕೆ ಅನೇಕ ನೂರಕ್ಕು ಮುಂದಕ್ಕೆ ಲಾಭವಾಗುವು ದೆಂದು ಶಾಸ್ತ್ರವು ಹೇಳುತ್ತಿದ್ದರೂ ಅದರಲ್ಲಿ ನಂಬಿಕೆಯಿ ರುವುದಿಲ್ಲ. ಒಬ್ಬನು ತನ್ನಲ್ಲಿದ್ದ ಹಣವನ್ನು ಬಡ್ಡಿಗೋ ಸ್ಕರ ಸರಿಯಾದ ಸ್ವತ್ತುಗಳ ಆಧಾರದಮೇಲೆ ಕೊಟ್ಟು ಪತ್ರವನ್ನು ಬರೆಯಿಸಿ ರಿಜಿಸ್ಟರ್ ಸಹ ಮಾಡಿಸಿಕೊಂಡಿ ದ್ದರೆ, ತಾನು ಮರಣಹೊಂದುವಾಗ ತನ್ನ ಅಸಲು ಹಣ ಕ್ಕಾಗಲಿ ಅಥವಾ ಆದರ ಬಡ್ಡಿಗಾಗಲಿ ಯಾವ ಭಯವೂ ಇಲ್ಲ ಎಂಬ ನಂಬಿಕೆಯಿಂದ ಅವನು ಪ್ರಾಣವನ್ನು ಬಿಡು ತ್ತಾನೆ. ಆದರೆ ಆ ಹಣದ ಬಡ್ಡಿಯಲ್ಲಿ ಒಂದು ಕಾಸಾದರೂ ಸಾಯುವವನಿಗೆ ಬರದೆ ಅವನ ಹೆಂಡತಿ ಮಕ್ಕಳು ಅವುಗೆ ಳನ್ನು ಅನುಭವಿಸುತ್ತಾರೆ. ಆದುದರಿಂದ ಸತ್ಪವನ ಭಾಗಕ್ಕೆ ಎಲ್ಲವೂ ಹೋದಂತೆಯೇ ಆಗುತ್ತದೆಯಲ್ಲವೇ? ಆ ಹಣ ದಲ್ಲಿಸ್ವಲ್ಪಭಾಗವನ್ನಾದರೂ ಅವನು ಧರ್ಮಕ್ಕೋಸ್ಕರ ಉಪಯೋಗಿಸಿದ್ದ ಪಕ್ಷದಲ್ಲಿ ಮುಂದಕ್ಕೆ ಅವನಿಗೆ ಸಹಸ್ರಾ ಧಿಕ ಫಲವುಂಟಾಗುತ್ತಿತ್ತು. ಆದುದರಿಂದ ವಿವೇಕಿಗಳಾಗಿರತ ಕ್ಕವರು ತಾವು ಧರ್ಮಕಾರ್ಯಗಳಿಗೋಸ್ಕರ ಕೊಡತಕ್ಕ ದ್ದನ್ನು ನಷ್ಟನೆಂಬುದಾಗಿ ತಿಳಿಯದೆ ಅದು ತಮ್ಮ ಮುಂದಿನ ಗಂಟು ಎಂಬುದಾಗಿ ತಿಳಿಯಬೇಕು.

ಸಾಮಾನ್ಯವಾಗಿ ಶ್ರೀಮಂತರಲ್ಲಿ ಅನೇಕರಿಗೆ ಗಂಡು ಮಕ್ಕಳಿರುವದಿಲ್ಲ. ಆದುದರಿಂದ ಅವರು ತಾವು ಗಳಿಸಿದ ನಂತರ ತಮ್ಮ ಹಣಕ್ಕೆ ಹಕ್ಕುದಾರರು ಮತ್ತು ಪರಲೋಕ ಗತಿಗೆ ಉತ್ತರಕ್ರಿಯಾದಿಗಳನ್ನು ಮಾಡತಕ್ಕವರು ಯಾರೂ ಇಲ್ಲವಲ್ಲಾ ಎಂದು ದುಃಖಪಡುತ್ತ ಇದ್ದು ಕೊಂಡಿಗೆ ಇತರರ ಮಕ್ಕಳನ್ನು ದತ್ತವಾಗಿ ತೆಗೆದುಕೊಳ್ಳು ತ್ತಾರೆ. ಹೆಬ್ಬೆಟ್ಟಯಲ್ಲಿ ಹುಟ್ಟಿದ ಮಕ್ಕಳಿಗೇನೇ ತಾಯಿ ತಂದೆಗಳಲ್ಲಿ ಭಕ್ತಿಯಿಲ್ಲದೆ ಆವರ ಉತ್ತರಕ್ರಿಯಾದಿ ಗಳನ್ನು ಶ್ರದ್ಧೆಯಿಂದ ಮಾಡದೇ ಇರುವಾಗ, " ದತ್ತ ಪುತ್ರನಿಗೆ ಪಿತೃಭಕ್ತಿಯೇ " ಎಂಬ ನ್ಯಾಯ್ಯ ಡಿಯಂತೆ ಇತರರ ಮಕ್ಕಳಿಗೆ ದತ್ತತಂದೆಯಲ್ಲಿ ಭಕ್ತಿಯು ಇರುವ ದೆಂತು? ಅವರು ಉತ್ತರಕ್ರಿಯಾದಿಗಳನ್ನು ಶ್ರದ್ಧೆ ಯಿಂದ ಎಂದೂ ಮಾಡುವದಿಲ್ಲ ಮಕ್ಕಳಿಗೆ ಜೀವನಕ್ಕೆ ಸಾಕಾಗುವಷ್ಟು ಹಣವನ್ನಿಟ್ಟರೆ ಅವರು ಅದನ್ನು ಜೋ ಪಾನವಾಗಿಡುವರು. ಲಕ್ಷಾಂತರ ರೂಪಾಯಿಗಳನ್ನಿಟ್ಟರೆ ಮಕ್ಕಳು ನಿರರ್ಥಕ್ಕವಾದ ಹಣವನ್ನು ದುಸ್ಪೆ ವಿಷಯ ಗಳಿಗೋಸ್ಕರ ಖರ್ಚುಮಾಡಿ ಕೊನೆಗೆ ನಿಗರ್ತಿಕರಾಗು ವರು. ಇದರಿಂದ ತಮ್ಮ ಹಣವು ಆನ್ಯಾಯವಾಗಿ ಹಾಳಾ ಗುವದಲ್ಲದೆ ತಮ್ಮ ಮಕ್ಕಳೂ ಸಹ ಹಾಳಾಗುವರು. ಇದು ಲೋಕಾನುಭವಸಿದ್ಧವಾದ ವಿಷಯ ಆದುದರಿಂದ ಶ್ರೀಮಂತರಾದವರು ಗಂಡುಮಕ್ಕಳಿಲ್ಲದ್ದಕ್ಕೆ ದುಃಖಪಡದೆ ತಮ್ಮ ವಿಶ್ವರ್ಯವೆಲ್ಲವನ್ನೂ ಉತ್ತಮವಾದ ಧರ್ಮ ಕಾರ್ಯಗಳಿಗೋಸ್ಕರ ಉಪಯೋಗಿಸಿದರೆ ಆ ಧರ್ಮ ವೇ ಪುತ್ರನು ಅವರಿಗೆ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸುಖವನ್ನುಂಟುಮಾಡುವನು.

ಕೆಲವರು ' ಧರ್ಮವನ್ನು ಮಾಡುವುದಕ್ಕೆ ಅದೃಷ್ಟ ಬೇಕು. ನಮಗೆ ಧರ್ಮವನ್ನು ಮಾಡುವದಕ್ಕೆ ಅದೃಷ್ಟವೇ ಇಲ್ಲ ' ಎಂದು ಹೇಳಿ ಧರ್ಮವನ್ನು ಮಾಡುವದಿಲ್ಲ ಹೀಗೆ ಹೇಳುವದು ಅವರಲ್ಲಿರತಕ್ಕ ಲೋಭಗುಣದ ಪ್ರಭಾ ವವನ್ನು ತೋರಿಸುತ್ತದೆಯೇ ಹೊರತು ಮತ್ತೆ ಬೇರೆ ಇಲ್ಲ. ಏತಕ್ಕೆಂದರೆ—ನಾವು ಈ ಜನ್ಮದಲ್ಲಿ ವಿಶ್ವರ್ಯ ವನ್ನು ಪಡೆಯುವದಕ್ಕೆ ಅದೃಷ್ಟ (ಪೂರ್ವ ಜನ್ಮದಲ್ಲಿ ನಾವಾಡಿದ ಪುಣ್ಯವು ಅವಶ್ಯಕವೇ ಹೊರತು ಈ ಜನ್ಮ ದಲ್ಲಿ ನಾವು ಧರ್ಮವನ್ನು ಮಾಡುವದಕ್ಕೆ ಅದೃಷ್ಟವನ್ನು ಬೇಕಿಲ್ಲ. ಧರ್ಮವನ್ನು ಮಾಡುವದು ನಮ್ಮ ಕೈಯಲ್ಲಿದೆ. ಜಮೀನನ್ನು ಮತ್ತು ಬಿತ್ತನೆಯ ಬೀಜವನ್ನೆ ಇಟ್ಟು ಕೊಂಡು ಭತ್ತವನ್ನು ಬಿತ್ತುವದಕ್ಕೆ ಅದೃಷ್ಟ ಬೇಕು. ಎಂದು ಹೇಳಿ ಬೀಜವನ್ನು ಬಿತ್ತಿದೆ ಮುಂದಿನ ಫಸಲನ್ನು ಳೆಕೊಂಡು ದುಃಖಪಡುವವನಂತೆ, ವಿಶ್ವರ್ಯವಿದ್ದು ದಾನ-ಧರ್ಮ-ಪರೋಪಕಾರಗಳನ್ನು ಮಾಡದೇ ಇರುವ ನವು ದುಃಖಪಡುತ್ತಾನೆ. ಇನ್ನು ಕೆಲವರು, ' ಧರ್ಮ ವನ್ನು ಮಾಡುವದಕ್ಕೆ ನಮಗೆ ವೆಯಸ್ಸಾಗಿಲ್ಲ. ನಮಗೆ ವೃದ್ಧಾಪ್ಯವು ಬಂದಾಗ ಧರ್ಮವನ್ನು ಮಾಡುತ್ತೇನೆ' ಎಂಬುದಾಗಿ ಹೇಳಿ ಧರ್ಮವನ್ನು ಮಾಡುವದಿಲ್ಲ.

' ನ ಹಿ ಪ್ರಮಾಣಂ ಜಂತೂನಾಂ ಉತ್ಪತ್ತಿರ್ಲಕ್ಷಣೇಷ್ವಿತೇ ' ಎಂದು ಹೇಳಿರುವಂತೆ ಯಾವ ಪ್ರಾಣಿಯೇ ಆಗಿ, ಇಷ್ಟೊಂದು ಲಕ್ಷಣದವರೆಗೆ ಬದುಕಿರುತ್ತದೆ. ವಿಷ್ಟವಕ್ಕೆ ಯಾವ ಭರವಸೆಯೂ ಇಲ್ಲ. ಆದುದರಿಂದ ವಿವೇಕಿಗಳು ಆ ಕಾಲ, ಈ ಕಾಲ ಎನ್ನದೆ ತಮಗೆ ವಿಶ್ವರ್ಯವು ಪ್ರಾಪ್ತಿಯಾಗಿರುವಾಗಲೇ ಉತ್ತಮವಾದ ಧರ್ಮಕಾರ್ಯ ಗಳನ್ನು ಮಾಡಬೇಕು

ಕ್ಷಣಂ ಚಿತ್ತಂ ಕ್ಷಣಂ ವಿತ್ತಂ ಕ್ಷಣಂ ಜೀವನ ಮಾನವೀಯಃ ! ಯಮಸ್ಯ ಕರುಣಾ ನಾಸ್ತಿ ಧರ್ಮಸ್ಯ ತ್ವರಿತಾ ಗತಿಃ ॥

ಎಂದು ಹೇಳಿರುವಂತೆ ಧರ್ಮವನ್ನು ಮಾಡುವದಕ್ಕೆ ಅನುಕೂಲವು ಮತ್ತು ಅವಕಾಶವು ದೊರೆತಿರುವಾಗ, ಧರ್ಮವನ್ನು ಮಾಡಬೇಕೆಂದು ಮನಸ್ಸು ಹುಟ್ಟದ ಒಡನೆಯೇ ಧರ್ಮವನ್ನು ಮಾಡಿಬಿಡಬೇಕು. ಏತಕ್ಕೆಂ ದರೆ ಧರ್ಮವನ್ನು ಮಾಡಬೇಕೆಂದು ಈಗಿರುವ ಮನಸ್ಸು ನಾಳೆ ಇಲ್ಲದೇ ಹೋಗಬಹುದು. ಧರ್ಮವನ್ನು ಮಾಡುವ ದಕ್ಕೆ ಈಗಿರುವ ಅನುಕೂಲವು ನಾಳೆ ಇಲ್ಲದೇ ಹೋಗ ಬಹುದು. ಧರ್ಮವನ್ನು ಮಾಡತಕ್ಕವನೇನೇ ನಾಳೆ ಇಲ್ಲದೇ ಹೋಗಬಹುದು. ಆದುದರಿಂದ ಶ್ರೀಮಂತ ರಾದವರೆಲ್ಲರೂ ನಾಳೆ ಅನ್ನದೆ ತಮ್ಮ ಶಕ್ತ್ಯನುಸಾರ ಧರ್ಮಕಾರ್ಯಗಳನ್ನು ಬೇಗ ಮಾಡಬೇಕು.

ಕೇರ್ತಾ ಕಾರಯಿತಾ ಜ್ಞೈವ ಶ್ರೇಯಕೇತ್ಕಾನು ನೋದಕಃ। ಸುಕೃತಾದುಷ್ಕೃತಾಚ್ಚೈವ ಚಿತ್ರಾರಃ ಸ್ಮಮಧಾಗಿನಃ ॥

ಕೊಲೆಯನ್ನು ಮಾಡಿದನಿಗೆ ಯಾವ ಶಿಕ್ಷೆಯು ವಿಧಿಸಲ್ಪಡುವುದೋ ಅದೇ ಶಿಕ್ಷೆಯು ಕೊಲೆಯನ್ನು ಮಾಡಿಸಿದವನಿಗೂ ವಿಧಿಸಲ್ಪಡುವುದಲ್ಲಿ ! ಆದರಂತೆಯೇ ಧರ್ಮವನ್ನು ಮಾಡತಕ್ಕವನಿಗೆ ಎಷ್ಟು ಪುಣ್ಯವು ಬರು ವುದೋ ಅಷ್ಟೇ ಪುಣ್ಯವು ಧರ್ಮವನ್ನು ಮಾಡಿಸಿ ದವನಿಗೂ ಬರುವದು ಆದುದರಿಂದ ಶ್ರೀಮಂತರಲ್ಲ ದವರೂ ಕೂಡ ಮೇಲೆ ಹೇಳಿದ ಧರ್ಮರಹಸ್ಯಗಳನ್ನು ಶ್ರೀಮಂತರಿಗೆ ತಿಳಿಯಪಡಿಸಿ, ಅವರಿಂದ ಧರ್ಮಕಾರ್ಯ ಗಳನ್ನು ಮಾಡಿಸಿ, ಪುಣ್ಯಕ್ಕೆ ಭಾಗಿಗಳಾಗಬೇಕು ಲೋಕದಲ್ಲಿ ಈಗ ಅನುಭವಿಸುತ್ತಿರುವ ದುರ್ಭಿಕ್ಷೆ ಮೊದ ಲಾದ ದುಃಖಗಳಿಗೆ ಅಧರ್ಮವೇ ಮೂಲಕಾರಣವಾದು ದರಿಂದ ಸರ-ರೂ ಧರ್ಮದಿಂದ ಧನವೆನ್ನು ಸಂಪಾದಿಸಿ ಅದನ್ನು ಧರ್ಮಕಾರ್ಯಗಳಿಗೋಸ್ಕರ ಉಪಯೋಗಿ ಸುತ್ತ ಬಂದರೆ ಲೋಕದಲ್ಲಿ ದುಃಖಗಳು ಹೋಗಿ ಸರ್ವರೂ ಸುಖಶಾಂತಿಗಳನ್ನು ಹೊಂದುವರು

ಎಂ. ಎಲ್. ನಾಗಣ್ಣ,
ಅಧ್ಯಕ್ಷ
ಆತ್ಮವಿಚಾರನಿಂದಿರ, ಮೈಸೂರು.

ವರ್ತಮಾನಸಂಗ್ರಹ

ಕಾಶ್ಮೀರದ ಬಗ್ಗೆ ಪುನಃ ದೂರು

ಕಾಶ್ಮೀರದಲ್ಲಿ ಸೀಸ್ ಫೈರ್ ಆಜ್ಞೆ ಜಾರಿಯಾದಾಗ ತಾವು ಇದ್ದ ನೆಲೆಗಳಿಂದ ಪಾಕೀಸ್ತಾನ್ ಸೈನ್ಯಗಳು ತುಂಬಾ ಮುಂದೆ ಸಾಗಿ ತಮ್ಮ ಸರಹದ್ದನ್ನು ವಿಸ್ತರಿಸಿ ಕೊಂಡಿರುವುದಾ ಅಧಿಕೃತವಾಗಿ ತಿಳಿದುಬಂದಿದೆ ಈ ಬಗ್ಗೆ ಭಾರತ ಸರ್ಕಾರವು ವಿಶ್ವಸಂಸ್ಥೆಯ ಕಾಶ್ಮೀರ ಕಮಿಶಾಷ್ಠನ್ ಗೆ ದೂರು ಕಳುಹಿಸಿದೆ.

ಭಾರತದಲ್ಲಿ ಎರಡು ಉಕ್ಕಿನ ಕಾರಖಾನೆಗಳ ಸ್ಥಾಪನೆ

ಭಾರತದಲ್ಲಿ ಸ್ಥಾಪಿಸಬೇಕೆಂದಿರುವ ಉಕ್ಕಿನ ಕಾರ್ಖಾ ನೆಗಳ ಬಗ್ಗೆ ಸಲಹೆ ಕೇಳಲ್ಪಡಿದ್ದ ಮೂರು ಬ್ರಿಟಿಷ್ ಮತ್ತು ಅಮೆರಿಕಾ ಕಂಪನಿಗಳು ಈ ಬಗ್ಗೆ ವರದಿಮಾಡಿ ಒಸ್ಸಾ ಮತ್ತು ಮಧ್ಯ ಪ್ರಾಂತಗಳಲ್ಲಿ ಎರಡು ಉಕ್ಕಿನ ಕಾರಖಾನೆ ಗಳನ್ನು ಸ್ಥಾಪಿಸಬಹುದೆಂದು ಸೂಚಿಸಿವೆ. ಕಚ್ಚಿದ್ದಲು ಗಣಿಗಳು ಮದರಾಸಿಗೆ ಸಮೀಪದಲ್ಲಿಲ್ಲದೆ ಇರುವುದರಿಂದ ಕಾರ್ಖಾನೆಯನ್ನು ಮದರಾಸಿನಲ್ಲಿ ಸ್ಥಾಪಿಸುವುದು ಸಾಧ್ಯ ವಿಲ್ಲವೆಂದು ಸೂಚಿಸಲಾಗಿದೆ.

ಭೂಮ್ಯಂತರ್ಗತ ಕಾಲುವೆಗಳು

ಗಂಗಾನದೀಪ್ರದೇಶದಲ್ಲಿ ಭೂಮ್ಯಂತರ್ಗತ ಕಾಲುವೆ ಗಳನ್ನು ನಿರ್ಮಿಸುವುದರಿಂದ ವ್ಯವಸಾಯಕ್ಕೆ ಬಹು ಮಟ್ಟಿಗೆ ಉಪಯೋಗವಾಗುವುದು ಮತ್ತು ಆರ್ಥಿಕ ವಾಗಿಯೂ ಲಾಭದಾಯಕವಾಗುವುದು. ಎಂದು ಈ ಪ್ರದೇಶದಲ್ಲಿ ಸರ್ವೆ ನಡೆಸಿದ ಅಮೆರಿಕ ಕಂಪನಿಯೊಂದು ತಿಳಿಸಿರುವುದಾಗಿಯೂ ಈ ಬಗ್ಗೆ ಸರ್ಕಾರದವರು ಪರ್ಯಾ ಲೋಚಿಸುತ್ತಿರುವುದಾಗಿಯೂ ಜಯರಾಂದಾಸ್ ದೌಲ ತ್‌ರಾಂದವರು ಪಾರ್ಲಿಮೆಂಟಿನಲ್ಲಿ ತಿಳಿಸಿದರು. ಪೂರ್ವ ಪಂಜಾಬ್, ಸಂಯುಕ್ತಪ್ರಾಂತ ಮತ್ತು ಬಿಹಾರ್ ಪ್ರದೇಶ ಗಳಲ್ಲಿ ಈ ಕಾರ್ಯ ಕೈಗೊಳ್ಳಲು ಅಮೆರಿಕದ ಜಾನ್ ಸನ್ ಇಂಟರ್ ನ್ಯಾಷನಲ್ ಕಂಪೆನಿಯವರು ಮುಂದೆ ಬಂದಿರುವುದಾಗಿ ಹೇಳಿದರು.

ಒಂದು ಮಗುವಿಗೆ ಇಬ್ಬರು ತಾಯಿ

ಒಬ್ಬ ಮಹಾಶ್ಯ ಪ್ರೀ ಮತ್ತು ಒಬ್ಬ ನಿರಾಶ್ರಿತ ಸಿಂಧಿ ಸ್ತ್ರೀಯಳು ಒಬ್ಬ ಬಾಲಕನನ್ನು ತನ್ನ ಮಗು ತನ್ನ ಮಗು ಎಂದು ಹೊಡೆದಾಡಿದ ಅಶ್ಚರ್ಯಕರ ಘಟ ನೆಯು ಇದೇ ತಿಂಗಳು ೧೦ ತಾ|| ಬೊಂಬಾಯಿಯ ಕಲ್ಯಾಣ ನಿರಾಶ್ರಿತರ ಶಿಬಿರದಲ್ಲಿ ನಡೆಯಿತು. ಎರಡು ವರ್ಷಕ್ಕಿಂತ ಸ್ವಲ್ಪ ದೊಡ್ಡವಾದ ಮಗು ಇಬ್ಬರು ಬಾಲಳ ರೊಡನೆ ಹೋಗುತ್ತಿರುವುದನ್ನು ಕಲ್ಯಾಣ ನಿರಾಶ್ರಿತರ ಶಿಬಿರಕ್ಕೆ ತಿರುಗಾಡಲು ಬಂದ ಮಹಾಶ್ಯ ಸ್ತ್ರೀಯು ನೋಡಿ ತಕ್ಷಣ ಎರಡು ವರ್ಷಗಳ ಕೆಳಗೆ ತಾನು ಕಳೆದುಕೊಂಡ ಮಗುವೆಂದು ಅದನ್ನು ಎತ್ತಿಕೊಂಡಳು. ಮಗುವು ಗಾಬರಿಯಾಗಿ ನೋಡಲು ಪ್ರಾರಂಭಿಸಿತು. ಉಳಿದಿಬ್ಬರು ಬಾಲಕರು ಮನೆಗೆ ಹೋಗಿ ಒರ್ವ ಸಿಂಧಿ ಸ್ತ್ರೀಯನ್ನು ಕರೆತಂದರು. ಅವಳು ತನ್ನ ಜೊತೆಯಲ್ಲಿ ಮಗುವಿನ ಜಾತಕವನ್ನು ಸಹ ತಂದಿದ್ದಳು ಇಬ್ಬರೂ ಮಹಿಳೆಯರು ಆ ಮಗುವಿಗಾಗಿ ಹೊಡೆದಾಡಲಾರಂಭಿಸಿ ದಾಗ ಸ್ಥಳೀಯ ಪಂಚಾಯಿತರು ವಿಚಾರಣೆ ನಡೆಸಲು ಬಂದು ಅಸಮರ್ಥರಾದರು ಇಪ್ಪರಲ್ಲಿಯೇ ಪೋಲೀಸರು ಅಲ್ಲಿಗೆ ಬಂದು ಆ ಮಗುವನ್ನು ತನ್ನ ವಶಕ್ಕೆ ತೆಗೆದು ಕೊಂಡು ಹೋದರು. ವಿಚಾರಣೆಯಾಗಿ ಸುಗುವಿತ ತಾಯಿ ಯಾರೆಂಬುದು ನಿರ್ಧಾರವಾಗುವವರೆಗೂ ಮಗು ಸಿಗುವುದಿಲ್ಲವೆಂದು ಹೇಳಿದರು. ಮಹಿಳೆಯರಿಬ್ಬರೂ ಮಹಾಮುಖಭಂಡತನ ತಮ್ಮ ತಮ್ಮ ಮನೆಗೆ ಹೋದ ರೆಂದು ವರದಿಯಾಗಿದೆ.

ಬ್ರಿಟಿನ್ ಅಮೆರಿಕಾಗಳ ಮೇಲೆ ರಷ್ಯಾದ ಆರೋಪ

ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು ಮೊನ್ನೆ ಸಭೆ ಸೇರಿದ್ದಾಗ ಸೋವಿಯೆಟ್ ರಷ್ಯಾದ ಪ್ರತಿನಿಧಿ ಗ್ರಾಮ ಕೋ ನರು ಉತ್ತರ ಅಟ್ಲಾಂಟಿಕ್ ರಕ್ಷಣ ಒಪ್ಪಂದ ವನ್ನು ಕಟುವಾಗಿ ಟೀಕಿಸಿದರೆಂದು ವರದಿಯಾಗಿದೆ. ಉತ್ತರ ಅಟ್ಲಾಂಟಿಕ್ ಒಪ್ಪಂದವನ್ನು ಕೈಗೊಂಡು ರಷ್ಯಾ ವನ್ನು ಪ್ರತ್ಯೇಕಿಸಿ, ಇತರ ರಾಷ್ಟ್ರಗಳ ಮೇಲೆ ತಮ್ಮ ಪ್ರಭಾವವನ್ನು ಬೀರಲು ಬ್ರಿಟನ್ ಮತ್ತು ಅಮೆರಿಕಾಗಳು ಹವಣಿಸುತ್ತಿವೆಯೆಂದೂ, ಯಾಲ್ಟಾ, ಟೆಹರಾನ್, ಪೋಟ್ಸ್‌ಡಾಂ ಒಪ್ಪಂದಗಳನ್ನು ಇವೆರಡು ರಾಷ್ಟ್ರಗಳೂ ಅತಿಕ್ರಮಿಸಿವೆಯೆಂದೂ ಇಂದೋನೇಷ್ಯಾ ಸಮಸ್ಯೆಯು ಬಗೆ ಹರಿಯದೆ ಇರುವುದಕ್ಕೆ ಬ್ರಿಟನ್ ಅಮೆರಿಕಾಗಳೇ ಕಾರಣಗಳೆಂದೂ ಗ್ರಾಮಕೋ ರವರು ಆರೋಪಿಸಿದರು.

